
ಕಸ್ತೂರಿ

ಮಾರ್ಚ್ ೧೯೮೦



ರೂ. ೧-೫೦



Shingar
DELUXE KAJAL
ನಕಲಿ ಮಾಲುಗಳಿವೆ,
ಜಾಗರೂಕತೆ ವಹಿಸಿರಿ.
ಕೊಳ್ಳುವ ಮೊದಲು ಶಿಂಗಾರ್
ಹೆಸರನ್ನು ಪ್ಯಾಕ್‌ನ ಮೇಲೆ
ನೋಡಿಕೊಳ್ಳಿರಿ.

ಕಸ್ತೂರಿ

ಕನ್ನಡ ಡೈಜೆಸ್ಟ್

ವ್ಯವಸ್ಥಾಪಕ ಸಂಪಾದಕ :
ಎಚ್. ಆರ್. ಬಸವರಾಜ್

ಸಂಪಾದಕ :
ಪ. ಸು. ಭಟ್ಟ

ಕಲೆ :
ಕೆ. ಬಿ. ಕುಲಕರ್ಣಿ

ಮುಖಪುಟ :
ಮೀರಾ

ಚಿತ್ರ :
ನಳಿನಿ ರಾವ್

ಚಂದಾದರ :
ಅರ್ಧವರ್ಷ ಅಂಚೆ ಸೇರಿ ರೂ. ೧೦-೦೦
೧ ವರ್ಷ ,, ರೂ. ೧೮-೦೦
(ವಿಶೇಷ ಸಂಚಿಕೆ ಸೇರಿ)
KASTURI March 1980

ಬೆಳಕಿಂಡಿ

ಮೂರ್ಖರ ಮುಖವನ್ನು ನೋಡಲೇ ಬಾರದೆಂದು ಕೊಂಡಿದ್ದೀರಾ? ಹಾಗಾದರೆ ಮೊದಲು ನಿಮ್ಮ ಮನೆಯ ಕನ್ನಡಿಗಳನ್ನು ಒಡೆದು ಹಾಕಿ. —ರಿಬೆಲ್ಜ

*

'ಮಧ್ಯಮ ವರ್ಗ ಅಂದರೇನು?' ಅಂದರೆ ಕ್ಷಣ ಕ್ಷಣಕ್ಕು ಸತ್ತು ಬದಕುವ ಮತ್ತು ಪ್ರತಿಯೊಂದು ವಸ್ತುವಿಗಾಗಿಯೂ ತ್ರಿಶಂಕುವಿನಂತೆ ಒದ್ದಾಡುವ ವರ್ಗ. —ಹಿಂದಿ ಗಾದೆ

*

'ಮಾಡು ಇಲ್ಲವೆ ಮಡಿ.' ಮಹಾತ್ಮಾಜಿ ಹೇಳಿದ್ದು ಶತಃಸತ್ಯ. ಅವರೆಲ್ಲ ಮಡಿದಿದ್ದಾರೆ. ಈಗ ಇವರು ಮಾಡುತ್ತಿದ್ದಾರೆ – ಭಾಷಣ – ಘೋಷಣ – ರಾಜಕಾರಣ. —ಸುರಜಿತ

*

ಮಕ್ಕಳು ಮನೆ ಬೆಳಗುವ ದೀಪವಾದರೆ ಬೆಳಕಿಗಾಗಿ ಇಷ್ಟೇಕೆ ಖರ್ಚು ಮಾಡುತ್ತೀರಿ? —ಪಂಡಿತೋತ್ತಮ

*

ಚಂದಾದಾರರಿಗೆ ಸೂಚನೆ

'ಕಸ್ತೂರಿ' ತಿಂಗಳ ಒಂದನೇ ದಿನಾಂಕದೊಳಗೇ ಪ್ರಕಟವಾಗುವುದು. ತಿಂಗಳ ೫ ನೇ ದಿನಾಂಕದೊಳಗೆ ತಲಪದೇ ಹೋದರೆ ಚಂದಾದಾರರು ತಮ್ಮ ಟಪಾಲು ಕಟ್ಟೆಯಲ್ಲಿ ಮೊದಲು ವಿಚಾರಿಸಿ ಅನಂತರ ನಮಗೆ ತಿಳಿಸಬೇಕು. ಪತ್ರವ್ಯವಹಾರ ಮಾಡುವಾಗ ಚಂದಾ ನಂಬರು ಹಾಕಿರಬೇಕು.

ಈ ಸಂಚಿಕೆಯಲ್ಲಿ

ಸೂರ್ಯಗ್ರಹಣ

'ಕಸ್ತೂರಿ'ಯಲ್ಲಿ 'ಬರಲಿದೆ ಸೂರ್ಯಗ್ರಹಣ'ದ ಬಗೆಗೆ ಚಿತ್ರ ಸಮೇತ ವಿವರವಾಗಿ ತಿಳಿಸಿರುವುದಕ್ಕೆ ಅತ್ಯಂತ ಧನ್ಯವಾದಗಳು. 'ಗ್ರಹಣ ವೀಕ್ಷಕರಿಗೊಂದು ಕಿವಿಮಾತು' ಹೇಳಿದ ಬಿ. ಎಸ್. ಶೈಲಜಾರಿಗೂ ವಂದನೆಗಳು.

ಬೆಂಗಳೂರು. —ಶ್ರೀಪಾದರಾವ್

'ಕಸ್ತೂರಿ'ಯಲ್ಲಿ ಇತ್ತೀಚಿಗೆ ಹಾಸ್ಯ ಲೇಖನಗಳು ಕಡಿಮೆಯಾಗುತ್ತಿವೆ ಎಂಬ ಕೊರತೆಯನ್ನು ಜೋಗಳೇಕರರ 'ಜ್ಯೋತಿಷಿಯ ದೃಷ್ಟಿಯಲ್ಲಿ ಸೂರ್ಯಗ್ರಹಣ' ಎಂಬ ಲೇಖನವು ತುಸು-ಮಟ್ಟಿಗೆ ತುಂಬಿಕೊಟ್ಟಿತು. ಮನುಷ್ಯನ ಆಶೆ, ನಿರಾಶೆ, ದ್ವೇಷ, ಮಹತ್ವಾಕಾಂಕ್ಷೆ, ಅಧಃಪತನ, ಊರ್ಜಿತಾ-ವಸ್ಥೆಗಳಿಗೆ ಗ್ರಹಯೋಗಗಳೇ ಕಾರಣವೆಂಬ 'ಅನುಭವವೇದ್ಯ' ಸಂಗತಿಗಳ ಕುರಿತು ಇಪ್ಪತ್ತನೇ ಶತಮಾನದಲ್ಲಿ ಓದುವಾಗ ನಗು ಬಾರದೇ ಇರುತ್ತದೆಯೆ?

ಜೀವನದಲ್ಲಿ ಸಮಸ್ಯೆಗಳನ್ನು ಎದುರಿಸಲಾರದ ಹೇಡಿಗಳಿಗೆ ಕರ್ಮ, ಗ್ರಹಗತಿ ಇತ್ಯಾದಿ ಪಲಾಯನ ಸೂತ್ರಗಳನ್ನು ಹೇಳಿಕೊಡುವ ಸಾಮರ್ಥ್ಯದ ಮೇಲೆ ಇಂದು ಜ್ಯೋತಿಷ್ಯವು ಬದುಕಿಕೊಂಡಿದೆ. ಇಲ್ಲವಾದರೆ ೪೦೦ ವರ್ಷಗಳ ಹಿಂದೆಯೇ ಕೋಪರ್ನಿಕಸ್ ಕ್ರಾಂತಿಯಲ್ಲಿ ಈ 'ಶಾಸ್ತ್ರದ' ಅವಶೇಷವಾಗಬೇಕಿತ್ತು.

ನಮ್ಮ ಜ್ಯೋತಿಷಿಗಳಲ್ಲಿ ಒಂದೇ ವಿನಂತಿ. ದಯವಿಟ್ಟು ವಿಜ್ಞಾನದ ಗೊಡವೆಗೆ ಹೋಗಬೇಡಿರಿ. ಮನುಷ್ಯನು ನಿಸರ್ಗದ ಕೂಸಾಗಿದ್ದಾನೆ. ನಮ್ಮ ಕಣ್ಣಿಗೆ ಕಾಣುವ ಗ್ರಹ, ನಕ್ಷತ್ರಗಳ ಚಲನೆಯು...ಪೃಥ್ವಿಯ ಮೇಲೆ, ಅಲ್ಲಿನ ಸಕಲ ಚರಾಚರ ವಸ್ತುಗಳ ಮೇಲೆ ಪರಿಣಾಮ ಬೀರುತ್ತದೆ... ವಿಶ್ವದಲ್ಲಿಯ ಪ್ರತಿಯೊಂದು ವಸ್ತುವೂ ಇನ್ನೊಂದಕ್ಕೆ ಸಂಬಂಧಪಟ್ಟದ್ದು ಆಗಿರಲೇ-ಬೇಕೆಬಂದು ತರ್ಕಬದ್ಧ(?!)ವಾಗಿದೆ ಇತ್ಯಾದಿ ಎಳೆ ನಂಬಿಕೆಗಳ ಆಶ್ರಯದಲ್ಲಿ ತಮ್ಮ ದೃಷ್ಟಿಕೋಣ ಎಟಕುವಂತಹದಲ್ಲ. ಅದಕ್ಕೆ ಬೇಕಾದ ಬೌದ್ಧಿಕ ನಿಷ್ಠುರತೆ, ಸತ್ಯನಿಷ್ಠೆ ಮತ್ತು ಪ್ರಾಮಾಣಿಕತೆಗಳು, ಜ್ಯೋತಿಷಿಗಳ ವಿಚಾರ ಸಾಮರ್ಥ್ಯವನ್ನು ಎಂದೋ ಮೀರಿದ ವಿಷಯಗಳು.

ಮುಂಬಯಿ —ಸಂಜಯ ಹಾವನೂರ

ವೀರ ಕನ್ನಡಿಗ

ಫೆಬ್ರುವರಿ 'ಕಸ್ತೂರಿ' ಓದಿ ತುಂಬಾ ಸಂತೋಷವಾಯಿತು. 'ಕಸ್ತೂರಿ' ಸುರುವಾದಂದಿನಿಂದ ಅದರ ಓದುಗನಾದ ನನಗೆ ನಾನು ಬಯಸಿದಂಥ 'ಕಸ್ತೂರಿ' ಮೊದಲ ಬಾರಿಗೆ ಓದಿದಂತಾಯಿತು. ಪುಸ್ತಕ ವಿಭಾಗದ 'ಹೈದರಾಬಾದದ ವೀರ ಕನ್ನಡಿಗ' ಲೇಖನವನ್ನು 'ಕಸ್ತೂರಿ' ಓದುಗರಿಗೆ ಒದಗಿಸಿದ ಶ್ರೀನಿವಾಸ ಹಾವನೂರರಿಗೆ ಅನಂತ ಧನ್ಯವಾದಗಳು. ಈಗಿನ ದಿನದಲ್ಲಿ ಒಂದು ಪೈಸೆಯ ಕನ್ನಡ ಸೇವೆ ಮಾಡಿ ಸಾವಿರ ಪೈಸೆಯ ಪತ್ರಿಕಾ ಪ್ರಚಾರಕ್ಕೆ ಹಾತೊರೆಯುವವರೇ ಬಹಳ. ಅಂಥವರ ಪ್ರಚಾರಕ್ಕೆ ನಿಂತ ಪತ್ರಿಕೆಗಳೂ ಲೇಖಕರೂ ಬಹಳ. ಇಂಥ ಯಾವದೇ ಪ್ರಚಾರದ ಅಪೇಕ್ಷೆ ಇಲ್ಲದೆ ಕೈದುಡ್ಡು ಖರ್ಚುಮಾಡಿ ಸೇವೆ ಮಾಡುವವರೂ ಅಂಥವರಿಂದ ತಮಗೇನೂ ಪ್ರಯೋಜನವಿಲ್ಲದಿದ್ದರೂ ಅವರ ಸೇವೆ ಮೆಚ್ಚಿ ಕೈದುಡ್ಡು ಖರ್ಚುಮಾಡಿ ಅವರನ್ನು ಹುಡುಕಿ ತೆಗೆದು ಲೇಖ ಬರೆಯುವ ಲೇಖಕರೂ, ತಮಗೇನೂ ಪ್ರಯೋಜನವಿಲ್ಲದಿದ್ದರೂ, ಅಂಥವರ ಜೀವನ ಕುರಿತು ಪ್ರಕಟಿಸುವ ಪತ್ರಿಕೆಗಳೂ ಮರುಭೂಮಿಯ ಓಯಾಸಿಸ್ಸ-ನಂತೆ ಇನ್ನೂ ಇರುವುದೊಂದು ಸೌಭಾಗ್ಯ!

ದಾಂಡೇಲಿ —ವೆಂಕಟೇಶ ರಾಮಾ ನಾಯ್ಕ

'ಹೈದರಾಬಾದಿನ ವೀರ ಕನ್ನಡಿಗ' ಚಿಮ್ಮಲಗಿಯವರ ಕುರಿತು ವಿಸ್ತೃತ ಲೇಖನ ಪ್ರಕಟಿಸಿ ಉಪಕರಿಸಿದ್ದೀರಿ. ಆದರೆ ಅವರ ಜೀವಿತ ಕಾಲದಲ್ಲಿ ಕರ್ನಾಟಕವೊಂದು ರಾಜ್ಯವಾಗಿ ರೂಪುಗೊಂಡ ನಂತರ ನಮ್ಮ ಸರಕಾರ ಉಚಿತ ರೀತಿಯಲ್ಲಿ ಅವರನ್ನು ಗೌರವಿಸಬೇಕಿತ್ತು. ಬಹುಶಃ ನಾವು ಕನ್ನಡಿಗರು ಕೃತಘ್ನ ಜನ.

ಕುಷ್ಟಗಿ. —ಜಯತೀರ್ಥ ಗಂಗೂರು

ಚುನಾವಣೆ-೮೦

ಬಸವರಾಜ ಕಟ್ಟೀಮನಿ ಅವರ ಜತೆಯ ಸಂದರ್ಶನ ಓದಿ (ಫೆಬ್ರುವರಿ ಸಂಚಿಕೆ) ಅದರ ಜತೆಗೇ ಬಂದಿದ್ದ ಅವರ ಫೋಟೋವನ್ನೂ ನೋಡಿದೆ. ಕಟ್ಟೀಮನಿ ಅವರು ಖಂಡಿತಾ ಬದಲಾಗಿರುವರು. 'ಬದಲಾವಣೆ' ಅನ್ನುವದು ಕಟ್ಟೀಮನಿಯವರ ಜಾಯಮಾನಕ್ಕೆ ಸೇರಿದ್ದಲ್ಲವೇ?

ಚುನಾವಣಾ ಫಲಿತಾಂಶಗಳ ವಿಶ್ಲೇಷಣೆಗೆ ಕುರಿತು ಪಾ. ವೆಂ. ರ ಬರಹವನ್ನು ಓದಿದೆ. ಆದರೆ ಪಾ. ವೆಂ. ಬದಲಾಗದವರು. ಅದಕ್ಕೆ ಅವರ ಬರಹ ನಮ್ಮ ಮೂಸುಡಿ ಮಧ್ಯಮ ವರ್ಗವು ಆರಾಧಿಸುವ ಎಲ್ಲ ನೀತಿಗೊತ್ತುಗಳಿಂದ ವಿಜೃಂಭಿಸುತ್ತದೆ. ಜನತಾ ಪಕ್ಷದ ಒಳಜಗಳದ ಸಮಯದಲ್ಲಿ ಘನತೆಯಿಂದ ವರ್ತಿಸಿದ ಗುಂಪು ಜನಸಂಘ ಅಂತ ಅವರು ಸರ್ಟಿಫಿಕೇಟ್ ಬರೆದಿದ್ದಾರೆ. ಒರಟೊರಟಾದ ಸಿಡಿದೇಳುಗಳಿಗೆ ಹೋಲಿಸಿದಂತೆ cold blooded ಕುತಂತ್ರಗಳೇ ಹೆಚ್ಚು ಘನತೆಯವು ಅನ್ನುವುದಾದರೆ, ಪಾ. ವೆಂ. ಅವರ ಈ ಸರ್ಟಿಫಿಕೇಟಿಗೆ ಯಾರದ್ದೂ ಸುತಾರಾಂ ಆಕ್ಷೇಪಣೆ ಇಲ್ಲ.

ಹೊಸದಿಲ್ಲಿ. —ಡಿ. ಎಸ್. ನಾಗಭೂಷಣ

ಫೆಬ್ರುವರಿ ತಿಂಗಳ 'ಕಸ್ತೂರಿ' ಯಲ್ಲಿ ಪಾ.ವೆಂ. ಆಚಾರ್ಯರ ೧೯೮೦ರ ಚುನಾವಣೆ ವಿಶ್ಲೇಷಣೆ ದೇಶದ ರಾಜಕೀಯ ಶಕ್ತಿಗಳ ಬಗೆಗೆ ಸಾಕಷ್ಟು ಬೆಳಕು ಚೆಲ್ಲುವಂತಹದಾಗಿದೆ. ೧೯೭೭ರಲ್ಲಿ ಕೇವಲ ತುರ್ತುಪರಿಸ್ಥಿತಿಯ ಅತಿರೇಕಗಳಿಂದ ನೊಂದ ಉತ್ತರ ಭಾರತದ ಜನ 'ಜನತಾ' ಪಕ್ಷವನ್ನು ಅಧಿಕಾರಕ್ಕೆ ತಂದಿದ್ದಾರೆ, ಅದೇ ಜನ ೧೯೮೦ರಲ್ಲಿ ಯಾವ ಕಾರಣಕ್ಕಾಗಿ ಅದನ್ನು ತಿರಸ್ಕರಿಸಿದ್ದಾರೆಂಬುದನ್ನು ಸವಿಸ್ತಾರವಾಗಿ ವಿಶ್ಲೇಷಿಸಿರುವ ಪಾವೆಂ.ರವರು 'ಚಮ್ಮಾರ'ನನ್ನು ಪ್ರಧಾನಮಂತ್ರಿ ಮಾಡುವುದಕ್ಕಿಂತ ಬ್ರಾಹ್ಮಣಿ ಇಂದಿರಾರವರಿಂದಲೇ ಆಳಿಸಿಕೊಳ್ಳುವುದು ಮೇಲೆಂದು ಇವರೆಲ್ಲಾ ಭಾವಿಸಿದರೆಂದು ಉತ್ತರ ಭಾರತದಿಂದ ಬಂದ ವರದಿಗಳು ಸೂಚಿಸುತ್ತವೆ' ಎಂದಿದ್ದಾರೆ. ಈ ವರದಿಗಳು ನಿಜವಿದ್ದರೆ, ಅದು ನಿಜಕ್ಕೂ ಅತ್ಯಂತ ವಿಷಾದನೀಯ. ಇದು ಈ ದಶಕದ ದುರಂತಗಳಲ್ಲಿ ಒಂದೆಂದೇ ಹೇಳಬೇಕು! ಭಾರತೀಯರ ಅರ್ಥಾತ್ ಹಿಂದುಗಳ ಈ ಮನೋಭಾವವನ್ನು ತಿದ್ದಲು ನಮಗೆ ರಾಷ್ಟ್ರೀಯತೆಯ ಹಾಗೂ ಮಾನವೀಯತೆಯ ಶಿಕ್ಷಣ ಇಂದು ಅಗತ್ಯವಾಗಿ ಬೇಕಾಗಿದೆ.

ಭದ್ರಾವತಿ —ಕೆಎಸ್ಕೆ

ಗಂಗಪ್ಪ

ಫೆಬ್ರುವರಿ ಸಂಚಿಕೆಯಲ್ಲಿ ಬಂದ 'ಅತನಿಗಾಗಿ ನಾನೀಗಲೂ ತಡಕಾಡುತ್ತಿದ್ದೇನೆ' ಲೇಖನವನ್ನೋದಿ ಒಂದು ದೃಷ್ಟಿಯಿಂದ ನಾನು ವಿಸ್ಮಿತನಾಗಿದ್ದೇನೆ. ನಮ್ಮೂರಲ್ಲೇ ಇರುವ ಗಂಗಪ್ಪನನ್ನು ನಿತ್ಯ ನೋಡುತ್ತೇವಾದರೂ ಅವನ ಮನಸ್ಸಿನ ಶ್ರೀಮಂತಿಕೆಯನ್ನು, ಅನುಭವದ ಸಿರಿಯನ್ನು ನೋಡಲು ನನಗಾದದ್ದು ಈ ಲೇಖನದ ಮೂಲಕವೇ. ಅಂದಿನ ಪ್ರತಿಯೊಂದು ಘಟನೆಯೂ ಕಣ್ಣ ಮುಂದೆ ಕಟ್ಟುವಂತೆ ನಿರೂಪಿಸಿದ ಡಾ. ವಿಷ್ಣುಶರ್ಮ ವನಹಳ್ಳಿಯವರ ಪ್ರಯತ್ನ ಮೆಚ್ಚುವಂತಹದು. ಆದರೆ ಸುಶಿಕ್ಷಿತ ಹರಿಜನರು ಬಹುಸಂಖ್ಯಾಕರಾದ ಅಶಿಕ್ಷಿತ ಹರಿಜನರ ನಡುವೆ ಸಮಾಜದಲ್ಲಿ ಉಂಟಾಗುತ್ತಿರುವ ಅಂತರವನ್ನು ಗಮನಿಸುವಾಗ ನಾನು ಸಹ ಗಾಂಧೀಜಿಗಾಗಿ ತಡಕಾಡುವಂತೆಯೇ ಆಗುತ್ತದೆ.

ದೊಡ್ಡವಾಡ —ಶೇ. ನಾ. ಕುಲಕರ್ಣಿ

ಖಾನೋಳಕರ

ಫೆಬ್ರುವರಿ 'ಕಸ್ತೂರಿ'ಯಲ್ಲಿ ದಿ. ಶ್ರೀಧರ ಖಾನೋಳಕರರ ಕುರಿತು ಗೋ. ವೆ. ಚುಳಕಿಯವರು ಬರೆದ ಲೇಖನ ಮಾರ್ಮಿಕವಾಗಿತ್ತು. ಮರೆತುಹೋದ ಕವಿಯ ನೆನಪು ಮಾಡಿಕೊಳ್ಳುವುದು ಖಂಡಿತ ಸಜ್ಜನಿಕೆಯ ಸಂಕೇತ. ಆದರೆ ಯೋಗ್ಯತೆಯಿದ್ದಾಗಲೂ ಯಶೋಲಕ್ಷ್ಮಿ, ಕೀರ್ತಿಲಕ್ಷ್ಮಿ ಎಲ್ಲರಿಗೂ ಒಲಿಯುವುದಿಲ್ಲ, ಹಾಗೇಕೆಂದು ಕಾರಣಗಳನ್ನು ಹೇಳಲಾಗುವುದಿಲ್ಲ. ವಿಶ್ವಾಸವಿರಲಿ, ಬಿಡಲಿ ವಿಧಿಯ ಮೇಲೆಯೇ ಹೊಣೆ ಹೊರಿಸಿ ನಿಟ್ಟುಸಿರು ಬಿಡಬೇಕಾಗುವುದು!

ಪಣಜಿ —ಬಾಬಣ್ಣ ಬಿಸಲಕೊಪ್ಪ

ಕಸ್ತೂರಿ

ಸಂಚಿಕೆ: ೭ ಕಸ್ತೂರಿ, ಮಾರ್ಚ್ ೧೯೮೦ ವರ್ಷ: ೨೪

ಟೊಪ್ಪಿಗೆ ಮತ್ತು ಶಿರೋಭೂಷಣಗಳು

ಟೋಪಿ ಹಾಕು' ಎಂಬೊಂದು ಮಾತಿದೆ. ಅಂದರೆ ಟೊಪ್ಪಿಗೆ ಹಾಕಿಕೊಳ್ಳು ಎಂಬುದು ಸಾಮಾನ್ಯ ಅರ್ಥವಾದರೂ ಒಮ್ಮೆಲೇ ಈ ಮಾತನ್ನು 'ಮೋಸ ಮಾಡು', 'ವಂಚಿಸು' ಎಂಬರ್ಥಕ್ಕೆ ಬಳಸಲಾಗುತ್ತದೆ. 'ಆತ ನನಗೆ ಮೋಸ ಮಾಡಿದ' ಎಂಬುದನ್ನೇ 'ಆತ ನನಗೆ ಟೊಪ್ಪಿಗೆ ಹಾಕಿದ' ಎಂದು ಹೇಳುವುದನ್ನೂ ನಾವು ಆಗಾಗ ಕೇಳುತ್ತೇವೆ. ಮೋಸಗಾರ ಎಂಬುದನ್ನೇ 'ಟೊಪ್ಪಿಗೆ ಮನುಷ್ಯ' ಎನ್ನುವುದೂ ಉಂಟು. ಈ ಟೊಪ್ಪಿಗೆ ಹಾಕುವಿಕೆ ಒಂದು ರೀತಿಯಲ್ಲಿ ಚತುರತೆಯ ಲಕ್ಷಣವೂ ಹೌದು.

ಭಾರತದಲ್ಲಿ ಟೊಪ್ಪಿಗೆಗೆ, ಸಾಂಪ್ರದಾಯಿಕ ಮಹತ್ವವಿದೆ. ಎಂಟನೆಯ ಶತಮಾನದವರೆಗೆ ಸ್ತ್ರೀ–ಪುರುಷರಿಬ್ಬರೂ ಉದ್ದನೆಯ ಟೊಪ್ಪಿಗೆಗಳನ್ನು ಧರಿಸುತ್ತಿದ್ದರು. ಅಲ್ಲದೇ ಅಂತಸ್ತಿಗೆ ತಕ್ಕ ಶಿರೋವಸ್ತ್ರಗಳನ್ನು ಧರಿಸುವ ಪರಿಪಾಠವಂತೂ ಆಗಿನಿಂದ ಇದ್ದೇ ಇದೆ. ಆದರೆ ಈ ಟೊಪ್ಪಿಗೆ ಅಥವಾ ತಲೆಯುಡುಗೆಗಳನ್ನು ಶುಭ ಕಾರ್ಯಗಳಲ್ಲಿ ಭಾರತೀಯರು ಧರಿಸಲೇಬೇಕೆಂಬುದು ಹೇಗೆ ಸಂಪ್ರದಾಯವಾಗಿ ಬೆಳೆದಿದೆಯೋ ಹಾಗೆ ಟೊಪ್ಪಿಗೆ ಅಥವಾ ಶಿರೋವಸ್ತ್ರವಿಲ್ಲದೇ ಮೆರವಣಿಗೆ ತೆಗೆಯುವದು (ಬಕ್ಕತಲೆ ಮೆರವಣಿಗೆ) ಧಿಕ್ಕಾರದ, ಪ್ರತಿಭಟನೆಯ ಸಂಕೇತವೂ ಆಗಿದೆ.

ಆದರೆ ಪಾಶ್ಚಾತ್ಯ ದೇಶಗಳ ತಲೆಯುಡುಗೆಗಳು, ಶಿರೋವಸ್ತ್ರಗಳು ಬಗೆಬಗೆಯವಾಗಿವೆ. ಮುಂಜಾನೆ, ಸಂಜೆ, ಸಮಾರಂಭ ಮುಂತಾದ ಸಂದರ್ಭಕ್ಕೆ ತಕ್ಕ ಹಾಗೆ ವಿಶಿಷ್ಟ ರೀತಿಯ ಶಿರೋವಸ್ತ್ರಗಳನ್ನು ನಾವು ಕಾಣುತ್ತೇವೆ. ಇವೆಲ್ಲಕ್ಕೂ ನಾವು, ಎಂಬ ಸಾಮಾನ್ಯ ಶಬ್ದವನ್ನು ಬಳಸಬಹುದು. ಇದು ನಮ್ಮ ಟೊಪ್ಪಿಗೆ CAP ಅಥವಾ ಶಿರೋವಸ್ತ್ರಕ್ಕೆ ಸಮಾನವಾದ ಇಂಗ್ಲೀಷು ಪದ. ಎನ್‌ಸೈಕ್ಲೋಪೀಡಿಯಾ ಬ್ರಿಟಾನಿಕದ ಪ್ರಕಾರ a covering for the head. ಅದು ರಕ್ಷಣೆಯ, ಅಲಂಕಾರಿಕ ವಸ್ತುವಾಗುವಂತೆಯೇ ಅಧಿಕಾರ–ಗೌರವಗಳ ಸಂಕೇತವೂ ಹೌದು.





ಈ ಕೆಳಗೆ ವಿವರಿಸಲಾದ ಪಾಶ್ಚಾತ್ಯ ದೇಶಗಳ ತಲೆಯುಡುಗೆಗಳು ಆಯಾ ಸಂಸ್ಕೃತಿ ಸೂಚಕಗಳೂ ಹೌದೆಂಬುದನ್ನು ಮರೆಯಬಾರದು. ಕೆಲವು ಮಾತ್ರ ಕಾಲಕ್ಕೆ ತಕ್ಕಂತೆ ಬದಲಾವಣೆ ಹೊಂದಿವೆ. ಇನ್ನು ಕೆಲವು ಕೇವಲ ಫ್ಯಾಶನ್ನಿಗಾಗಿ ಧರಿಸಲ್ಪಡುವಂಥವಾಗಿವೆ.

ಮೊದಲನೆಯದು ಡೆನ್ಮಾರ್ಕಿನ 'ಸ್ಕಾಲಿಂಗ್' ಎಂಬುದು ಮಹಿಳೆಯರ ಶಿರೋವಸ್ತ್ರ. ತೆಳು ಬಟ್ಟೆಯ ಕುಸುರಿನ ಕೆಲಸದ ಈ ವಸ್ತ್ರ ನೋಡಲು ನಾಜೂಕಾಗಿದೆ. ಹಿಂತಲೆ ಹಾಗೂ ಕಿವಿಗಳನ್ನು ಗಾಳಿಯಿಂದ ರಕ್ಷಿಸುವ ಈ ಉಡುಗೆ ಪರಂಪರಾಗತ.

ಎರಡನೆಯದು ವೆಲ್ಶ್ ಮಹಿಳೆ ಧರಿಸುವ ವೆಲ್ಶ್ ಕ್ಯಾಪ್. ಇದು ಅಗಲವಾದ ಹ್ಯಾಟಿನ ಜಾತಿಗೆ ಸೇರಿದ್ದು. ಗದ್ದಕ್ಕೆ ಬಿಗಿಯಾಗಿ ಕಟ್ಟುವಂತೆ ಒಂದು ಲಾಡಿಯೂ ಇದಕ್ಕಿದೆ.

ಮೂರನೆಯದು ಸ್ವಿಜರ್‌ಲಂಡಿನ ಹೆಂಗಳೆಯರ ಶಿರೋಭೂಷಣ, ನಮ್ಮ ಯಕ್ಷಗಾನದ ರಾಕ್ಷಸ ವೇಷದ ಕಿರೀಟದಂತಿದೆ. ಕಾರ್ಡ್‌ಬೋರ್ಡಿನಿಂದ, ದಪ್ಪಬಟ್ಟೆಯಿಂದ ತಯಾರಿಸಲ್ಪಟ್ಟಿರುವ ಇದರಲ್ಲಿ ಬಣ್ಣಬಣ್ಣದ ಚಿತ್ತಾರಗಳಿವೆ.

ನಾಲ್ಕನೆಯದು ಬ್ರಿಟ್ಟಾನಿ ಮಹಿಳೆಯರ 'ಪಾಂಟ್ ಆವೆನ್ಸ್'. ಪತಂಗದ ಹಾಗೆ ಸೂಕ್ಷ್ಮವಾಗಿ ಕಾಣುವ ಇದು ತೆಳುಬಟ್ಟೆಯಿಂದ ತಯಾರಿಸಿದ್ದಾದ್ದರಿಂದ ಆಕೆ ಬಳುಕುತ್ತ ನಡೆಯುವಾಗ ಕುಣಿಯುತ್ತದೆ. ಮತ್ತು ಮೇಲುಗಾಳಿ ಬೀಸಿದಾಗ ಪತಂಗ ರೆಕ್ಕೆ ಬಡಿದ ಹಾಗೆ ಕಾಣುತ್ತದೆ.

ಐದನೆಯದು, 'ಮಿಂಚೂನೆರೊ' ಇಟಲಿಯ ಶ್ರೀಮಂತ ಕನ್ಯೆಯರು, ಕುಲೀನ ಸ್ತ್ರೀಯ ಶಿರೋಭೂಷಣ ಮಿಂಚುಬಟ್ಟೆಯದು. ವಿವಾಹ ಸಮಯದಲ್ಲಿ ವಧುವಿನ ತಲೆಯ ಮೇಲೆ ಕಾಣಸಿಕ್ಕುವ ಈ ಶಿರೋವಸ್ತ್ರ ಕೆಲವೊಮ್ಮೆ ನಮ್ಮ ಹಳ್ಳಿಯ ಹೆಂಗಳೆಯರು ತೊಡುವ ಹೂದಂಡೆಯನ್ನು ಹೋಲುತ್ತದೆ.

ಆರನೆಯದು ಮಾಂಟಾಫಾನ್ ಫರ್‌ಕ್ಯಾಪ್ ತುಪ್ಪಳ ಟೊಪ್ಪಿಗೆ. ತಲೆಯನ್ನು ಶೀತದಿಂದ ರಕ್ಷಿಸಲು ಆಸ್ಟ್ರಿಯದ ಮಹಿಳೆಯರು ಹುಡುಗರು ಇದನ್ನು ಧರಿಸುತ್ತಾರೆ.

ಸ್ವಿಜರ್‌ಲಂಡಿನ ವಿವಾಹವಯಸ್ಕರ ಹುಡುಗಿಯರು ಉತ್ಸವಗಳಲ್ಲಿ ಧರಿಸುತ್ತಿದ್ದ 'ಸೀಲಿಸ್ ಬರ್ಗ್' ಏಳನೆಯದು.

ಎಂಟನೆಯದು 'ಮಾನ್‌ಮಾತಾತ್ ಕ್ಯಾಪ್' ಬ್ರಿಟಿಶ್ ನಾವಿಕರ ಶಿರೋಭೂಷಣ, ಮಹಾರಾಷ್ಟ್ರದ ಮುಂಡಾಸ(ಪಗಡಿ)ನ್ನು (ಟಿಳಕ ಗೋಖಲೆ ಚಿತ್ರ ನೆನಪಿಸಿಕೊಳ್ಳಿ) ಹೋಲುತ್ತದೆ.

ಆಸ್ಟ್ರಿಯದ ಶ್ರೀಮಂತರು, ಧೀರಪುರುಷರು ಧರಿಸುತ್ತಿದ್ದ 'ಬಿರ್ನ್‌ಬೌಂ' ಹ್ಯಾಟಿನಂತೆಯೇ ಇದೆ (ಚಿತ್ರ ೯).

ಹತ್ತನೆಯದು ಇಟಲಿಯ ಕ್ಯಾಲ್ಬ್ರಿಯಾ ಹ್ಯಾಟು ಮತ್ತು ನಮ್ಮ ರುಮಾಲು(ಪಟಗ)ಗಳ ಸಂಯುಕ್ತ ರೂಪದಂತಿದೆ. ಉದ್ದವಾದ ಹ್ಯಾಟಿಗೆ ಬಿಳಿ ಬಟ್ಟೆ ಸುತ್ತಿ ಬಲ ಪಕ್ಕಕ್ಕೆ ಅದರ ತುದಿಯಯನ್ನು (ಸೆರಗಿನಂತೆ) ಹಾರಾಡಿಸುವ ಈ ಶಿರೋಭೂಷಣ ಗೌರವದ ಸಂಕೇತ.

ಟ್ರೈರೋಲೀನ್ (೧೧) ಆಸ್ಟ್ರಿಯದ ಸೈನ್ಯಾಧಿಕಾರಿ, ಸರದಾರರ ಶಿರೋಭೂಷಣ. ದೊಡ್ಡ ಫೆಲ್ಟ್ ಹ್ಯಾಟಿನಂತಿರುವ ಇದಕ್ಕೆ ಗರಿಗಳಿವೆ. ಮುಂದಕ್ಕೆ ಅರೆಭಾಗಿಯೂ ಹಿಂತಲೆಯನ್ನು ಪೂರ್ತಿಯಾಗಿಯೂ ಮುಚ್ಚಿದೆ.

ಹನ್ನೆರಡನೆಯದು ಲ್ಯಾಪ್‌ಲ್ಯಾಂಡಿನ 'ಕ್ಯಾಪ್ ಆಫ್ ದಿ ಫೋರ್ ವಿಂಡ್ಸ್'! ಇದನ್ನು ಸಂಕ್ಷಿಪ್ತವಾಗಿ 'ಫೋರ್' ಎಂದು ಕರೆಯಲಾಗುತ್ತದೆ.

ಹದಿಮೂರನೆಯ 'ತುರಾಯಿ ಹ್ಯಾಟು' ಕಾರ್ಮಿಕ ವರ್ಗದ್ದು.

ಸ್ಪೇನಿನ 'ಅಂಡಾಲೂಸಿಯ' ಹದಿನಾಲ್ಕನೆಯದು. ಕೌಬಾಯ್‌ಗಳ ತಲೆಯುಡುಗೆ.

ಹದಿನೈದನೆಯದು ಸ್ವಿಜರ್‌ಲಂಡಿನ ಮಹಿಳೆಯರು ಧರಿಸುವ ಕ್ಯಾಂಟನ್ ಉರಿ.

ಜರ್ಮನಿಯ ಸಂನ್ಯಾಸಿನಿಯರು, ಹಿರಿಯ ಧಾರ್ಮಿಕ ಸ್ತ್ರೀಯರು ಧರಿಸುವ ಸೆಕಾಂಬರ್ಗ್ ರಿಖಪ್ ಪೂರ್ಣ ತಲೆಯನ್ನು (ಮುಖ ಬಿಟ್ಟು) ರಕ್ಷಿಸುವಂಥದು (೧೬).

ಹದಿನೇಳನೆಯದು ಆಸ್ಟ್ರಿಯಾದ ಸ್ಟಿರಿಯನ್ನರು ಧರಿಸುವ ಎತ್ತರದ ಅಗಲ ದುಂಡೆಯ ಹ್ಯಾಟು.

✡

ಮುಪ್ಪು ಮುಂದೂಡಲು ಸಾಧ್ಯವೇ?

ಅರವಿಂದ ಆರ್ಯ

ಹುಟ್ಟಿದವರಿಗೆ ಸಾವು ತಪ್ಪದೆಂಬ ಮಾತು ಎಷ್ಟು ಸತ್ಯವೋ ಹುಟ್ಟಿದವರಿಗೆ ಮುಪ್ಪು ಬರುವುದೂ ಅಷ್ಟೇ ಸತ್ಯ ಮಾತು. ಅಕಾಲಿಕ ಮರಣ ಬಿಟ್ಟರೆ ಮುಪ್ಪಿನಿಂದ ಯಾರೂ ತಪ್ಪಿಸಿಕೊಳ್ಳಲಾರರೆಂಬುದು ಸರ್ವವಿದಿತ ಸಂಗತಿ.

ಮುಪ್ಪು ಏಕಾಗುತ್ತದೆ? ಅದನ್ನು ತಡೆಯಲು ಸಾಧ್ಯವೇ? ಈ ಪ್ರಶ್ನೆಗಳು ಜನಸಾಮಾನ್ಯರಲ್ಲಿ ಮಾತ್ರ ಕುತೂಹಲ ಕೆರಳಿಸಿಲ್ಲ, ವಿಜ್ಞಾನಿಗಳೂ ಈ ಬಗ್ಗೆ ಸಂಶೋಧನೆಯಲ್ಲಿ ನಿರತರಾಗಿದ್ದು ಕೆಲ ತಾತ್ಪೂರ್ತಿಕ ಫಲಿತಾಂಶಗಳನ್ನು ಪಡೆದಿದ್ದಾರೆ.

ಆಧುನಿಕ ಮುಪ್ಪುಶಾಸ್ತ್ರಜ್ಞ ಡಾ. ನಥನ್‌ಶಾಕ್ ಅವರು ೩೦ ವರ್ಷಗಳ ನಂತರ ವ್ಯಕ್ತಿಯ ಜೀವನದಲ್ಲಿ ಜೈವಿಕ ಕ್ರಿಯೆಗಳು ಶೇ. ೧ ರಷ್ಟು ಮೂಲ ಶಕ್ತಿಯನ್ನು ಪ್ರತಿ ವರ್ಷವೂ ಕಳೆದುಕೊಳ್ಳುತ್ತವೆ ಎಂದಿದ್ದಾರೆ.

ಮಿದುಳಿನಲ್ಲಿರುವ ಅಲ್ಯುಮಿನಿಯಂ ಸಂಗ್ರಹಕ್ಕೂ ಮುಪ್ಪಿಗೂ ಸಂಬಂಧವಿರುವುದನ್ನು ವೈದ್ಯಕೀಯ ವಿಜ್ಞಾನಿಗಳು ಗುರುತಿಸಿದ್ದಾರೆ. ಬುದ್ಧಿಶಕ್ತಿಯನ್ನು ನಿಧಾನ ಕ್ರಿಯೆಯ ವೈರಸ್‌ಗಳು ಕುಂಠಿತಗೊಳಿಸುವವೆಂದು ಕೆಲವು ವಿಜ್ಞಾನಿಗಳ ಅಭಿಮತವಾಗಿದೆ.

ಜೈವಿಕ ನಿಯಾಮಿತ 'ವೃದ್ಧಾಪ್ಯ ಸೂಚಕ'ವು ಪ್ರತಿಯೊಬ್ಬರಲ್ಲೂ ಇರುತ್ತದೆಂದು ಆಲ್ಬರ್ಟ್ ರೋಸೆನ್‌ಫೆಲ್ಡ್ ತಮ್ಮ 'ಪ್ರೊಲಾಂಗೆವಿಟಿ' ಗ್ರಂಥದಲ್ಲಿ ತಿಳಿಸಿದ್ದಾರೆ.

ಈ 'ವೃದ್ಧಾಪ್ಯ ಸೂಚಕ'ವು ಪ್ರತಿಯೊಂದು ಜೀವ ಕೋಶದ ಕೇಂದ್ರದಲ್ಲಿ ಇರುತ್ತದೆಂದು ಡಾ. ಲಿಯೋನಾರ್ಡ್ ಹಾಫ್ಲಿಕ್ಸ್ ಅವರ ಅಭಿಮತವಾಗಿದೆ.

ಹಿಂದಿನ ತಿಳುವಳಿಕೆಗೆ ಪ್ರತಿಯಾಗಿ ಅವರು ಪ್ರನಾಳದಲ್ಲಿರುವ ಮನುಷ್ಯನ ಜೀವಕೋಶಗಳು ನಿರ್ದಿಷ್ಟ ಬಾರಿ ವಿಭಜನೆಗೊಂಡು ಅನಂತರ ಸಾಯುವವೆಂದು ಸಿದ್ಧಪಡಿಸಿ ತೋರಿಸಿದರು. ಶಿಶುವಿನ ಜೀವಕೋಶವು ಸುಮಾರು ೫೦ ಬಾರಿ ಹಾಗೂ ವಯಸ್ಕರ ಜೀವಕೋಶವು ಇನ್ನೂ ಕಡಿಮೆ ಬಾರಿ ವಿಭಜನಗೊಳ್ಳುತ್ತವೆ. ೨೦ ವರ್ಷದವರ ಜೀವ ಕೋಶಗಳು ೬೦ ವರ್ಷದವರಿಗಿಂತ ಅಧಿಕ ಜೀವಿತಾವಧಿ ಪಡೆದಿರುತ್ತವೆ.

ಆದರೆ ಇದನ್ನೊಪ್ಪದ ಹಾರ್ವರ್ಡ್‌ನ ಡಾ.

ಡಬ್ಲ್ಯೂ. ಡನ್ನರ್ ಡೆಂಕ್ಲಾ ಅವರು ವೃದ್ಧಾಪ್ಯ ಸೂಚಕವು ಮಿದುಳಿನಲ್ಲಿದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಪಿಟ್ಯೂಟರಿ ಗ್ರಂಥಿಯು ನಿಯಮಿತ ಕಾಲಾನುಸಾರ 'ಡೆಕೊ' ಎಂಬ ಹಾರ್ಮೋನನ್ನು ಬಿಡುಗಡೆ ಮಾಡುತ್ತದೆಂಬುದು ಡೆಂಕ್ಲಾ ಅವರ ತಿಳುವಳಿಕೆ. ಇತರ ಮುಪ್ಪುಶಾಸ್ತ್ರಜ್ಞರು ಈ ಹಾರ್ಮೋನಿಗೆ 'ಮೃತ್ಯು-ಹಾರ್ಮೋನ್' ಎಂದು ಹೆಸರಿಸಿದ್ದಾರೆ. ಈ ಹಾರ್ಮೋನ್ ಬಿಡುಗಡೆಯಾಗದಂತೆ ಮಾಡಿ (ಪಿಟ್ಯೂಟರಿ ಗ್ರಂಥಿ ತೆಗೆದುಹಾಕುವ ಮೂಲಕ) ಹಾಗೂ ಥೆರಾಕ್ಸಿನ ಹಾರ್ಮೋನ(ಥೈರಾಯ್ಡ್ ಗ್ರಂಥಿಯಿಂದ ಉತ್ಪಾದಿತ)ನ್ನು ಸೇರಿಸುವ ಮೂಲಕ ಡೆಂಕ್ಲಾ ವೃದ್ಧ ಇಲಿಗಳ ಹೃನ್ನಾಳ ಮುಂತಾದವುಗಳ ಕ್ರಿಯೆಗಳು ಪುನಶ್ಚೇತನಗೊಳ್ಳುವಂತೆ ಮಾಡಿದರು.

ನೂರಕ್ಕೂ ಹೆಚ್ಚು ವರ್ಷ ಮನುಷ್ಯ ಬದುಕುಳಿವ ದಿಶೆಯಲ್ಲಿ ಅಮೇರಿಕದ ರಾಷ್ಟ್ರೀಯ ವೃದ್ಧಾಪ್ಯ ಸಂಸ್ಥೆಯು ಜೀವಶಾಸ್ತ್ರ, ಮನಶ್ಶಾಸ್ತ್ರ ಹಾಗೂ ವೃದ್ಧಾಪ್ಯ ಸಮಾಜಶಾಸ್ತ್ರ ಮುಂತಾದ ವಿಷಯುಗಳಲ್ಲಿ ಸಂಶೋಧನೆ ಕೈಗೊಂಡಿದೆ. ಜೀವನಾವಧಿ ವಿಸ್ತರಿಸುವ ಬಗೆಗಿನ ಉಪಲಬ್ಧ ಸಂಶೋಧನಾ ತಂತ್ರಗಳಿಂದಾಗಿ ೧೯೬೦-೭೦ರ ದಶಕದಿಂದೀಚೆ ಜನಿಸಿರುವ ಮಕ್ಕಳು ನೂರಕ್ಕೂ ಹೆಚ್ಚು ಕಾಲ ಬದುಕುಳಿವ ಸಾಧ್ಯತೆ ಖಂಡಿತ ಉಂಟೆಂದು ಈ ಸಂಸ್ಥೆಯ ಡಾ. ರಾಬರ್ಟ್ ಎನ್. ಬಟ್ಲರ್ ಅಭಿಪ್ರಾಯ ಪಟ್ಟಿದ್ದಾರೆ.

ಬಾಲ್ಟಿಮೋರ್‌ನಲ್ಲಿರುವ ಎನ್. ಐ. ಎ. ಯ ವೃದ್ಧಾಪ್ಯ ಸಂಶೋಧನಾ ಕೇಂದ್ರವು ೨೦ ರಿಂದ ೯೬ ವರ್ಷ ವಯಸ್ಸಿನ ೬೫೦ ಸ್ವಯಂಸೇವಕರನ್ನು ವಾರ್ಷಿಕ ಎರಡೂವರೆ ದಿನಗಳಂತೆ ಹಲವು ದಶಕಗಳ ವರೆಗಿನ ದೀರ್ಘಾವಧಿ ಪರೀಕ್ಷೆಗೆ ಒಳಪಡಿಸಿದ್ದಾರೆ.

ಇಲ್ಲಿಯ ವರೆಗೆ ಕಂಡುಬಂದ ಪರೀಕ್ಷಾ ಫಲಿತಾಂಶವೆಂದರೆ ವಯಸ್ಸಾದಂತೆ ಸ್ಮರಣಶಕ್ತಿ ಕುಂದುತ್ತದೆಂಬುದು.ಮನಃಶಾಸ್ತ್ರಜ್ಞ ಡಾ.ರಿಚರ್ಡ್ ಎಲ್. ಸ್ಪ್ರಾಟ್ ಅವರು ಬಾರ್‌ಹಾರ್ಬರ್‌ನ ಜಾಕ್ಸನ್ ಪ್ರಯೋಗಶಾಲೆಯಲ್ಲಿ ಕೈಗೊಂಡ ಪರೀಕ್ಷೆಗಳ ಫಲಿತಾಂಶವೆಂದರೆ – ಕಲಿಯುವ ಆಸಕ್ತಿ ಹಾಗೂ ಬುದ್ಧಿವಂತಿಕೆಗಳು ವೃತ್ತಿ, ಆಕಾಂಕ್ಷೆ ಹಾಗೂ ಆರೋಗ್ಯಗಳನ್ನು ಅವಲಂಬಿಸಿದ್ದು ವಯಸ್ಸಾದಂತೆ ಹೆಚ್ಚುವುದುಂಟು.

ಮುಪ್ಪನ್ನು ಪೂರ್ಣವಾಗಿ ತಡೆಯುವಲ್ಲಿ ವಿಜ್ಞಾನಿಗಳು ಇನ್ನೂ ಸಫಲವಾಗಿರದಿದ್ದರೂ ಜೀವನಾವಧಿಯನ್ನು ಹೆಚ್ಚಿಸುವಲ್ಲಿ ಕೆಲ ಸಂಶೋಧನೆಗಳನ್ನು ನಡೆಸಿ ಫಲಪ್ರದವಾಗಿರುವರು.

ಮಿತ ಆಹಾರ ಸೇವನೆಯಿಂದ ದೀರ್ಘಾವಧಿ ಜೀವನ ಹೊಂದಲು ಸಾಧ್ಯವಿದೆ. ಕಾರ್ನೆಲ್ ವಿಶ್ವವಿದ್ಯಾನಿಲಯದ ಡಾ. ಕ್ಲೈವ್ ಅಗತ್ಯಕ್ಕಿಂತ ಕಡಿಮೆ ಆಹಾರ ನೀಡಿದಾಗ ಇಲಿಗಳ ಜೀವನಾವಧಿ ಇಮ್ಮಡಿಸಿದ್ದು ಕಂಡುಬಂತು. ರಷ್ಯದ ವೃದ್ಧಾಪ್ಯ ಸಂಸ್ಥೆಯೊಂದು ನಡೆಸಿದ ಸಂದರ್ಶನವೊಂದರಲ್ಲಿ ೪೦೦೦೦ ರಶಿಯನ್ನರು ಅಲ್ಪಾಹಾರ, ಸೇವಿಸಿದ್ದರಿಂದ ಆರೋಗ್ಯವಂತರಾಗಿ, ಸುದೀರ್ಘ ಆಯುಸ್ಸನ್ನು ಉಳ್ಳವರಾಗಿದ್ದು ಗೋಚರಿಸಿತು. ರಶಿಯದ ಕಕೇಸಸ್, ದಕ್ಷಿಣ ಅಮೇರಿಕದ ಆಂಡೇಸರು ಸಾಮಾನ್ಯವಾಗಿ ಅಲ್ಪಾಹಾರಿಗಳಾಗಿದ್ದರಿಂದಲೇ ಅವರು ದೀರ್ಘಾವಧಿ ಜೀವನ ಉಳ್ಳವರಾಗಿದ್ದಾರೆಂದು ಡಾ.ಅಲೆಗ್ಸಾಂಡರ್ ಲೀಫ್ ಹಾಗೂ ಡಾ. ಸೂಲಾ ಬೆನೆಟ್ ಅವರು ಅಭಿಪ್ರಾಯ ಪಟ್ಟಿದ್ದಾರೆ.

ಸುದೀರ್ಘ ಜೀವನಾವಧಿ ಬಗೆಗಿನ ಸಂಶೋಧನೆಗಳಿಂದ ತಿಳಿದು ಬಂದಿರುವ ಇನ್ನೊಂದು ಅಂಶವೆಂದರೆ ಸಂಸಾರಿಗಳ ಜೀವನಾವಧಿ ಬ್ರಹ್ಮಚಾರಿಗಳಿಗಿಂತ ಹೆಚ್ಚೆಂಬುದು. ಜೀವನದ ಬಗ್ಗೆ ಆಸಕ್ತರ ಜೀವನ ಕಾಲ ಸಾಮಾನ್ಯವಾಗಿ ಅಧಿಕವಾಗಿರುವದು ಗೋಚರವಾಗಿದೆ. ಮನಶ್ಶಾಸ್ತ್ರೀಯ ಹಾಗೂ ಭಾವೋದ್ವೇಗದದ ಅಂಶಗಳೂ ಜೀವಿತ ಕಾಲವನ್ನು ಹೆಚ್ಚಿಸುವಲ್ಲಿ ಪ್ರಭಾವ ಬೀರುತ್ತವೆಂಬ ಅಂಶವು ಬೆಳಕಿಗೆ ಬಂದಿದೆ. ಕೃಶಕಾಯರು ಸ್ಥೂಲಕಾಯರಿಗಿಂತ ಅಧಿಕ ಕಾಲ ಬದುಕುತ್ತಾರೆಂದು ತಿಳಿದುಬಂದಿದೆ. ಧೂಮಪಾನ ಹಾಗೂ ಮದ್ಯ ಇವುಗಳ ಅತಿ ಸೇವನೆಗಳಿಂದಾಗಿ ವೃದ್ಧಾಪ್ಯ ಬೇಗನೆ ಉಂಟಾಗಿ ಜೀವನಾವಧಿ ಕಡಿಮೆಯಾಗುತ್ತದೆಂದು ಸಂಶೋಧನಾ ವರದಿಗಳಿಂದ ತಿಳಿದಿದೆ. ಸಿಗರೇಟು ಸೇವನೆಯಿಂದ ವ್ಯಕ್ತಿಯ ಪುಪ್ಪುಸವು ೧೦ ವರ್ಷದಷ್ಟು ಹಳತಾಗುತ್ತದೆ. ಅಂದರೆ ಸಿಗರೇಟು ಸೇದು

ವ ೬೫ ವರ್ಷ ವಯಸ್ಸಿನ ವ್ಯಕ್ತಿಯ ಪುಪ್ಪುಸವು ೭೫ ವರ್ಷದವನಂತೆ ಇರುತ್ತದೆ. ಒಂದು ವೇಳೆ ಧೂಮಪಾನ ವರ್ಜಿಸಿದರೆ ಪುನಃ ಪುಪ್ಪುಸವು ೧೮ ರಿಂದ ೨೪ ತಿಂಗಳೊಳಗಾಗಿ ಸಾಮಾನ್ಯ ಸ್ಥಿತಿಗೆ ಹಿಂತಿರುಗುವದೆಂದು ಬಾಲ್ಟಿಮೋರ್ ಪ್ರಯೋಗಗಳಿಂದ ತಿಳಿದು ಬಂದಿದೆ. ಮಿತವಾಗಿ ಮದ್ಯ ಸೇವಿಸಿದರೆ ಆರೋಗ್ಯಕ್ಕೆ ಒಳ್ಳೆಯದೆಂದೂ ರಶಿಯದ ಕೀವ್ ಸಂಸ್ಥೆ ಉಪನಿರ್ದೇಶಕ ನಿಕಿಟ ಬಿ. ಮಂಕೋವ್‌ಸ್ಕಿ ಅಭಿಪ್ರಾಯಪಟ್ಟಿದ್ದಾರೆ.

ನಿರಂತರ ದೈಹಿಕ ಶ್ರಮದಿಂದಾಗಿ ದೀರ್ಘಾವಧಿ ಜೀವನ ಪಡೆಯಬಹುದು. ೧೭೦ ವರ್ಷ ವಯಸ್ಸಿನ ಶಿರಲಿ ಮಿಸ್ಲಿಮೋವ್‌ರು ತಾವು ನಿರಂತರ ದೈಹಿಕ ಶ್ರಮ ಕೈಗೊಂಡಿದ್ದರಿಂದಲೇ ಹೆಚ್ಚು ಕಾಲ ಬದುಕಲು ಸಾಧ್ಯವಾಗಿದೆ ಎಂದಿದ್ದಾರೆ. ದೇಹದ ವಿವಿಧ ಅಂಗಗಳಿಗೆ ಸೂಕ್ತ ವ್ಯಾಯಾಮ ನೀಡುವದರಿಂದ ಸದೃಢ ಹಾಗೂ ಆರೋಗ್ಯದಿಂದಿರಲು ಮಾತ್ರವಲ್ಲ ಜೀವಿತಾವಧಿಯನ್ನು ಹೆಚ್ಚಿಸಲು ಸಾಧ್ಯವೆಂದು ಅಲೆಕ್ಸಾಂಡರ್ ಮಿಕುಲಿನ್ ಸ್ವಂತಾನುಭವದ ಮೂಲಕ ಹೇಳಿದ್ದಾರೆ.


ವಿವಾಹಿತರು, ಎತ್ತರ ಪ್ರದೇಶಗಳಲ್ಲಿರುವವರು, ಸಾಕಷ್ಟು ನೀರು ಕುಡಿಯುವವರು, ಹೆಚ್ಚು ಮಾತನಾಡುವವರು, ಹಾಗೂ ಹೊರಗೆ ದೈಹಿಕವಾಗಿ ಶ್ರಮಿಸುವವರು, ದೀರ್ಘಾವಧಿ ಜೀವಿಸುವರೆಂದು ರಶಿಯದ ಮುಪ್ಪುಶಾಸ್ತ್ರಜ್ಞರು ಅಭಿಪ್ರಾಯಪಟ್ಟಿದ್ದಾರೆ. ವೃದ್ಧಾಪ್ಯವೆಂದಾಕ್ಷಣ ಸುಮ್ಮನೆ ಕುಳಿತಿರಲಾಗದು, ಅದು ಸದಾ ಚಟುವಟಿಕೆಯಿಂದಿರುವ ಕಾಲ ಎಂಬುದಾಗಿ ರಶಿಯನರ ಅಧ್ಯಯನದಿಂದ ತಿಳಿದುಬಂದ ಸಂಗತಿ.

ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದ ಸಂಶೋಧಕದ್ವಯರಾದ ಡಾ. ಲೆಸ್ಟರ್ ಪ್ಯಾಕರ್ ಹಾಗೂ ಡಾ. ಜೇಮ್ಸ್ ಆರ್. ಸ್ಮಿಥ್ ಪ್ರನಾಳದಲ್ಲಿನ ಮನುಷ್ಯನ ಜೀವಕೋಶಗಳಿಗೆ 'ಇ' ಜೀವಸತ್ವ ನೀಡಿದಾಗ ಅವು ಸಾಮಾನ್ಯವಾಗಿ ೫೦ ರಂತೆ ಹೆಚ್ಚುವ ಬದಲು ೧೨೦ ರಂತೆ ಅಧಿಕಗೊಂಡವು. ನೆಬ್ರಸ್ಕಾ ವೈದ್ಯಕೀಯ ವಿಶ್ವವಿದ್ಯಾನಿಲಯದ ಡಾ. ಡೆನ್‌ಹಾಮ್ ಹಾರ್ಮನ್ನರು ಪ್ರಯೋಗಕ್ಕೊಳಪಡಿಸಿದ ಇಲಿಗಳಿಗೆ 'ಇ' ಜೀವಸತ್ವ ನೀಡಿದ್ದರಿಂದಾಗಿ ಅವುಗಳ ಜೀವಿತಾವಧಿ ಶೇ. ೩೦ ರಷ್ಟು ಹೆಚ್ಚಿದ್ದುದು ಕಂಡುಬಂತು.

ಮಿದುಳುರೋಗ, ಹೃದ್ರೋಗಗಳನ್ನು ತಡೆದರೆ ಮುಪ್ಪಿನಲ್ಲಿ ಅವಶ್ಯಕತೆಗೆ ಅನುಗುಣವಾಗಿ ಮೂತ್ರಪಿಂಡ, ಮೂಳೆ, ಕೀಲು ಅಥವಾ ಹಲ್ಲುಗಳನ್ನು ಬದಲಿಸಿದರೆ ಜೀವತಾವಧಿಯನ್ನು ಹೆಚ್ಚಿಸಬಹುದು. ವೃದ್ಧಾಪ್ಯವನ್ನು ಮುಂದೂಡುವ 'ಜೆರೊವೈಟಲ್' ಎಂಬ ಔಷಧಿ (ವಿವಾದಯುಕ್ತ)ಯನ್ನು ೧೯೫೦ ರಲ್ಲೇ ರುಮಾನಿಯಾದ ಡಾ. ಅನಾ ಅಸ್ಲನ್ ಕಂಡುಹಿಡಿದಿದ್ದಾರೆ.

ಜೀವಿತಾವಧಿಯನ್ನು ಹೆಚ್ಚಿಸುವ ಅನೇಕ ವೈಜ್ಞಾನಿಕ ತಂತ್ರಗಳನ್ನು ಅಳವಡಿಸುತ್ತಾರೆ ಈಗ ಅಮೇರಿಕದಲ್ಲಿರುವ ೬೫ ವರ್ಷಕ್ಕೂ ಹೆಚ್ಚು ವಯಸ್ಸಿನವರ ಸಂಖ್ಯೆ ೨.೨ ಕೋಟಿ ಇದ್ದುದು ೨೦೦೦ರ ನಂತರ ೪.೩ ಕೋಟಿ ಆಗಲಿದೆಯೆಂದು ಅಂದಾಜು ವಿಶ್ವಾದ್ಯಂತ ಇಂಥವರ ಸಂಖ್ಯೆ ಕ್ರಮೇಣ ಇಮ್ಮಡಿಸುವುದರಲ್ಲಿ ಸಂಶಯವಿಲ್ಲ.

(ವಿವಿಧ ಮೂಲಗಳಿಂದ)



ಗಂಡ - ಗರ್ಭಿಣಿ ಹೆಂಡತಿ - ಮಗು ಮನೆಯ ವರಾಂಡದಲ್ಲಿ ಸಂಜೆ ಗಾಳಿಗೆ ಕುಳಿತಿದ್ದಾರೆ. ಅತ ಕೇಳುತ್ತಾನೆ,

"ಮರಿ ನಿಂಗೇನು ಬೇಕು ತಮ್ಮನೋ - ತಂಗಿಯೋ?"

"ಪ್ರಸಾದನ ಮನೇಲಿರೊಂತಾ ನಾಯಿಮರಿ" ಎನ್ನುತ್ತದೆ ಮಗು.



ನಗೆಮಲ್ಲಿಗೆ

"ಏನಮ್ಮಾ, ಪ್ರತಿ ರವಿವಾರವೂ ನೀನು ಇಗರ್ಜಿಗೆ ಹೋಗ್ತೀಯಾ?" ಪಾದರಿ ಕೇಳಿದರು.

"ಹೌದು" ಎಂದಳು ಆ ಹುಡುಗಿ.

"ಬೈಬಲ್ ನೋಡ್ತೀಯಾ?"

"ಹೌದು."

"ಹಾಗಾದ್ರೆ ಹೇಳು, ಬೈಬಲ್ಲಿನಲ್ಲೇನಿರುತ್ತೆ?"

"ಯಾರ ಮುಂದೂ ಹೇಳೋದಿಲ್ಲಾಂದ್ರೆ ಹೇಳ್ತೀನಿ."

"ಹೇಳಮ್ಮಾ ಯಾರ ಮುಂದೂ ಹೇಳಲ್ಲ ."

"ಮತ್ತೆ.. ಮತ್ತೆ.. ಬೈಬಲ್ಲಿನ ನೂರೊಂದ್ನೇ ಪುಟದಲ್ಲಿ ನಮ್ಮಕ್ಕನ ಪ್ರಿಯಕರನ ಫೋಟೋ ಇರುತ್ತೆ......"

*

ಪ್ರಿಯಕರ: ನೀನುಟ್ಟಿರೋ ಬಟ್ಟೆಯ ಬಣ್ಣ ನಂಗೆ ತುಂಬಾ ಹಿಡಿಸ್ತು. ಆದ್ರೆ ಇಂಥ ಬಟ್ಟೆಗಳಿಗೆ ಹುಳುಗಳು ಬೆನ್ನಟ್ಟೋದು ಬಹಳ......

ಪ್ರಿಯತಮೆ: ಹೌದ್ಹೌದು. ಎಂಥ ಹುಳು ಬೆನ್ನಟ್ಟುತವೆ ಅನ್ನೋದಿಗ ಗೊತ್ತಾಗಿದೆ ನಂಗೆ.

*

ವಸ್ತು ಸಂಗ್ರಹಾಲಯದಲ್ಲಿ 'ಧೂಮಪಾನ ನಿಷೇಧ' ಎಂಬ ಬೋರ್ಡುಗಳಿದ್ದಾಗ್ಯೂ ಆ ಗೃಹಸ್ಥ ಸಿಗರೇಟು ಸೇದಿದ. ಕೂಡಲೇ ಅಲ್ಲಿಯ ಮೇಲ್ವಿಚಾರಕ ಬಂದವನೆ, "ಸ್ವಾಮಿ, ನಿಷೇಧವಿದ್ದಾಗ್ಯೂ ನೀವು ಸಿಗರೇಟು ಸೇದಿ ಕಾನೂನು ಮತ್ತು ಶಿಸ್ತನ್ನು ಉಲ್ಲಂಘಿಸಿದ್ದೀರಿ. ಅದಕ್ಕಾಗಿ ಐದು ರೂಪಾಯಿ ದಂಡವಿಧಿಸಿದ್ದೇನೆ" ಅಂದ.

ಈ ಗೃಹಸ್ಥ ಶಾಂತವಾಗಿ ಜೇಬಿನಿಂದ ೧೦ ರೂಪಾಯಿಯ ನೋಟನ್ನು ಕೊಟ್ಟುಬಿಟ್ಟ. ಮೇಲ್ವಿಚಾರಕನ ಬಳಿ ಚಿಲ್ಲರೆ ಇರಲಿಲ್ಲ. "ಚಿಲ್ರೆ ಇಲ್ವಲ್ಲ ಸ್ವಾಮಿ." ಅಂದ ಆತನಿಗೆ, "ಚಿಂತೆ ಮಾಡ್ಬೇಡಿ, ನಾನಿನ್ನೊಂದು ಸಿಗರೇಟನ್ನು ಸೇದೇ ಬಿಡ್ತೇನೆ" ಎನ್ನುತ್ತ ಆ ಗೃಹಸ್ಥ ಕಡ್ಡಿ ಕೊರೆದೇ ಬಿಟ್ಟ.

*

ಪಶುಸಂಗೋಪನಾ ಮಂತ್ರಿ ಭಾಷಣ ಮಾಡುತ್ತ, "ಕುದುರೆಯ ಕೊಂಬಿನಿಂದ ಉಪಯುಕ್ತ ವಸ್ತುಗಳನ್ನು ತಯಾರಿಸಬಹುದು. ಆದ್ದರಿಂದ ಇಂಥ ವಸ್ತುಗಳ ಉತ್ಪಾದನೆ ಹೆಚ್ಚಾಗಿ ವಿದೇಶೀ ವಿನಿಮಯ ಗಳಿಸಿಕೋಬೇಕು" ಅಂತ ಘೋಷಿಸಿಬಿಟ್ಟ.

ಯುವಕನೊಬ್ಬ ಎದ್ದು ನಿಂತವನೇ ಇದನ್ನು ಬಲವಾಗಿ ವಿರೋಧಿಸಿದ. "ಕುದುರೆಗೆ ಕೊಂಬೇ ಇರೋದಿಲ್ಲ" ಅಂದ.

ಆ ವಿರೋಧವನ್ನು ಗಂಭೀರವಾಗಿ ಗಮನಿಸಿದ ಪಶುಮಂತ್ರಿ, "ಈ ಬಗ್ಗೆ ಒಂದು ಸಮಿತಿ ನಿಯಮಿಸೋಣ. ಕುದುರೆಗೆ ಕೊಂಬು ಇರತ್ತೋ ಇಲ್ವೋ ಅನ್ನೋದರ ಬಗ್ಗೆ ಆ ಸಮಿತಿ ನಮಗೆ ವರದಿ ಒಪ್ಪಿಸುತ್ತೆ." ಎಂದ.

ಸಮಿತಿ ವರದಿ ಒಪ್ಪಿಸಿತು: "ಇಲ್ಲಿ ಕುದುರೆಗೆ ಕೊಂಬು ಇರತ್ತೋ ಇಲ್ವೋ ಅನ್ನೋದು ಮುಖ್ಯ ವಿಷಯವಲ್ಲ. ಮಂತ್ರಿಗಳನ್ನು ಜನತೆ ಆರಿಸಿ ಕಳಿಸಿದ್ದಾರೆ. ಅವರ ಬಾಯಿಂದ ಬರೋದೆಲ್ಲಾ ಜನತೆಯ ಧ್ವನಿ. ಆದ್ದರಿಂದ ಈ ಜನಧ್ವನಿಯನ್ನು ವಿರೋಧಿಸುವುದು ಅಪರಾಧ. ಆ ಯುವಕನಿಗೆ ಶಿಕ್ಷೆ ವಿಧಿಸಬೇಕು."

*

ಇಂದಿನ ಪರಿಸ್ಥಿತಿಯನ್ನು ಅರ್ಥಶಾಸ್ತ್ರಿಯೊಬ್ಬ ವಿವರಿಸಿದ್ದು: ವೆಚ್ಚಗಳು ಮಿನಿಸ್ಕರ್ಟಿನ ಹಾಗೆ ಏರುತ್ತಾ ನಡೆದಿರುವಾಗ ಸ್ವಾಭಾವಿಕವಾಗಿಯೆ ಜೀವನಮಟ್ಟ ಮ್ಯಾಕ್ಸಿಯ ಹಾಗೆ ಕೆಳಗೆ ಇಳಿಯುತ್ತದೆ.

*

"ನಿನ್ನ ಕೊಡೆ ಬಹಳ ಚೆನ್ನಾಗಿದೆ ನೋಡು."

"ಹೌದು ಕೊಂಡ ಐದು ವರ್ಷಗಳಲ್ಲಿ ಮೂರು ಸಲ ಅದರ ಬಟ್ಟೆ ಬದಲಾಯಿಸಿದೆ, ಎರಡುಸಲ ರೆಸ್ಟೋರಂಟಿನಲ್ಲಿ ಕೊಡೆಯನ್ನೇ ಬದಲಾಯಿಸಿದೆ. ಹೀಗಾಗಿ ಅದು ಹೊಚ್ಚ ಹೊಸದಾಗಿಯೆ ಇದೆ."

*

"ರಾಜಕಾರಣಿಗಳ ಮಾತಿಗೂ ಮೂರ್ಖರು ಆಡುವ ಮಾತಿಗೂ ಭೇದವೇನು?"

"ಮಾತಿನ ಅರ್ಥ ಒಂದೇ ಆದರೂ ಆಡುವ ರೀತಿಯಲ್ಲಿ ಅಜಗಜಾಂತರ. ಒಬ್ಬಾತ ಸುಂದರಿಯೊಬ್ಬಳ ಬಳಿಹೋಗಿ, 'ನಿನ್ನ ಸುಂದರವಾದ ಮುಖವನ್ನು ನೋಡಿ ಗಡಿಯಾರ ನಿಂತುಬಿಡುತ್ತದೆ' ಎಂದು ಹೇಳಿದರೆ ಅದು ಮೂರ್ಖನ ಮಾತಾಗುತ್ತದೆ. ಆದರೆ ಸ್ವಲ್ಪ ಚತುರನಾದವನೊಬ್ಬ. 'ನಿನ್ನನ್ನು ನೋಡಿ ಕಾಲವೇ ನಿಶ್ಚಲವಾಗುತ್ತದೆ,' ಎಂದು ಹೇಳಿದರೆ ಅದು ರಾಜಕಾರಣಿಯ ಮಾತಾಗುತ್ತದೆ."

*

ಪತಿ : ಮ್ಯಾಜಿಕ್ ಶೋಗೆ ನಿನಗಾಗಿ ಟಿಕೆಟ್ ತಂದಿರುವೆ.

ಪತ್ನಿ : ನನಗೂ ಮನೋರಂಜನೆ ಬೇಕೆಂಬುದನ್ನು ನೀವು ಅರಿತಿರುವುದು ಸಂತೋಷದ ವಿಚಾರ.

ಪತಿ : ಇಲ್ಲಿ ಮನೋರಂಜನೆ ಪ್ರಶ್ನೆಯಲ್ಲ, ಮಹರಾಯಿತಿ. ಜಾದೂಗಾರ ಒಂದು ತತ್ತಿಯನ್ನ ನಾಲ್ಕು ಮಾಡ್ತಾನಂತೆ; ನೀನೂ ನೋಡಿ ಕಲಿತ್ಕೊ...

*

ರೋಟರಿ ಕ್ಲಬ್ಬೊಂದರಲ್ಲಿ ಭಾಷಣ ಮಾಡಲು ಬಂದಿದ್ದ ಪಾದ್ರಿಯೊಬ್ಬರು ಪ್ರಾಸಂಗಿಕವಾಗಿ ಕೆಲವು ಲಘು ಹಾಸ್ಯ ಪ್ರಸಂಗಗಳನ್ನು ಹೇಳಿದರಾದರೂ ಅವನ್ನು ಪತ್ರಕರ್ತರು ವರದಿ ಮಾಡುವುದು ಬೇಡವೆಂದರು.

ಮರುದಿನ ದೈನಿಕವೊಂದರಲ್ಲಿ ಈ ಬಗೆಗಿನ ವರದಿ ಹೀಗಿತ್ತು : ಪಾದ್ರಿಗಳು ಭಾಷಣದಲ್ಲಿ ಹಲವಾರು ಹಾಸ್ಯ ಪ್ರಸಂಗಗಳನ್ನು ಹೇಳಿದರು. ಆದರೆ ಅವನ್ನೆಲ್ಲ ಪ್ರಕಟಿಸಲು ಸಾಧ್ಯವಾಗದ್ದಕ್ಕೆ ವಿಷಾದಿಸುತ್ತೇವೆ.

*

ಒಬ್ಬಾತ ನೈಟ್ ಡ್ಯೂಟಿಯ ಮೇಲಿದ್ದಗೆಳೆಯನೊಬ್ಬನಿಗೆ ಯಾವುದೋ ಕಾರ್ಯದ ನಿಮಿತ್ತ ಬೆಳಗಿನ ಮೂರು ಗಂಟೆಗೆ ಫೋನು ಮಾಡಿ, ಅವೇಳೆಯಲ್ಲಿ ಫೋನು ಮಾಡಿ ತೊಂದರೆಕೊಟ್ಟದ್ದಕ್ಕಾಗಿ ಕ್ಷಮಿಸಬೇಕು ಎಂದು ಹೇಳಿದಾಗ ಆತ, ಛೇ, ಛೆ, ಅದರಿಂದೇನೂ ತೊಂದರೆಯಿಲ್ಲ, ಹೇಗೂ ಡ್ಯೂಟಿ ಮುಗಿಸಿ ಮನೆಗೆ ಹೋಗುವ ಹೊತ್ತಾಗಿತ್ತು ಎಂದು ಉತ್ತರಿಸಿದನಂತೆ.

*

ರಾತ್ರಿ ಕನ್ನ ಹಾಕಿದ ಅಪರಾಧಕ್ಕೊಳಗಾದವ ತನ್ನ ವಕೀಲನಿಗೆ— "ನೀವು ಆ ಕೇಸಿನಲ್ಲಿ ನನ್ನನ್ನು ನಿರಪರಾಧಿಯನ್ನಾಗಿ ಮಾಡಿದಿರಿ, ಕೃತಜ್ಞತೆಗಳು. ಮತ್ತೆಂದಾದರೂ ನಾನು ನಿಮ್ಮ ಬಳಿ ಬರುವೆ, ನಮಸ್ಕಾರ" ಎಂದ.

ವಕೀಲ ಕೂಡಲೇ— "ನೀವು ಯಾವಾಗಲಾದರೂ ಬನ್ನಿ, ಆದರೆ ಹಗಲು ಮಾತ್ರ ಬರಲು ಮರೆಯದಿರಿ" ಎಂದ.

*

ಸಂಪಾದಕ : ನಮ್ಮ ಮಾಸಿಕದ ೫೦ ವರ್ಷ ಹಿಂದಿನ ಪ್ರತಿ ನಿಮ್ಮಲ್ಲಿದೆ, ಕೊಡುತ್ತೀರಾ ?

ಲೇಖಕ : ಅದು ನನ್ನಲ್ಲಿರುವುದು ನಿಮಗ್ಹೇಗೆ ಗೊತ್ತಾಯಿತು.

ಸಂಪಾದಕ : ನೀವು ಕಳಿಸುತ್ತಿರುವ ಚುಟುಕಗಳಿಂದ ಗೊತ್ತಾಯಿತು.

ಗೂಢಚರ್ಯೆ: ಎರಡು ಮುಖ

ಆರ್. ಜಿ. ಹೆಗಡೆ

ನಮ್ಮ ದೇಶ ಬ್ರಿಟಿಶರ ಅಧೀನದಲ್ಲಿದ್ದಾಗಲೂ ಗೂಢಚರ್ಯೆ ಶಾಸನದ ಪ್ರಮುಖ ಅಂಗವಾಗಿತ್ತು. ಈಗ ಬೇರೆ ಬೇರೆ ಕ್ಷೇತ್ರಗಳಲ್ಲಿ ಪ್ರಸಿದ್ಧರಾದವರು ಆಗ ಗೂಢಚರ್ಯೆಯಲ್ಲಿ ಆಸಕ್ತರಾಗಿದ್ದರು. ಭಾರತೀಯ ಲೇಖಕರಲ್ಲಿ ಅಗ್ರ ಪಂಕ್ತಿಯಲ್ಲಿರುವ ಬಂಗಾಳೀ ಸಾಹಿತಿ ವಿಮಲ ಮಿತ್ರರು ಆಗ ಸಿ.ಐ.ಡಿ. ಇಲಾಖೆಯಲ್ಲಿದ್ದವರು. ಇಂಗ್ಲೀಷರ ಆಳ್ವಿಕೆಯಲ್ಲಿ ಇದೊಂದು ಮಹತ್ವಪೂರ್ಣ ವಿಭಾಗವಾದ್ದರಿಂದ ವೇತನವೂ ಚೆನ್ನಾಗಿತ್ತು.

ಆಂಗ್ಲರು ತಮ್ಮ ವಿರುದ್ಧ ಗಾಳಿ ಬೀಸದಂತೆ ತಡೆಯಲು ಸಿ.ಐ.ಡಿ. ವಿಭಾಗವನ್ನು ಬಳಸುತ್ತಿದ್ದರು. ರಾಷ್ಟ್ರವಾದೀ ಆಂದೋಲನಗಳ ಪತ್ತೆ ಮಾಡಲಿಕ್ಕೂ, ಕ್ರಾಂತಿಕಾರಿಗಳನ್ನು ಸೆರೆ ಹಿಡಿಯುವುದಕ್ಕೂ ಗುಪ್ತ ಪೋಲೀಸ್ ಪಡೆಯೇ ಸಿದ್ಧವಾಗಿತ್ತು. ಸ್ವಲ್ಪ ರಾಷ್ಟ್ರೀಯ ಭಾವನೆಯಿರುವ ವ್ಯಕ್ತಿಯಾದರೂ ಸರಿ, ಸಿ.ಐ.ಡಿ.ಗಳು ಅವನ ಬೆನ್ನು ಹತ್ತುತ್ತಿದ್ದರು.

ಬಿಹಾರದ ಗಣ್ಯ ಬ್ಯಾರಿಸ್ಟರ್ ಕಾಜೀ ಮಜರುಲ್ ಹಕ್‌ರಿಗೆ ಸಂಬಂಧಿಸಿದ ಘಟನೆಯೊಂದು ತುಂಬಾ ಸ್ವಾರಸ್ಯವಾಗಿದೆ. ಹಕ್ ಸಾಹೇಬರು ಗಾಂಧೀಜಿಯ ಆಪ್ತ ಮಿತ್ರರು. ಇಬ್ಬರೂ ಲಂಡನ್ನಿನಲ್ಲಿ ಒಟ್ಟಿಗೇ ಇದ್ದು ಓದಿದ್ದರು. ಒಂದೇ ಸಾರೆ ಬ್ಯಾರಿಸ್ಟರಿ ಮುಗಿಸಿದವರು. ನಂತರ ಗಾಂಧೀಜಿಯವರು ದಕ್ಷಿಣ ಆಫ್ರಿಕಕ್ಕೆ ಹೋದರು. ಮಜರುಲ್ ಹಕ್ ಪಾಟ್ನಾಕ್ಕೆ ಬಂದು ವಕೀಲಿ ಪ್ರಾರಂಭಿಸಿದರು. ಅವರದು ಒಳ್ಳೇ ಸಂಪನ್ನ ಕುಟುಂಬ. ವೃತ್ತಿಯೂ ಚೆನ್ನಾಗಿ ನಡೆಯುತೊಡಗಿತು. ಸ್ವಭಾವದಿಂದಲೂ ಒಳ್ಳೇ ಐಷಾರಾಮಿನ ವ್ಯಕ್ತಿ. ಆಂಗ್ಲರಂತೆ ವೈಭವ ಜೀವನ ನಡೆಸಿದ್ದರು. ಇಷ್ಟಾದರೂ ವೈಚಾರಿಕವಾಗಿ ಅವರು ಅಪ್ಪಟ ರಾಷ್ಟ್ರೀಯವಾದಿ.

ಆ ಕಾಲದಲ್ಲಿ ಪಾಟ್ನಾ ನಗರದಲ್ಲಿ ವಿದ್ಯುತ್ ಇರಲಿಲ್ಲ. ಮೇಲೆ ತೂಗು ಹಾಕಿದ ಪಂಖಾ ಎಳೆಯಲು ಸೇವಕರಿರುತ್ತಿದ್ದರು. ವಿದ್ಯುತ್ ಪಂಖಾಗಳಿಲ್ಲದ ಕಡೆ, ಗಾಳಿ ಉತ್ಪನ್ನ ಮಾಡಲು ಬ್ರಿಟಿಶ್ ದೊರೆಗಳು ಅನುಸರಿಸುತ್ತಿದ್ದ ವಿಧಾನ ಇದು. ಮಜರುಲ್ ಹಕ್ ಸಹ ಪಂಖಾ ಎಳೆಯಲು ಕೆಲವು ಆಳುಗಳನ್ನಿಟ್ಟುಕೊಂಡಿದ್ದರು. ಅವರಲ್ಲೊಬ್ಬ ಯಾರಾದರೂ ಅತಿಥಿಗಳು ಬಂದ ಕೂಡಲೇ, ಓಡಿ ಬಂದು, ಬಹಳ ಚೆನ್ನಾಗಿ ಪಂಖಾ ಎಳೆಯುತ್ತಿದ್ದ. ಸಾಹೇಬರಿಗೆ ಅವನ ಕೆಲಸದಿಂದ ತುಂಬಾ ಸಂತೋಷವಾಗಿ ಸಂಬಳವನ್ನು ಹೆಚ್ಚಿಸಿದರು. ಕೊನೆಗೊಮ್ಮೆ ಆ ಮನುಷ್ಯ ಸಿ.ಐ.ಡಿ.ಗೆ. ಸೇರಿದವನೆಂದೂ ಮಿತ್ರರೊಂದಿಗೆ ತಾವು ಮಾತಾಡುವುದನ್ನು ಕದ್ದು ಕೇಳಿ ವರದಿ ಮಾಡುವುದಕ್ಕೆ ನೇಮಕವಾಗಿದ್ದನೆಂದೂ ಮಜರುಲ್ ಹಕ್‌ರಿಗೆ ತಿಳಿಯಿತು. ಇವನಿಗೆ ಸರಿಯಾಗಿ ಬುದ್ಧಿ ಕಲಿಸಬೇಕೆಂದು ಆಗಲೇ ನಿರ್ಧರಿಸಿದರು.

ಒಂದು ದಿನ ಸಂಜೆಯ ವೇಳೆ. ಹಕ್ ಸಾಹೇಬರು ತಮ್ಮ ಕೆಲವು ಜನ ಮಿತ್ರರೊಂದಿಗೆ ಜಗುಲಿಯಲ್ಲಿ ಕುಳಿತಿದ್ದರು. ಅವರ ಮಾತುಕತೆ ಅವ್ಯಾಹತವಾಗಿ ಸಾಗಿತ್ತು. ಆ ವೇಳೆಗೆ ಅದೇ ನಮ್ಮ ಸೇವಕ ತತ್ಪರತೆಯಿಂದ ಪಂಖಾ ಎಳೆಯತೊಡಗಿದ್ದ.

ಮಜರುಲ್ ಹಕ್ ಒಮ್ಮೆಲೇ ಮಾತು ನಿಲ್ಲಿಸಿ ಮೇಲೆದ್ದರು. "ಪಂಖಾ ಎಳೆಯುತ್ತೀಯೋ ತಮಾಷೆ ನೋಡ್ತಾ ಇದೀಯೋ?" ಎಂದು ಅಬ್ಬರಿಸಿದರು. ತಕ್ಷಣ ಚಪ್ಪಲಿ ಕೈಗೆತ್ತಿಕೊಂಡು ಮುಖ–ಮುಸುಡಿಯೆನ್ನದೆ ಹೊಡೆಯತೊಡಗಿದರು. ಚಪ್ಪಲಿಯೇಟಿನಿಂದ ತತ್ತರಿಸಿದ ಆತ ಬಾಗಿಲ ಕಡೆ ಓಡಿದ. ಸಾಹೇಬರೂ ಓಡಿ ದಾರಿಗಡ್ಡ ನಿಂತು, ಬಾರು ಕೋಲು ತೆಗೆದುಕೊಂಡು ಒಂದೇ ಸಮನೆ ಬಾರಿಸು

ಪ್ರದಕ್ಕೆ ಪ್ರಾರಂಭಿಸಿದರು. ಸೇವಕ ಓಡಿದಂತೆಲ್ಲ ಬೆನ್ನುಹತ್ತಿ ಬಾರಿಸಿದರು.

ಹಣ್ಣು ಹಣ್ಣಾದ ನಂತರ ಆತ ಹೇಗೋ ತಪ್ಪಿಸಿಕೊಂಡು ಹೊರಗೋಡಿದ. ಮುಂದೆಂದೂ ಕೈಗೆ ಸಿಗಲಿಲ್ಲ. ಆತ ಸಿ.ಐ.ಡಿ.ಯೆಂದು ರಹಸ್ಯ ಹೊರಬೀಳುವ ಸಂಭವವಿದ್ದುದರಿಂದ ಅವರ ವಿರುದ್ಧ ಯಾವ ಕೇಸನ್ನೂ ದಾಖಲು ಮಾಡಲಿಲ್ಲ. ಎಷ್ಟು ದಿನ ಆಸ್ಪತ್ರೆಯಲ್ಲಿದ್ದು ಗುಣ ಹೊಂದಿದನೋ ಭಗವಂತನಿಗೇ ಗೊತ್ತು!

ಹಕ್ ಸಾಹೇಬರ ಈ ಕೃತ್ಯವನ್ನು ಕಂಡ ಮಿತ್ರರೆಲ್ಲ ಬೆರಗಾಗಿ ಕುಳಿತಿದ್ದರು. ಅವರು ಕೆಲಸ ಮುಗಿಸಿ ಬಂದು, ಸೇವಕನ ರಹಸ್ಯ ಹೊರಗೆಡವಿದಾಗಲೇ ಅವರ ಕೃತಿಯ ಅರ್ಥ ಅತಿಥಿಗಳಿಗಾದದ್ದು.

*

ಬಹುತೇಕವಾಗಿ ಗೂಢಚರ್ಯೆಯ ದುರುಪಯೋಗವಾಗುತ್ತಿದ್ದ ಬ್ರಿಟಿಶ್ ಆಳ್ವಿಕೆಯಲ್ಲಿ ಕೆಲವೊಮ್ಮೆ ಜನರಿಗೆ ಪ್ರಯೋಜನವಾದದ್ದೂ ಇದೆ. ಲಾರ್ಡ್ ಕರ್ಜನ್ ವೈಸ್‌ರಾಯನಾಗಿದ್ದಾಗಿನ ಒಂದು ಘಟನೆ ತುಂಬಾ ಸ್ವಾರಸ್ಯಕರ.

ಆಗ ಬಿಹಾರದ ಶಹಾಬಾದ್ ಜಿಲ್ಲೆಯಲ್ಲಿ ವರ್ಷವಿಡಿ ಮಳೆ ಬೀಳದೆ ಭಾರೀ ದುರ್ಭಿಕ್ಷ ವುಂಟಾಗಿತ್ತು. ಸ್ವಭಾವತಃ ಸಜ್ಜನನಾದ ಲಾರ್ಡ್ ಕರ್ಜನ್, ದೇಶದ ನಾನಾ ಭಾಗಗಳಿಂದ ಧಾನ್ಯ ತರಿಸಿ, ಬಿಹಾರಕ್ಕೆ ಕಳಿಸಿದ. ಅದರ ಸರಿಯಾದ ವಿತರಣೆ ಮಾಡಲು ಸೈನ್ಯದ ಜೂನಿಯರ್ ಆಫೀಸರರ ಒಂದು ಗುಂಪನ್ನು ನೇಮಿಸಿದ. ಆ ಅಧಿಕಾರಿಗಳು ಸರಿಯಾಗಿ ವಿತ-ರಣಾ ವ್ಯವಸ್ಥೆ ಮಾಡುತ್ತಾರೋ ಇಲ್ಲವೋ ಎಂಬುದನ್ನು ಪತ್ತೆ ಮಾಡಲು ಕೆಲವು ಗೂಢಚಾರರನ್ನೂ ಬಿಟ್ಟ. ಆ ಸಿ.ಐ.ಡಿಗಳ ವರದಿ ಬಹುಬೇಗ ಬಂತು.

ಜೂನಿಯರ್ ಸೈನ್ಯಾಧಿಕಾರಿಗಳು, ಕ್ಯಾಂಪಿನಲ್ಲಿ ಕುಳಿತು ಕುಡಿಯುತ್ತ, ತಿನ್ನುತ್ತ ಇಸ್ಪೀಟಾಡುತ್ತ ಮಜಾ ಮಾಡುತ್ತಿದ್ದರು. ಮೇಮ್‌ಗಳೊಂದಿಗೆ ಡ್ಯಾನ್ಸ್ ಮಾಡುತ್ತಿದ್ದರು. ತಮಗೆ ವಹಿಸಿದ ಕೆಲಸದ ಬಗ್ಗೆ ಅವರಿಗೆ ಆಸಕ್ತಿಯೆ ಇರಲಿಲ್ಲ. ಜಿಲ್ಲಾಧಿಕಾರಿಗಳು ಮನಸ್ಸಿಗೆ ಬಂದಂತೆ ಧಾನ್ಯದ ವಿತರಣೆ ನಡೆಸಿದ್ದರು. ಈ ವಿಚಾರವನ್ನೆಲ್ಲ ಸಿ.ಐ.ಡಿ. ವರದಿ ತಿಳಿಸಿತ್ತು.

ಒಂದು ದಿನ ಈ ಅಧಿಕಾರಿಗಳ ಕ್ಯಾಂಪಿಗೆ ಕ್ಯಾಪ್ಟನ್ ಜಾನ್ ಎಂಬ ವ್ಯಕ್ತಿ ಬಂದು ಅಲ್ಲೇ ಉಳಿದ. ಆತ ಮದ್ಯ ಕುಡಿಯುತ್ತಿರಲಿಲ್ಲ. ಡ್ಯಾನ್ಸಿನ ಅಭ್ಯಾಸ ಆತನಿಗಿರಲಿಲ್ಲ. ಇದನ್ನು ಕಂಡ ಅಧಿಕಾರಿಗಳು ಕ್ರಮೇಣ ಜಾನ್‌ನನ್ನು ಅಲಕ್ಷಿಸತೊಡಗಿದರು. ಎರಡು ಮೂರು ದಿನ ಹೀಗೆಯೇ ಕಳೆಯಿತು. ಅಷ್ಟರಲ್ಲಿ ಮಿಂಚಿನಂತೆ ವೈಸ್‌ರಾಯರು ಪ್ರವಾಸಕ್ಕೆ ಬರುವರೆಂದು ಸುದ್ದಿ ಬಂದಿತು. ನಿಶ್ಚಿತ ವೇಳೆಗೆ ಆ ಸ್ಪೇಶಲ್ ಟ್ರೇನ್ ಬಂದೇಬಿಟ್ಟಿತು.

ವೈಸರಾಯರನ್ನು ಸ್ವಾಗತಿಸುವುದಕ್ಕಾಗಿ ಪಾಟ್ನಾದಿಂದ ದೊಡ್ಡ ದೊಡ್ಡ ಅಧಿಕಾರಿಗಳು, ಗಣ್ಯ ವ್ಯಕ್ತಿಗಳು ರೇಲ್ವೆ ಸ್ಟೇಶನ್ನಿನಲ್ಲಿ ಸೇರಿದ್ದರು. ಆ ಗುಂಪಿನಲ್ಲಿ ಬೆತ್ತ ಹಿಡಿದ ಕ್ಯಾಪ್ಟನ್ ಜಾನ್ ಸಹ ನಿಂತಿದ್ದ. ರೈಲು ನಿಂತು ವೈಸರಾಯರ ಬೋಗಿ ಸಮೀಪ ಬಂದಾಗ, ಮಿಂಚಿನಂತೆ ಗಾಡಿಯಲ್ಲಿ ನುಗ್ಗಿದ ಜಾನ್ ಐದೇ ನಿಮಿಷದಲ್ಲಿ ವೈಸ್‌ರಾಯನ ಉಡುಪು ಧರಿಸಿ, ಎ.ಡಿ.ಸಿ. ಮುಂತಾದವರಿಂದ ಸುತ್ತುವರಿದು ಬೋಗಿಯಿಂದ ಹೊರಗಿಳಿದ.

ಸೀನಿಯರ್ ಎ.ಡಿ.ಸಿ. ಉಚ್ಚಸ್ವರದಲ್ಲಿ ಹೇಳಿದ. "ಹಿಸ್ ಎಕ್ಸ್‌ಲೆನ್ಸೀ ದಿ ವೈಸ್‌ರಾಯ್!"

ಮೊದಲೇ ಹಾಜರಾಗಿದ್ದ ಜೂನಿಯರ್ ಸೈನ್ಯಾಧಿಕಾರಿಗಳ ಜಂಘಾಬಲವೇ ಉಡುಗಿ ಹೋದಂತಾಯಿತು. ಆ ವ್ಯಕ್ತಿ ಬೇರೆ ಯಾರೂ ಆಗಿರಲಿಲ್ಲ. ಅವರೊಂದಿಗೆ ಕ್ಯಾಂಪಿನಲ್ಲಿ ಕೆಲವು ದಿನ ಕಳೆದ ಕ್ಯಾಪ್ಟನ್ ಜಾನ್‌ನೇ ಅವನು! ಆ ಎಲ್ಲ ಅಧಿಕಾರಿಗಳನ್ನು ಆ ಕ್ಷಣ ಕೆಲಸದಿಂದ ವಜಾ ಮಾಡಲಾಯಿತಲ್ಲದೆ, ಕೋರ್ಟ್‌ಮಾ-ರ್ಷಲ್ ವಿಚಾರಣೆಗೂ ಗುರಿಪಡಿಸಲಾಯಿತು. ನಂತರ ಲಾರ್ಡ್ ಕರ್ಜನ್ ಸ್ವತಃ ಬರಗಾಲ ಪರಿಹಾರ ವ್ಯವಸ್ಥೆಯನ್ನು ಸರಿಪಡಿಸಿದ. ✡

★★★★★★★★★★★★★★★

ಬಯಸಿದಾಗ ಭೀಮ ಬಲ!

ಚ. ವ ಅ. ಶಾಸ್ತ್ರಿ

ಕೃಶಳಾದ ತಾಯಿಯೊಬ್ಬಳು ಆರು ಸೀಟಿನ ಕಾರಿನ ಹಿಂಭಾಗವನ್ನು ಎತ್ತಿ ಕಾರಿನ ಕೆಳಗೆ ಸಿಕ್ಕಿದ ತನ್ನ ಮಗನನ್ನು ಕಾಪಾಡಿದಳು. ಎಪ್ಪತ್ತು ವರ್ಷದ ಮುದುಕನೊಬ್ಬ ಉರಿಯುತ್ತಿರುವ ಮನೆಯಿಂದ ತಪ್ಪಿಸಿಕೊಳ್ಳಲು ಟೆಲಿಫೋನ್ ತಂತಿಯ ಮೇಲೆ ನಡೆದಾಡಿದ...

ಈ ರೀತಿಯ ಆಶ್ಚರ್ಯಕರ ಘಟನೆಗಳು ನಡೆಯದು ಸುಳ್ಳಲ್ಲ. ಈ ರೀತಿಯ ಘಟನೆಗಳು ಅವರಲ್ಲಿ ಉಂಟಾದ ಹೆದರಿಕೆಯಿಂದಲೇ ಆದುವೆಂದರೆ ನಂಬುವಿರಾ?

ಇಂದು ವಿಜ್ಞಾನಿಗಳು ಮಾನವನನ್ನು ಕ್ಷಣಕಾಲದ ಮಟ್ಟಿಗೆ ಅತೀವ ಶಕ್ತಿವಂತನನ್ನಾಗಿ ಮಾಡಲು ಸಾಧ್ಯವಾಗುವ ಸನ್ನಿವೇಶಗಳ ಬಗ್ಗೆ ಪರಿಶೀಲನೆ ನಡೆಸುತ್ತಿದ್ದಾರೆ. ಅದು ಸಾಧ್ಯವಾದಲ್ಲಿ ಒಂದು ದಿನ ಮಾನವನನ್ನು ಕ್ಷಣಕಾಲ 'ಸೂಪರ್ ಮ್ಯಾನ್' ಆಗಿ ಪರಿವರ್ತಿಸಬಲ್ಲ ಸಾಧ್ಯತೆ ಕಂಡುಬರುತ್ತಿದೆ.

ಕೆನಡಾದ ಮ್ಯಾಕ್‌ಗಿಲ್ ವಿಶ್ವವಿದ್ಯಾನಿಲಯದ ಡಾ. ಹಗ್ ಕ್ಯಾಂಪ್‌ಬೆಲ್ ಹೇಳುತ್ತಾರೆ: "ಮಾನವನನ್ನು ಕ್ಷಣಕಾಲದ ಮಟ್ಟಿಗೆ ಅತೀವ ಶಕ್ತಿವಂತನನ್ನಾಗಿ ಮಾಡಲು ಕೆಲವು ಹಾರ್ಮೋನುಗಳೇ ಕಾರಣ. ತಲೆಬುರುಡೆಯ ಕೆಳಭಾಗದಲ್ಲಿರುವ ಪಿಟ್ಯುಟರಿ ಗ್ರಂಥಿಗಳು ಅತೀವ ಹೆದರಿಕೆ, ಪ್ರೀತಿ ಅಥವಾ ಉದ್ರೇಕ ಉಂಟಾದಾಗ ಮಾನವನಲ್ಲಿ ಕ್ಷಣಕಾಲ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಈ ರೀತಿಯ ಹಾರ್ಮೋನುಗಳನ್ನು ಉತ್ಪತ್ತಿ ಮಾಡುತ್ತವೆ. ಮನುಷ್ಯನು ಯಾವಾಗ ಯಾವುದಾದರೂ ಕೆಲಸದ ಮೇಲೆ ತನ್ನ ಮನಸ್ಸನ್ನು ಅತೀವವಾಗಿ ಕೇಂದ್ರೀಕರಿಸುತ್ತಾನೋ ಆಗ ಮಾಂಸ ಖಂಡಗಳು, ನರಗಳು ಮತ್ತು ತಲೆಬುರುಡೆಯ ಜೀವಬೀಜಗಳು ಈ ಹಾರ್ಮೋನುಗಳನ್ನು ಆಕರ್ಷಿಸುತ್ತವೆ. ಆಗ ಕೆಲವು ಕ್ಷಣ ಅಂದರೆ ಈ ಹಾರ್ಮೋನುಗಳ ಸಂಕಲನ ಇರುವವರೆಗೆ ಮಾನವ ಅತಿ ಶಕ್ತಿವಂತನಾಗಿ ವರ್ತಿಸಬಲ್ಲ."

ವಿಜ್ಞಾನಿಗಳು ಮಾನವನಿಗೆ ಈ ಅತಿ ಶಕ್ತಿಯನ್ನು ಬಯಲಾಗಿಸಬಲ್ಲ 'ಮಾತ್ರೆ'ಯನ್ನು ಕಂಡುಹಿಡಿಯಲು ಶ್ರಮಿಸುತ್ತಿದ್ದಾರೆ. ಈ ರೀತಿಯ ಮಾತ್ರೆಗಳು ಮಾನವನಿಗೆ ದೈವತ್ವದ ಕೊಡುಗೆಯಾಗಬಲ್ಲವು. ಉದಾಹರಣೆಗೆ ಕಾರಿನ ಕೆಳಗೆ ಸಿಕ್ಕಿದ ಡ್ರೈವರನೊಬ್ಬ ಈ ಮಾತ್ರೆಯನ್ನು ತೆಗೆದುಕೊಂಡು ತನ್ನನ್ನು ರಕ್ಷಿಸಿಕೊಳ್ಳಬಲ್ಲ. ಸಂಗ್ರಾಮದಲ್ಲಿ ಸೈನಿಕ ಅತಿ ಶಕ್ತಿವಂತ ಯೋಧನಾಗಿ ಯುದ್ಧ ಮಾಡಬಲ್ಲ.

ಕ್ಷಣಕಾಲದ ಮಟ್ಟಿಗೆ ತಮಗೆ ಬಂದ ಶಕ್ತಿಯಲ್ಲಿ ಆತ್ಯಾಶ್ಚರ್ಯಕರವಾದ ಘಟನೆಗಳನ್ನು ನಡೆಸಿದ ನಂತರ ಅದರ ಅರಿವಾದಾಗ ತಾವು ಇದನ್ನು ಹೇಗೆ ನಡೆಸಿವೆಂದು ತುಟಿಯ ಮೇಲೆ ಬೆರಳಿಟ್ಟ ಅನೇಕ ಉದಾಹರಣೆಗಳು ಕಂಡುಬಂದಿವೆ.

ಪ್ಯಾರಿಸ್ಸಿನಲ್ಲಿ ನಡೆದೊಂದು ಘಟನೆ ಹೀಗೆ: ಬೇಸಿಗೆಯ ರಜದಲ್ಲಿ ತನ್ನ ಹುಡುಗರೊಡನೆ

ವಿಹಾರಕ್ಕೆಂದು ಹೊರಟ ಉಪಾಧ್ಯಾಯಿನಿಯೊಬ್ಬಳು ತನ್ನ ವಿದ್ಯಾರ್ಥಿಯೊಬ್ಬ ದೊಡ್ಡ ಕಂಪೌಂಡಿನಿಂದ ಬಿದ್ದು ಮಧ್ಯದಲ್ಲಿ ಕಂಬಿಯೊಂದಕ್ಕೆ ಸಿಕ್ಕಿಕೊಂಡಿದ್ದನ್ನು ನೋಡುತ್ತಾಳೆ. ಇದನ್ನು ಕಂಡ ತಕ್ಷಣ ಆಕೆ ಅತೀವ ವೇಗದಲ್ಲಿ ಕಂಬದ ಮೇಲೆ ಹತ್ತಿ ಆ ಹುಡುಗನನ್ನು ಬಿಡಿಸಿ ಕೆಳಗೆ ಇಳಿಯಲು ಸಹಾಯ ಮಾಡುತ್ತಾಳೆ. ಆದರೆ ಘಟನೆ ನಡೆದ ಕ್ಷಣ ಗಳಿಗೆಯ ನಂತರ ತಾನು ಮಾಡಿದ್ದನ್ನು ತನಗೇ ನಂಬಲಾಗದೆ ಆಕೆ ಉದ್ಗರಿಸುತ್ತಾಳೆ, "ಇದು ಹೇಗಾಯಿತೆಂದು ನಾನೇ ನಂಬಲಾರೆ. ನನಗೆ ಒಂದು ಏಣಿ ಹತ್ತಲೂ ಸಹ ಭಯವಾಗುತ್ತದೆ. ಮೇಲೆ ಹತ್ತಿದರೆ ತಲೆತಿರುಗು ಬರುತ್ತದೆ."

ಅಲ್ಲಿಯೇ ನಡೆದ ಮತ್ತೊಂದು ಘಟನೆ ಹೀಗಿದೆ: ಕೆಲವು ವರ್ಷಗಳ ಹಿಂದೆ ಚಾರ್ಲ್ಸ್ ರೋಜರ್ಸ್ ಎಂಬ ೧೫ ವರ್ಷದ ಬಾಲಕನೊಬ್ಬ ತನ್ನ ತಂದೆಯ ಕಾರನ್ನು ರಿಪೇರಿ ಮಾಡಲು ಶುರುಮಾಡಿದ. ಕಾರನ್ನು ಜಾಕ್ ಸಹಾಯದಿಂದ ಮೇಲೇರಿಸಿ ಕೆಳಗೆ ಕೆಲಸ ಆರಂಭಿಸಿದ. ಆದರೆ ಕೊಂಚ ಕಾಲದ ನಂತರ ಜಾಕ್ ಸ್ಲಿಪ್ ಆದ ಕಾರಣ ಕಾರಿನ ಕೆಳಗೆ ಸಿಕ್ಕಿದ. ಇದನ್ನು ನೋಡಿದ ಅವನ ೪೯ ವರ್ಷದ ತಾಯಿ ತಕ್ಷಣ ಸುಮಾರು ಒಂದೂವರೆ ಟನ್ ತೂಕವಿದ್ದ ಕಾರಿನ ಹಿಂಭಾಗವನ್ನು ಸ್ವಲ್ಪ ಭಾಗ ಎತ್ತಿ ತನ್ನ ಮಗ ಹಿಂದಕ್ಕೆ ಸರಿಯುವಂತೆ ಮಾಡಿ ಆತನನ್ನು ರಕ್ಷಿಸಿದಳು.

ಜಾಯ್ ವಿಲ್ಸನ್ ಎಂಬ ಸುಮಾರು ೭೦ ವರ್ಷದ ಮುದುಕನೊಬ್ಬ ತನ್ನ ಮನೆಯ ಮೇಲೆ ಹತ್ತಿ ಏನನ್ನೋ ನೋಡುತ್ತಿದ್ದಾಗ ತನ್ನ ಮನೆಗೆ ಬೆಂಕಿ ಬಿದ್ದಿರುವುದನ್ನು ನೋಡಿದ. ಬೆಂಕಿ ಅವನ ಕಡೆಗೆ ಧಾವಿಸಿ ಬರಲಾರಂಭಿಸಿತು. ತಕ್ಷಣ ಹತ್ತಿರದ ಲ್ಲಿದ್ದ ಟೆಲಿಗ್ರಾಫ್ ತಂತಿಯ ಮೇಲೆ ಸುಮಾರು ೨೭ ಅಡಿ ದೂರ ನಡೆದು ಕಂಬದ ಸಹಾಯದಿಂದ ಕೆಳಗಿಳಿದ ಮೇಲೆ ನಡೆದ ಘಟನೆಯನ್ನು ನೋಡಿದಾಗ ಅವನಿಗೇ ಆಶ್ಚರ್ಯವಾಯಿತು. ಕಾರಣ ಅವನ ಜೀವನದಲ್ಲಿ ಎಂದೂ ಒಂದು ಹಗ್ಗದ ಮೇಲೆ ಸಹ ನಡೆದಿರಲಿಲ್ಲ.

ವಿಶ್ವದ ಎರಡನೇ ಮಹಾಯುದ್ಧದಲ್ಲಿ ಈ ರೀತಿ ತುರ್ತು ಸಮಯದಲ್ಲಿ ಮನುಷ್ಯನು ಅತೀವ ಶಕ್ತಿಯನ್ನು ಪ್ರದರ್ಶಿಸಿದ ಹಲವಾರು ಘಟನೆಗಳು ಕಂಡುಬಂದಿವೆ. ಅತೀವ ಉತ್ಸಾಹದಲ್ಲಿ ಮನುಷ್ಯನಲ್ಲಿ ಉಂಟಾಗುವ ಅದ್ವಿತೀಯ ಶಕ್ತಿಯನ್ನು ಕಂಡವರಾರು? ಮಾನವ ಕ್ಷಣಕಾಲ ಮಟ್ಟಿಗಾದರೂ ದಾನವನಾಗಬಲ್ಲನೆ!

ಭಾರಿ ಜನ ಸೇರಿದ್ದರು ಕಲಾಪ್ರದರ್ಶನ ನೋಡಲು. ಒಂದು ಚಿತ್ರ ಬಹು ಆಕರ್ಷಕವೆನಿಸಿತು. ಅಷ್ಟು ವರ್ಣಮಯವಾಗಿತ್ತು ಚಿತ್ರ. ಅದರಲ್ಲಿದ್ದದ್ದು ಒಂದು ಮನುಷ್ಯನ ಚಿತ್ರ. ಕೇವಲ ಕೂದಲು ಮುಚ್ಚಿದ ಮುಖದ ಆಕೃತಿ. ಕಾಲಿಗೆರಡು ರೆಕ್ಕೆಗಳು.

ಒಬ್ಬ ಕಲಾಕಾರನಿಗೆ ಕೇಳಿದ, "ಯಾರ ಚಿತ್ರ ಇದು?"

"ಅವಸರದ್ದು," ಉತ್ತರಿಸಿದ ಕಲಾವಿದ.

"ಆದರೆ ಮುಖವೇಕೆ ಮುಚ್ಚಿಕೊಂಡಿದೆ?"

"ಯಾಕೆಂದರೆ ಅವಸರ ಯಾವಾಗ ಬರುತ್ತದೆ ಯಾರಿಗೂ ಗೊತ್ತಿಲ್ಲ, ಹೇಗಿದೆ ಎಂಬುದೂ ಗೊತ್ತಿಲ್ಲ."

"ಆದರೆ ಕಾಲುಗಳಿಗೇಕೆ ರೆಕ್ಕೆಗಳು?"

"ಬಂದಷ್ಟೇ ವೇಗವಾಗಿ ಓಡಿಹೋಗುವುದರಿಂದ," ಕಲಾವಿದ ಉತ್ತರಿಸಿದ.

ಅವರು ಜೇಬಿಗೆ ಕೈ ಹಾಕಿದಾಗೆಲ್ಲ
ಒಂದೊಂದು ಗ್ರಂಥಾಲಯ
ಸ್ಥಾಪನೆಯಾಗುತ್ತಿತ್ತು

ಆಂಡ್ರ್ಯೂ ಕಾರ್ನೇಗಿ

ಎಸ್. ಬಿ. ಹೊಂಡದಕೇರಿ

ಅಮೇರಿಕದ ಕೈಗಾರಿಕೋದ್ಯಮಿ, ಗ್ರಂಥಾಲಯಗಳ ದಾನಿ, ಶಿಕ್ಷಣ ಮತ್ತು ಸಂಶೋಧನೆಗಳಿಗಾಗಿ ಅನೇಕ ದತ್ತಿ ಮತ್ತು ಸಂಸ್ಥೆಗಳನ್ನು ಸ್ಥಾಪಿಸಿದ ಆಂಡ್ರ್ಯೂ ಕಾರ್ನೇಗಿ ಬಡವನಾಗಿ ಹುಟ್ಟಿದವ, ಶ್ರೀಮಂತನಾಗಿ ಬಾಳಿದವ. 'ಗಾಸ್ಪೆಲ್ ಆಫ್ ವೆಲ್ತ್' (೧೮..) ಎಂಬ ತನ್ನ ಪ್ರಬಂಧಗ್ರಂಥದಲ್ಲಿ ಕಾರ್ನೇಗಿ ಶ್ರೀಮಂತಿಕೆಯ ಜೀವನದಲ್ಲಿ ತನಗೊದಗಿದ ಎರಡು ಸಂದಿಗ್ಧಗಳನ್ನು ಹೀಗೆ ಬಣ್ಣಿಸಿದ್ದಾನೆ. ಮೊದಲನೆಯದು, ಐಶ್ವರ್ಯವನ್ನು ಸಂಪಾದಿಸುವುದು, ಎರಡನೆಯದು, ಗಳಿಸಿದ ಐಶ್ವರ್ಯವನ್ನು ಜನಸಾಮಾನ್ಯರ ಕಲ್ಯಾಣಕ್ಕಾಗಿ ಸದ್ವಿನಿಯೋಗ ಮಾಡುವುದು. ಈ ತತ್ವಗಳನ್ನು ಸ್ವಯಂ ಜೀವನದಲ್ಲಿ ಅನುಷ್ಠಾನಕ್ಕೆ ತಂದವ ಆಂಡ್ರ್ಯೂ. ಉಳಿದವರಿಗೆ ತನ್ನ ಕಾರ್ಯವೇ ಪ್ರೇರಕವಾಗಬೇಕೆಂದು ಎಂದೂ ಹೇಳಿಕೊಂಡವನಲ್ಲ.

ಆಂಡ್ರ್ಯೂ ಕಾರ್ನೇಗಿ ಒಬ್ಬ ಬಡ ಸ್ಕಾಟಿಶ್ ನೇಕಾರನ ಮಗ. ತಂದೆ ಹಗಲಿಡೀ ಕೆಲಸ ಹುಡುಕಿ ಅಲೆದು ನಿರಾಶೆಯಿಂದ ಇರುಳು ಮನೆಗೆ ಮರಳಿ, "ಆ್ಯಂಡ್ರಾ, ಇಂದೂ ನನಗೆ ಕೆಲಸ ದೊರೆಯಲಿಲ್ಲ" ಎಂದು ತನ್ನ ಮಡದಿಯೆದುರು ನಿಟ್ಟುಸಿರಿನೊಂದಿಗೆ ಹೇಳುತ್ತಿದ್ದ. ಆ್ಯಂಡ್ರಾ ಒಬ್ಬ ಸಮಗಾರನ ಮಗಳು. ಮನೆಯ ಆರ್ಥಿಕ ಸ್ಥಿತಿ ಸ್ವಲ್ಪವಾದರೂ ಸುಧಾರಿಸಲೆಂದು ಆಕೆ ಡನ್‌ಫರ್ಮ್‌ಲೈನಿನಲ್ಲಿ ಮಿಠಾಯಿ ಅಂಗಡಿಯೊಂದನ್ನಿಟ್ಟು ನಡೆಸುತ್ತಿದ್ದಳು. ಅತಿ ಕಿರಿಯ ವಯಸ್ಸಿನಲ್ಲೇ ಮನೆಯ ಸ್ಥಿತಿ, ತಾಯಿ-ತಂದೆಯರು ಪಡುತ್ತಿದ್ದ ಯಾತನೆಯ ಅರಿವಾಯಿತು ಆಂಡ್ರ್ಯೂಗೆ. ತನ್ನ ಹದಿಮೂರನೆಯ ವಯಸ್ಸಿನಲ್ಲಿಯೇ ತಿಂಗಳಿಗೆ ಹದಿಮೂರು ರೂಪಾಯಿ ವೇತನದ ಮೇಲೆ ಅಮೇರಿಕದ ನೂಲಿನ ಗಿರಣಿಯೊಂದರ ಬಾಗಿಲು ತೆರೆಯುವ ಹುಡುಗನಾಗಿ ಕೆಲಸ ಪ್ರಾರಂಭಿಸಿದ. ಕೆಲ ದಿನಗಳ ನಂತರ ವ್ಯಾಪಾರಿಯೊಬ್ಬನ ಬಳಿ ಗುಮಾಸ್ತನಾದ. ಪಿಟ್ಸ್‌ಬರ್ಗ್‌ನಲ್ಲಿ ತಂತಿ ಸುದ್ದಿಗಾರ ಹುಡುಗನಾಗಿ ಕೆಲ ಕಾಲ ಕಳೆದು ಅಲ್ಲಿಯೇ ಚಾಲಕ ಹುದ್ದೆಗೆ ಬಡ್ತಿ ಹೊಂದಿದ. ಹೆಚ್ಚಿನ ಸಂಪಾದನೆಗಾಗಿ ವೃತ್ತಪತ್ರಿಕೆಯ ಸುದ್ದಿಗಾರನಾಗಿ ಕೆಲಸ ಮಾಡತೊಡಗಿದ. ಅನಂತರ ಪೆನ್‌ಸಿಲ್ವಾನಿಯ ರೇಲ್‌ರೋಡಿನ ಅಧಿಕಾರ

ವರ್ಗಕ್ಕೆ ಸೇರಿ ಟೆಲಿಗ್ರಾಫಿಕ್ ಟ್ರೇನ್ ಡಿಸ್ಪ್ಯಾಚರ್ ಆಗಿ ಕೆಲಸ ನಿರ್ವಹಿಸಿದ. ಅಲ್ಲಿಯೇ ಜನರಲ್ ಸೂಪರಿಂಟೆಂಡೆಂಟ್ ಆಗಿದ್ದ ಕರ್ನಲ್ ಥಾಮಸ್ ಎ. ಸ್ಕಾಟ್‌ರ ಕಾರ್ಯದರ್ಶಿಯಾದ. ಅದೇ ವೇಳೆ ವುಡ್‌ರಫ್ ಕಂಪನಿಯ ೧/೮ ಭಾಗದ ಪಾಲುದಾರನಾದ. ಅಷ್ಟರಲ್ಲಿ ಅಂತರ್ಯುದ್ಧ ತಲೆದೋರಿ, ಸ್ಕಾಟ್ ಯುದ್ಧ ಖಾತೆಯ ಸಹಾಯಕ ಕಾರ್ಯದರ್ಶಿಯಾಗಿ ನೇಮಕಗೊಂಡ ಮೇಲೆ ಕಾರ್ನೇಗಿ ಈಶಾನ್ಯ ಭಾಗದ ಸೈನ್ಯ ಹಾಗೂ ದೂರವಾಣಿ ಮಾರ್ಗವನ್ನು ತನ್ನ ಹಿಡಿತಕ್ಕೆ ತೆಗೆದುಕೊಂಡ. ೧೮೬೨ರಲ್ಲಿ ಮರದಿಂದ ಕಟ್ಟಿದ ಸೇತುವೆಗಳು ಪ್ರಯೋಜನಕ್ಕೆ ಬರಲಾರವೆಂದು ತಿಳಿದ ಮೇಲೆ ಕಾರ್ನೇಗಿ ಕಬ್ಬಿಣದ ಸೇತುವೆಗಳನ್ನು ಕಟ್ಟಲು ಸಿದ್ಧತೆ ಮಾಡಿಕೊಂಡ. ಇದರ ಫಲವೆಂಬಂತೆ ಪ್ರಥಮವಾಗಿ ಒಹಾಯೊ ನದಿಗೆ ಕಬ್ಬಿಣದ ಸೇತುವೆ ಹಾಕಿದ. ಸೇತುವೆ ಕಾಮಗಾರಿಗಾಗಿ ಹೆಚ್ಚಿನ ಕಬ್ಬಿಣವನ್ನು ಪಡೆಯಲು ಕಬ್ಬಿಣ ವ್ಯಾಪಾರಕ್ಕೆ ಇಳಿದು ಯೂನಿಯನ್ ಅಯರ್ನ್ ಮಿಲ್ಸ್‌ನ ಸಂಸ್ಥಾಪಕನಾದ. ೧೮೬೮ರಲ್ಲಿ ಅದು ಅಮೇರಿಕದ ಪ್ರಥಮ ಉಕ್ಕಿನ ಕಾರ್ಖಾನೆಯಾಯಿತು. ಮುಂದೆರಡು ವರ್ಷಗಳಲ್ಲಿ ಈತನ ಕಬ್ಬಿಣ ಮತ್ತು ಉಕ್ಕಿನ ಉತ್ಪಾದನೆ ನಾಲ್ಕು ಪಟ್ಟಿಗೆ ಏರಿತು. ಉತ್ಸಾಹಿತನಾದ ಕಾರ್ನೇಗಿ ಅನೇಕ ಕಂಪನಿಗಳನ್ನು ತೆರೆದ. ೧೮೯೨ರಲ್ಲಿ ಈ ಎಲ್ಲ ಕಂಪನಿಗಳನ್ನು ಒಂದುಗೂಡಿಸಿ ಕಾರ್ನೇಗಿ ಉಕ್ಕಿನ ಕಂಪನಿ ಎಂದು ಹೆಸರಿಟ್ಟ. ೧೯೦೧ರಲ್ಲಿ ಈ ವ್ಯವಹಾರದಿಂದ ನಿವೃತ್ತನಾಗಿ ಅಮೇರಿಕದ ಉಕ್ಕಿನ ಮಂಡಳಿಗೆ ತನ್ನ ಕಂಪನಿಯನ್ನು ೪೦ ಕೋಟಿ ಡಾಲರುಗಳಿಗೆ ಮಾರಿದ. ತನ್ನ ಉಳಿದ ಕಾಲವನ್ನು ದಾನಕಾರ್ಯಗಳಿಗಾಗಿ ವ್ಯಯ ಮಾಡಿದ. ಪ್ರಪಂಚದಾದ್ಯಂತ ಗ್ರಂಥಾಲಯಗಳನ್ನು ನಿರ್ಮಿಸುವದಲ್ಲದೆ ಇನ್ನೂ ಅನೇಕ ಉಪಯುಕ್ತ ಕಾರ್ಯ ಮಾಡಿದ. ಈತ ಮಾಡಿದ ದಾನದ ಮೊತ್ತ ೧೦೦ ಕೋಟಿ ಡಾಲರ್‌ಗಳಿಗೆ ಕಡಿಮೆಯಿಲ್ಲವೆಂದು ಅಂದಾಜಿದೆ.

ಎ. ಜಿ. ಗಾರ್ಡಿನರ್‌ರವರು ಆಂಡ್ರ್ಯೂ ಕಾರ್ನೇಗಿಯ ಬಗೆಗೆ ಇತ್ತ ಚಿತ್ರಣವೇನೆಂದರೆ; 'ಒಂದೇ ಶರೀರದಲ್ಲಿ ಒಂದೇ ಆತ್ಮವುಳ್ಳ ಇಬ್ಬರು ಕಾರ್ನೇಗಿಗಳು ಇದ್ದರು. ಒಬ್ಬ ಕೋಟಿಗಟ್ಟಲೆ ಹಣ ಸಂಪಾದಿಸುತ್ತಿದ್ದ ವ್ಯಾಪಾರಿಯಾಗಿದ್ದರೆ, ಮತ್ತೊಬ್ಬ ಕೋಟಿಗಟ್ಟಲೇ ಹಣವನ್ನು ಉದಾರವಾಗಿ ದಾನಮಾಡುತ್ತಿದ್ದ ಲೋಕ ಹಿತೈಷಿ, ಮಾನವಪ್ರೇಮಿಯಾಗಿದ್ದ. ಇಬ್ಬರಲ್ಲಿ ಯಾವ ಬಗೆಯ ಘರ್ಷಣೆ ಇರಲಿಲ್ಲ. ಇಬ್ಬರೂ ಅಷ್ಟೇ ಸಮವಾಗಿ ತಮ್ಮ ಕಾರ್ಯಗೈದು ಇನ್ನಿಲ್ಲವಾಗಿದ್ದಾರೆ. ಒಬ್ಬನು ಉಕ್ಕಿನ ವ್ಯಾಪಾರದಲ್ಲಿ ರಾಜನಾಗಿ ಮೆರೆದರೆ ಮತ್ತೊಬ್ಬನು ಮಾನವೀಯ ಅನುಕಂಪದ ಸಾಕಾರವಾಗಿ, ದಾನಶೂರನಾಗಿ ಮೆರೆದಿದ್ದಾನೆ. ಅದು ವ್ಯವಹಾರ ಕೌಶಲ, ದಣಿವರಿಯದ ಕಾರ್ಯತತ್ಪರತೆ ಹಾಗೂ ಸ್ಪಷ್ಟ ಮುಂದಾಲೋಚನೆಗಳು ಆಂಡ್ರ್ಯೂ ಕಾರ್ನೇಗಿಗೆ ಅಪಾರ ಸಂಪತ್ತನ್ನು ದೊರಕಿಸಿಕೊಟ್ಟವು.'

ಆಂಡ್ರ್ಯೂ ಕಾರ್ನೇಗಿಯು ಸಂಪತ್ತಿನ ಸುವಾರ್ತೆಯನ್ನು ತಾನೇ ರೂಪಿಸಿದ್ದು, ಇದು ಮೊದಲ ಬಾರಿ ಕ್ರಿ. ಶ. ೧೮೮೯ರ 'ನಾರ್ತ್ ಅಟ್ಲಾಂಟಿಕ್ ರಿವ್ಯೂ' ಜೂನ್ ಸಂಚಿಕೆಯಲ್ಲಿ ಪ್ರಕಟವಾಯಿತು. "ಸಂಪತ್ತುಳ್ಳ ಮನುಷ್ಯನ ಕರ್ತವ್ಯವೆಂದರೆ ಅವನು ದುಂದುಗಾರಿಕೆಯಿಲ್ಲದೇ, ವಿನಮ್ರ ನಿರಾಡಂಬರ ಜೀವನ ನಡೆಸಿ ಇತರರಿಗೆ ಮಾದರಿ ಹಾಕಿಕೊಡಬೇಕು. ತನ್ನನ್ನು ಅವಲಂಬಿಸಿದವರ ಯೋಗ್ಯ ಅವಶ್ಯಕತೆಗಳನ್ನು ನಮ್ರವಾಗಿ ಪೂರೈಸಬೇಕು. ಇದಾದ ಮೇಲೆ ಉಳಿದೆಲ್ಲ ಉತ್ಪನ್ನವನ್ನು 'ವಿಶ್ವಸ್ತನಿಧಿ' ಎಂದು ಬಗೆಯಬೇಕು. ತಾನು ಆ ಹಣವನ್ನು ಸಮಾಜದಕಲ್ಯಾಣ ಕಾರ್ಯಗಳಿಗೆ ವಿನಿಯೋಗಿಸುವ ನಿರ್ವಹಣಾಧಿಕಾರಿಯಾಗಿ ಮಾತ್ರ ಉಳಿಯಬೇಕು. ಹೀಗೆ ಸಂಪತ್ತುಳ್ಳವನು ಕೇವಲ ವಿಶ್ವಸ್ತನಾಗಿ ಉಳಿಯಬೇಕಲ್ಲದೇ ತನ್ನನ್ನು ತನ್ನ ದರಿದ್ರ ಬಾಂಧವರ ನಿಯೋಗಿಯೆಂದು ತಿಳಿಯಬೇಕು." ಆಂಡ್ರ್ಯೂ ಕಾರ್ನೇಗಿಯ ಈ ದೃಷ್ಟಿಕೋನವೇ ಮಾನವತೆಯ ಉದ್ಧಾರಕ್ಕಾಗಿ ತಾನು ಉಳಿಸಿದ ಎಲ್ಲ ಸಂಪತ್ತನ್ನು ಅವನು ದಾನವಾಗಿ ಕೊಡುವಂತೆ ಮಾಡಿತು.

ಆಂಡ್ರ್ಯೂ ಕಾರ್ನೇಗಿಯು ಸಾರ್ವಜನಿಕ ಕಲ್ಯಾಣಕ್ಕಾಗಿ ದಾನವಾಗಿತ್ತ ಹಣದ ಮೊತ್ತವು

೧೦೦ ಕೋಟಿ ರೂಪಾಯಿಗಳಷ್ಟಾಗಬಹುದು. ಈ ಅಪರಿಮಿತ ಹಣದ ದೊಡ್ಡ ಭಾಗವು ನ್ಯೂಯಾರ್ಕ್ ರಾಜ್ಯದ ೧೯೧೧ರ ಕಾಯಿದೆಯ ೨೧೭ನೆಯ ಕಲಮಿನ ಮೇರೆಗೆ ನ್ಯೂಯಾರ್ಕಿನಲ್ಲಿ ಸ್ಥಾಪಿಸಲಾದ ಕಾರ್ನೇಗಿ ಸಂಸ್ಥೆಗೆ ಸೇರಿತು. ಈ ಸಂಸ್ಥೆಯ ಮುಖ್ಯ ಉದ್ದೇಶವು, ಅಮೇರಿಕದ ಜನತೆಯಲ್ಲಿ ಜ್ಞಾನದ ಅಭಿವೃದ್ಧಿಯನ್ನೂ ಪ್ರಸಾರವನ್ನೂ ತಾಂತ್ರಿಕ ಶಾಲೆಗಳಿಗೆ ಗ್ರಂಥಾಲಯಗಳಿಗೆ, ವೈಜ್ಞಾನಿಕ ಸಂಶೋಧನೆಗಳಿಗೆ ಉಪಯುಕ್ತ ಪ್ರಕಟನೆಗಳಿಗೆ, ನೆರವು ನೀಡುವವರ ಮೂಲಕ ಹೆಚ್ಚಿಸುವುದೇ ಆಗಿದೆ.

ಕಾರ್ನೇಗಿಯು ತನ್ನ ದಾನಪತ್ರದಲ್ಲಿ, "ಯಾವ ಬುದ್ಧಿವಂತ ಮನುಷ್ಯನೂ ತಾನು ದಾನಮಾಗಿತ್ತ ಹಣವು ಇಂಥದೇ ಕಾರ್ಯಗಳಿಗೆ ವಿನಿಯೋಗಿಸಬೇಕೆಂದು ಬಯಸದಿದ್ದರೂ, ನಾನು ಕೈಕೊಂಡ ಈ ಕಾರ್ಯವು ಈಗಷ್ಟೇ ಅಲ್ಲದೇ ಮುಂದಿನ ತಲೆತಲಾಂತರಗಳಿಗೂ ಮುಂದುವರಿಯಬೇಕು" ಎಂದು ತನ್ನ ಮನದಾಳವನ್ನು ಬಿಚ್ಚಿ ತೋರಿಸಿದ್ದಾನೆ. ಸಾರ್ವಜನಿಕರು ಕಾರ್ನೇಗಿಯ ಹೆಸರಿಗೆ ಜೋತೆಗೂಡಿಸುವ ವಿಷಯವೇನೆಂದರೆ ಅವನು ಗ್ರಂಥಾಲಯ ಚಳುವಳಿಯ ಅದರಲ್ಲೂ ದ್ವಿತೀಯ ಸೂತ್ರವಾದ, 'ಗ್ರಂಥಗಳು ಎಲ್ಲರಿಗಾಗಿ' ಸೂತ್ರದ ಸ್ನೇಹಿತನಾಗಿ ಕಾರ್ಯವೆಸಗಿರುವದೇ ಆಗಿದೆ. "ಅವನು ತನ್ನ ಜಾಕೀಟಿನ ಜೇಬಿನಲ್ಲಿ ಬೆರಳನ್ನಿಟ್ಟನೆಂದರೆ ಒಂದು ಗ್ರಂಥಾಲಯವನ್ನು ನಿರ್ಮಿಸುತ್ತಿದ್ದನು" ಎಂದು ಹೇಳಲಾಗುತ್ತಿದೆ. ಬಹುಶಃ ಅವನ ಮನದಾಳದಲ್ಲಿ ಮತ್ತಾವ ದೇಣಿಗೆಗಳಿಗಿಂತಲೂ ಗ್ರಂಥಾಲಯ ದೇಣಿಗೆಗಳೇ ಪ್ರಮುಖವಾಗಿದ್ದವು. ಮಾನವತೆಯನ್ನು ಆವರಿಸಿಕೊಂಡಿರುವ ಎಲ್ಲ ರೋಗಗಳಿಗೆ ಒಂದೇ ಒಂದು ಚಿಕಿತ್ಸೆಯೆಂದರೆ ಮನುಷ್ಯರಲ್ಲಿ ಮಾನವತೆ ಜಾಗೃತಗೊಳ್ಳುವಂಥ ಜ್ಞಾನೋದಯವನ್ನು ಉಂಟುಮಾಡುವುದೇ ಆಗಿದೆಯೆಂದು ಅವನು ನಂಬಿದ್ದನು. ಅಂತೆಯೇ ಅವರು ಸ್ಥಾಪಿಸುವ ಎಲ್ಲ ಗ್ರಂಥಾಲಯಗಳಲ್ಲಿಯೂ ಜ್ಞಾನಜ್ಯೋತಿ ಬೆಳಗಲೆಂದು ಇಚ್ಛಿಸಿದನು. ಗ್ರಂಥಾಲಯ ಕಟ್ಟಡಗಳಲ್ಲಿ ಜ್ಯೋತಿಯನ್ನು ಇಡಲು ಒತ್ತಾಯಿಸಿದನು. ಇದೇ ಅವನ ಉದ್ದೇಶವೂ ಆಗಿತ್ತು. ಜ್ಞಾನದ ಬೆಳಕು ಎಲ್ಲ ಕಡೆಗೂ ಮುಟ್ಟುವಂತೆ ಮಾಡುವುದು ಎಲ್ಲರಿಗೆ ಗ್ರಂಥಗಳನ್ನು ಓದಿಸುವದರಿಂದ ಮಾತ್ರವೇ ಸಾಧ್ಯವೆಂದು ಪ್ರಾಮಾಣಿಕವಾಗಿ ನಂಬಿದ್ದನು. ಅವನು ಸ್ಥಾಪಿಸಿದ ಒಟ್ಟು ಗ್ರಂಥಾಲಯಗಳ ಸಂಖ್ಯೆ ೨೮೮೦.

ಆಂಡ್ರ್ಯೂ ಕಾರ್ನೇಗಿಗೆ ಅನೇಕ ರಾಷ್ಟ್ರಗಳಿಂದ ಗೌರವ ದೊರೆಯಿತು. ಈತ ಬರೆದ ಗ್ರಂಥಗಳೆಂದರೆ, ಟ್ರಯಂಫಂಟ್ ಡೆಮಾಕ್ರಸಿ (೧೮೮೦), ದಿ ಗಾಸ್ಪೆಲ್ ಆಫ್ ವೆಲ್ತ್ (೧೯೦೦), ದಿ ಎಂಪೈರ್ ಆಫ್ ಬಿಸಿನೆಸ್ (೧೯೦೨) ಪ್ರಾಬ್ಲಮ್ಸ್ ಆಫ್ ಟುಡೆ, (೧೯೦೯). ಮಹಾದಾನಿ ಕಾರ್ನೇಗಿ ಕೊನೆಯ ಪುಸ್ತಕ ಬರೆದ ವರ್ಷವೇ ಲೆನಾಕ್ಸ್‌ನಲ್ಲಿ ಕೊನೆಯುಸಿರೆಳೆದ.

ವ್ಯವಹಾರ ನೈಪುಣ್ಯ ಆಂಡ್ರ್ಯೂ ಕಾರ್ನೇಗಿಯಲ್ಲಿ ರಕ್ತಗತವಾಗಿತ್ತೆನ್ನುವುದಕ್ಕೆ ಅವನ ಚಿಕ್ಕಂದಿನಲ್ಲಿ ನಡೆದ ಈ ಒಂದು ಘಟನೆಯೇ ಸಾಕ್ಷಿ.

ಒಮ್ಮೆ ಆತ ಇತರ ಮಿತ್ರರೊಡನೆ ಸೇರಿಕೊಂಡು ನಾಲ್ಕಾರು ಮೊಲಗಳನ್ನು ಹಿಡಿದು ತಂದ. ಅವನ್ನು ಸಾಕಬೇಕೆಂಬ ಆಶೆ ಅವನಿಗೆ. ತಂದೆತಾಯಿಗಳ ವಿರೋಧ ಇದಕ್ಕೆ ಇಲ್ಲದಿದ್ದರೂ ಸಂಸಾರ ನಡೆಸುವುದೇ ಕಷ್ಟವಾದಾಗ ಈ ಮರಿಗಳನ್ನು ಹೇಗೆ ಸಾಕುವುದೆಂಬ ಆಕ್ಷೇಪ ಅವರದು. ಪ್ರತ್ಯುತ್ಪನ್ನಮತಿಯಾದ ಆಂಡ್ರ್ಯೂ ಕೂಡಲೇ ಈ ಸಮಸ್ಯೆಗೆ ಪರಿಹಾರ ಒದಗಿಸಿದ. ಆತ ತನ್ನೆಲ್ಲ ಗೆಳೆಯರನ್ನೂ ಕರೆದು, ತಾನು ಹಿಡಿದುತಂದ ಮರಿಗಳನ್ನು ತೋರಿಸಿ, ಯಾರು ಒಂದೊಂದು ಮರಿಯ ಹೊಟ್ಟೆಗೆ ಹಾಕುವ ಜವಾಬ್ದಾರಿಯನ್ನು ವಹಿಸಿಕೊಳ್ಳುವರೋ ಅವರ ಹೆಸರನ್ನೇ ಆ ಮರಿಗೆ ಇಡುವುದಾಗಿ ಹೇಳಿದ. ಆ ಜವಾಬ್ದಾರಿಯನ್ನು ವಹಿಸಿಕೊಳ್ಳಲು ಅವರಲ್ಲಿ ಪೈಪೋಟಿಯೇರ್ಪಟ್ಟಿತೆಂದು ಹೇಳುವ ಅಗತ್ಯವೇ ಇಲ್ಲ.

ಶುನಕ ಪುರಾಣ



ಮೂಲ : **ಡಾ. ಸೂರ್ಯನಾರಾಯಣ**   ಕನ್ನಡಕ್ಕೆ : **ಬಿ. ಸುಬ್ರಾಯ ಅಡಿಗ**

ನಾಯಿ ಒಂದು ಸಾಮಾಜಿಕ ಪ್ರಾಣಿ. ದಾರಿಯಲ್ಲಿ ಹೋಗುವ ಮಕ್ಕಳು ಕಲ್ಲು ಹೊಡೆದಾಗ ಅದು ಕುಂಯ್ ಕುಂಯ್ ಎನ್ನುತ್ತ ಓಡುತ್ತದೆ. ಆಗ ಮಕ್ಕಳಿಗೆ ತುಂಬಾ ಮೋಜು. ನಗರಸಭೆಯವರು ಅದನ್ನು ಹಿಡಿದು ಬೋನಿನಲ್ಲಿಟ್ಟು ನೇರಾಗಿ ಸ್ವರ್ಗಕ್ಕೂ ಕಳಿಸುತ್ತಾರೆ (ಕೆಲ ಅಹಿಂಸಾಪ್ರಿಯ ಸಂಸ್ಥೆಗಳು ಅದನ್ನು ರಕ್ಷಿಸಲು ಯತ್ನಿಸುವುದೂ ಉಂಟು). ಡಾಕ್ಟರ್ ಹಾಗೂ ವಿಜ್ಞಾನಿಗಳು ನಾಯಿಯನ್ನು ತಮ್ಮ ಪ್ರಯೋಗಪಶುವಾಗಿ ಮಾಡಿಕೊಳ್ಳುತ್ತಾರೆ. ಭೈರವನ ವಾಹನವೆಂದು ಬಗೆದು ಹಲವಾರು ತಾಂತ್ರಿಕರೂ ಕಾಪಾಲಿಕರೂ ಅದನ್ನು ತಮ್ಮ ಸಾಧನೆಯ ಮಾಧ್ಯಮವನ್ನಾಗಿ ಮಾಡಿಕೊಳ್ಳುತ್ತಾರೆ.

ಇದಕ್ಕೆ ವಿರುದ್ಧವಾಗಿ, ಮಹಾ ಶ್ರೀಮಂತರೂ ರಾಜವಂಶೀಯರೂ ಅಧಿಕಾರಿಗಳೂ ನಾಯಿಯನ್ನು ಸ್ವಜನರಿಗಿಂತಲೂ ಹೆಚ್ಚು ಪ್ರೀತಿಯಿಂದ ಕಾಣುತ್ತಾರೆ. ಇಂದು ಮಂತ್ರಿ ಇಲ್ಲವೇ ಪ್ರಧಾನಿಯ ಜಾತಿ ರಕ್ಷಣೆಗೆ ಯಾರೂ ಗಮನಕೊಡುವುದಿಲ್ಲ. ಆದರೆ ಉಚ್ಚಕುಲದ ನಾಯಿಯ ಜಾತಿ ಕೆಡದಂತೆ ಎಚ್ಚರಿಕೆ ವಹಿಸಲಾಗುತ್ತಿದೆ.

ನಾಯಿಯಲ್ಲಿ ಸಾಧಾರಣ ಹಾಗೂ ಅಸಾಧಾರಣ ಎಂಬೆರಡು ವಿಧ. ಇವುಗಳಲ್ಲಿ ಹಲವು ಜಾತಿಗಳು, ವರ್ಗ–ವರ್ಣಭೇದಗಳೂ ಅದಕ್ಕಿವೆ. ಅವಕ್ಕನುಗುಣವಾಗಿಯೇ ಉಚ್ಚ–ನೀಚ ಎನಿಸುತ್ತವೆ. ಆದರೆ ಎಲ್ಲ ವರ್ಗ ಹಾಗೂ ವರ್ಣದ ನಾಯಿಗಳಲ್ಲಿ ಕೆಲ ಸಮಾನತೆಗಳೂ ಇವೆ. ಒಂದು ಮತ್ತೊಂದನ್ನು ಕಂಡಾಗ ದಾಳಿಯಿಡುವ ಪ್ರವೃತ್ತಿ ಅವರಲ್ಲಿ ವಿಶೇಷ. ಸಮನಾಗಿ ಹಂಚಿ ತಿನ್ನುವುದನ್ನು ಮೆಚ್ಚುವುದಿಲ್ಲ. ತಮ್ಮ ಆಹಾರದಲ್ಲಿ ಸ್ವಂತ ಮರಿಗಳಿಗೂ ಅವು ಪಾಲು ಕೊಡಲೊಪ್ಪುವುದಿಲ್ಲ. ಅವಕ್ಕೆ ಸಾಮ್ಯವಾದ ದೀಕ್ಷೆ ನೀಡಲು ಅವುಗಳ ಸಮಾಜದಲ್ಲಿ ಮಾರ್ಕ್ಸ್, ಲೆನಿನ್ ಅಥವಾ ಮಾವೋ ಹುಟ್ಟಿಬರದುದೇ ಇದಕ್ಕೆ ಕಾರಣವಿರಬಹುದು.

ಆದರೆ 'ಸ್ವರಸಾಧನೆ'ಯಲ್ಲಿ ಅವು 'ಸಹನಾವವತು...' ಸಿದ್ಧಾಂತವನ್ನು ಪೂರ್ತಿಯಾಗಿ ಅನುಸರಿಸುತ್ತವೆ. ಪ್ರಶಾಂತ ರಾತ್ರಿಯಲ್ಲಿ ಈ ಗ್ರಾಮಸಿಂಹಗಳು ಸ್ವರಾಲಾಪ ಆರಂಭಿಸಿ ಗಾಢ ನಿದ್ರಾಮಗ್ನರಾದ ಜನರನ್ನು ಜಾಗ್ರತಗೊಳಿಸಿ, ಅವರು

ತಲೆ ಚಚ್ಚಿಕೊಳ್ಳುವಂತೆ ಮಾಡುತ್ತವೆ. ಅವುಗಳ ಸ್ವರ ಕೇಳಿ ಮತ್ತೊಂದು ದಿಕ್ಕಿನಲ್ಲಿ ಒರಗಿದ್ದ ನಾಯಿಗಳೂ ಸುಮ್ಮನಿರದೆ ತಾವೂ ಆಲಾಪ ಆರಂಭಿಸುವವು. ಇವುಗಳ ನಿದ್ದೆ ಅತ್ಯಲ್ಪ. ಎಂತಲೇ ಶ್ವಾನನಿದ್ರೆ ಪ್ರಸಿದ್ಧ.

ನಾಯಿಗಳ ವರ್ಗ, ವರ್ಣಭೇದ ಮಾಡುವ ಯೋಗ್ಯತೆ ನನಗಿದೆಯೆಂದು ನನಗನ್ನಿಸುವುದಿಲ್ಲ. ಆದರೆ ಈ ಭೇದಭಾವ ಭಾರತೀಯ ಸಂಪರ್ಕದಿಂದಾಗಿ ಇವಕ್ಕೆ ತಗಲಿರಬಹುದು. ರಸ್ತೆಯ ಮೇಲೆ ಒರಗುವ ಹಾಗೂ ಹೊರಳಾಡುವ ನಾಯಿಗಳಿಗೂ ಕುರ್ಚಿ ಮತ್ತು ಸೋಫಾಗಳಲ್ಲಿ ಠೀವಿಯಿಂದ ಒರಗುವ ಹಾಗೂ ಬೆಲೆ ಬಾಳುವ ಹಾಸಿಗೆಯ ಮೇಲೆ ಮಲಗುವ ನಾಯಿಗಳಿಗೂ ಪರಸ್ಪರ ಸಹಕಾರಭಾವ (ಭಾವಾತ್ಮಕ ಏಕತೆ?) ಇದೆಯೆಂದು ಹೇಗೆ ತಾನೆ ಹೇಳಲು ಸಾಧ್ಯ? ಸಾಮ್ರಾಜ್ಯವಾದಿ ಹಾಗೂ ಸಾಮಂತವಾದಿಗಳಿಗೆ 'ರಸ್ತೆವಾದಿ' (ಸಾಮ್ಯವಾದಿ)ಯ ಗೆಳೆತನ ಬೆಳೆಯುವುದೆಂತು?

ನಮ್ಮದು ಸಾಮ್ಯವಾದ ಹಾಗೂ ಅದರ ಒಡಹುಟ್ಟಿದ ಸಮಾಜವಾದದ ಯುಗ. ಎಂತಲೇ ಸಾಮ್ಯವಾದ ದೇಶದ ನಾಯಿಯೂ ಇಂದು ಬಲು ಎತ್ತರಕ್ಕೆ ಏರಿಬಿಟ್ಟಿದೆ. ಅಂತರಿಕ್ಷ ಹಾರಾಟದ ಇತಿಹಾಸದಲ್ಲಿ ಅದಕ್ಕೂ ಒಳ್ಳೆಯ ಸ್ಥಾನ ದೊರೆತಿದೆ.

ಸಾವಿರಾರು ವರ್ಷಗಳ ಹಿಂದೆ ದ್ವಾಪರಯುಗದಲ್ಲಿ ಭಗವಾನ್ ಕೃಷ್ಣ 'ಶುನಿಚೈವ ಶ್ವಪಾಕೇಚ ಪಂಡಿತಾಃ ಸಮದರ್ಶಿನಃ' ಎಂಬ ಆದರ್ಶವನ್ನು ಘೋಷಿಸಿದಾಗ ಮಹಾರಾಜ ಯುಧಿಷ್ಠಿರನೊಂದಿಗೆ ಅವನ ಪ್ರಿಯ ನಾಯಿಯೂ ನೇರವಾಗಿ ಸ್ವರ್ಗಕ್ಕೆ ತಲುಪಿತು. (ಈ ವೇಳೆಗಾಗಲೇ ಇಂದ್ರನ ಸಾಮ್ರಾಜ್ಯವಾದ ಕ್ಷೀಣಿಸಿರಬೇಕೆಂದು ತೋರುತ್ತದೆ. ಏಕೆಂದರೆ, ಅದಕ್ಕೂ ಮುನ್ನ ತ್ರೇತಾಯುಗದಲ್ಲಿ ಒಬ್ಬ ರಾಜನೇ ಸಶರೀರಿಯಾಗಿ ಮೇಲೆ ತಲುಪುವ ಸಾಹಸಮಾಡಿದ್ದಾಗ, ತ್ರಿಶಂಕುವಾಗಿ ನಡುವೆ ಜೋತಾಡುತ್ತ ನಿಂತುಬಿಟ್ಟ! ಮನುಷ್ಯನಿಗೆ ಇಂಥ ದುಃಸ್ಥಿತಿ ಒದಗಿರುವಾಗ ನಾಯಿಯ ಪಾಡೇನಾಗುತ್ತಿತ್ತೊ!) ಧರ್ಮರಾಜನ ನಾಯಿಯ ಬಳಿಕ ರಷ್ಯದ ನಾಯಿ ಲೈಕಾ ಭಾಗ್ಯಶಾಲಿಯೆನ್ನಬೇಕು. ಅದು ಅಂತರಿಕ್ಷದಲ್ಲಿ ಹಾರಾಟ ನಡೆಸಿ ಮತ್ತೆ ಭೂಮಿಗೆ ಇಳಿದು ಬಂತು!

ನಾಯಿ ಮನುಷ್ಯನ ದೃಷ್ಟಿಯಲ್ಲಿ ಸಾಧಾರಣವಾಗಿದ್ದರೂ ಅದರ ಇತಿಹಾಸ ಅಸಾಧಾರಣವಾದುದು. ವಿಶ್ವಸಾಹಿತ್ಯದಲ್ಲಿ ನಮ್ಮ ವೇದವೇ ಅತಿ ಪ್ರಾಚೀನವಾದುದು. ವೇದ ಭಾರತದ ಮಹತ್ವಪೂರ್ಣ ಧಾರ್ಮಿಕ ಗ್ರಂಥ. ಅದು ಅಪೌರುಷೇಯ, ಪವಿತ್ರ. ಆದರೆ ಅದರಲ್ಲೂ ನಾಯಿಯ ಕತೆ ಸಿಗುತ್ತದೆ.

ಆಕಾಶತಾರಾಮಂಡಲದಲ್ಲೂ ಎರಡು ನಾಯಿಗಳಿಗೆ ಎಡೆ ಸಿಕ್ಕಿದೆ. ಹೀಗಿರುವಾಗ ಪ್ರಗತಿಶೀಲ ಯುಗದ ಪಾರ್ಲಿಮೆಂಟಿನಲ್ಲಿ ಇದಕ್ಕೇಕೆ ಪ್ರಾತಿನಿಧ್ಯ ದೊರೆತಿಲ್ಲವೋ ನಾನರಿಯೆ. ಪಾರ್ಲಿಮೆಂಟಿನಲ್ಲಿ ಆಗಾಗ್ಗೆ ಬೊಗಳುವವ ಧ್ವನಿ ಕೇಳಿಸುತ್ತಿದೆಯಾದರೂ ಈ ಕಾರ್ಯವನ್ನು ದ್ವಿಪಾದಿಯೇ ನಿರ್ವಹಿಸುತ್ತಾನೆ.

ವೈದಿಕ ಸಾಹಿತ್ಯದಂತೆಯೇ ಪಾರ್ಸಿಗಳ ಧರ್ಮಗ್ರಂಥ 'ಅವೆಸ್ತಾ' ದಲ್ಲೂ ನಾಯಿಗೆ ಮಹತ್ವ ದೊರೆತಿದೆ. ಗ್ರೀಕ್ ಕತೆಗಳಲ್ಲೂ ೨ ನಾಯಿಗಳ ವರ್ಣನೆ ದೊರೆಯುತ್ತದೆ. ಅಲ್ಲಿ ಇವು ಯಮರಾಜನ ದ್ವಾರಪಾಲಕರು. ವೇದಗಳಲ್ಲಿ ಕೂಡ ೨ ನಾಯಿಗಳೇ ಪಿತೃಲೋಕದ ಬಾಗಿಲು ಕಾಯುತ್ತಿವೆ. ವೈವಸ್ವತ ಕುಲಕ್ಕೆ ಸೇರಿದ ಇವು ಶ್ಯಾಮ, ಶಬಲ ಎಂಬ ಹೆಸರು ಪಡೆದಿವೆ. ಪಾರ್ಸಿ, ಗ್ರೀಕ್ ಹಾಗೂ ಭಾರತೀಯ ವೇದದ ನಾಯಿಗಳಲ್ಲಿ ಬಣ್ಣ, ರೂಪ ಹಾಗೂ ಹೆಸರುಗಳಷ್ಟೇ ಭೇದ.

ವೇದಗಳಲ್ಲಿನ ವರ್ಣನೆಯ ಪ್ರಕಾರ ಪಿತೃಯಾನ (ಆಕಾಶದ ಕೆಳಭಾಗ, ಇಲ್ಲಿಯೇ ವೈವಸ್ವತ ಯಮನ ಶಾಸನವಿದೆ)ದ ರಕ್ಷಣೆಗಾಗಿ ಎರಡು ನಾಯಿಗಳು ಕಾವಲು ನಡೆಸುತ್ತವೆ. ಪಾರ್ಸಿ ಧರ್ಮಗ್ರಂಥದ ಪ್ರಕಾರ ಪಿತೃಯಾನ ಹಾಗೂ ದೇವಯಾನವನ್ನು ಜೋಡಿಸುವ ಒಂದು 'ಚಿನ್ವತ್ ಸೇತು'ವಿದೆ. ಮೃತಮಾನವನ ಆತ್ಮವನ್ನು ನಾಯಿಗಳು ಈ ಸೇತುವೆಯ ಮೂಲಕ ಆಚೆಗೊಯ್ಯುತ್ತವೆ. ಗ್ರೀಕ್ ಕಥೆಯಲ್ಲಿ ಸರ್ಬೆಸ್ ಎಂಬ ಮೂರು ತಲೆಯ ನಾಯಿ ಯಮನ ರಕ್ಷಕವೆನಿಸಿದೆ ಮತ್ತು ಆಕಾಶದಲ್ಲೂ ದಿವ್ಯಶುನಕ ಇದೆಯೆಂದು ಸೂಚಿಸಲಾಗಿದೆ.

ವೇದದಲ್ಲಿ 'ಶುನಾಸೀರ'ದ ಪ್ರಾರ್ಥನೆಯೂ ಇದೆ. ಶುನಾಸೀರ 'ಶ್ವಾನಪುಂಜ' (ಕೇನಿಸ್) ತಾರೆ-

ಯೇ ಎಂದು ಮ್ಯಾಕ್ಸ್‌ಮುಲ್ಲರರ ಅಭಿಪ್ರಾಯ. ಸಂವತ್ಸರ ಮುಗಿಯುತ್ತಲೇ ಋತುದೇವತೆಯನ್ನು ನಾಯಿಗಳು ಎಚ್ಚರಿಸುತ್ತವೆಯೆಂದು ಋಗ್ವೇದದ ಪ್ರಥಮ ಮಂಡಲದ ಒಂದು ಋಕ್ಕಿ (೧. ೧೬೧. ೧೩)ನಲ್ಲಿ ಹೇಳಲಾಗಿದೆ.

ಇದೇ ವೇದದಲ್ಲಿ ವರ್ಣಿತವಾದ ಪಣಿ–ಸರಮಾ ಸಂವಾದ ತುಂಬ ಪ್ರಸಿದ್ಧ. ಪಣಿಗಳು ದೇವತೆಗಳ ವೈರಿಗಳು. ಅವರು ಆದಿದೇವತೆಗಳ ಗೋವುಗಳನ್ನು ಕದ್ದು 'ರಸಾ' ಎಂಬ ದೊಡ್ಡ ನದಿಯಾಚೆ ಒಯ್ದು ಅಡಗಿಸಿಟ್ಟರು. ಆಗ ದೇವತೆಗಳು ಅಪರಾಧಿಗಳ ಶೋಧಕ್ಕೆ ತರಬೇತಿ ಪಡೆದ ಸರಮಾ ಎಂಬ ಹೆಣ್ಣು ನಾಯಿಯನ್ನು ಕಳುಹಿಸಿ ಕೊಟ್ಟರು.

ದೇವತೆಗಳ ನಾಯಿಯಾದುದರಿಂದ ಸರಮಾ 'ದೇವಶುನಿ' ಎಂಬ ಪ್ರಸಿದ್ಧಿ ಪಡೆದಿದ್ದಳು. ಅವಳು ಬಹುಬೇಗನೆ ಹೋಗಿ ಪಣಿಗಳ ವಾಸಸ್ಥಾನವನ್ನು ಪತ್ತೆ ಹಚ್ಚಿದಳು; ಮತ್ತು ಗೋವುಗಳನ್ನು ಕಂಡು ಹಿಡಿದಳು. ಮೊದಲು ಪಣಿಗಳು ಅಕೆಗೆ ಹಾಲು ಕುಡಿಸಿದರು. ಮತ್ತೆ ಹೊಡೆಯುವದಾಗಿ ಬೆದರಿಕೆ ಹಾಕಿದರು. ಸರಮಾ ಅವರ ಬೆದರಿಕೆಗೆ ಸೊಪ್ಪು ಹಾಕಲಿಲ್ಲ. ಆದರೆ ಅಕೆ ಇಂದ್ರನೆದುರು ಮೊದಲು ಸುಳ್ಳು ಹೇಳಿದಳು. ಆಗ ಇಂದ್ರ ಅವಳಿಗೊಮ್ಮೆ ಒದ್ದ. ಪಣಿಗಳು ಕುಡಿಸಿದ್ದ ಹಾಲನ್ನು ಆಕೆ ಕಕ್ಕಿದಳು. ಅದೇ ಇಂದು ಆಕಾಶಗಂಗೆ ಎನಿಸಿದೆ.

ವೇದದ ಈ 'ಸರಮಾ – ಪಣಿ ಸಂವಾದ'ದಿಂದ ಹಿಂದಿನ ಕಾಲದಲ್ಲೂ ನಾಯಿಗಳಿಗೆ ತರಬೇತಿ ನೀಡಲಾಗುತ್ತಿತ್ತೆಂದೂ ಗುಪ್ತಚರ್ಯೆಯ ಕಾರ್ಯವನ್ನು ಅವು ಯಶಸ್ವಿಯಾಗಿ ನಿರ್ವಹಿಸಿ ಕಳ್ಳನನ್ನು ಹಿಡಿಯುತ್ತಿದ್ದವೆಂದೂ ಸ್ಪಷ್ಟವಾಗುತ್ತದೆ.

ನಾಯಿಗಳ ತರಬೇತಿಯ ಬಗ್ಗೆ ವಾಲ್ಮೀಕಿ ರಾಮಾಯಣದಲ್ಲೂ ಉಲ್ಲೇಖ ಸಿಗುತ್ತದೆ. ಭರತ ಕೇಕಯ ದೇಶದ ತನ್ನ ಮಾವನಲ್ಲಿಗೆ ಹೋಗಿದ್ದಾಗ 'ನಾನು ಜೊತೆಗೆ ಎರಡು ಪ್ರಶಿಕ್ಷಿತ ನಾಯಿಗಳನ್ನು ತರುತ್ತಿದ್ದೇನೆ' ಎಂದು ಅಲ್ಲಿಂದ ತಂದೆ ದಶರಥನಿಗೆ ಬರೆದ. ಈ ರೀತಿ, ಹುಡುಕಿದಾಗ ನಾಯಿಯ ಬಗ್ಗೆ ವಿಸ್ತೃತ ಸಾಮಗ್ರಿ ಸಿಕ್ಕೀತು.

ನಾಯಿ ವೈದಿಕ ಹಾಗೂ ಪೌರಾಣಿಕವಷ್ಟೇ ಅಲ್ಲ, ಐತಿಹಾಸಿಕವೂ ಆಗಿದೆ. ಅದರ ತಾಮ್ರ ಪ್ರತಿಮೆಯೊಂದು ಮೊಹೆಂಜೊದಾರೋದಲ್ಲಿ ದೊರೆತಿದೆ. ಕ್ರಿಸ್ತಪೂರ್ವದಲ್ಲಿ ನಾಯಿಯ ಪ್ರತಿಮೆಗಳಿದ್ದವು. ಪ್ರಾಚೀನ ಸಭ್ಯತೆಯ ಚೀನದಲ್ಲೂ ಇದಕ್ಕೆ ಸಾಕಷ್ಟು ಗೌರವವಿತ್ತು. ಆದರಿಂದು ಚೀನದಲ್ಲಿ ಅದನ್ನು ತಿರಸ್ಕಾರ ದೃಷ್ಟಿಯಿಂದ ನೋಡಲಾಗುತ್ತಿದೆ. ಎಂತಲೇ ಅಲ್ಲಿ ಅಧಿಕಾರಕ್ಕಾಗಿ ಸುಫರ್ಷ ನಡೆಯುತ್ತಿದೆ !

ದೇಶ ಕಾಲ ಪರಿಸ್ಥಿತಿಗನುಗುಣವಾಗಿ ಈ ಪ್ರಾಣಿಯ ಪ್ರತಿಷ್ಠೆಯಲ್ಲಿ ಅಂತರ ಉಂಟಾಗಿದೆ. ಮನುಷ್ಯನ ಬಾಳು ನಾಯಿಯಂತಾಗಿರುತ್ತಿರುವಾಗ, ಕೆಲವೊಮ್ಮೆ ನಾಯಿ ಕೂಡ ಮನುಷ್ಯನಂತಾದರೆ ಅಚ್ಚರಿಯೇಕೆ?

ಪ್ರತಿಮಾ ದಾಸಗುಪ್ತಾ ಎಂಬ ನಟಿ ತನ್ನ ನಾಯಿಗೆ ಬೊಂಬಾಯಿಯ ಸೆಕೆ ಅಸಹನೀಯವಾಯಿತೆಂದು ಅರಿತು ಅದನ್ನು ಮಸೂರಿಗೆ ಕಳುಹಿಸಿದಳು. ಮಸೂರಿಯಲ್ಲಿನ ಕೆಲ ದರಿದ್ರರು ಹಗಲಿಡೀ ದುಡಿದು ರಾತ್ರಿ ರಸ್ತೆಗಳಲ್ಲಿ ಬಿದ್ದಿರುತ್ತಾರೆ. ಬೊಂಬಾಯಿಯ ರಸ್ತೆಗಳಲ್ಲಿ ಅಲೆದಾಡುವ ನಾಯಿಗಳೂ ಇಷ್ಟು ಕರುಣಾಜನಕ ಸ್ಥಿತಿಯಲ್ಲಿರಲಾರವು!

ಭಾರತ ದೇಶ ತುಂಬ ಹಿಂದುಳಿದಿದೆ. ಏಕೆಂದರೆ ನಾಯಿಗಳಿಗೆ ತರಬೇತಿ ನೀಡುವ ಯಾವ ಕಾಲೇಜೂ ಇಲ್ಲಿ ಇಲ್ಲ. ಆದರೆ ಜರ್ಮನಿಯಲ್ಲಿ ನಾಯಿಗಳಿಗೆ ಪ್ರತ್ಯೇಕ ವಿದ್ಯಾಲಯವಿದೆ. ಅಲ್ಲಿ ಅವಕ್ಕೆ ಸ್ಥಳೀಯ ಭಾಷೆಗಳಲ್ಲದೆ ಲ್ಯಾಟಿನ್, ಗ್ರೀಕ್ ಹಾಗೂ ಸಂಸ್ಕೃತವನ್ನು ಕಲಿಸಲಾಗುತ್ತಿದೆ. ಆದರೆ ನಮ್ಮಲ್ಲಿ ಸಂಸ್ಕೃತಕ್ಕೆ ಅಧೋಗತಿ ಒದಗಿದೆ.

ಎಷ್ಟೆಂದರೂ ಜರ್ಮನರು ಆರ್ಯರು. ಅವರ ಕುಲೀನ ನಾಯಿಗಳೂ ಸಂಸ್ಕೃತ ಕಲಿಯುತ್ತವೆ. ಆದರೆ ಭಾರತದ ನಾಯಿ ಇಂಗ್ಲೀಷೊಂದನ್ನೇ ಕಲಿಯಬಯಸುತ್ತದೆ.

ತನ್ನ ಸ್ವತಂತ್ರ ಮಾತೃಭಾಷೆಯಿದ್ದರೂ ನಾಯಿ ಭಾಷಾವಾದದ ಜಂಜಡಕ್ಕೆ ಗುರಿಯಾಗಿಲ್ಲ. ಅದು ಸರ್ವಭಾಷಾ ಪ್ರವೀಣ. ತನ್ನ ಭಾಷೆಯ ಬಗೆಗೆ ಅದಕ್ಕೆ ಪೂರ್ಣ ತೃಪ್ತಿ. ಎಂತಲೇ ಅದು ವಿಶ್ವನಾಗರಿಕ. ಎಲ್ಲರೊಡನೆಯೂ ಸಮಾನ ಸ್ನೇಹದಿಂದ ವರ್ತಿಸುತ್ತದೆ.

ನಾಯಿ ತುಂಬ ಸರಳ ಪ್ರಾಣಿ. ಅದರ ಬಾಲ

ಮಾತ್ರ ವಕ್ರ. ೧೨ ವರ್ಷ ಕಾಲ ಬಿದಿರಿನ ನಳಿಗೆಯೊಳಗೆ ನೇರಾಗಿರಿಸಿದರೂ ಹೊರತೆಗೆದಾಗ ಆ ಬಾಲ ಓರೆಯೇ ಎಂದು ಅನುಭವಿಗಳ ಹೇಳಿಕೆ. ಇದು ವಿಜ್ಞಾನಿಗಳ ಶೋಧಕ್ಕೆ ಬಿಡಬಹುದಾದ ವಿಷಯ. ಚಂದ್ರನಲ್ಲಿಗೆ ಯಾನ ಕಳುಹುವುದರಲ್ಲಿ ಯಶಸ್ವಿಯಾದ ವಿಜ್ಞಾನ ನಾಯಿ ಬಾಲದ ವಕ್ರತೆಯನ್ನು ಸಂಪಡಿಸಲಾರದೆ ಹೋದುದು ನಿಜಕ್ಕೂ ಅಚ್ಚರಿಯೇ.

ನಾಯಿಯ ಸಂಯಮಶೀಲತೆ ಮೆಚ್ಚುವಂತಹದು. ಹೆಣ್ಣು ಗಂಡು ಜತೆಯಾಗಿದ್ದರೂ ವರ್ಷದ ೧೧ ತಿಂಗಳು ಅದು ಸದಾಚಾರಿ ಬ್ರಹ್ಮಚರ್ಯೆಯನ್ನು ಮನುಷ್ಯರಿಗಿಂತಲೂ ಚೆನ್ನಾಗಿ ಪಾಲಿಸುತ್ತದೆ. ಅದು ಸಂಗ್ರಹಿಯಲ್ಲ, ಭಿಕ್ಷಾಟನೆಯಿಂದಲೇ ಜೀವಿಸುತ್ತದೆ.


ಭೂಮ್ಯಾಕಾಶ, ಗಾಳಿ, ನೀರು, ಬೆಂಕಿಗಳಂತೆಯೇ ನಾಯಿಯೂ ವಿಶ್ವವ್ಯಾಪಿ. ಎಲ್ಲೆಲ್ಲೂ ಅದು ಕಾಣಸಿಗುವುದು. ಬಡವ, ಸಿರಿವಂತ ಎಂಬ ಭೇದಭಾವವಿಲ್ಲ. ಎಲ್ಲರೊಡನೆಯೂ ಆತ್ಮೀಯವಾಗಿರುತ್ತದೆ. ಕಪ್ಪಾಗಿದ್ದರೂ ಆಫ್ರಿಕದಂತೆ ಅದು ಗಡೀಪಾರು ಹೊಂದಿಲ್ಲ. ಯಹೂದ್ಯರ ಪ್ರೀತಿ ಪಡೆದೂ ಅದು ಹಿಟ್ಲರನ ಶಾಸನದಲ್ಲಿ ಸಂತೋಷದಿಂದಿತ್ತು. ಆಂಗ್ಲರ ಒಲವು ಗಳಿಸಿಯೂ ರಷ್ಯ ಇಲ್ಲವೇ ಚೀನಕ್ಕೆ ಅಂಟಿಕೊಂಡಿತ್ತು. ರಾಜನೀತಿಯಲ್ಲಿ ಸಾಗಿದ್ದರೂ ಅದು ತಟಸ್ಥ, ಸಮಾಧಿಯಲ್ಲಿದ್ದರೂ ಅದು ಜಾಗರೂಕ. ಎಂತಲೇ ನಾಯಿ ಪ್ರಾಣಿಗಳಲ್ಲಿ ಮಹತ್ವಪೂರ್ಣ; ಸ್ವತಂತ್ರ ಸಾಂಸ್ಕೃತಿಕ ಶಾಸನದ ಅಧಿಪತಿ. ಈ ಮಹಾಜೀವಿಯ ಗೌರವಕ್ಕಾಗಿ ಅಂಚೆ ಚೀಟಿ ಹೊರಡಿಸಬೇಕೆಂದು ಕೆಲ ಶ್ವಾನ ಪ್ರೇಮಿಗಳು ಇತ್ತೀಚೆಗೆ ಸರಕಾರವನ್ನು ಒತ್ತಾಯಿಸಿದರು. ನನ್ನ ಅಭಿಪ್ರಾಯದ ಪ್ರಕಾರ ಈ ಚಳವಳಿ ಇಷ್ಟಕ್ಕೇ ನಿಲ್ಲಬಾರದು. ಪಾರ್ಲಿಮೆಂಟಿನಲ್ಲೂ ನಾಯಿಗಳಿಗಾಗಿ ಕನಿಷ್ಠ ೧೦ ಸ್ಥಾನಗಳನ್ನಾದರೂ ಕಾದಿರಿಸಬೇಕು.

ನಾಯಿಗಳಿಗಾಗಿ ಪ್ರತ್ಯೇಕ ರೇಶನ್ ವ್ಯವಸ್ಥೆಯಾಗಲಿ. ಇಂದು ಸಾಮಾನ್ಯವಾಗಿ ಸಿಗುವ ವಸ್ತುಗಳು ಮನುಷ್ಯರಿಗಿಂತ ನಾಯಿಗೇ ಹೆಚ್ಚು ಉಪಯೋಗಿಯಾಗಿವೆ. ಆದ್ದರಿಂದ ಅವಕ್ಕೂ ರೇಶನ್ ಕಾರ್ಡ್ ಕೊಡುವುದು ಸೂಕ್ತ.

ಪ್ರತಿಯೊಂದು ವಿಶ್ವವಿದ್ಯಾಲಯದಲ್ಲಿ ಪ್ರತ್ಯೇಕವಾಗಿ ಶ್ವಾನ ಪೀಠವೊಂದನ್ನು ಸ್ಥಾಪಿಸಬೇಕೆಂದು ಶಿಕ್ಷಣ ಇಲಾಖೆಯನ್ನು ಒತ್ತಾಯಿಸುವೆ. ನಾಯಿಯ ಬಗ್ಗೆ ಆಳವಾದ ಅಭ್ಯಾಸ ಮಾಡಿ ಶೋಧ ಪ್ರಬಂಧ ಬರೆಯುವವರಿಗೆ ಡಾಕ್ಟರೇಟ್ ಪದವಿ ನೀಡಬಹುದು.

ಆದರೆ ಯಾರೂ ಈ ಬಗ್ಗೆ ಗಮನ ಕೊಡದಿರುವುದು ವಿಷಾದದ ಸಂಗತಿಯಲ್ಲವೇ? ✡


(ಹಿಂದಿಯಿಂದ)



ಮಿತ್ರ– ಮಿತ್ರನ 'ಆಕೆ'
ಬಲು ಜುಲುಮೆ ಮಾಡಿದರು,
"ತಿನ್ನಿರಿ – ಕುಡಿಯಿರಿ,
ಬಹಳ ದಿನಗಳ ಮೇಲೆ
ಮನೆಗೆ ಬಂದಿದ್ದೀರಿ..."
ಈತ ಉತ್ತರಿಸಿದ;
ಹ್ಞೆ......ಹ್ಞೆ......ನಾನು
ಎರಡೆರಡು ಬಾರಿ
ಕುಡಿಯುವವನಲ್ಲ..."

— ಗೋವಾ

ಪಾಕಿಸ್ತಾನದಲ್ಲಿ ಬಂಧಿತರಾದ ಭಾರತದ ಬುಲ್‌ಬುಲ್



ಕವಿಯ ಕಥೆ: ವ್ಯಥೆಯ ಗಾಥೆ

ನಾರಾಯಣ ಫುಳಗಿ

ಸಾರೇ ಜಹಾಂಸೆ ಅಚ್ಛಾ, ಹಿಂದೂಸ್ತಾನ
ಹಮಾರಾ ।
ಹಮ್ ಬುಲ್ ಬುಲೆ ಹೈ ಇಸಕೀ
ಏ ಗುಲಿಸ್ತಾನ ಹಮಾರಾ ॥

"ಈ ಗೀತವನ್ನು ಓದಿದಂತೆಯೇ ನನ್ನ ಹೃದಯದಲ್ಲಿ ಆನಂದ ಉಕ್ಕೇರುತ್ತದೆ. ಯರವಾಡಾ ಜೈಲಿನಲ್ಲಿ ನೂರಾರು ಬಾರಿ ಇದನ್ನು ಹಾಡಿಕೊಂಡಿದ್ದೆ" ಎಂದು ಮಹಾತ್ಮಾ ಗಾಂಧಿಯವರು ತುಂಬು ಹೃದಯದಿಂದ ಪ್ರಶಂಸಿಸಿದ, ರಾಷ್ಟ್ರಗೀತಗಳ ಸಾಲಿನಲ್ಲೇ ಸೇರಿದ ಈ ಗೀತ ಖ್ಯಾತ ಉರ್ದು ಕವಿ ಡಾ. ಅಲ್ಲಮಾ ಮಹಮ್ಮದ ಇಕಬಾಲ್‌ರದು. ಅವರು ಮುಂದೆ ತಮ್ಮ ವಿಚಾರಗಳನ್ನು ಬದಲಿಸಿ ರಾಷ್ಟ್ರೀಯ ಐಕ್ಯಕ್ಕೆ ಭಂಗ ಬರುವ ಅಭಿಪ್ರಾಯಗಳನ್ನು ವ್ಯಕ್ತಪಡಿಸಿ ಕ್ಷೋಭೆಯನ್ನು ಎದುರಿಸಬೇಕಾಗಿ ಬಂದರೂ ಭಾರತದ ಗೌರವ ಗೀತವನ್ನು ಹಾಡುತ್ತಲೇ ೧೯೩೮ರಲ್ಲಿ ಕೊನೆಯುಸಿರೆಳೆದರು.

ಆದರೆ ಉರ್ದು ಭಾಷೆಯ ಮಹಾಕವಿಗಳ ಸಾಲಿನಲ್ಲೇ ಇರುವ ಇನ್ನೊಂದು "ಬುಲ್ ಬುಲ್" ಕ್ರಾಂತಿ ಕವಿ ಜೋಶ್ ಮಲಿಹಾಬಾದಿ ಶಬ್ಬೀರ್ ಹಸನ್‌ಖಾನರ ಜಾತಕದಲ್ಲಿ ಇಂಥ ಯೋಗವಿದೆಯೋ ಇಲ್ಲವೋ! ಮಾರ್ಕ್ಸ್‌ವಾದಿ ಸಿದ್ಧಾಂತಕ್ಕೆ ಮಾರುಹೋಗಿ ಜಾತ್ಯಂಧತೆ, ಮತ ಮೌಢ್ಯ ಇವುಗಳ ವಿರುದ್ಧ ಲೇಖನಿಯನ್ನು ಹರಿಯಬಿಟ್ಟ ಜೋಶ್‌ಗೆ ಭಾರತದಲ್ಲಿಯೂ ಬೇಕಾದಷ್ಟು ಜನ ವಿರೋಧಿಗಳಿದ್ದರು. ಆದರೆ ಇದರಿಂದಾಗಿ ಅವರ ಕಾವ್ಯಾಭಿವ್ಯಕ್ತಿ ಪ್ರಕಾಶಗೊಳ್ಳುವುದಕ್ಕೆ ಒಮ್ಮೆಯೂ ಆತಂಕ ಬಂದಿರಲಿಲ್ಲ. ಭಾರತಕ್ಕಿಂತ ಪಾಕಿಸ್ತಾನದಲ್ಲಿ ತಮಗೆ ಹೆಚ್ಚಿನ ಗೌರವ ಹಾಗೂ ಬಾಳಿನ ಸ್ಥಿರತೆ ಸಿಗಬಹುದೆಂಬ ಆಶೆಯಿಂದ ಭಾರತವನ್ನು ಬಿಟ್ಟು ಪಾಕಿಸ್ತಾನಕ್ಕೆ ತೆರಳಿದ ಈ ಕ್ರಾಂತಿ ಕವಿ ಶಾಯರ್ ಎ ಇನ್‌ಕಿಲಾಬ್ ಈಗ ಭ್ರಾಂತಿಯಿಂದ ಸಾಯುವ ಹೊತ್ತು ಬಂದಿದೆ. ಪಾಕಿಸ್ತಾನದಲ್ಲಿ ಝಿಯಾವುಲ್ ಹಕ್ಕರ ದಂಡಿನಾಳಿಕೆ. ಅವರ ಕಂಠಕ್ಕೆ ಬೀಗ ಬಿಗಿದಿದೆ. ಶಾಯರ್ ಎ

ಇನ್‌ಕಿಲಾಬ್‌ರ ಕವನಗಳನ್ನಿಂದು ಪಾಕಿಸ್ತಾನದ ಯಾವುದೇ ಪತ್ರಿಕೆ ಪ್ರಕಟಿಸುವಂತಿಲ್ಲ. ಬಾನುಲಿ ಪ್ರಸಾರಗೊಳಿಸುವಂತೆಯೂ ಇಲ್ಲ. ಭಾರತದ ಈ ಬುಲ್ ಬುಲ್ ಪಾಕಿಸ್ತಾನದಲ್ಲೀಗ ಸಂತಸದಿಂದ ಹಾಡುವಂತೆಯೂ ಇಲ್ಲ; ತನ್ನ ಮನದಳಲನ್ನು ತೋಡಿಕೊಳ್ಳುವಂತೆಯೂ ಇಲ್ಲ. ಕ್ರಾಂತಿಗೀತಗಳ ಈ ಅಧ್ವರ್ಯು ಇಂದ ಕ್ರಾಂತಿಯ ಸಮಾಧಿಯನ್ನು ಮೌನ ಪ್ರೇಕ್ಷಕನಾಗಿ ನೋಡುತ್ತಲೇ ಕೊನೆಯುಸಿರೆಳೆಯಬೇಕಾಗಿದೆ.

ಸುಮಾರು ೮೩ ವರ್ಷದವರಾಗಿರುವ ಜೋಶ್ ೧೯೫೧ರಿಂದ ೧೯೫೭ರ ಅವಧಿಯಲ್ಲಿ ಭಾರತ ಸರಕಾರದ ಪ್ರಕಟಣೆ 'ಆಜ್‌ಕಲ್' ಉರ್ದು ಮಾಸಿಕದ ಸಂಪಾದಕರಾಗಿದ್ದರು. ಪಂಡಿತ ಜವಾಹರಲಾಲ ನೆಹರೂರ ಆತ್ಮೀಯ ಸಂಪರ್ಕವಿದ್ದ ಅವರನ್ನು ಭಾರತ ಸರಕಾರ ಸಕಲ ರೀತಿಯಿಂದ ಗೌರವಿಸಿತ್ತು. ಪದ್ಮಭೂಷಣ ಪ್ರಶಸ್ತಿಯಿಂದ ವಿಭೂಷಿತರಾಗಿ ಸರಕಾರದ ಹಾಗೂ ಭಾರತದ ಜನಮಾನಸದ ಗೌರವವನ್ನು ಗಳಿಸಿದ ಜೋಶ್ ೧೯೫೭ರಲ್ಲಿ ಪಾಕಿಸ್ತಾನದಲ್ಲಿಯ ಅವರ ಅಭಿಮಾನಿ ಅಧಿಕಾರಿಯೊಬ್ಬಬ್ಬನ ಕರೆಗೆ ಮಾರು ಹೋಗಿ ಹೆಚ್ಚು ಸುಖವನ್ನರಸಿ ಪಂ. ನೆಹರೂರ ಮನಸ್ಸಿನ ವಿರುದ್ಧವಾಗಿಯೇ ಪಾಕಿಸ್ತಾನಕ್ಕೆ ಹೋದರು. ಆದರೆ ಅಲ್ಲಿ ಭ್ರಮನಿರಸನವಾಗಲು ತಡವಾಗಲಿಲ್ಲ. ಅವರು ಸರಕಾರದ ಹಾಗೂ ಜನತೆಯ ಕ್ಷೋಭೆಯನ್ನು ಎದುರಿಸಬೇಕಾಯಿತು. ಆದನ್ನೆಲ್ಲ ಹೇಗೋ ಇಲ್ಲಿಯವರೆಗೆ ಸಹಿಸಿಕೊಂಡಿದ್ದ ಅವರಿಗೆ ಇತ್ತೀಚೆ ನಡೆದ ಇನ್ನೊಂದು ಘಟನೆಯಿಂದ ಮತ್ತಷ್ಟು ಬೇಜಾರಾಗಿದೆ. "ಈಗ ನನಗೆ ಭಾರತಕ್ಕೆ ಮರಳಲು ಅನುಮತಿಯನ್ನಾದರೂ ನೀಡಿ ಇಲ್ಲವೆ ಇಂಗ್ಲೆಂಡಿನಲ್ಲಿ ವಾಸಿಸುವುದಕ್ಕೆ ಅವಕಾಶವನ್ನಾದರೂ ಕೊಡಿ" ಎಂದು ಜಿಯಾವುಲ್ ಹಕ್ಕರನ್ನು ಕೇಳಿಕೊಂಡಿದ್ದಾರೆ.

'ಜೋಶ್' ನಿಧನರಾದ ನಂತರ ಬಿತ್ತರಿಸಲಾಗುವುದೆಂಬ ಕರಾರಿನ ಮೇಲೆ ಪಾಕಿಸ್ತಾನ ಬಾನುಲಿಯು ೧೯೭೪ರಲ್ಲಿ ಧ್ವನಿಮುದ್ರಿಸಿಕೊಂಡ ಸಂದರ್ಶನವನ್ನು ಪಾಕಿಸ್ತಾನದ ಪತ್ರಿಕೆ 'ಜಿಂದಗಿ' ಇತ್ತೀಚೆ ಪ್ರಕಟಿಸಿ ಜೋಶ್ ಅವರನ್ನು ಇರುಕಿನಲ್ಲಿ ಸಿಲುಕಿಸಿದೆ. ಜೋಶ್‌ರ ಈ ಸಂದರ್ಶನ ಬಹಿರಂಗಗೊಂಡಿದ್ದರಿಂದಾಗಿ, ದ್ವಿರಾಷ್ಟ್ರ ಸಿದ್ಧಾಂತ ಹಾಗೂ ಪಾಕಿಸ್ತಾನದ ಮೂಲ ಕಲ್ಪನೆಯನ್ನೇ ಖಂಡಿಸಿದ್ದು, ಪಾಕಿಸ್ತಾನ ಜನಕ ಜಿನ್ನಾ ಹಾಗೂ ಡಾ. ಅಲ್ಲಮಾ ಮಹಮ್ಮದ ಇಕಬಾಲ್ ಅವರನ್ನು ಟೀಕಿಸಿದ್ದು, ಇಸ್ಲಾಂ ಧರ್ಮವನ್ನು ನಿಂದಿಸಿದ್ದು ಮೊದಲಾದ ಆರೋಪಗಳಿಗೆ ಈಡಾಗಿದ್ದಾರೆ.

"ಪಾಕಿಸ್ತಾನವು ಹಿಂದು ಹಾಗೂ ಮುಸ್ಲಿಂ ಈ ಎರಡೂ ಜನಾಂಗಗಳಿಗೂ ಅಪಾಯಕರವೆಂಬುದು ಸಿದ್ಧವಾಗಿದೆಂದು ನನ್ನ ಭಾವನೆ. ಸಾವಿರಾರು ವರ್ಷಗಳಿಂದ ನಡೆದು ಬಂದ ಹಿಂದೂ–ಮುಸ್ಲಿಂ ಸಂಯುಕ್ತ ಸಾಮರಸ್ಯದ ಸಂಸ್ಕೃತಿಯನ್ನು ಇದು ನುಚ್ಚು ನೂರಾಗಿಸಿದೆ. ಮಾನವತೆಯು ರಾಷ್ಟ್ರೀಯ ಸೀಮೆಗಳನ್ನು ಛೇದಿಸುವಂಥದಾದ್ದರಿಂದ ಹಾಗೂ ರಾಷ್ಟ್ರೀಯತ್ವಕ್ಕೆ ಧರ್ಮವು ಆಧಾರವಾಗುವುದೇ ಸಾಧ್ಯವಿಲ್ಲವಾದ್ದರಿಂದ ದ್ವಿರಾಷ್ಟ್ರ ಸಿದ್ಧಾಂತ ಎಂದೆಂದಿಗೂ ನಿಲ್ಲಲಾರದು. ಉದಾಹರಣೆಗೆ ಹೇಳುವುದಾದರೆ ನಾನಿಂದು ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡರೆ ನಾನು ಪಠಾಣ ಅಥವಾ ಭಾರತೀಯ ಇಲ್ಲವೇ ಪಾಕಿಸ್ತಾನಿಯನಲ್ಲವೆಂದೇನೂ -ಆಗದು. ಅದೇ ರೀತಿ ಇಂಗ್ಲೆಂಡಿನ ಒಬ್ಬ ಇಸ್ಲಾಮ್ ಧರ್ಮ ಸ್ವೀಕರಿಸಿದ ಮಾತ್ರಕ್ಕೆ ಆತ ಇರಾಣಿಯೆನಿಸಲಾರ. ರಾಷ್ಟ್ರೀಯತ್ವಕ್ಕೂ ಧರ್ಮಕ್ಕೂ ಸಂಬಂಧವನ್ನು ಕಲ್ಪಿಸಲು ಸಾಧ್ಯವೇ ಇಲ್ಲ. ಧರ್ಮದ ತಳಹದಿಯ ಮೇಲೆ ಒಂದು ರಾಷ್ಟ್ರವನ್ನು ನಿರ್ಮಿಸುವುದು ಗಂಡಾಂತರಕರ.

"ಜಿನ್ನಾ ಅವರ ಜೊತೆ ಚರ್ಚಿಸುವ ಅವಕಾಶ ನನಗೆ ಲಭಿಸಿತ್ತು. ಆದರೆ ಜಿನ್ನಾ ತುಂಬಾ ಹಟದ ಸ್ವಭಾವದವರು: ನನ್ನ ಮಾತನ್ನವರು ಕೇಳುವುದಿಲ್ಲವೆಂಬುದು ನನಗೆ ಗೊತ್ತಿತ್ತು. ಆದ್ದರಿಂದಲೆ ಚರ್ಚೆಗೆ ಅವರು ನನ್ನನ್ನು ಆಮಂತ್ರಿಸಿದಾಗ ಅಂಥ ಚರ್ಚೆ ವ್ಯರ್ಥ ಕಾಲಹರಣ ಎಂದು ನಾನೇ ಆಮಂತ್ರಣವನ್ನು ನಿರಾಕರಿಸಿದೆ. ಜಿನ್ನಾ ಅವರು ಭಾರತದ ವಿಭಜನೆಯ ಮೂಲಕ ಭಾರೀ ದುರಂತವನ್ನೇ ನಿರ್ಮಿಸಿದರು. ವಿಭಜನೆಯು ಮಾನವೀಯ ಸಂಬಂಧಗಳನ್ನೇ ಕಡಿದು ಹಾಕಿದೆ. ಪ್ರೇಯಸಿ ಇಲ್ಲಿದ್ದರೆ ಪ್ರೇಮಿ ಭಾರತದಲ್ಲಿ. ಪತಿ ಭಾರತದಲ್ಲುಳಿದರೆ ಹೆಂಡತಿ ಇಲ್ಲಿ. ಅಣ್ಣ–ತಮ್ಮಂದಿರು, ಅಕ್ಕ–ತಂಗಿಯರು ಆತ್ಮೀಯರು ಹೀಗೆ ಒಬ್ಬರಿಗೊ

ಷ್ಟರು ದೂರವಾಗಿಬಿಟ್ಟದ್ದಾರೆ. ಯಾರಾದರೂ ಸತ್ತರೆ ಅವರ ಕೊನೆಯ ದರ್ಶನ ಪಡೆಯಲು ಅವರ ಆತ್ಮೀಯರಿಗೆ ಸಾಧ್ಯವಿಲ್ಲದಂಥ ಸ್ಥಿತಿ ನಿರ್ಮಾಣವಾಗಿದೆ. ಸಂಕುಚಿತ ರಾಜಕಾರಣವು ಸರ್ವನಾಶದ ಸ್ಥಿತಿಯಲ್ಲದೆ ಬೇರೇನನ್ನೂ ಉಂಟು ಮಾಡಿಲ್ಲ.

"ಕೇವಲ ಹಿಂದು ಮುಸ್ಲಿಮರ ನಡುವೆಯಷ್ಟೇ ಅಲ್ಲದೇ ಹಿಂದುಗಳಲ್ಲೇ ಸನಾತನಿ ಹಾಗೂ ಆರ್ಯಾ ಸಮಾಜದವರ ನಡುವೆ, ಶಿಯಾ ಹಾಗೂ ಸುನ್ನಿ ಮುಸಲ್ಮಾನರ ನಡುವೆ ಹೀಗೆ ಬೇರೆ ಬೇರೆ ಜಾತಿ ಮತಗಳವರ ನಡುವೆ ಬ್ರಿಟಿಶರು ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಘರ್ಷಣೆಯ ಕಿಚ್ಚು ಹೊತ್ತಿಸಿದ್ದಾರೆ. ಬ್ರಿಟಿಶರೇ ಈ ವಿಷಬೀಜ ಬಿತ್ತಿದರಾದರೂ ಮುಸ್ಲಿಮ್ ಧುರೀಣರು ಅದನ್ನು ಆಮೂಲಾಗ್ರವಾಗಿ ನಾಶಮಾಡುವುದನ್ನು ಬಿಟ್ಟು ಪರಿಪೋಷಿಸಿದರು" ಎಂದವರು ತಮ್ಮ ಸಂದರ್ಶನದಲ್ಲಿ ಹೇಳಿದ್ದಾರೆ.

ಉರ್ದು ಭಾಷೆಯ ಪ್ರಖ್ಯಾತ ಕವಿಗಳಾದ ಡಾ. ಅಲ್ಲಮಾ ಮಹಮ್ಮದ ಇಕಬಾಲ್ ತಮ್ಮನ್ನು ಕೇವಲ ಪ್ರವಾದಿ ಪೈಗಂಬರ್ ಕುರಾನ್ ಹಾಗೂ ಇಸ್ಲಾಮಕ್ಕೆ ಸೀಮಿತಗೊಳಿಸಿಕೊಂಡಿದ್ದೇ ತುಂಬಾ ಖೇದವನ್ನುಂಟುಮಾಡಿದೆಯೆಂದು ಜೋಶ್ ಹೇಳಿದ್ದು ಸಹ ಪಾಕಿಸ್ತಾನಿ ಸರಕಾರವನ್ನು ಕೆರಳಿಸಿದೆ.

೧೯೭೧ರಲ್ಲಿಯ ಪಾಕಿಸ್ತಾನದ ಪರಾಭವದ ನಂತರ ಜುಲ್ಫಿಕರ್ ಅಲಿ ಭುಟ್ಟೋ ಪ್ರಧಾನಿ ಎಂದು ಆಯ್ಕೆಗೊಂಡ ಸಂದರ್ಭದಲ್ಲಿ ಅವರಿಗೆ ಸ್ವಾಗತ ಕೋರಿ ಕವನವೊಂದನ್ನು ಜೋಶ್ ಪಾಕಿಸ್ತಾನದ ಬಾನುಲಿಯಲ್ಲಿ ಓದಿದರು. ಬದರ್‌ದ ಸಮರಾಂಗಣದಲ್ಲಿ ಹಜರತ್ ಅಲಿ ತಮ್ಮ ಮಾವ ಹಾಗೂ ಗುರುಗಳಾದ ಪ್ರವಾದಿ ಹಜರತ್ ಮುಹಮ್ಮದ ಪೈಗಂಬರರಿಂದ ಪಡೆದಿದ್ದ ಖಡ್ಗದ ಹೆಸರು 'ಜುಲ್ಫಿಕರ್ ತಲವಾರ' ಎಂಬುದನ್ನು ಪ್ರಸ್ತಾಪಿಸಿ ಭುಟ್ಟೋರ ಸಾಮರ್ಥ್ಯವನ್ನು ಪ್ರಶಂಸಿಸಿದ ಅವರ ಈ ಕವನವೇ ಪಾಕಿಸ್ತಾನದಿಂದ ಕೊನೆಯದಾಗಿ ಕೇಳಿಬಂದದ್ದು.

ಸಬ್‌ಸೇ ಪಹಲೇ ಮರ್ದ ಬನ್
ಹಿಂದೋಸ್ತಾನಕೆ ವಾಸ್ತೆ ।
ಹಿಂದ್ ಜಾಗ ಉಠೆ ತೋ ಫಿರ್
ಸಾರೇ ಜಹಾನಕೆ ವಾಸ್ತೆ ॥

'ಹಿಂದುಸ್ತಾನಕ್ಕೋಸುಗ ಮೊಟ್ಟ ಮೊದಲು ಪುರುಷಸಿಂಹನಾಗು; ಹಿಂದುಸ್ತಾನದ ಜಾಗೃತಿಯಾದ ಬಳಿಕ ಇಡೀ ಜಗತ್ತಿನ ಬಗ್ಗೆ ಮಾತಾಡುವಿಯಂತೆ' ಎಂದು ಸಂದೇಶ ಮೊಳಗಿಸಿದ ಜೋಶ್.

ಫರ್ಜ್ ಕರ್ ಉನಕೀ ಹಿಂದು
ಹಿಂದ್ ಕೀ ರುಸವಾಯೀ ಹೈ ।
ಲೇಕಿನ್ ಇಸಕೋ ಕ್ಯಾ ಕರೂನ
ಫಿರಬೀ ಮೇರಾ ಭಾಯೀ ಹೈ ॥

"ಹಿಂದೂಗಳಿಂದಲೇ ಹಿಂದುಸ್ತಾನದ ಅವಹೇಳನವಾಗುತ್ತಿದೆಂದು ನಮಗೊಂದು ವೇಳೆ ಅನಿಸಿದರೂ ಅವರೂ ನಮ್ಮ ಬಂಧುಗಳೇ ಅಲ್ಲವೆ." ಎಂದು ಮುಸ್ಲಿಂ ಸಮಾಜಕ್ಕೆ ಬೋಧಿಸಿದ್ದುಂಟು. ನಿಜವಾದ ಕಳಕಳಿಯ ಇಂಥ ಉಜ್ವಲ ರಾಷ್ಟ್ರಭಕ್ತನೊಬ್ಬ ಪಾಕಿಸ್ತಾನಕ್ಕೆ ಹೋಗಿ ನರಕಯಾತನೆಯನ್ನೇಕೆ ಅನುಭವಿಸಬೇಕಾಯಿತೆಂಬುದು ಅವರೇ ಬರೆದ 'ಯಾದೋಂಕಿ ಬಾರಾತ್' ಆತ್ಮಚರಿತ್ರೆ ಬಿಂಬಿಸುತ್ತದೆ.

ಜೋಶ್ ೧೯೫೫ರಲ್ಲಿ ಪಾಕಿಸ್ತಾನಕ್ಕೆ ಮೂರನೇ ಬಾರಿ ಸಂದರ್ಶನ ನೀಡಿದಾಗ ಅವರ ಸ್ನೇಹಿತ ಸೈಯದ್ ಅಬ್ದುಲ್ ತಾಲೀಬ್ ನಾಕ್ವಿ ಕರಾಚಿ ನಗರದ ಮುಖ್ಯ ಕಮೀಶನರನಾಗಿದ್ದ. "ನೀವು ಹಿಂದುಸ್ತಾನದಲ್ಲೇ ಉಳಿಯುವುದಾದರೆ ನಿಮ್ಮ ಮುಂದಿನ ಪೀಳಿಗೆಯವರು ಧೋತರ ಹಾಗೂ ಜುಬ್ಬ ಧರಿಸಿ ಹಿಂದಿಯನ್ನು ಕಲಿಯುವ ಅವಮಾನ ಸಹಿಸಿಕೊಂಡಿರಬೇಕಾಗುತ್ತದೆ" ಎಂದು ನಾಕ್ವಿ ಜೋಶ್ ತಲೆಯಲ್ಲಿ ತುಂಬಿದರು.

ಜೋಶರಿಗೆ ಬಂಗ್ಲೆ, ಚಲಚ್ಚಿತ್ರಮಂದಿರಗಳನ್ನು ಕಟ್ಟಿಸಿಕೊಳ್ಳಲು ಕರಾಚಿಯ ಜಹಾಂಗೀರ್ ರೋಡ್ ಪಕ್ಕದಲ್ಲಿ ವಿಶಾಲವಾದ ಪ್ಲಾಟ್ ಹಾಗು ೫೦ ಎಕರೆಯಷ್ಟು ವಿಶಾಲವಾದ ತೋಟಗಳನ್ನು ಕೊಡಬೇಕೆಂದು ಜೋಶ್ ಸಮಕ್ಷಮದಲ್ಲಿ ಕರಾಚಿ ಜಿಲ್ಲಾಧಿಕಾರಿಗೆ ಆಜ್ಞೆ ಮಾಡಿದರು. ಪಾಕಿಸ್ತಾನದಲ್ಲಿ ಸಂಪೂರ್ಣ ಆರ್ಥಿಕ ಭದ್ರತೆಯ ಭರವಸೆಯನ್ನು ನಾಕ್ವಿ ಜೋಶ್‌ರಿಗೆ ನೀಡಿ ಪಾಕಿಸ್ತಾನಕ್ಕೆ ಬಂದು ವಾಸಿಸುವಂತೆ ಅವರ ಮನವೊಲಿ-

ಸಿದರು. 'ಸಿಂಧ್ ಹೌಸಿಂಗ್ ಸೊಸೈಟಿ'ಯಿಂದ ತಕ್ಷಣ ವಾಸಕ್ಕೆ ಒಂದು ಸುಂದರ ಸೌಧವನ್ನು ಕೊಡಿಸುವ ದಾಗಿಯೂ ನಾಕ್ವಿ ಹೇಳಿದರು.

"ನೀವು ಪಾಕಿಸ್ತಾನಕ್ಕೆ ಹೋಗಿಬಿಡುವುದು ನಮಗೇನೋ ದುಃಖದ ಸಂಗತಿಯಾದರೂ ನಿಮ್ಮ ಕುಟುಂಬದ ಭವಿಷ್ಯದ ದೃಷ್ಟಿಯಿಂದ ಅದು ಒಳ್ಳೆಯದು. ನೆಹರೂರ ನಿಧನದ ನಂತರ ನಿಮ್ಮನ್ನು ಯಾರೂ ಕೇಳುವುದಿಲ್ಲ ವೆಂದು ನಾಕ್ವಿ ಹೇಳುವುದೇ ನಿಜವಾದದ್ದು. ನೆಹರೂ ನಿಧನದ ನಂತರ ನನ್ನನ್ನು ಕೂಡ ಯಾ- ರೂ ಕೇಳುವದಿಲ್ಲ" ಎಂಬ ಮಾತುಗಳಿಂದ ಜೋಶ ರಿಗೆ ಪಾಕಿಸ್ತಾನಕ್ಕೆ ಹೋಗುವಂತೆ ಇನ್ನೂ ಒತ್ತು ಕೊಟ್ಟವರೆಂದರೆ ಮೌಲಾನಾ ಅಬುಲ್ ಕಲಂ ಆಜಾದ್.

ಆದರೆ ನೆಹರೂ ಅವರು ಜೋಶ್ ಅವರಿಗೆ "ಪಾಕಿಸ್ತಾನಕ್ಕೆ ಹೋಗಬೇಡಿ" ಎಂದು ಪರಿಪರಿ ಯಾಗಿ ಕೇಳಿಕೊಂಡರು. ಜೋಶ್ ಪಟ್ಟು ಹಿಡಿ ದಾಗ ನೆಹರು, "ನಿಮ್ಮ ಮಕ್ಕಳು ಬೇಕಾದರೆ ಹೋಗಿ ಪಾಕಿಸ್ತಾನದ ನಾಗರಿಕತ್ವ ಪಡೆಯಲಿ ನೀವು ಮಾತ್ರ ಭಾರತದಲ್ಲೆ ಉಳಿಯಿರಿ" ಎಂದು ವಿನಂತಿಸಿ ಭಾರತ ಸರಕಾರದ ಪ್ರಕಟನೆ 'ಆಜ ಕಲ್' ಸಂಪಾದಕರಾಗಿದ್ದ ಅವರಿಗೆ ಪ್ರತಿವರ್ಷ ನಾಲ್ಕು ತಿಂಗಳು ವೇತನ ಸಹಿತ ರಜೆ ಮಂಜೂರು ಮಾಡಿ ಪಾಕಿಸ್ತಾನಕ್ಕೆ ಭೇಟ್ಟಿ ಕೊಟ್ಟು ಬರುವ ಅವಕಾಶ ಕಲ್ಪಿಸುವುದಾಗಿ ಹೇಳಿದರು.



"ಈಗ ನಾನು ಪಕ್ಷಾಂತರ ಮಾಡಿದ್ರೂ ನನ್ನ ಕೋಟ್ನ ಹಳೆ ಪಾರ್ಟಿ ಅಫೀಸ್‌ನಲ್ಲೇ ಬಿಟ್ಟಿದೀನಿ. ಮತ್ತೆ ಅಲ್ಲೀಗೆ ಹೋಗ್ಬೇಕಲ್ಲ, ಯಾಕೇಂದ್ರೆ ಗಿನ ರಾಜಕೀಯನೆ ನಂಬಕ್ಕಾಗಲ್ಲ."

ನಾಕ್ವಿಯ ಆಮಂತ್ರಣದ ಮೇರೆಗೆ ಜೋಶ್ ತಾವು ಎರಡೂ ರಾಷ್ಟ್ರಗಳ ನಡುವೆ ತಮಗೆ ಬೇಕಾದ ರೀತಿಯಲ್ಲಿ ಓಡಾಡಿಕೊಂಡಿರಬಹು ದೆಂಬ ತಿಳುವಳಿಕೆಯನ್ನು ನೆಹರೂರೊಡನೆ ಮಾಡಿ ಕೊಂಡು ಪಾಕಿಸ್ತಾನಕ್ಕೆ ತೆರಳಿದಾಗ ಪಾಕಿಸ್ತಾನ ದಲ್ಲಿಯ ಪರಿಸ್ಥಿತಿ ಅವರಿಗೆ ಪ್ರತಿಕೂಲವಾಗಿತ್ತು. ಪತ್ರಕರ್ತ, ಸಾಹಿತಿಗಳ ಹಾಗೂ ವ್ಯಂಗ್ಯ ಚಿತ್ರಕಾರರ ಭಾರೀ ವಿರೋಧವನ್ನು ಅವರು ಎದುರಿಸಬೇಕಾಯಿತು. ಪಾಕಿಸ್ತಾನಿಗಳು ಅವ ರನ್ನು ಕಾಫರರಂತೆ ಕಂಡರು. ಜೋಶ್‌ರ ವಿರುದ್ಧ ನಡೆದ ಆಂದೋಲನದಿಂದ ಪಾಕಿಸ್ತಾನದ ಗೃಹ ಮಂತ್ರಿ ಶಾಖೆಯೇ ತತ್ತರಿಸಿ ನಾಕ್ವಿಯವರನ್ನೇ ತರಾಟೆಗೆ ತೆಗೆದುಕೊಂಡಿತು. ತತ್ಪರಿಣಾಮವಾಗಿ ಜೋಶ್ ತಮಗೆ ಮಂಜೂರಾಗಿದ್ದ ಎರಡೂ ಪ್ಲಾಟುಗಳನ್ನು ವಾಪಸು ಮಾಡಬೇಕಾಯಿತು. ಇದೇ ವಿಷಯದಲ್ಲಿ ನಾಕ್ವಿ ಹಾಗೂ ಪಾಕಿಸ್ತಾನದ ಆಗಿನ ಪ್ರಧಾನಿ ಚೌಧರಿ ಮಹಮ್ಮದ ಅಲಿ ಯವರ ನಡುವೆ ಘರ್ಷಣೆ ಆರಂಭವಾಯಿತು. ನಾಕ್ವಿ ಕೆಲ ಕಾಲ ಇಸ್ಕಂದರ ಮಿರ್ಜಾ ಅವರ ನೆರವು ಪಡೆದು ಬದುಕಿದರು. ಆದರೆ ಮಿರ್ಜಾರೂ ಕೈ ಬಿಟ್ಟಾಗ ನಾಕ್ವಿ ಕೆಲಸದಿಂದ ವಜಾಮಾಡ ಲ್ಪಟ್ಟರು. ಆಗ ಜೋಶ್ ಪಾಕಿಸ್ತಾನದಲ್ಲಿ ಮತ್ತಷ್ಟು ನಿರಾಧಾರರಾದರು.

ಕ್ಷುಲ್ಲಕ ಲೈಸನ್ಸ್, ಪರ್ಮಿಟ್ಟುಗಳನ್ನು ಪಡೆ ಯಲು ಸಹ ಈ ಮಹಾಕವಿ ಹಗಲಿರುಳು ಸರ ಕಾರೀ ಅಧಿಕಾರಿ ಹಾಗೂ ಕಚೇರಿಗಳತ್ತ ಅಲೆದಾಡ ಬೇಕಾಯಿತು. ಮೀನುಗಾರಿಕೆ ಲೈಸನ್ಸ್, ಪೆಟ್ರೋಲ್ ಪಂಪ್ ಅಥವಾ ರೆಸ್ಟೋರೆಂಟ್ ಜವಳಿ ಗಿರಣಿ ಮೊದಲಾದ ಹದಿನೆಂಟು ಯೋಜನೆಗಳನ್ನು

ಜೋಶ್‌ಗಾಗಿ ಸಿದ್ಧಪಡಿಸಲಾಗಿದ್ದರೂ ಅವುಗಳ ಪೈಕಿ ಒಂದೂ ಕಾರ್ಯಗತವಾಗಲಿಲ್ಲ. ಎಚ್. ಎಸ್. ಸುಹ್ರವರ್ದಿಯವರು ಜೋಶ್ ಅಧ್ಯಕ್ಷತೆಯಲ್ಲಿ ಉರ್ದು ಭಾಷಾ ಮಂಡಳಿ ಸ್ಥಾಪಿಸಿ ನೆರವಾಗಲು ಯತ್ನಿಸಿದರು. ಆವರೆ ಮಂಡಲಿ ಸ್ಥಾಪಿಸಲ್ಪಟ್ಟರೂ ಜೋಶರನ್ನು ಅದರ ಅಧ್ಯಕ್ಷರೆಂದು ನೇಮಿಸುವುದು ಅವರಿಗೆ ಶಕ್ಯವಾಗಲಿಲ್ಲ. ಉತ್ತರ ಪ್ರದೇಶದಲ್ಲಿಯ ಮಲಿಹಾಬಾದದಲ್ಲಿಯ ಪರಂಪರಾಗತ ಮಾವಿನ ತೋಟದಿಂದ ಬರುತ್ತಿದ್ದ ಕಿಂಚಿತ್ ಉತ್ಪಾದನೆಯೇ ಜೋಶರಿಗೆ ಕೆಲ ವರ್ಷ ಆಧಾರವಾಗಿತ್ತು. ೧೯೬೭ರಲ್ಲಿ ಮಾವಿನ ತೋಪು ಮಾರಲಿಕ್ಕೆಂದು ಭಾರತಕ್ಕೆ ಬಂದಿದ್ದ ಜೋಶ್ ಸ್ನೇಹಿತ ಪತ್ರಕರ್ತರಿಗೆ ನೀಡಿದ ಸಂದರ್ಶನದ ಪರಿಣಾಮವಾಗಿ ಅವರು ಉರ್ದು ಮಂಡಲಿ ಸದಸ್ಯತ್ವವನ್ನು ಸಹ ಕಳೆದುಕೊಂಡರು. ಭುಟ್ಟೊ ಆಡಳಿತದಲ್ಲಿ ಸ್ವಲ್ಪ ಸಮಾಧಾನದಿಂದ ಇದ್ದ ಜೋಶರಿಗೆ ಈಗ ಮತ್ತೆ ಅನಿಷ್ಟ ಕಾಡತೊಡಗಿದೆ.

ಕಸಮ್ ಉಸ ಜೋಶಕೀ
ಜೋ ಡೂಬತಿ ನಬ್ಜ ಉಭಾರೇಗಾ ।
ಕೀ ಯೆ ಹಿಂದೋಸ್ತಾನ! ಜೈಸೆ ಹೀ ತೂ
ಮುಝೆ ಪುಕಾರೇಗಾ ।।

ವೇರಿ ತೇರೆ ಖಾ ಬಾತಿಲಕೆ
ಸರಪರ್ ಜಗಮಗಾಯೇಗಿ ।
ತೇರೆ ಹೋಟೋಂಕೀ ಜುಂಬಿಶ
ಖತ್ಮ ಭೀ ಹೊನೆ ಪಾಯೇಗಿ ।।

"ಎಲೈ ಭಾರತವೇ, ಹೋರಾಟದಲ್ಲಿ ಸಿಕ್ಕು ನನ್ನ ಶರೀರದಲ್ಲಿಯ ನರನಾಡಿಗಳು ನಿಶ್ಶಕ್ತವಾಗುತ್ತ ನಡೆದಿರುವಾಗ ನಿನ್ನ ಹೆಸರಿನ ಸ್ಮರಣೆಯಾವ ತಕ್ಷಣ ಆ ನರನಾಡಿಗಳಿಗೆ ಪುನಃ ಚೈತನ್ಯ ಆವೇಶ ಉಂಟಾಗುತ್ತದೆ. ಅದೇ ಚೈತನ್ಯವನ್ನೇ ಸಾಕ್ಷಿಯಾಗಿಟ್ಟುಕೊಂಡು ನಿನ್ನ ಹೆಸರು ನಾಲಿಗೆಯ ಮೇಲೆ ಬರುವಷ್ಟರಲ್ಲೆ ನನ್ನ ಪವಿತ್ರವಾದ ಖಡ್ಗದ ಪ್ರಹಾರ ಅಸತ್ಯದ ಮೇಲಾಗಿರುತ್ತದೆ' ಎಂದು 'ಭಾರತ ಸತ್ವ ಸಂಜಾತವಾದ ಆ ಚೈತನ್ಯದ ಆಣೆಯಿಟ್ಟು ಘೋಷಿಸುತ್ತೇನೆ' ಎಂದು ಸಿಂಹಗರ್ಜನೆ ಗೈದ ಈ ಕ್ರಾಂತಿಕವಿ ಜೀವನದ ಸಂಜೆಯನ್ನು ಅಸತ್ಯ ಅನ್ಯಾಯಗಳ ಮಧ್ಯದಲ್ಲೇ ಅವುಗಳ ವಿರುದ್ಧ ಪ್ರತಿಭಟನೆಯ ಧ್ವನಿಯನ್ನೆತ್ತುತ್ತಲೆ ಕಳೆಯಬೇಕಾಗಿದೆ.


ಇದನ್ನೆಲ್ಲ ನೋಡಿದಾಗ,

"ಸಾರೆ ಜಹಾಂಸೆ ಅಚ್ಛಾ..
ಹಿಂದೋಸ್ತಾನ ಹಮಾರಾ"
ಎಷ್ಟು ಅರ್ಥಪೂರ್ಣ!

✡



ಸಮಷ್ಟೀಪುರ ರೇಲ್ವೆ ನಿಲ್ದಾಣದಲ್ಲಿ ನಡೆದ ಐತಿಹಾಸಿಕ ಘಟನೆಯಿದು. ಡಾ. ರಾಮಮನೋಹರ ಲೋಹಿಯಾ ಬಿಹಾರಿನ ಯಾತ್ರೆಯಲ್ಲಿದ್ದರು. ಗಾಡಿಯ ಬರುವಿಕೆಯನ್ನು ಕಾಯುತ್ತ ಅವರು ಪ್ಲಾಟ್‌ಫಾರ್ಮಿನ ಮೇಲೆ ಶತ-ಪಥ ಹಾಕುತ್ತಿದ್ದರು. ಅದೇ ವೇಳೆಗೆ ಬೇರೊಂದು ಗಾಡಿ ಅಲ್ಲಿ ಬಂತು. ಆರೆಮ್ಮೆಸ್ ಡಬ್ಬಿಯಿಂದ ಒಂದು ಟಪಾಲು ಚೀಲ ಹೊರ ದೂಡಲ್ಪಟ್ಟಿತು. ಒಳಗಿನ ಪತ್ರಗಳೆಲ್ಲ ಹೊರಬಿದ್ದು ಚಟ್ಟವು. ಕೂಡಲೇ ಲೋಹಿಯಾ ಅವರು ಅತ್ತ ಓಡಿ ಪತ್ರಗಳನ್ನೆಲ್ಲ ಚೀಲಕ್ಕೆ ತುಂಬತೊಡಗಿದರು ಅಲ್ಲಿ ಬಂದು ಅವರನ್ನು ನೋಡಿದ ಅಂಚೆ ಜನಕ್ಕೆ, "ಇದರಲ್ಲಿ ಎಷ್ಟು ಜನರ ಸುಖ-ದುಃಖವಡಗಿದೆಯೋ, ಎಷ್ಟು ಜನರ ಹೊಟ್ಟೆಯ ಪ್ರಶ್ನೆ ಬಗೆಹರಿದ ಸುದ್ದಿಯಿದೆಯೋ... ಹೀಗೆ ಮಾಡದೇ ಸಂಭಾಳಿಸಿಕೊಂಡೊಯ್ಯಿರಪ್ಪಾ" ಎಂದರು ಲೋಹಿಯಾ ವಿನಂತಿಸುವ ದನಿಯಲ್ಲಿ.



ಆಲ್ಬರ್ಟ್ ಕಾಮೂ

ಅನು : ಕೆ.ವಿ.ಗೋಪಾಲ್

ತನ್ನೆಡೆಗೆ ಏರಿ ಬರುತ್ತಿದ್ದ ಇಬ್ಬರನ್ನು ಸ್ಕೂಲ್ ಮಾಸ್ತರನು ಗಮನಿಸುತ್ತಿದ್ದ. ಒಬ್ಬ ಕುದುರೆಯ ಮೇಲಿದ್ದ, ಮತ್ತೊಬ್ಬ ನಡೆಯುತ್ತಿದ್ದ. ಗುಡ್ಡದ ಮೇಲಿದ್ದ ಸ್ಕೂಲಿನ ಕಡೆಗೆ ಸಾಗುತ್ತಿದ್ದ ದಾರಿಯಲ್ಲಿದ್ದ ಕಡಿದಾದ ದಿಣ್ಣೆಯೊಂದನ್ನು ಅವರು ಇನ್ನೂ ಎದುರಿಸಿರಲಿಲ್ಲ. ಎತ್ತರದಲ್ಲಿದ್ದ ವಿಶಾಲ ಪಾಳು ಪ್ರಸ್ಥಭೂಮಿಯಲ್ಲಿ ಹಿಮ ಮತ್ತು ಬಂಡೆಗಳ ನಡುವೆ ಅವರು ಪ್ರಯಾಸದಿಂದ ನಡೆಯುತ್ತಿದ್ದರು. ಆಗಾಗ ಕುದುರೆಯು ಮುಗ್ಗರಿಸುತ್ತಿತ್ತು. ಬೇರೆಸಲ್ಲದಿದ್ದರೂ ಕುದುರೆಯ ಮೂಗಿನಿಂದ ಹೊರಬರುತ್ತಿದ್ದ ಉಸಿರು ಅವನಿಗೆ ಕೇಳಿಸುತ್ತಿತ್ತು. ಇಬ್ಬರಲ್ಲಿ ಒಬ್ಬನಿಗಂತೂ ಆ ಪ್ರದೇಶ ಗೊತ್ತಿದ್ದ ಹಾಗಿತ್ತು. ಅವರು ನಡೆದುಬರುತ್ತಿದ್ದ ಕಾಲುದಾರಿಯು ಬಹಳ ದಿನಗಳ ಹಿಂದೆಯೇ ಕೊಳಕು ಹಿಮದಡಿಯಲ್ಲಿ ಕಾಣಸಾಗಿತ್ತು. ಅವರು ದಿಣ್ಣೆಯ ಮೇಲೆ ಬರಲು ಇನ್ನೂ ಅರ್ಧ ಗಂಟೆ ಬೇಕಾಗುವುದೆಂದು ಸ್ಕೂಲ್ ಮಾಸ್ತರನು ಎಣಿಸಿ ಚಳಿಯಾದ್ದರಿಂದ ಸ್ವೆಟರನ್ನು ಹಾಕಿಕೊಳ್ಳಲು ಮತ್ತೆ ಸ್ಕೂಲಿನೊಳಕ್ಕೆ ಹೋದ.

ಅವನು ಕೊರೆಯುತ್ತಿದ್ದ ಖಾಲಿ ಕ್ಲಾಸ್ ರೂಮನ್ನು ದಾಟಿದ. ಕಪ್ಪು ಹಲಗೆಯ ಮೇಲೆ ಬೇರೆ ಬೇರೆ ಬಣ್ಣಗಳಲ್ಲಿ ಬರೆದಿದ್ದ ಫ್ರಾನ್ಸಿನ ನಾಲ್ಕು ನದಿಗಳು, ಮುಖ್ಯ ನದಿಯ ಅಳಿವೆಯ ಕಡೆಗೆ ಕಳೆದ ಮೂರು ದಿನಗಳಿಂದ ಹರಿಯುತ್ತಿದ್ದುವು. ಎಂಟು ತಿಂಗಳ ಅನಾವೃಷ್ಟಿಯ ನಂತರ ಮಳೆಯು ಸುಕ್ರಮಣವಿಲ್ಲದೆ ಅಕ್ಟೋಬರ್ ಮಧ್ಯದಲ್ಲಿ ಇದ್ದಕ್ಕಿದ್ದ ಹಾಗೆ ಹಿಮ ಬಿದ್ದಿದ್ದರಿಂದ ಪ್ರಸ್ಥಭೂಮಿಯ ಸುತ್ತ ಮುತ್ತಲಿನ ಹಳ್ಳಿಗಳಿಂದ ಬರುತ್ತಿದ್ದ ಸುಮಾರು ಇಪ್ಪತ್ತು ವಿದ್ಯಾರ್ಥಿಗಳು ಈಗ ಬರುವುದನ್ನು ಹೆಚ್ಚು ಕಡಿಮೆ ನಿಲ್ಲಿಸಿದ್ದರು. ಹವಾಮಾನ ಉತ್ತಮಗೊಂಡ . ನಂತರ ಅವರು ಮತ್ತೆ ಬರಬಹುದು. ಪ್ರಸ್ಥಭೂಮಿಯ ಪೂರ್ವದ ಕಡೆಗೆ ಕ್ಲಾಸ್ ರೂಮಿಗೆ ಸೇರಿದಂತಿದ್ದ ತನ್ನ ಕೊಠಡಿಯನ್ನು ದಾರು ಬೆಚ್ಚಗೆ ಮಾಡಿದ. ಕ್ಲಾಸ್ ರೂಮಿನಂತೆಯೇ ಅವನ ರೂಮಿನ ಕಿಟಕಿಗಳೂ ದಕ್ಷಿಣ ದಿಕ್ಕನ್ನು ದಿಟ್ಟಿಸುತ್ತಿದ್ದವು. ಆ ಕಡೆ, ಪ್ರಸ್ಥಭೂಮಿಯು ಇಳಿಕಲಾಗುತ್ತಿದ್ದ ಸ್ಥಳದಿಂದ. ಸ್ಕೂಲು ಕೆಲವು ಕಿಲೋಮೀಟರುಗಳ ದೂರವಿತ್ತು. [illegible] ದಿನದಲ್ಲಿ ಕೆನ್ನೀಲಿ ಪರ್ವತಶ್ರೇಣಿಗಳ ಕಣಿವೆಯು ಮರುಭೂಮಿ ಕಡೆಗೆ ತೆರೆದುಕೊಳ್ಳುವುದನ್ನು ಕಾಣಬಹುದಿತ್ತು.

ಸ್ವಲ್ಪ ಬೆಚ್ಚಗಾದ ನಂತರ, ತಾನು ಈ ಮೊದಲು ಇಬ್ಬರನ್ನು ಕಂಡ ಕಿಟಕಿಯ ಬಳಿಗೆ ದಾರು ಮತ್ತೆ ಬಂದ. ಈಗ ಅವರು ಕಾಣುತ್ತಿರಲಿಲ್ಲ. ಅಂದರೆ ಅವರು ದಿಣ್ಣೆಯನ್ನು ಏರುತ್ತಿರಬಹುದು. ರಾತ್ರಿ ಹಿಮಪಾತ ನಿಂತಿದ್ದರಿಂದ . ಆಕಾಶ ಅಷ್ಟೇನೂ ಕಪ್ಪಾಗಿರಲಿಲ್ಲ. ಮುಂಜಾನೆಯು ಮಂದ ಬೆಳಕಿನೊಡನೆ ತೆರೆದುಕೊಂಡಿದ್ದು, ಸಮಯ ಕಳೆದಂತೆ ಮೋಡಗಳು ಚೆದುರಿದ್ದರೂ ಬೆಳಕಿನ್ನೂ ಪ್ರಖರವಾಗಿರಲಿಲ್ಲ. ಮಧ್ಯಾಹ್ನ ಎರಡು ಗಂಟೆಯಾದರೂ ದಿನ ಆಗ ತಾನೆ ಆರಂಭವಾಗಿತ್ತು. ಆದರೂ, ಕಳೆದ ಮೂರು ದಿನಗಳಿಗೆ ಹೋಲಿಸಿದರೆ ಈ ದಿನ ಉತ್ತಮವಾಗಿತ್ತು. ಆಗ, ನಿರಾತಂಕ ಅಂಧಕಾರದಲ್ಲಿ ಹಿಮವು ದಟ್ಟವಾಗಿ ಬಿದ್ದು, ಕ್ಲಾಸ್ ರೂಮಿನ ಜೋಡಿ ಬಾಗಿಲುಗಳು ರಭಸವಾದ ಗಾಳಿಯ ಹೊಡೆತಕ್ಕೆ ರಪರಪನೆ ಬಡಿದುಕೊಂಡಿದ್ದವು. ಕೋಳಿ ಮರಿಗಳಿಗೆ ಆಹಾರವನ್ನು ಹಾಕಲೋ ಅಥವಾ ಇದ್ದಿಲನ್ನು ತರಲೋ ಶೆಡ್ಡಿಗೆ ಹೋದುದನ್ನು , ಬಿಟ್ಟರೆ, ದೀರ್ಘ ತಾಸುಗಳನ್ನು ದಾರು ತನ್ನ ರೂಮಿನಲ್ಲೇ ಕಳೆದಿದ್ದ. ಅದೃಷ್ಟವಶಾತ್ ಉತ್ತರಕ್ಕೆ ಹತ್ತಿರದ ಹಳ್ಳಿ 'ಟಾಡ್' ಜಿಪ್'ನಿಂದ ಡೆಲಿವರಿ ಟ್ರಕ್ಕು ಬಂದು ಅವನ ಅವಶ್ಯಕತೆಗಳನ್ನು ಪೂರೈಸಿತ್ತು. ನಲವತ್ತೆಂಟು ಗಂಟೆಯ ನಂತರ ಅದು ಮತ್ತೆ ಬರುವುದಿತ್ತು.

ಅದೂ ಅಲ್ಲದೆ ಒಂದು ದಾಳಿಯನ್ನು ಎದುರಿಸುವಷ್ಟು ದಾಸ್ತಾನು ಅವನ ಬಳಿಯಲ್ಲಿತ್ತು. ಅನಾವೃಷ್ಟಿಗೆ ತುತ್ತಾದ ಬಡ ಕುಟುಂಬಗಳ ವಿದ್ಯಾರ್ಥಿಗಳಿಗೆ ಹಂಚಲು ಸರ್ಕಾರ ಒದಗಿಸಿದ್ದ ಗೋದಿ ಚೀಲಗಳ ರಾಶಿಯು ಅವನ ಚಿಕ್ಕ ರೂಮಿನ ತುಂಬಾ ಇತ್ತು. ಪ್ರತಿದಿನ ಮಕ್ಕಳಿಗೆ ರೇಶನ್ ಹಂಚುತ್ತಿದ್ದ ದಾರುವಿಗೆ ಈ ಕಷ್ಟದ ದಿನಗಳಲ್ಲಿ ಅದರಿಂದ ಅವರು ವಂಚಿತರಾಗಿದ್ದರೆಂದು ಗೊತ್ತಿತ್ತು. ಮಕ್ಕಳ ಬಂಧುಗಳಾದರೂ ಈ ಮಧ್ಯಾಹ್ನ ಬಂದರೆ ತಾನು ಅವರಿಗೆ ಧಾನ್ಯವನ್ನು ಕೊಡಬಹುದೆಂದು ಅವನಿಗೆ ಅನ್ನಿಸಿತು. ಮುಂದಿನ ಸುಗ್ಗಿಯವರೆಗೆ ದಾಸ್ತಾನನ್ನು ಸರಿದೂಗಿಸಬೇಕಾಗಿತ್ತು ಅಷ್ಟೆ. ಈಗ ಹಡುಗುಗಟ್ಟಲೆ ಗೋದಿಯು ಫ್ರಾನ್ಸಿನಿಂದ ಬರುತ್ತಿದ್ದರಿಂದ ದುರ್ದಿನಗಳು ಕಳೆದಿದ್ದವು. ಆದರೆ ಆ ದಿನಗಳ ದಾರಿದ್ರ್ಯ, ಪ್ರೇತಕಳೆ ಹೊತ್ತು ಬಿಸಿಲಿನಲ್ಲಿ ಅಲೆದಾಡುತ್ತಿದ್ದ ಸೈನಿಕರು, ತಿಂಗಳು–ತಿಂಗಳು ಕಳೆದಂತೆ ಕೆಂಡದಂತೆ ದಹಿಸುತ್ತಿದ್ದ ಪ್ರಸ್ಥಭೂಮಿ, ಸ್ವಲ್ಪ ಸ್ವಲ್ಪವೇ ಸುರುಟಿಕೊಂಡು ಅಕ್ಷರಶಃ ಸೀದ ನೆಲ, ಕಾಲಡಿಯಲ್ಲಿ ಸಿಡಿದು ಪುಡಿಯಾಗುತ್ತಿದ್ದ ಕಲ್ಲುಗಳು. ಇವೆಲ್ಲವನ್ನೂ ಮರೆಯುವುದು ಕಷ್ಟವಾಗುತ್ತದೆ. ಸಾವಿರಗಟ್ಟಲೆ ಕುರಿಗಳು ಸತ್ತಿದ್ದವು ಹಾಗೂ ಅಲ್ಲಲ್ಲೆ ಮನುಷ್ಯರು ಯಾರ ಗಮನಕ್ಕೂ ಬಾರದೆ ಸತ್ತಿದ್ದರು.

ಆ ದಾರಿದ್ರ್ಯಕ್ಕೆ ವೈದೃಶವಾಗಿ ದೂರದ ಸ್ಕೂಲ್ ಮನೆಯೊಂದರಲ್ಲಿ ಬಹು ಮಟ್ಟಿಗೆ ಸಂನ್ಯಾಸಿಯಂತೆಯೇ ವಾಸಿಸುತ್ತಿದ್ದ ಅವನು ಒರಟು ಜೀವನದಲ್ಲೂ ಇದ್ದುದರಲ್ಲಿಯೇ ತೃಪ್ತನಾಗಿದ್ದ. ಸುಣ್ಣ ಬಳಿದಿದ್ದ ಗೋಡೆಗಳು, ಕಿರಿದಾದ ಹಾಸಿಗೆ, ಬಣ್ಣ ಬಳಿಯದ ಅಲಮಾರು, ಬಾವಿ, ವಾರದ ಅನ್ನ–ನೀರಿನ ಸರಬರಾಜು–ಇವುಗಳ ನಡುವೆ ದಾರುವಿಗೆ ತಾನು ಒಬ್ಬ ರಾಜನಂತೆ ಅನ್ನಿಸಿತ್ತು. ಈಗ, ಯಾವ ಮುನ್ಸೂಚನೆಯೂ ಇಲ್ಲದೆ, ಮಳೆಯ ಸವಿಯಿಲ್ಲದೆ ಅನಿರೀಕ್ಷಿತವಾಗಿ ಹಿಮ; ಈ ಪ್ರದೇಶವೇ ಹೀಗೆ; ಬದುಕಲು ಕ್ರೂರ, ಮನುಷ್ಯರ ಸುಳಿವಿಲ್ಲ; ಇದ್ದರೂ ಅದರಿಂದ ಹೆಚ್ಚು ವ್ಯತ್ಯಾಸವಿಲ್ಲ. ಆದರೆ ದಾರು ಹುಟ್ಟಿದ್ದೇ ಇಲ್ಲಿ. ಬೇರೆ ಎಲ್ಲಾ ಕಡೆಯೂ ಅವನಿಗೆ ಪರಕೀಯ ಭಾವನೆಯುಂಟಾಗುತ್ತಿತ್ತು.

ಅವನು ಸ್ಕೂಲಿನ ಮುಂದಿದ್ದ ಸಮತಲ ಜಾಗಕ್ಕೆ ಬಂದ. ಆ ಇಬ್ಬರು ಈಗ ಇಳುಕಿನ ಅರ್ಧದಾರಿಯಲ್ಲಿದ್ದರು. ಕುದುರೆ ಸವಾರಿ ಮಾಡುತ್ತಿದ್ದವನು ತನಗೆ ಬಹಳ ಕಾಲದಿಂದ ಪರಿಚಯವಿದ್ದ ಪೋಲೀಸು ಸೈನಿಕ ಬಾಲ್ಡೂಕ್ಕಿಯೆಂದು ದಾರು ಗುರುತಿಸಿದ. ಬಾಲ್ಡೂಕ್ಕಿ ಒಂದು ಕೈಯಲ್ಲಿ ಹಿಡಿದಿದ್ದ ಹಗ್ಗದ ಮತ್ತೊಂದು ತುದಿಯಿಂದ ಎರಡು ಕೈಗಳನ್ನೂ ಕಟ್ಟಿದ್ದ ಒಬ್ಬ ಅರಬ್ಬನು ತಲೆ ತಗ್ಗಿಸಿ ಅವನ ಹಿಂದೆ ನಡೆದು ಬರುತ್ತಿದ್ದ. ದಾರುವಿನತ್ತ ಸ್ನೇಹ ಭಾವದಿಂದ ಪೋಲೀಸು ಸೈನಿಕ ಕೈಯಾಡಿಸಿದ. ಮಾಸಿದ ನಿಲುವಂಗಿಯನ್ನು ತೊಟ್ಟಿದ್ದ ಆ ಅರಬ್ಬನ ಆಲೋಚನೆಯಲ್ಲೇ ಮುಳುಗಿದ್ದ ದಾರು ಅದಕ್ಕೆ ಉತ್ತರಿಸಲಿಲ್ಲ. ಮೆಟ್ಟಿನಲ್ಲಿದ್ದ ಅವನ ಕಾಲುಗಳನ್ನು ಭಾರವಾದ ಕಚ್ಚಾ ಉಣ್ಣೆಯ ಕಾಲು ಚೀಲಗಳು ಮುಚ್ಚಿದ್ದವು. ತಲೆಯ ಮೇಲೆ ಕಿರಿದಾದ ಮುಂಡಾಸಿತ್ತು. ಅವರು ಹತ್ತಿರ ಬರುತ್ತಿದ್ದರು. ಅರಬ್ಬನಿಗೆ ಪೆಟ್ಟಾಗದಿರಲೆಂದು ಬಾಲ್ಡೂಕ್ಕಿ ಕುದುರೆಯನ್ನು ನಿಧಾನವಾಗಿ ನಡೆಸುತ್ತಿದ್ದ.

ಕೂಗಳತೆಯಲ್ಲಿದ್ದಾಗ ಬಾಲ್ಡೂಕ್ಕಿ ಕೂಗಿದ: "ಎಲ್ ಅಮೂರ್‌ನಿಂದ ಮೂರು ಕಿಲೋಮೀಟರ್‌ಗೆ ಒಂದು ಗಂಟೆ ಹಿಡಿಯಿತು!" ದಾರು ಉತ್ತರಿಸಲಿಲ್ಲ. ಕುಳ್ಳಗೆ ಹಾಗೂ ದಪ್ಪ ಸ್ವೆಟರ್‌ನಲ್ಲಿ ದೃಢಕಾಯನಾಗಿ ಕಾಣುತ್ತಿದ್ದ ಅವನು ಅವರಿಬ್ಬರೂ ಹತ್ತಿ ಬರುವುದನ್ನೇ ನೋಡುತ್ತಿದ್ದ. ಇದುವರೆಗೆ ಒಮ್ಮೆಯೂ ಅರಬ್ಬನು ತಲೆಯೆತ್ತಿರಲಿಲ್ಲ. ಅವರು ದಿಬ್ಬದ ಮೇಲೆ ಬಂದಾಗ ದಾರು ಅವರನ್ನು ಸ್ವಾಗತಿಸಿ, "ಒಳಗೆ ಬಂದು ಮೈ ಕಾಯಿಸಿಕೊಳ್ಳಿ" ಎಂದ. ಕೈಯಲ್ಲಿದ್ದ ಹಗ್ಗವನ್ನು ಬಿಡದೆ ಬಾಲ್ಡೂಕ್ಕಿ ಪ್ರಯಾಸದಿಂದ ಕುದುರೆಯಿಂದಿಳಿದು ಒತ್ತಾಗಿ ಬೆಳೆದಿದ್ದ ಮೀಸೆಯಡಿಯಿಂದ ಮುಗುಳ್ನಕ್ಕ. ಕಂದು ಬಣ್ಣದ ಹಣೆಯ ಕೆಳಗೆ ಆಳದಲ್ಲಿ ಹುದುಗಿದ್ದ ಕಿರಿದಾದ ಕಪ್ಪು ಕಣ್ಣುಗಳು ಹಾಗೂ ಸುಕ್ಕುಗಳಿಂದ ಸುತ್ತುವರಿದ ಬಾಯಿ ಇವು

ಅವನು ಜಾಗರೂಕ ಹಾಗೂ ಕ್ರಿಯಾಬದ್ಧ ನೆಂದು ಸಾರುತ್ತಿದ್ದವು. ದಾರು ಕಡಿವಾಣವನ್ನು ಹಿಡಿದು ಕುದುರೆಯನ್ನು ಶೆಡ್ಡಿನಲ್ಲಿ ಬಿಟ್ಟು ಸ್ಕೂಲಿನೊಳಕ್ಕೆ ಅವರಿಬ್ಬರು ಕಾಯುತ್ತಿದ್ದಲ್ಲಿಗೆ ಬಂದ. ಅವರನ್ನು ತನ್ನ ರೂಮಿಗೆ ಕರೆ ದೊಯ್ದು,"ನಾನು ಕ್ಲಾಸ್ ರೂಮನ್ನು ಬೆಚ್ಚಗೆ ಮಾಡ್ತೇನೆ. ನಾವು ಅಲ್ಲಿ ಹೆಚ್ಚು ಆರಾಮ ವಾಗಿರಬಹುದು" ಎಂದ. ಅವನು ಮತ್ತೆ ರೂಮಿಗೆ ಬಂದಾಗ ಬಾಲ್ಡೂಕ್ಕಿ ಹಾಸಿಗೆಯ ಮೇಲಿದ್ದ. ಒಲೆಯ ಮುಂದೆ ಕುಳಿತು ಕಿಟಕಿಯ ಕಡೆಗೆ ನೋಡುತ್ತಿದ್ದ ಅರಬ್ಬನ ಕೈಗಳನ್ನು ಇನ್ನೂ ಬಿಚ್ಚಿರಲಿಲ್ಲ. ನೀಗ್ರೋವಿನ ತುಟಿಯ ಹಾಗೆ ಕಾಣುತ್ತಿದ್ದ ಅವನ ದಪ್ಪ ಹಾಗೂ ಮೃದುವಾದ ತುಟಿಗಳನ್ನು ದಾರು ಮೊದಲು ಗಮನಿಸಿದ. ಆದರೂ ಅವನ ಮೂಗು ನೇರವಾಗಿತ್ತು. ಅವನ ಕಣ್ಣುಗಳು ಉದ್ರಿಕ್ತ ವಾಗಿದ್ದವು. ಮುಂಡಾಸು ಸ್ವಲ್ಪ ಹಿಂದೆ ಸರಿದು ಅವನ ಹಟವಾದಿತನದ ಹಣೆಯನ್ನು ತೆರೆದು ತೋರಿಸುತ್ತಿತ್ತು. ಒಡೆದುಕೊಂಡಿದ್ದ ಅವನ ಚರ್ಮ ಚಳಿಗೆ ಮತ್ತಷ್ಟು ಬಣ್ಣಗೆಟ್ಟಿತ್ತು. ಅವನು ತನ್ನ ಮುಖ ತಿರುಗಿಸಿ ದಾರುವಿನ ಕಣ್ಣೊಳಗೆ ನೇರವಾಗಿ ನೋಡಿದಾಗ ಅವನನ್ನು ಕುಕ್ಕಿದ್ದು ಅರಬ್ಬನ ಅಸ್ತಿವಿತ ಹಾಗೂ ಬಂಡಾಯ ಭಾವ ಹೊತ್ತ ಮುಖ. ಸ್ಕೂಲ್ ಮಾಸ್ತರನು "ಆ ಇನ್ನೊಂದು ರೂಮಿಗೆ ಹೋಗಿ ನಾ ನಿಮಗೆ ಟೀ ಮಾಡಿ ತರ್ತೇನೆ"ಎಂದ. ಅವನಿಗೆ ಮಡನೆ ಹೇಳಿ ಬಾಲ್ಡೂಕ್ಕಿ, "ಎಂತಹ ಅನಿಷ್ಟ ಕೆಲಸ! ನಿವೃತ್ತನಾಗೋಕೆ ನಾನು ಎಷ್ಟು ಹಂಬಲಿಸ್ತೀನಿ" ಎಂದು ಗೊಣಗಿ ಕೊಂಡು ಕೈದಿಯನ್ನು ಅರಬ್ಬಿಯಲ್ಲಿ ಒಳಗೆ ಬರುವಂತೆ ಕರೆದ. ಅರಬ್ಬನು ನಿಧಾನವಾಗಿ ಎದ್ದು, ಕಟ್ಟಿದ್ದ ತನ್ನ ಮಣಿಕಟ್ಟುಗಳನ್ನು ಮುಂದೆ ಹಿಡಿದುಕೊಂಡು ಕ್ಲಾಸ್ ರೂಮಿನ ಕಡೆಗೆ ಹೊರಟ.

ಟೀಯೊಂದಿಗೆ ದಾರು ಒಂದು ಕುರ್ಚಿಯನ್ನು ತಂದ. ಆದರೆ ಬಾಲ್ಡೂಕ್ಕಿ ಆಗಲೇ ಹತ್ತಿರ ದಲ್ಲಿದ್ದ ವಿದ್ಯಾರ್ಥಿಗಳ ಡೆಸ್ಕಿನ ಮೇಲೆ ಆಸೀನನಾಗಿದ್ದ. ಅರಬ್ಬನು ಮಾಸ್ತರನ ವೇದಿಕೆಯ ಎದುರಿಗೆ, ಕಿಟಕಿ ಮತ್ತು ಡೆಸ್ಕಿನ ಮಧ್ಯೆಯಿದ್ದ ಒಲೆಯ ಮುಂದೆ ಕುಳಿತಿದ್ದ. ದಾರು ಗ್ಲಾಸನ್ನು ಕೈದಿಯತ್ತ ನೀಡಿದಾಗ ಇನ್ನೂ ಕಟ್ಟಿದ್ದ ಅವನ ಕೈಗಳನ್ನು ನೋಡಿ ಹಿಂಜರಿದು, "ಅವನ ಕೈಗಳನ್ನು ಬಿಚ್ಚಬಹುದಲ್ಲ" ಎಂದ. "ಖಂಡಿತ, ಅದು ಪ್ರಯಾಣಕ್ಕಾಗಿ ಕಟ್ಟಿದ್ದು," ಎಂದು ಬಾಲ್ಡೂಕ್ಕಿ ಮೇಲೆ ಏಳಲು ಹೊರಟ. ಅಷ್ಟರಲ್ಲಿಯೇ ದಾರು ನೆಲದ ಮೇಲೆ ಗ್ಲಾಸ-ನ್ನಿಟ್ಟು ಅರಬ್ಬನ ಮುಂದೆ ಮಂಡಿಯೂರಿದ್ದ. ಏನೂ ಹೇಳದೆ ಅರಬ್ಬನು ಉರಿಗಣ್ಣಿನಿಂದ ಅವನನ್ನೇ ಗಮನಿಸುತ್ತಿದ್ದ. ಕೈಗಳು ಮುಕ್ತ ವಾದ ನಂತರ ಅವನು ಬಾವೇರಿದ್ದ ಮಣಿ ಕಟ್ಟುಗಳನ್ನು ಉಜ್ಜಿಕೊಂಡ. ಗ್ಲಾಸನ್ನು ಕೈಗೆತ್ತಿ ಕೊಂಡು ಸುಡುತ್ತಿದ್ದ ಟೀಯನ್ನು ಬೇಗ ಬೇಗ ಸಣ್ಣ ಗುಟುಕುಗಳಲ್ಲಿ ಹೀರತೊಡಗಿದ.

"ಸರಿ, ಈಗ ಯಾವ ಕಡೆಗೆ ಹೊರಟಿದ್ದೀರಿ?" ಎಂದು ದಾರು ಕೇಳಿದ. ಬಾಲ್ಡೂಕ್ಕಿ ಟೀಯಿಂದ ತನ್ನ ಮೀಸೆಯನ್ನೆತ್ತಿ ಸಲಿಗೆಯಿಂದ, "ಇಲ್ಲಿಗೇ, ಮರಿ" ಎಂದ.

"ವಿಚಿತ್ರ ವಿದ್ಯಾರ್ಥಿಗಳು! ರಾತ್ರಿ ಇಲ್ಲೇ ಇರ್ತೀರೇನು?"

"ಇಲ್ಲ. ನಾನು ಎಲ್ ಅಮೂರ್‌ಗೆ ಮರಳ್ತೇನೆ. ನೀನು ಇವನ್ನ 'ಟಿನ'ಗೂಟ್' ತಲಪಿಸಬೇಕು. ಪೋಲೀಸರು ಕೇಂದ್ರಸ್ಥಾನದಲ್ಲಿ ಅವನಿಗಾಗಿ ಕಾಯ್ತಿದಾರೆ."

ಬಾಲ್ಡೂಕ್ಕಿ ಸ್ನೇಹದ ಮುಗುಳ್ನಗೆಯಿಂದ ದಾರುವಿನತ್ತ ನೋಡುತ್ತಿದ್ದ.

"ಏನಿದು ಕಥೆ? ನನ್ನ ಕಾಲೆಳೆಯೋಕೆ ನೋಡ್ತೀ-ಯ?" ಎಂದ ದಾರು.

"ಇಲ್ಲ ಮರಿ, ಇದು ಆಜ್ಞೆ."

"ಆಜ್ಞೆ? ಆದರೆ ನಾನು..." ತನ್ನ ಹಿರಿಯ ಮಿತ್ರನನ್ನು ನೋಯಿಸಲು ದಾರು ಹಿಂಜರಿದ. "ಅಂದರೆ ನಾ ಹೇಳೋದು, ಅದು ನನ್ನ ಕೆಲಸ ವಲ್ಲ ಅಂತಷ್ಟೆ."

"ಏನು? ಏನದರರ್ಥ? ಯುದ್ಧಕಾಲದಲ್ಲಿ ಜನ ಎಲ್ಲಾ ತರಹ ಕೆಲಸವನ್ನೂ ಮಾಡ್ತಾರೆ."

"ಹಾಗಾದರೆ ನಾನು ಯುದ್ಧದ ಘೋಷಣೆಗೆ ಕಾಯ್ತೇನೆ."

ಬಾಲ್ದೂಕ್ಕಿ ತಲೆಯಾಡಿಸಿದ.

"ಸರಿ. ನಿನ್ನಿಷ್ಟ. ಆಜ್ಞೆಯಿದೆ. ಅದು ನಿನಗೂ ಅನ್ವಯಿಸುತ್ತೆ. ಪರಿಸ್ಥಿತಿ ಹದಗೆಡ್ತಾ ಇರೋ ಹಾಗೆ ಕಾಣುತ್ತೆ. ಸಮೀಪಿಸುತ್ತಿರೋ ದಂಗೆಯ ಬಗ್ಗೆ ಅಲ್ಲಲ್ಲಿ ಮಾತು ಕೇಳಿ ಬರ್ತಾ ಇದೆ. ಒಂದು ವಿಧದಲ್ಲಿ ನಾವೆಲ್ಲ ಸಜ್ಜಾಗಿದ್ದೇವೆ."

ದಾರುವಿನ ನೋಟದಲ್ಲಿ ಇನ್ನೂ ಹಟವಿತ್ತು.

ಬಾಲ್ದೂಕ್ಕಿ ಹೇಳಿದ: "ಕೇಳು ಮರಿ, ನಿನ್ನ ಕಂಡರೆ ನನಗಿಷ್ಟ. ಆದ್ದರಿಂದ ನೀನು ಅರ್ಥ ಮಾಡ್ಕೋಬೇಕು. ಎಲ್ ಅಮೂರ್‌ನ ಒಂದು ಸಣ್ಣ ಶಾಖೆಯ ಇಡೀ ಪ್ರಾಂತವನ್ನು ಕಾಯಲು ನಾವು ಬರೀ ಹನ್ನೆರಡು ಮಂದಿಯಿದ್ದೇವೆ. ಮತ್ತೆ, ನಾನು ಬೇಗ ವಾಪಸ್ಸು ಹೋಗಬೇಕು. ಇವನ್ನ ನಿಂಗೆ ಒಪ್ಪಿಸಿ ತಡಮಾಡದೆ ಬರೋಕೆ ಹೇಳಿದಾರೆ, ಇವನನ್ನ ಅಲ್ಲಿರಿಸಿಕೊಳ್ಳೋಕ್ಕೆ ಸಾಧ್ಯವಾಗ್ಲಿಲ್ಲ. ಇವನ ಹಳ್ಳಿ ದಂಗೆ ಏಳೋಕೆ ಶುರುಮಾಡಿತ್ತು. ನಮ್ಮಿಂದ ಇವನ್ನ ಕಸಿದುಕೊಂಡು ಹೋಗೋಕೆ ಅವರು ಪ್ರಯತ್ನ ಮಾಡಿದ್ರು, ನೀನು ಇವನ್ನ ನಾಳೆ ಸಂಜೆಗೆ ಮುಂಚೆ ಟಿನ್‌ಗೂಟ್‌ಗೆ ಕರ್ಕೊಂಡು ಹೋಗ್ಬೇಕು. ಇಪ್ಪತ್ತು ಕಿಲೋಮೀಟರ್ ದೂರ ನಿನ್ನಂತಹ ಕಟ್ಟಾಳನ್ನು ಹೆಚ್ಚು ಬಾಧಿಸ ಲಾರದು, ಆ ಮೇಲೆ ಎಲ್ಲಾ ಮುಗಿಯುತ್ತೆ. ನೀನು ನಿನ್ನ ವಿದ್ಯಾರ್ಥಿಗಳ ಬಳಿಗೆ, ಆರಾಮ ಜೀವನಕ್ಕೆ ಮರಳ್ತೀಯ."

ಗೋಡೆಯ ಹಿಂದೆ ಕುದುರೆಯು ಘೂಕರಿಸಿ ಗೊರಸಿನಿಂದ ನೆಲವನ್ನು ಕೆರೆಯುವುದು ಕೇಳು ತ್ತಿತ್ತು. ದಾರು ಕಿಟಕಿಯ ಹೊರಗೆ ನೋಡು ತ್ತಿದ್ದ, ಖಂಡಿತವಾಗಿ ಈಗ ಹವೆಯು ನಿರ್ಮಲ ವಾಗುತ್ತಾ, ಹಿಮಾವೃತ ಪ್ರಸ್ಥಭೂಮಿಯ ಮೇಲೆ ಬೆಳಕು ಹೆಚ್ಚುತ್ತಿತ್ತು. ಹಿಮವೆಲ್ಲ ಕರಗಿದ ಮೇಲೆ ಸೂರ್ಯನು ಮತ್ತೆ ವಿಜೃಂಭಿಸಿ ನೆಲವನ್ನು, ಕಲ್ಲುಗಳನ್ನು ಸುಡುತ್ತಾನೆ. ಇನ್ನೂ ಸ್ವಲ್ಪ ದಿನ ಬದಲಾಗದ ಆಕಾಶವು ಮನುಷ್ಯ ನೊಡನೆ ಯಾವ ಸಂಬಂಧವನ್ನೂ ಇಟ್ಟು ಕೊಳ್ಳದ ಈ ಏಕಾಂತ ವಿಶಾಲ ಪ್ರದೇಶವಲ್ಲಿ ತನ್ನ ನೀರಸ ಬೆಳಕನ್ನು ಚೆಲ್ಲುತ್ತದೆ.

ಬಾಲ್ದೂಕ್ಕಿಯತ್ತ ತಿರುಗಿ ಅವನು ಕೇಳಿದ, "ಅವನು ಮಾಡಿದ್ದಾದ್ರೂ ಏನು?"

ಪೋಲೀಸು ಸೈನಿಕ ಉತ್ತರಿಸುವ ಮುಂಚೆಯೇ ಅವನನ್ನು ಮತ್ತೆ ಕೇಳಿದ, "ಅವನಿಗೆ ಫ್ರೆಂಚ್ ಬರುತ್ತಾ?"

"ಇಲ್ಲ. ಒಂದಕ್ಷರವೂ ಬರೋಲ್ಲ, ಒಂದು ತಿಂಗಳಿನಿಂದ ಅವನಿಗಾಗಿ ಹುಡುಕ್ತಾ ಇದ್ದೆವು. ಆದ್ರೆ ಅವರು ಅವನ್ನ ಬಚ್ಚಿಟ್ಟಿದ್ರು. ಅವನು ತನ್ನ ದಾಯಾದೀನ ಕೊಂದು ಹಾಕಿದ."

"ಅವನು ನಮ್ಮ ವಿರೋಧಿಯೇನು?"

"ನಂಗೇನೂ ಹಾಗೆ ಅನ್ನಿಸೋದಿಲ್ಲ. ಆದ್ರೂ ಯಾವುದನ್ನೂ ಖಂಡಿತವಾಗಿ ಹೇಳೋಕ್ಕಾ ಗೋಲ್ಲ."

"ಯಾಕಂತೆ ಕೊಂದದ್ದು ?"

"ಮನೆಜಗಳ ಅಂತ ಕಾಣುತ್ತೆ. ಒಬ್ಬ ಇನ್ನೊ ಬ್ಬನ ಧಾನ್ಯದ ಹಗಿನಲ್ಲಿದ್ದ ಅಂತ ತೋರುತ್ತೆ. ಯಾವುದೂ ಸ್ಪಷ್ಟವಿಲ್ಲ. ಒಟ್ಟಿನಲ್ಲಿ ತನ್ನ ದಾಯಾದೀನ ಕುರಿ ಕೊಲ್ಲೋ ಹಾಗೆ ಕುಡು ಗೋಲಿನಿಂದ ಕಚಕ್ಕಂತ ಕಡಿದು ಹಾಕಿದ."

ಬಾಲ್ದೂಕ್ಕಿ ತನ್ನ ಮುಂಗೊರಳಿಗೆ ಅಡ್ಡವಾಗಿ ಅಲಗನ್ನು ಎಳೆಯುವ ಹಾಗೆ ಅಭಿನಯ ಮಾಡಿದಾಗ ಅದು ಅರಬ್ಬನ ಲಕ್ಷ್ಯವನ್ನು ಸೆಳೆದು ಅವನು ಒಂದು ಬಗೆಯ ಆತಂಕದಿಂದ ಬಾಲ್ದೂಕ್ಕಿಯನ್ನು ನೋಡಿದ. ತಟ್ಟನೆ ದಾರು-ವಿಗೆ ಆ ಮನುಷ್ಯನ ವಿರುದ್ಧ, ಎಲ್ಲಾ ಮನು ಷ್ಯರ ವಿರುದ್ಧ, ಅವರ ಹುಳತು ಹೋದ ವೈರ, ಎಂದೂ ಬಳಲದ ದ್ವೇಷ ಹಾಗೂ ರಕ್ತದಾಹದ ವಿರುದ್ಧ ಕೋಪ ಉಕ್ಕಿ ಬಂತು.

ಆದರೆ ಒಲೆಯ ಮೇಲಿದ್ದ ಕೆಟಲ್ ಕೂಗು ತ್ತಿತ್ತು. ಅವನು ಬಾಲ್ದೂಕ್ಕಿಯ ಗ್ಲಾಸಿಗೆ ಮತ್ತಷ್ಟು ಟೀ ಹಾಕಿ, ಸ್ವಲ್ಪ ಹಿಂಜರಿದು ಅರಬ್ಬನ ಗ್ಲಾಸಿಗೂ ಹಾಕಿದ. ಎರಡನೇ ಬಾರಿ ಅರಬ್ಬನು ಆಸೆಯಿಂದ ಕುಡಿದ. ಕೈಯೆತ್ತಿದ್ದ ರಿಂದ ನಿಲುವಂಗಿ ತೆರೆದುಕೊಂಡು ಅವನ ಮಾಂಸಲ ಎದೆಯನ್ನು ಪ್ರದರ್ಶಿಸಿತು.

"ಥ್ಯಾಂಕ್ಸ್ ಮರಿ, ನಾನೀಗ ಹೊರಡ್ತೇನೆ" ಎಂದು ಬಾಲ್ದೂಕ್ಕಿ ಎದ್ದು ಜೇಬಿನಿಂದ ಚಿಕ್ಕ ಹಗ್ಗವೊಂದನ್ನು ತೆಗೆದು ಅರಬ್ಬನತ್ತ ನಡೆದ.

"ಏನ್ ಮಾಡ್ತೀದೀಯ?" ದಾರು ಶುಷ್ಕ ವಾಗಿ ಕೇಳಿದ.

ಬಾಲ್ಡೊಕ್ಕಿ ತಪ್ಪಿಬ್ಬಾಗಿ ಹಗ್ಗವನ್ನು ತೋರಿಸಿದ.

"ಬೇಡ ಸೋದರ."

ಪೋಲೀಸು ಸೈನಿಕ ಒಂಜರಿದ, "ಅದು ನಿನಗೆ ಬಿಟ್ಟಿದ್ದು. ನಿನ್ನ ಬಳಿ ಆಯುಧವಿದೆ ತಾನೆ?"

"ಒಂದು ಶಾಟ್‌ಗನ್ನಿದೆ."

"ಎಲ್ಲಿ?"

"ಪೆಟ್ಟಿಗೆಯಲ್ಲಿ."

"ಅದು ನಿನ್ನ ಹಾಸಿಗೆ ಬಳಿಯಿದ್ರೆ ಒಳ್ಳೇದು."

"ಯಾಕೆ? ನಾನು ಹೆದ್ರೋವ್ನಲ್ಲ."

"ನಿಂಗೆಲ್ಲೋ ಹುಚ್ಚು. ಎಲ್ಲಾದ್ರೂ ಬಂಡಾಯ ಎದ್ದರೆ ಯಾರೂ ಸುರಕ್ಷಿತರಲ್ಲ. ನಾವೆಲ್ಲ ಒಂದೇ ದೋಣೀಲಿದೀವಿ."

"ನನ್ನನ್ನ ನಾನು ರಕ್ಷಿಸಿಕೊಳ್ಳಬಲ್ಲೆ. ಅವರು ಬರೋದನ್ನ ನೋಡೋಕೆ ಹೇಳಿಯಿರುತ್ತೆ." ಬಾಲ್ಡೊಕ್ಕಿ ನಗಲಾರಂಭಿಸಿದ. ಆಗ ತಕ್ಷಣ ಮೀಸೆಯು ಅವನ ಬಿಳಿಯ ಹಲ್ಲುಗಳನ್ನು ಮುಚ್ಚಿತು.



"ಇದು ಅಧಿಕಾರಲಾಲಸೆ ಅಲ್ಲಾರೀ, ಬೇರೆಯವರು ಆಕ್ರಮಿಸದಂತೆ, ರಕ್ಷಣೆ ಮಾಡುತ್ತಿದ್ದೇನೆ

"ನಿಂಗೆ ಹೇಳಿಯಿತ್ತಾ? ಸರಿ. ನಾನೂ ಅದನ್ನೇ ಹೇಳ್ತಾ ಇದ್ದೆ. ನಿಂದು ಯಾವಾಗಲೂ ಸ್ವಲ್ಪ ತಮಾಷೆ. ಅದಕ್ಕೆ ನಾನು ನಿನ್ನ ಇಷ್ಟ ಪಡೋದು. ನನ್ನ ಮಗನೂ ಹಾಗೇ ಇದ್ದ."

ಮಾತನಾಡುತ್ತಾ ತನ್ನ ಪಿಸ್ತೂಲನ್ನು ತೆಗೆದು ಡೆಸ್ಕಿನ ಮೇಲಿಟ್ಟ, "ಇದನ್ನೂ ಇಟ್ಕೊ. ಇಲ್ಲಿಂದ ಎಲ್ ಅಮೂರ್‌ಗೆ ಹೋಗೋಕೆ ನಂಗೆ ಎರಡು ಆಯುಧ ಬೇಕಿಲ್ಲ."

ಪಿಸ್ತೂಲು ಡೆಸ್ಕಿನ ಕಪ್ಪು ಬಣ್ಣದ ಹಿನ್ನೆಲೆಯಲ್ಲಿ ಫಳಫಳನೆ ಹೊಳೆಯಿತು. ಪೋಲೀಸು ಸೈನಿಕ ಅವನ ಕಡೆ ತಿರುಗಿದಾಗ ಸ್ಕೂಲ್ ಮಾಸ್ತರನಿಗೆ ತೊಗಲು ಹಾಗೂ ಕುದುರೆ ಮಾಂಸದ ವಾಸನೆ ಮೂಗಿಗೆ ಬಡಿಯಿತು.

"ಕೇಳು. ಬಾಲ್ಡೊಕ್ಕಿ," ದಾರು ತಕ್ಷಣ ನುಡಿದ, "ಇದೆಲ್ಲಾ ನನಗೆ ಜಿಗುಪ್ಸೆಯುಂಟು ಮಾಡ್ತಿದೆ. ಎಲ್ಲಕ್ಕಿಂತ ಹೆಚ್ಚಾಗಿ ಇಲ್ಲಿರೋ ಆ ನಿನ್ನ ಮನುಷ್ಯ. ಅವನ್ನ ಕರೆದುಕೊಂಡು ಹೋಗಿ ನಾನು ಒಪ್ಪಿಸೋಲ್ಲ. ಸಮಯ ಬಂದ್ರೆ ಹೋರಾಡ್ತೇನೆ."

ಪೋಲೀಸು ಸೈನಿಕ ದಾರುವಿನ ಮುಂದೆ ನಿಂತು ಅವನನ್ನ ತೀಕ್ಷ್ಣವಾಗಿ ನೋಡಿ ಅನಂತರ ನಿಧಾನವಾಗಿ ನುಡಿದ. "ನೀನೊಬ್ಬ ಮೂರ್ಖ. ಅದು ನನಗೂ ಇಷ್ಟವಿಲ್ಲ. ವರ್ಷಗಳ ಅಭ್ಯಾಸದ ನಂತರವೂ ಒಬ್ಬನನ್ನ ಹಗ್ಗದಿಂದ ಬಂಧಿಸೋದು ಕಷ್ಟ. ಹಾಗೆ ಮಾಡೋದು ನಾಚಿಗೆಗೇಡು ಹೌದು. ಆದರೆ ಅವರನ್ನ ಅವರಿಷ್ಟಕ್ಕೆ ಬಿಡೋಕ್ಕಾಗೊಲ್ಲ."

"ಅವನನ್ನ ನಾ ಒಪ್ಪಿಸೊಲ್ಲ," ದಾರು ಮತ್ತೆ ನುಡಿದ.

"ಇದು ಆಜ್ಞೆ ಮರಿ, ಅದನ್ನ ಮತ್ತೆ ಹೇಳ್ತೇನೆ."

"ಆದ್ಸರಿ, ನಾ ಹೇಳಿದ್ದನ್ನ ಅವರಿಗೆ ಹೇಳು; ನಾ ಅವನನ್ನ ಒಪ್ಪಿಸೋಲ್ಲ," ಬಾಲ್ಡೊಕ್ಕಿ ಯೋಚನಾಮಗ್ನನಾದ, ಅರಬ್ಬ ಹಾಗೂ ದಾರುವಿನತ್ತ ಒಮ್ಮೆ ದೃಷ್ಟಿ ನೆಟ್ಟು, ಕಡೆಗೆ ನಿರ್ಧಾರ ಮಾಡಿದ.

"ಇಲ್ಲ, ನಾನು ಅವರಿಗೆ ಏನನ್ನೂ ಹೇಳೋಲ್ಲ. ನೀನು ನಮ್ಮ ಕೈ ಬಿಡಬೇಕು ಅಂತಿದ್ರೆ, ಹಾಗೇ

ಮಾಡು. ನಾ ನಿನ್ಮೇಲೆ ದೂರು ಹೇಳೋಲ್ಲ. ಕೈದೀನ ಒಪ್ಪಿಸಿ ಬರೋಕೆ ಆಜ್ಞೆಯಿದೆ ಅದನ್ನ ನಾ ಮಾಡ್ತೀನಿ. ಈ ಪೇಪರಿನಲ್ಲಿ ನಿನ್ನ ಸಹಿ ಮಾತ್ರ ಹಾಕು."

"ಅದರ ಅಗತ್ಯವಿಲ್ಲ. ಅವನ್ನ ನನ್ನ ಹತ್ರ ಬಿಟ್ಟ ಬಗ್ಗೆ ನಾ ಸುಳ್ಳು ಹೇಳೋದಿಲ್ಲ."

"ನನ್ನ ಜೊತೆ ಅಲ್ಪನಂತೆ ಆಡ್ಬೇಡ. ನೀನು ಸತ್ಯ ಹೇಳ್ತೀಯ ಅಂತ ನಂಗೊತ್ತು. ಆದ್ರೆ ನೀನು ಸಹಿ ಹಾಕ್ಬೇಕು. ಅದು ನಿಯಮ."

ದಾರು ಡ್ರಾಯರನ್ನು ತೆರೆದು, 'ಸಾರ್ಜೆಂಟ್ ಮೇಜರ್' ಲೆಕ್ಕಕ್ಕೆ ಅದರ ಕೆಂಪು ಮರದ ಹಿಡಿಕೆಯಿಂದ ತೆಗೆದು, ಕೆನ್ನೀಲಿ ಶಾಯಿಯ ಚಿಕ್ಕ ಬಾಟಲಿನಲ್ಲಿ ಅದ್ದಿ, ಸಹಿ ಮಾಡಿದ. ಪೋಲೀಸು ಸೈನಿಕ ಎಚ್ಚರಿಕೆಯಿಂದ ಕಾಗದವನ್ನು ಮಡಚಿ ಜೇಬಿನಲ್ಲಿ ಹಾಕಿಕೊಂಡು ಬಾಗಿಲಿನತ್ತ ನಡೆದ.

"ತಾಳು, ನಾನೂ ಅಷ್ಟು ದೂರ ಬರ್‍ತೀನಿ" ದಾರು ಹೇಳಿದ.

"ಬೇಡ" ಬಾಲ್ದೂಕ್ಕಿ ನುಡಿದ, "ಈಗ ವಿನಯ ತೋರಿ ಉಪಯೋಗವಿಲ್ಲ. ನೀನು ನನಗೆ ಅವ ಮಾನ ಮಾಡ್ದೆ."

ಅವನು ಅಲುಗಾಡದೆ ಕುಳಿತಿದ್ದ ಅರಬ್ಬನತ್ತ ನೋಡಿ ಸಿಡುಕಿನಿಂದ ಸೊರಗುಟ್ಟಿ ದಾರುವಿಗೆ, "ಸರಿ, ನಾ ಬರ್‍ತೀನಿ ಮರಿ," ಎಂದು ಬಾಗಿಲ ಕಡೆ ತಿರುಗಿದ. ಬಾಗಿಲು ಅವನ ಹಿಂದೆ ಮುಚ್ಚಿ ಕೊಂಡಿತು. ಬಾಲ್ದೂಕ್ಕಿ ತಕ್ಷಣ ಕಿಟಕಿಯ ಹೊರಗೆ ಕಾಣಿಸಿಕೊಂಡು ಅನಂತರ ಅದೃಶ್ಯನಾದ. ಹಿಮದಿಂದಾಗಿ ಅವನ ಹೆಜ್ಜೆಯ ಶಬ್ದ ದನಿ ಗುಂದಿತು. ಗೋಡೆಯ ಇನ್ನೊಂದು ಕಡೆಗೆ ಕುದುರೆಯು ಅಲುಗಾಡಿದಂತಾಗಿ ಕೋಳಿಗಳು ರಪರಪನೆ ರೆಕ್ಕೆ ಬಡಿಯುತ್ತಾ ಭಯದಿಂದ ದಿಕ್ಕು ತೋರದೆ ಓಡಾಡಿದ ಶಬ್ದ ಕೇಳಿಸಿತು. ಮತ್ತೊಂದು ಕ್ಷಣದ ನಂತರ ಕುದುರೆಯ ಕಡಿವಾಣ ಹಿಡಿದುಕೊಂಡು ಬಾಲ್ದೂಕ್ಕಿ ಕಿಟಕಿಯ ಹೊರಗೆ ಕಾಣಿಸಿಕೊಂಡು ತಿರುಗಿ ನೋಡದೆ ಚಿಕ್ಕ ದಿಬ್ಬದತ್ತ ನಡೆದು ತನ್ನ ಹಿಂದೆಯಿದ್ದ ಕುದುರೆಯೊಂದಿಗೆ ದೃಷ್ಟಿಯಿಂದ ಮರೆಯಾದ. ದೊಡ್ಡ ಕಲ್ಲೊಂದು ರಭಸ ದಿಂದ ಕೆಳಗೆ ಬಿದ್ದದ್ದು ಕೇಳಿಸಿತು. ಒಂದಿಷ್ಟೂ ಅಲಗದೆ ತನ್ನನ್ನೇ ನೋಡುತ್ತಿದ್ದ ಖೈದಿಯತ್ತ ದಾರು ನಡೆದ. ಅರಬ್ಬಿಯಲ್ಲಿ ಅವನಿಗೆ "ಕಾದಿರು" ಎಂದು ಮಲಗುವ ಕೋಣೆಗೆ ಹೊರಟ. ಬಾಗಿಲ ಮೂಲಕ ಹಾಯುತ್ತಿದ್ದಾಗ ಮತ್ತೊಂದು ಯೋಚನೆ ಬಂದು ಡೆಸ್ಕಿನತ್ತ ಹೋಗಿ ಪಿಸ್ತೂ ಲನ್ನು ತೆಗೆದು ಜೇಬಿಗೆ ಹಾಕಿಕೊಂಡು ತಿರುಗಿ ನೋಡದೆ ತನ್ನ ರೂಮಿಗೆ ಹೋದ.

ಸ್ವಲ್ಪ ಹೊತ್ತು ಹಾಸಿಗೆಯ ಮೇಲೆ ಮಲಗಿ ನೀರವತೆಯನ್ನು ಆಲಿಸುತ್ತಾ ಆಕಾಶ ಕ್ರಮೇಣ ಮುಚ್ಚಿಕೊಳ್ಳುವುದನ್ನು ನೋಡುತ್ತಿದ್ದ. ಯುದ್ಧದ ನಂತರದ ಮೊದಲ ದಿನಗಳಲ್ಲಿ ಈ ಮೌನವೇ ಅವನಿಗೆ ಯಾತನೆ ಅನ್ನಿಸಿದ್ದು. ಮೇಲಿನ ಪ್ರಸ್ಥ ಭೂಮಿಯನ್ನು ಮರುಭೂಮಿಯಿಂದ ಬೇರ್ಪ ಡಿಸುವ ಗುಡ್ಡಗಳ ತಳದಲ್ಲಿದ್ದ ಚಿಕ್ಕ ಊರಿನಲ್ಲಿ ಅವನು ಕೆಲಸ ಕೇಳಿಕೊಂಡಿದ್ದ. ಅಲ್ಲಿ, ಉತ್ತರಕ್ಕೆ ಹಸಿರು ಮತ್ತು ಕಪ್ಪಾಗಿಯೂ, ದಕ್ಷಿಣಕ್ಕೆ ಎಳೆ ಗೆಂಪು ಮತ್ತು ನಸುನೀಲಿಯಾಗಿಯೂ ಇದ್ದ ಕಲ್ಲುಗೋಡೆಗಳು, ಅನಂತ ಗ್ರೀಷ್ಮ ಋತುವಿನ ಸರಹದ್ದನ್ನು ಸಂಕೇತಿಸುತ್ತಿದ್ದವು. ಅವನು ಪ್ರಸ್ಥ ಭೂಮಿಯ ಮೇಲೆಯೇ ಇನ್ನೂ ಉತ್ತರಕ್ಕೆ ಕೆಲಸವೊಂದಕ್ಕೆ ನೇಮಕಗೊಂಡಿದ್ದ. ಆರಂಭದಲ್ಲಿ ಬರೇ ಕಲ್ಲುಗಳೇ ಜನರಾಗಿದ್ದ ಬೆಂಗಾಡಿನಲ್ಲಿ ಒಂಟಿತನ ಮತ್ತು ನೀರವತೆ ಅಸಹನೀಯವಾ ಗಿತ್ತು. ಆಗಾಗ ನೇಗಿಲ ಸಾಲುಗಳು ಸಾಗುವಳಿ ಯನ್ನು ಸೂಚಿಸುತ್ತಿದ್ದವು. ಆದರೆ ಕಟ್ಟಡ ಕಟ್ಟಲು ಯೋಗ್ಯವಾದ ಒಂದು ಬಗೆಯ ಕಲ್ಲನ್ನು ಹೊರ-ದೆಗೆಯಲು ನೆಲವನ್ನು ಅಗೆಯಲಾಗಿತ್ತು. ಇಲ್ಲಿ ಒಂದೇ ಉಳುಮೆಯೆಂದರೆ ಶಿಲೆಗಳನ್ನು ಸಂಗ್ರ ಹಿಸುವುದು. ಬೇರೆ ಕಡೆ, ಹಳ್ಳಿಗಳಲ್ಲಿ ಸಂಗ್ರಹ ಗೊಂಡ ಸಣ್ಣ ಪದರದ ಮಣ್ಣನ್ನು ಹಳ್ಳಿಯ ನಿಕೃಷ್ಟ ತೋಟಗಳನ್ನು ಪುಷ್ಟಿಗೊಳಿಸಲು ಅಗೆ ಯಲಾಗಿತ್ತು. ಅದು ಇದ್ದದ್ದು ಹೀಗೆ: ಪ್ರದೇಶದ ಮುಕ್ಕಾಲು ಭಾಗವನ್ನು ಆವರಿಸಿದ ಜಾಳಾದ ಬಂಡೆಗಳು. ತಕ್ಷಣ ಪಟ್ಟಣಗಳು ಹುಟ್ಟಿ ಕೊಂಡವು. ಬೆಳೆದು ಅನಂತರ ಮಾಯವಾದವು ಜನರು ಬಂದರು; ಒಬ್ಬೊಬ್ಬರನ್ನೊಬ್ಬರು ಪ್ರೀತಿ ಸಿದರು ಅಥವಾ ಉಗ್ರವಾಗಿ ಕಾದಾಡಿ ಸತ್ತರತಿ ಈ ಬೆಂಗಾಡಿನಲ್ಲಿ ಅವನಾಗಲಿ ಅವನ ಅತಿಥಿ

ಯಾಗಲಿ ಗಣನೆಗೆ ಬರಲಿಲ್ಲ. ಆದರೂ ಈ ಮರುಭೂಮಿಯ ಹೊರಗೆ ತಮ್ಮಿಬ್ಬರಲ್ಲಿ ಯಾರೂ ನಿಜವಾಗಿ ಬದುಕಲಾಗುತ್ತಿರಲಿಲ್ಲ ವೆಂದು ದಾರುವಿಗೆ ಗೊತ್ತಿತ್ತು.

ಅವನು ಎದ್ದಾಗ ಕ್ಲಾಸ್ ರೂಮಿನಿಂದ ಯಾವ ಶಬ್ದವೂ ಕೇಳಿಬರಲಿಲ್ಲ. ತಾನು ಯಾವ ನಿರ್ಧಾರವನ್ನೂ ತೆಗೆದುಕೊಳ್ಳುವ ಗೋಜಿಲ್ಲದೆ ತನ್ನೊಬ್ಬನನ್ನೇ ಬಿಟ್ಟು ಅರಬ್ಬನು ಓಡಿ ಹೋಗಿರಬಹುದೆಂಬ ಬರೆ ಕಲ್ಪನೆಯಿಂದ ತನ್ನಲ್ಲಿ ಉಂಟಾದ ಹರ್ಷವನ್ನು ಕಂಡು ಅವನಿಗೆ ವಿಸ್ಮಯವಾಯಿತು. ಆದರೆ ಕೈದಿ ಅಲ್ಲೇ ಇದ್ದ. ಒಲೆ ಮತ್ತು ಡೆಸ್ಕಿನ ಮಧ್ಯೆ ಮೈ ಚಾಚಿದ್ದ ಅವನು ಮಾಳಿಗೆಯನ್ನೇ ಎವೆಯಿಕ್ಕದೆ ನೋಡುತ್ತಿದ್ದ. ಆ ಭಂಗಿಯಲ್ಲಿ ಅವನ ತುಟಿಗಳು ಚಾಚಿದಂತೆ ಕಾಣುತ್ತಿದ್ದವು. ದಾರು "ಬಾ" ಎಂದು ಕರೆದಾಗ ಅರಬ್ಬನು ಎದ್ದು ಅವನನ್ನು ಹಿಂಬಾಲಿಸಿದ. ಮಲಗುವ ಕೋಣೆಯಲ್ಲಿ ಕಿಟಕಿಯ ಕೆಳಗೆ ಟೇಬಲ್ಲಿನ ಬಳಿಯಿದ್ದ ಕುರ್ಚಿಯತ್ತ ಸ್ಕೂಲ್ ಮಾಸ್ತರನು ಕೈ ತೋರಿಸಿದಾಗ ಅರಬ್ಬನು ಅವನಿಂದ ಕಣ್ಣು ಕೀಳದೆ ಕುಳಿತ.

"ನಿಂಗೆ ಹಸಿವಾಗ್ತಾ ಇದ್ಯಾ?"

"ಹೌದು" ಕೈದಿ ಉತ್ತರಿಸಿದ.

ದಾರು ಇಬ್ಬರಿಗಾಗಿ ಟೇಬಲ್ ಸಿದ್ಧ ಮಾಡಿದ. ಹಿಟ್ಟು ಹಾಗೂ ಎಣ್ಣೆಯಿಂದ ಹುರಿಯುವ ಬಾಣಲಿಯಲ್ಲಿ ಕೇಕೊಂದನ್ನು ರೂಪಿಸಿ ಒಲೆಯನ್ನು ಹಚ್ಚಿದ. ಕೇಕು ಬೇಯುತ್ತಿದ್ದಾಗ, ಶೆಡ್ಡಿಗೆ ಹೋಗಿ ಗಿಣ್ಣ, ಮೊಟ್ಟೆ, ಖರ್ಜೂರ ಹಾಗು ಗಟ್ಟಿ ಹಾಲನ್ನು ತಂದ. ಕೇಕು ಸಿದ್ಧವಾದಾಗ ಅದನ್ನು ಆರಲು ಕಿಟಕಿಯ ಚೌಕಟ್ಟಿನ ಬಳಿಯಿಟ್ಟು ಹಾಲಿಗೆ ನೀರು ಬೆರೆಸಿ ಕಾಯಿಸಿದ. ಅನಂತರ ಮೊಟ್ಟೆ ಒಡೆದು ಆಮ್ಲೆಟ್ ಮಾಡಿದ. ಅವನ ಈ ಓಡಾಟದಲ್ಲಿ ಒಮ್ಮೆ ಬಲ ಜೇಬಿನಲ್ಲಿದ್ದ ಪಿಸ್ತೂಲು ತಾಗಿತು. ಕೈಯಲ್ಲಿದ್ದ ಬಟ್ಟಲನ್ನು ಕೆಳಗಿಟ್ಟು ಕ್ಲಾಸ್ ರೂಮಿಗೆ ಹೋಗಿ ತನ್ನ ಡೆಸ್ಕ್ ಡ್ರಾಯರಿನಲ್ಲಿ ಪಿಸ್ತೂಲನ್ನು ಹಾಕಿದ. ಅವನು ಮತ್ತೆ ರೂಮಿಗೆ ಬಂದಾಗ ಕತ್ತಲಾವರಿಸುತ್ತಿತ್ತು. ಲೈಟನ್ನು ಹಾಕಿ ಅರಬ್ಬನಿಗೆ ಬಡಿಸಿ ತಿನ್ನು ಎಂದ. ಅರಬ್ಬನು ಕೇಕ್ ಚೂರೊಂದನ್ನು ತೆಗೆದುಕೊಂಡು ತವಕದಿಂದ ಬಾಯಿಗೆ ಎತ್ತಿ, ತಕ್ಷಣ ತಡೆದು,

"ಮತ್ತೆ, ನೀನು?" ಎಂದ.

"ನಿಂದು ಮುಗಿದ್ಮೇಲೆ ನಾನೂ ತಿಂತೇನೆ." ದಪ್ಪ ತುಟಿಗಳು ಸ್ವಲ್ಪವೇ ತೆರೆದುಕೊಂಡವು. ಅರಬ್ಬನು ಸ್ವಲ್ಪ ಹಿಂಜರಿದು ಅನಂತರ ನಿರ್ಧಾರದಿಂದ ಕೇಕನ್ನು ಕಚ್ಚಿದ.

ಊಟ ಮುಗಿಸಿ ಅರಬ್ಬನು ಸ್ಕೂಲ್ ಮಾಸ್ತರನತ್ತ ನೋಡಿದ.

"ನೀನು ಜಡ್ಜಿಯೆ?"

"ಇಲ್ಲ. ಸುಮ್ಮನೆ ನಾಳೆಯವರೆಗೆ ನಿನ್ನ ಇಟ್ಕೋತೇನೆ ಅಷ್ಟೆ"

"ನನ್ನ ಜೊತೆ ಹೇಗೆ ತಿನ್ತೀಯಾ?"

"ನಂಗೆ ಹಸಿವಾಗ್ತದೆ" ಎಂದ ದಾರು ಅವನತ್ತ ನೋಡದೆ. ಅರಬ್ಬ ಸುಮ್ಮನಾದ. ದಾರು ಎದ್ದು ಹೊರಗೆ ಹೋಗಿ ಶೆಡ್ಡಿನಿಂದ ಒಂದು ಹಾಸಿಗೆಯನ್ನು ತಂದು ಟೇಬಲ್ ಮತ್ತು ಒಲೆಯ ಮಧ್ಯ ತನ್ನ ಹಾಸಿಗೆಗೆ ಅಡ್ಡವಾಗಿ ಹಾಸಿದ. ಮೂಲೆಯಲ್ಲಿ ಪೇಪರನ್ನಿಡಲು ಅಲಮಾರಿನ ಹಾಗೆ ಉಪಯೋಗಿಸುತ್ತಿದ್ದ ದೊಡ್ಡ ಸೂಟ್ ಕೇಸೊಂದರಿಂದ ಎರಡು ಕಂಬಳಿಗಳನ್ನು ತೆಗೆದು ಮಡಿಚುವ ಹಾಸಿಗೆಯ ಮೇಲೆ ಓರಣವಾಗಿಟ್ಟ. ಅನಂತರ ತಡೆದು, ವ್ಯರ್ಥವೆನಿಸಿ, ತನ್ನ ಹಾಸಿಗೆಯ ಮೇಲೆ ಕುಳಿತ. ಈ ಮನುಷ್ಯನನ್ನು ಕಾಯುವುದನ್ನು ಬಿಟ್ಟರೆ ಮಾಡಲು ಅಥವಾ ಸಿದ್ಧವಾಗಲು ಮತ್ತೇನಿರಲಿಲ್ಲ. ಅರಬ್ಬನತ್ತ ನೋಡಿ ಅವನ ಮುಖ ರೋಷದಿಂದ ಸಿಡಿಯುವುದನ್ನು ಕಲ್ಪಿಸಿಕೊಳ್ಳಲು ಪ್ರಯತ್ನಿಸಿದ. ಆದರೆ ಹಾಗೆ ಮಾಡಲಾಗಲಿಲ್ಲ. ಕಪ್ಪಗಿದ್ದರೂ ಹೊಳೆಯುತ್ತಿದ್ದ ಅವನ ಕಣ್ಣುಗಳು ಹಾಗೂ ಪಶು ಬಾಯಿಯನ್ನು ಬಿಟ್ಟು ಮತ್ತೇನನ್ನೂ ಕಾಣದಾದ.

"ಅವನ್ನ ಯಾಕೆ ಕೊಂದೆ?" ತನ್ನ ಧ್ವನಿಯಲ್ಲಿದ್ದ ದ್ವೇಷವನ್ನು ಗುರುತಿಸಿ ದಾರುವಿಗೆ ಆಶ್ಚರ್ಯವಾಯಿತು.

ಅರಬ್ಬ ಬೇರೆಡೆ ಮುಖ ಮಾಡಿದ. "ಅವನು ಓಡಿ ಹೋದ. ನಾನವನ ಬೆನ್ನಟ್ಟಿದೆ." ಅವನು ಮತ್ತೆ ದಾರುವಿನತ್ತ ನೋಡಿದಾಗ ಅವನ ಕಣ್ಣುಗಳಲ್ಲಿ ಒಂದು ತರಹ ವ್ಯಥೆ ತುಂಬಿದ ಪ್ರಶ್ನಾರ್ಥಕ ನೋಟವಿತ್ತು. "ಈಗವರು ನಂಗೇನ್ಮಾಡ್ತಾರೆ?"

"ನಿಂಗೆ ಭಯವಾಗ್ತಿದ್ಯಾ?" ಅವನು ತಕ್ಷಣ ಸೆಟೆದು ಕಣ್ಣನ್ನು ಬೇರೆಡೆ ತಿರುಗಿಸಿದ.

"ನಿಂಗೆ ಪಶ್ಚಾತ್ತಾಪವಾಗ್ತಿದ್ಯಾ?" ಅರಬ್ಬನು ಬಾಯಿಬಿಟ್ಟುಕೊಂಡು ಎವೆಯಿಕ್ಕದೆ ದಾರು-ವನ್ನೇ ನೋಡಿದ. ಅವನಿಗೆ ಅದು ಅರ್ಥವಾದಂತೆ ಕಾಣಲಿಲ್ಲ. ದಾರುವಿಗೆ ರೇಗತೊಡಗಿತು. ಅದೇ ಸಮಯಕ್ಕೆ ಎರಡು ಹಾಸಿಗೆಗಳ ಮಧ್ಯೆ ಇರುತ್ತಿದ್ದ ತನ್ನ ದೊಡ್ಡ ದೇಹವು ತೊಡಕೆನಿಸಿ ವರೂ ಅದರ ಬಗ್ಗೆ ಅವನಿಗೆ ಸ್ವಪ್ರಜ್ಞೆಉಂಟಾಯಿತು.

"ಅದು ನಿನ್ನ ಹಾಸಿಗೆ, ಅಲ್ಲಿ ಮಲಗು." ಅವನು ಅಸಹನೆಯಿಂದ ನುಡಿದ. ಅರಬ್ಬನು ಅಲುಗಲಿಲ್ಲ. "ನಂಗೆ ಹೇಳು. ನಾಳೆ ಪೋಲೀಸು ಸೈನಿಕ ಬರ್ತಾ-ನಾ?" ಸ್ಕೂಲ್ ಮಾಸ್ತರನು ಅವನತ್ತ ನೋಡಿ, "ನಂಗೊತ್ತಿಲ್ಲ" ಎಂದ.

"ನಂಜೊತೆ ನೀನೂ ಬರ್ತಿಯಾ?"

"ಗೊತ್ತಿಲ್ಲ. ಯಾಕೆ ಕೇಳ್ದೆ?"

ಕೈದಿ ಎದ್ದು ಕಂಬಳಿಗಳ ಮೇಲೆ ಕಿಟಕಿಯತ್ತ ಕಾಲು ಚಾಚಿ ಮಲಗಿದ. ವಿದ್ಯುತ್ ಬಲ್ಬಿನಿಂದ ಬೆಳಕು ಚುಚ್ಚಿ ಅವನು ತಕ್ಷಣ ಕಣ್ಣುಮುಚ್ಚಿಕೊಂಡ. "ಯಾಕೆ ಕೇಳ್ದೆ?" ದಾರು ಅವನ ಹಾಸಿಗೆಯ ಬಳಿ ನಿಂತು ಮತ್ತೆ ಕೇಳಿದ. ಕೋರೈಸುವ ಬೆಳಕಿನಡಿಯಲ್ಲಿ ಅರಬ್ಬನು ಕಣ್ಣನ್ನು ತೆರೆದು ಎವೆಯಿಕ್ಕದೆ ಅವನನ್ನೇ ನೋಡುತ್ತಾ ಹೇಳಿದ. "ನಂ ಜೊತೆ ನೀನೂ ಬಾ."

ನಡುರಾತ್ರಿಯಾದರೂ ದಾರುವಿಗೆ ನಿದ್ದೆ ಹತ್ತಿರಲಿಲ್ಲ. ಅವನು ಪೂರ್ತಿ ವಿವಸ್ತ್ರನಾಗಿ ಹಾಸಿಗೆಗೆ ಹೋಗಿದ್ದ. ಸಾಮಾನ್ಯವಾಗಿ ಅವನು ಬರಿ ಮೈಯಲ್ಲಿ ಮಲಗುತ್ತಿದ್ದ. ಆದರೆ ಮೈಮೇಲೆ ಏನೂ ಇಲ್ಲವೆಂದು ತಕ್ಷಣ ಅರಿವಾದಾಗ ಹಿಂಜರಿದ. ಅವನಿಗೆ ಮುಜಗರವೆನಿಸಿ ಬಟ್ಟೆ ಹಾಕಿಕೊಳ್ಳುವ ಮನಸ್ಸಾಯಿತು. ಆದರೆ ಉದಾಸೀನದಿಂದ ಭುಜ ಕುಣಿಸಿದ; ಎಷ್ಟಾದರೂ ಅವನು ಮಗುವಲ್ಲ. ಬೇಕಿದ್ದಲ್ಲಿ ಎದುರಾಳಿಯನ್ನು ತಾನು ಎರಡಾಗಿ ಮುರಿಯಬಲ್ಲ. ಕೋರೈಸುವ ಬೆಳಕಿನಡಿಯಲ್ಲಿ ಕಣ್ಮುಚ್ಚಿ ಬೆನ್ನ ಮೇಲೆ ನಿಶ್ಶಬ್ದನಾಗಿ ಮಲಗಿದ್ದ ಅವನನ್ನು ತನ್ನ ಹಾಸಿಗೆಯಿಂದ ನೋಡಬಹುದಿತ್ತು. ದಾರು ದೀಪವಾರಿಸಿದಾಗ ಕತ್ತಲೆ ಇದ್ದಕ್ಕಿದ್ದಂತೆ ಹೆಪ್ಪುಗಟ್ಟಿದಂತೆ ಕಂಡಿತು. ಕಿಟಕಿಯಲ್ಲಿ ಇರುಳು ಸ್ವಲ್ಪ ಸ್ವಲ್ಪವೇ ಜೀವ ತಳೆದು ತಾರೆಗಳಿಲ್ಲದ ಬಾನು ಶಾಂತವಾಗಿ ಕದಲುತ್ತಿತ್ತು. ಸ್ಕೂಲ್ ಮಾಸ್ತರನು ತನ್ನ ಕಾಲ ಬಳಿಯಿದ್ದ ಅವನ ದೇಹವನ್ನು ಗುರುತಿಸಿದ. ಈಗಲೂ ಅವನು ಕದಲಲಿಲ್ಲ. ಆದರೆ ಅವನ ಕಣ್ಣುಗಳು ತೆರೆದಿದ್ದಂತೆ ಕಂಡಿತು. ಗಾಳಿಯು ಮಂದವಾಗಿ ಸ್ಕೂಲಿನ ಸುತ್ತ ಅಡ್ಡಾಡುತ್ತಿತ್ತು. ಬಹುಶಃ ಅದು ಮೋಡಗಳನ್ನು ಚದುರಿಸಿ ನಾಳೆ ಸೂರ್ಯನು ಮತ್ತೆ ಹಾಜರಾಗಬಹುದು.

ರಾತ್ರಿಯಾದಂತೆ ಗಾಳಿ ಹೆಚ್ಚಾಯಿತು. ಹೇಂಟೆಗಳು ಸ್ವಲ್ಪ ರಪರಪನೆ ರೆಕ್ಕೆ ಬಡಿದು ಮತ್ತೆ ಸ್ತಬ್ಧವಾದವು. ಅರಬ್ಬನು ಮಗ್ಗುಲು ಬದಲಿಸಿ ದಾರುವಿಗೆ ಬೆನ್ನು ಮಾಡಿದಾಗ ಸ್ಕೂಲ್ ಮಾಸ್ತರನಿಗೆ ಅವನು ನರಳಿದಂತೆ ಕೇಳಿಸಿತು. ಅನಂತರ ತನ್ನ ಅತಿಥಿಯ ಉಸಿರಾಟದ ಗತಿ ಕ್ರಮೇಣ ಹೆಚ್ಚಿ ಮತ್ತಷ್ಟು ನಿಯತವಾಗುವುದನ್ನು ಆಲಿಸಿದ. ಅವನ ಉಸಿರಾಟ ತೀರ ಹತ್ತಿರದಿಂದ ಕೇಳಿ ನಿದ್ದೆ ಮಾಡಲಾಗದೆ ಚಿಂತಿಸಿದ. ಒಂದು ವರ್ಷದಿಂದ ಇದೇ ರೂಮಿನಲ್ಲಿ ಒಂಟಿಯಾಗಿ ಮಲಗುತ್ತಿದ್ದ ಅವನನ್ನು ಈ ಸಾನಿಧ್ಯ ಬಾಧಿಸಿತು. ತನಗೆ ಚೆನ್ನಾಗಿ ಗೊತ್ತಿದ್ದ ಒಂದು ಬಗೆಯ ಭ್ರಾತೃತ್ವವನ್ನು ಕಲ್ಪಿಸಿಕೊಂಡು, ಆದರೆ ಪ್ರಸ್ತುತ ಪರಿಸ್ಥಿತಿಯಲ್ಲಿ ಅದನ್ನು ಒಪ್ಪಿಕೊಳ್ಳಲಾಗದೆ ಒದ್ದಾಡಿದ. ಸೈನಿಕರು ಅಥವಾ ಕೈದಿಗಳು ಒಂದೇ ರೂಮನ್ನು ಹಂಚಿಕೊಂಡಾಗ ವಿಚಿತ್ರ ಬಾಂಧವ್ಯವನ್ನು ಬೆಳೆಸಿಕೊಂಡು ಕನಸು ಮತ್ತು ದಣಿವುಗಳ ಪುರಾತನ ಸಮಾಜದಲ್ಲಿ ಬಟ್ಟೆಗಳೊಂದಿಗೆ ತಮ್ಮ ಯುದ್ಧಕವಚವನ್ನೂ ತೊರೆದು ಭೇದ-ಗಳನ್ನೆಲ್ಲಾ ಮರೆತು ಸೋದರರ ಹಾಗೆ ವರ್ತಿಸುತ್ತಾರೆ. ಆದರೆ ದಾರು ತಲೆಯಲುಗಿಸಿದ; ಅಂತಹ ಆಲೋಚನೆಗಳನ್ನು ಅವನು ಇಷ್ಟಪಡಲಿಲ್ಲ. ಅವನಿಗೆ ನಿದ್ದೆ ಮಾಡುವುದು ಅಗತ್ಯವಾಗಿತ್ತು.

ಸ್ವಲ್ಪ ಹೊತ್ತಾದ ನಂತರ ಅರಬ್ಬನು ಮೆಲ್ಲಗೆ ಕದಲಿದಾಗ ಸ್ಕೂಲ್ ಮಾಸ್ತರನಿಗೆ ಇನ್ನೂ ನಿದ್ದೆ ಬಂದಿರಲಿಲ್ಲ. ಕೈದಿಯು ಎರಡನೇ ಬಾರಿ ಚಲಿಸಿದಾಗ ಅವನು ಸೆಟೆದು ಚುರುಕಾದ. ಅರಬ್ಬನು ನಿದ್ದೆಯಲ್ಲಿ ನಡೆಯುವವನ ಚಲನೆಯಂತೆ ಕೈ-

ಯೂರಿ ನಿಧಾನವಾಗಿ ಏಳತೊಡಗಿದ. ಹಾಸಿಗೆಯ ಮೇಲೆ ನೇರವಾಗಿ ಕುಳಿತು ತಲೆಯನ್ನು ದಾರುವಿನತ್ತ ತಿರುಗಿಸದೆ ಏನನ್ನೋ ಲಕ್ಷ್ಯವಿಟ್ಟು ಕೇಳುತ್ತಿದ್ದವನ ಹಾಗೆ ಕಾದ. ದಾರು ಕದಲಲಿಲ್ಲ; ಪಿಸ್ತೂಲ್ ತನ್ನ ಡೆಸ್ಕಿನ ಡ್ರಾಯರಿನಲ್ಲಿದೆಯೆಂದು ಆಗ ತಾನೆ ಅವನಿಗೆ ಹೊಳೆದಿತ್ತು. ತಕ್ಷಣ ಕಾರ್ಯೋನ್ಮುಖನಾಗುವುದು ಉತ್ತಮವೆನಿಸಿತು. ಆದರೂ ಕೈದಿಯನ್ನೇ ಗಮನಿಸತೊಡಗಿದ. ಅರಬ್ಬನು ಈಗ ಅದೇ ವಕ್ರ ಚಲನೆಯಲ್ಲಿ ಕಾಲನ್ನು ನೆಲದ ಮೇಲೆ ಹಾಕಿ ಮತ್ತೆ ಕಾದು ಅನಂತರ ನಿಧಾನವಾಗಿ ನಿಲ್ಲಲು ಶುರು ಮಾಡಿದ. ದಾರು ಇನ್ನೇನು ಅವನನ್ನು ಕೂಗಿ ನಿಲ್ಲಿಸಬೇಕು ಎನ್ನುವಾಗ ಅರಬ್ಬನು ತೀರ ಸಹಜವಾಗಿ, ಆದರೆ ವಿಶೇಷ ಮೌನದಿಂದ ನಡೆಯತೊಡಗಿದ. ರೂಮಿನ ಕಡೆಯಲ್ಲಿ ಶೆಡ್ಡಿಗೆ ತೆರೆದುಕೊಳ್ಳುತ್ತಿದ್ದ ಬಾಗಿಲಿನತ್ತ ನಡೆದ ಅವನು, ಎಚ್ಚರಿಕೆಯಿಂದ ಅಗುಳಿಯನ್ನೆತ್ತಿ ಹೊರಗೆ ಹೋಗಿ ಬಾಗಿಲನ್ನು ಮುಚ್ಚಿದ. ದಾರು ಅಲುಗಾಡಿರಲಿಲ್ಲ "ಅವನು ಓಡಿ ಹೋಗುತ್ತಾನೆ! ಪೀಡೆ ತೊಲಗಿತು!" ಎಂದುಕೊಂಡ. ಆದರೂ ಅವನು ಲಕ್ಷ್ಯವಿಟ್ಟು ಆಲಿಸಿದ. ಕೋಳಿಗಳ ಶಬ್ದವಿಲ್ಲ; ಅಂದರೆ ಅವನು ಪ್ರಸ್ಥಭೂಮಿಯ ಮೇಲಿರಬೇಕು. ನೀರಿನ ಶಬ್ದ ಕ್ಷೀಣವಾಗಿ ಅವನನ್ನು ತಲುಪಿಸಿದಾಗ ಅದೇನೆಂದು ಅವನಿಗೆ ಅರಬ್ಬನು ಮತ್ತೆ ಬಾಗಿಲ ಬಳಿ ಆಕಾರಗೊಂಡು ನಿಂತು ಹುಷಾರಾಗಿ ಬಾಗಿಲು ಮುಚ್ಚಿ ಶಬ್ದಮಾಡದೆ ತನ್ನ ಹಾಸಿಗೆಗೆ ಬರುವರೆಗೂ ತಿಳಿಯಲಿಲ್ಲ. ಅನಂತರ ದಾರು ತನ್ನ ಬೆನ್ನನ್ನು ಅವನತ್ತ ತಿರುಗಿಸಿ ನಿದ್ದೆ ಹೋದ. ಬಹಳ ಹೊತ್ತಿನ ನಂತರ ನಿದ್ದೆಯ ಆಳದಲ್ಲಿ ಅವನಿಗೆ ಸ್ಕೂಲಿನ ಸುತ್ತ ಕಳ್ಳ ಹಜ್ಜೆಗಳು ಕೇಳಿಸಿದಂತೆ ಅನ್ನಿಸಿತು; 'ನಾನು ಕನಸು ಕಾಣ್ತೆದೇನೆ! ನಾನು ಕನಸು ಕಾಣ್ತೆದೇನೆ!' ಎಂದು ತನಗೆ ತಾನೇ ಹೇಳಿಕೊಂಡು ನಿದ್ದೆ ಮಾಡುತ್ತಲೇ ಹೋದ.

ಅವನು ಎದ್ದಾಗ ಆಕಾಶ ನಿರ್ಮಲವಾಗಿತ್ತು. ಸಡಿಲವಾದ ಕಿಟಕಿಯು ತಣ್ಣನೆಯ ಶುದ್ಧ ಗಾಳಿಯನ್ನು ಒಳಗೆ ಬಿಟ್ಟಿತ್ತು. ಅರಬ್ಬನು ಕಂಬಳಿಗಳ ಕೆಳಗೆ ಡುಬ್ಬಾಗಿ ಬಾಯಿ ತೆರೆದುಕೊಂಡು ಮಲಗಿ ನಿದ್ರಿಸುತ್ತಿದ್ದ. ಈಗ ಅವನು ಸಂಪೂರ್ಣ ವಿಶ್ರಾಂತಿ ಪೊಂದಿದವನಂತೆ ಕಾಣುತ್ತಿದ್ದ. ದಾರು ಅವನ ಮೈ ಹಿಡಿದು ಅಲ್ಲಾಡಿಸಿದಾಗ ಭಯದಿಂದ ಬೆಚ್ಚಿ, ತಾನು ದಾರುವನ್ನು ಯಾವತ್ತೂ ಕಂಡೇ ಇಲ್ಲ ಎನ್ನುವ ಹಾಗೆ ಉನ್ಮತ್ತ ಕಣ್ಣುಗಳಿಂದ ಅವನನ್ನು ನೋಡಿದ. ಅವನ ಭೀತಿಯ ಭಂಗಿಯನ್ನು ನೋಡಿ ಸ್ಕೂಲ್ ಮಾಸ್ತರನು ತಕ್ಷಣ ಹಿಮ್ಮೆಟ್ಟಿ, "ಭಯಪಡಬೇಡ... ನಾನು, ನೀನೀಗ ತಿನ್ಬೇಕು" ಎಂದಾಗ ಅರಬ್ಬನು ಹಾದೆಂದು ತಲೆಯಾಡಿಸಿದ. ಅವನ ಮುಖದಲ್ಲಿ ಮತ್ತೆ ಶಾಂತಿ ನೆಲೆಸಿತ್ತು. ಆದರೆ ಅವನ ಭಾವದಲ್ಲಿ ಶೂನ್ಯತೆ ಹಾಗೂ ನಿರಾಸಕ್ತಿಯಿತ್ತು.

ಕಾಫಿ ಸಿದ್ಧವಾಗಿತ್ತು. ಹಾಸಿಗೆಯ ಮೇಲೆ ಇಬ್ಬರೂ ಒಟ್ಟಿಗೆ ಕೂತು ಕೇಕನ್ನು ತಿನ್ನುತ್ತಾ ಕಾಫಿಯನ್ನು ಕುಡಿದರು. ದಾರು ಅವನನ್ನು ಶೆಡ್ಡಿಗೆ ಕರೆದುಕೊಂಡು ಹೋಗಿ ಕೈ ತೊಳೆದುಕೊಳ್ಳಲು ನಲ್ಲಿಯನ್ನು ತೋರಿಸಿದ. ರೂಮಿಗೆ ಮತ್ತೆ ಹೋಗಿ ಹಾಸಿಗೆ ಮತ್ತು ಕಂಬಳಿಗಳನ್ನು ಮಡಚಿ, ತನ್ನ ಹಾಸಿಗೆಯನ್ನು ಸಿದ್ಧಪಡಿಸಿ ಓರಣವಾಗಿಟ್ಟ. ಅನಂತರ ಕ್ಲಾಸ್ ರೂಮಿನ ಮೂಲಕ ಹಾದು ಸಮತಲ ದಿಬ್ಬವನ್ನು ಹತ್ತಿದ. ನೀಲಿ ಬಾನಿನಲ್ಲಿ ಸೂರ್ಯ ಅಗಲೇ ಮೇಲೇರುತ್ತಿದ್ದ. ಸೌಮ್ಯವಾದ ಉಜ್ವಲ ಬೆಳಕು ನಿರ್ಜನ ಪ್ರಸ್ಥಭೂಮಿಗೆ ಮಜ್ಜನ ಮಾಡಿಸುತ್ತಿತ್ತು. ಸಾಲು ಬೆಟ್ಟಗಳ ಮೇಲೆ ಹಿಮವು ಕರಗಿ ಕಲ್ಲುಗಳು ಮತ್ತೆ ಕಾಣಿಸಿಕೊಳ್ಳಹತ್ತಿದ್ದವು. ಪ್ರಸ್ಥಭೂಮಿಯ ತುದಿಯಲ್ಲಿ ಬಾಗಿ ನಿಂತು ಸ್ಕೂಲ್ ಮಾಸ್ತರನು ಪಾಳು ಬಿದ್ದ ವಿಶಾಲ ಪ್ರದೇಶವನ್ನು ವೀಕ್ಷಿಸಿದ. ಅವನಿಗೆ ಬಾಲ್ಡ್ಯಾಕ್ಕಿಯ ನೆನಪು ಬಂತು. ಅವನೊಡನೆ ತಾನು ಸಹಕರಿಸುವದಿಲ್ಲವೆಂಬಂತೆ ಕಳುಹಿಸಿ ದಾರು ಅವನ ಮನ ನೋಯಿಸಿದ್ದ. ಪೋಲೀಸು ಸೈನಿಕನ ಬೀಳ್ಕೊಡಿಗೆ ಇನ್ನೂ ಅವನಿಗೆ ಕೇಳಿಸುತ್ತಿತ್ತು ಮತ್ತು ಕಾರಣ ತಿಳಿಯದೆ ಅವನು ವಿಲಕ್ಷಣ ಶೂನ್ಯತೆಯೊಂದಿಗೆ ಒಂದು ಬಗೆಯ ದೌರ್ಬಲ್ಯವನ್ನು ಅನುಭವಿಸಿದ. ಅದೇ ಸಮಯಕ್ಕೆ ಸ್ಕೂಲಿನ ಇನ್ನೊಂದು ಕಡೆಯಿಂದ ಕೈದಿ ಕೆಮ್ಮಿದ. ಅದನ್ನು ಆಲಿಸುತ್ತಾ ದಾರುವಿಗೆ ತನ್ನ ಬಗ್ಗೆಯೇ ತಿರಸ್ಕಾರ ಉಂಟಾಗಿ ರೋಷದಿಂದ ಎಸೆದ ಕಲ್ಲೊಂದು ಗಾಳಿಯಲ್ಲಿ ಸೀಟಿಹಾಕಿ

ಹಿಮದಲ್ಲಿ ಮುಳುಗಿತು. ಆ ಮನುಷ್ಯನ ಅವಿ–ವೇಕದ ದುಷ್ಕೃತ್ಯ ಅವನಿಗೆ ವಾಕರಿಗೆ ಬರಿಸಿತು. ಆದರೆ ಅವನನ್ನು ಒಪ್ಪಿಸುವುದು ಗೌರವಕ್ಕೆ ವಿರುದ್ಧ. ಕೇವಲ ಅದರ ಕಲ್ಪನೆಯಿಂದ ಅವನು ಅಪಮಾನದಿಂದ ಕುದಿದ. ಅರಬ್ಬನನ್ನು ಕಳುಹಿಸಿದ್ದ ತನ್ನ ಜನರನ್ನೂ ಹಾಗೂ ಕೊಲ್ಲಲು ಧೈರ್ಯಮಾಡಿ, ಕೊಂದು ತಪ್ಪಿಸಿಕೊಳ್ಳಲಾಗದೆ ಸಿಕ್ಕಿಕೊಂಡ ಅರಬ್ಬನನ್ನೂ ಒಂದೇ ಬಾರಿ ಶಪಿಸಿದ. ದಾರು ಎದ್ದು, ದಿಬ್ಬದ ಮೇಲೆ ಶತಪಥ ಹಾಕಿ, ಮತ್ತೆ ಕದಲದೆ ನಿಂತು ಅನಂತರ ಸ್ಕೂಲಿಗೆ ವಾಪಸ್ಸಾದ.

ಅರಬ್ಬನು ಶೆಡ್ಡಿನ ಸಿಮೆಂಟ್ ನೆಲದ ಮೇಲೆ ಬಗ್ಗಿಕೊಂಡು ತನ್ನೆರಡು ಬೆರಳುಗಳಿಂದ ಹಲ್ಲು ಜ್ಜುತ್ತಿದ್ದ. ದಾರು ಅವನನ್ನು "ಬಾ" ಎಂದು ಕರೆದು ಕೈದಿಗಿಂತ ಮುಂಚೆ ರೂಮಿಗೆ ವಾಪಸ್ಸು ಹೋದ. ಸ್ವೆಟರಿನ ಮೇಲೆ ಬೇಟೆಯ ನಡುವಂಗಿಯನ್ನು ತೊಟ್ಟು ಕಾಲಿಗೆ ವಾಕಿಂಗ್ ಷೂ ಧರಿಸಿದ ಅರಬ್ಬನು ತನ್ನ ಮೆಟ್ಟು ಹಾಗೂ ಮುಂಡಾಸನ್ನು ಧರಿಸುವವರೆಗೆ ಕಾದ. ಅವರು ಕ್ಲಾಸ್ ರೂಮಿನೊಳಕ್ಕೆ ಬಂದಾಗ ಸ್ಕೂಲ್ ಮಾಸ್ತರನು ಹೊರ ಬಾಗಿಲನ್ನು ತೋರಿಸಿ, "ಮುಂದೆ ಹೊರಡು" ಎಂದಾಗ ಅರಬ್ಬನು ನಿಂತ ಜಾಗದಿಂದ ಕದಲಲಿಲ್ಲ. "ನಾನು ಬರ್‍ತೇನೆ" ಎಂದು ದಾರು ಹೇಳಿದಾಗ ಅವನು ಹೊರ ನಡೆದ. ದಾರು ಮತ್ತೆ ರೂಮಿಗೆ ಹೋಗಿ ಖರ್ಜೂರ, ಸಕ್ಕರೆ ಹಾಗೂ ರಸ್ಕ್ ತುಂಡುಗಳ ಒಂದು ಗಂಟನ್ನು ಮಾಡಿದ. ಹೊರ ಹೋಗುವ ಮುಂಚೆ ಕ್ಲಾಸ್ ರೂಮಿನಲ್ಲಿ ತನ್ನ ಡೆಸ್ಕಿನ ಮುಂದೆ ನಿಂತು ಒಂದು ಕ್ಷಣ ಅನುಮಾನಿಸಿದ. ಅನಂತರ ಹೊಸ್ತಿಲನ್ನು ದಾಟಿ ಬೀಗ ಹಾಕಿ, "ಅದೇ ಸರಿ" ಎಂದು ತನಗೆ ತಾನೆ ಹೇಳಿಕೊಂಡ. ಪೂರ್ವದ ಕಡೆ ನಡೆದ ಅವನನ್ನು ಕೈದಿ ಹಿಂಬಾಲಿಸಿದ. ಆದರೆ ಸ್ಕೂಲಿನಿಂದ ಸ್ವಲ್ಪ ದೂರದಲ್ಲಿದ್ದಾಗ ತನ್ನ ಹಿಂದೆ ಲಘುವಾಗಿ ಶಬ್ದ ಕೇಳದಂತಾಗಿ, ಹಿಂತಿರುಗಿ ಸ್ಕೂಲಿನ ಸುತ್ತ ಮುತ್ತ ಪರೀಕ್ಷಿಸಿದ. ಅಲ್ಲಿ ಯಾರೂ ಇರಲಿಲ್ಲ. ಅರ್ಥವಾಗದೆ ತನ್ನನ್ನೆ ನೋಡುತ್ತಿದ್ದ ಅರಬ್ಬನನ್ನು, "ಬಾ ಹೋಗೋಣ" ಎಂದ.

ಒಂದು ತಾಸು ನಡೆದ ನಂತರ ಅವರು ಮೊನಚಾದ ಸುಣ್ಣದ ಕಲ್ಲಿನ ಶಿಖರವೊಂದರ ಪಕ್ಕದಲ್ಲಿ ವಿಶ್ರಮಿಸಿದರು. ಹಿಮವು ಶೀಘ್ರಗತಿಯಿಂದ ಕರಗುತ್ತಿತ್ತು. ಸೂರ್ಯನು ಕೆಸರನ್ನೆಲ್ಲಾ ತಕ್ಷಣ ಹೀರಿ ಪ್ರಸ್ಥಭೂಮಿಯನ್ನು ಶುಭ್ರಗೊಳಿಸಿದ್ದರಿಂದ ಅದು ಕ್ರಮೇಣ ಒಣಗಿ ಗಾಳಿಯಂತೆ ಸ್ಪಂದಿಸುತ್ತಿತ್ತು. ಅವರು ಪ್ರಯಾಣ ಮುಂದುವರಿಸಿದಾಗ ಅವರ ಕಾಲಡಿಯಲ್ಲಿ ನೆಲವು ಝಣ ಝಣಿಸಿತು. ಆಗಾಗ ಹಕ್ಕಿಯೊಂದು ಅವರ ಮುಂದಿನ ಪ್ರದೇಶವನ್ನು ಹರ್ಷದ ಕಲರವದಿಂದ ತುಂಬುತ್ತಿತ್ತು. ಆಹ್ಲಾದಕರ ಮುಂಜಾನೆಯ ಬೆಳಕಿನಲ್ಲಿ ದಾರು ದೀರ್ಘ ಉಸಿರೆಳೆದ. ನೀಲಗಗನದ ಅಡಿಯಲ್ಲಿ ಪೀತವರ್ಣದ ಸೌಧದಂತೆ ಕಾಣುತ್ತಿದ್ದ ಆ ಚಿರಪರಿಚಿತ ಪ್ರದೇಶದ ಮುಂದೆ ದಾರು ಒಂದು ಬಗೆಯ ಪರವಶತೆಯನ್ನು ಅನುಭವಿಸಿದ. ಅವರು ದಕ್ಷಿಣಕ್ಕೆ ಇಳಿದು ಮತ್ತೊಂದು ಗಂಟೆ ನಡೆದ ನಂತರ ಚೂರು ಚೂರು ಬಂಡೆಗಳಿಂದ ತುಂಬಿದ ಸಮತಲ ಮಟ್ಟವೊಂದನ್ನು ತಲುಪಿದರು. ಅಲ್ಲಿಂದ ಪ್ರಸ್ಥಭೂಮಿಯು ಪೂರ್ವದಲ್ಲಿ ಕೆಲವು ಕದಿರುಮರಗಳಿದ್ದ ತಗ್ಗಾದ ಬಯಲಿಗೆ ಹಾಗೂ ದಕ್ಷಿಣದಲ್ಲಿ ಬಂಡೆಗಳ ಸಮೂಹದತ್ತ ಇಳಿಯುತ್ತಿತ್ತು. ಅದು ಆ ಭೂಭಾಗಕ್ಕೆ ಅವ್ಯವಸ್ಥಿತ ನೋಟವನ್ನು ಕೊಟ್ಟಿತ್ತು.

ದಾರು ಎರಡು ದಿಕ್ಕನ್ನು ಅವಲೋಕಿಸಿದ. ದಿಗಂತದ ಮೇಲೆ ಬಾನನ್ನು ಬಿಟ್ಟು ಮತ್ತೇನೂ ಇರಲಿಲ್ಲ. ಒಬ್ಬ ನರಪಿಳ್ಳೆಯೂ ಕಾಣುತ್ತಿರಲಿಲ್ಲ. ತನ್ನನ್ನು ಶೂನ್ಯಭಾವದಿಂದ ನೋಡುತ್ತಿದ್ದ ಅರಬ್ಬನತ್ತ ತಿರುಗಿದ. ದಾರು ಗಂಟನ್ನು ಅವನತ್ತ ಹಿಡಿದು, "ತಗೋ, ಇದರಲ್ಲಿ ಖರ್ಜೂರ, ಬ್ರೆಡ್ ಹಾಗೂ ಸಕ್ಕರೆಯಿದೆ. ಅದು ನಿಂಗೆ ಎರಡು ದಿನಗಳಿಗೆ ಬರಬಹುದು. ಈ ಸಾವಿರ ಫ್ರಾಂಕನ್ನೂ ತಗೋ" ಎಂದ. ಅರಬ್ಬನು ಗಂಟನ್ನೂ ಹಣವನ್ನೂ ತೆಗೆದುಕೊಂಡು ಭರ್ತಿಯಾದ ಕೈಗಳನ್ನು ಎದೆಯ ಬಳಿ ಹಿಡಿದುಕೊಂಡು ಅವುಗಳೊಂದಿಗೆ ಏನು ಮಾಡುವುದೆಂದು ತಿಳಿಯದೆ ನಿಂತ. "ಈಗ ನೋಡು" ಸ್ಕೂಲ್ ಮಾಸ್ತರನು ಪೂರ್ವದತ್ತ ಕೈ ತೋರಿಸಿ ಹೇಳಿದ, "ಟಿನ್‌ಗೂಟಿಗೆ ದಾರಿ ಅಲ್ಲಿದೆ. ನೀನು ಎರಡು ಗಂಟೆ ನಡೆಯಬೇಕಾಗುತ್ತೆ. ಟಿನ್‌ಗೂಟ್‌ನಲ್ಲಿ ಆಡಳಿತ ವರ್ಗ ಹಾಗೂ ಪೋಲೀಸರನ್ನು ನೋಡ್ತಿಯ.

ಅವರು ನಿನಗಾಗಿ ಕಾಯ್ತಿರ್ತಾರೆ." ಗಂಟು ಹಾಗು ದುಡ್ಡನ್ನು ಇನ್ನೂ ಎದೆಯ ಬಳಿ ಹಿಡಿದಿದ್ದ ಅರಬ್ಬನು ಪೂರ್ವದತ್ತ ನೋಡಿದ. ದಾರು ಅವನ ಮೊಣಕೈಯನ್ನು ಹಿಡಿದು ಒರಟಾಗಿ ದಕ್ಷಿಣದೆಡೆ ಅವನನ್ನು ತಿರುಗಿಸಿದ. ಅವರು ನಿಂತಿದ್ದ ಎತ್ತರದ ತಳದಲ್ಲಿ ಒಂದು ಮಸುಕಾದ ದಾರಿ ಕಾಣುತ್ತಿತ್ತು. "ಪ್ರಸ್ಥಭೂಮಿಗೆ ಅಡ್ಡವಾಗಿ ಅದೇ ಕಾಲು ದಾರಿ. ಒಂದು ದಿನ ನಡೆದ್ರೆ ನಿಂಗೆ ಹುಲ್ಲು ಗಾವಲು ಸಿಕ್ಕುತ್ತೆ. ಅಲ್ಲಿ ಪ್ರಥಮ ಅಲೆಮಾರಿಗಳು ತಮ್ಮ ನಿಯಮದಂತೆ ನಿಂಗೆ ಆಶ್ರಯ ಕೊಡ್ತಾರೆ." ಈಗ ದಾರುವಿನತ್ತ ತಿರುಗಿದ್ದ ಅರಬ್ಬನ ನೋಟದಲ್ಲಿ ಒಂದು ತರಹ ಭೀತಿಯಿತ್ತು. "ಸ್ವಲ್ಪ ಕೇಳು" ಅವನೆಂದ. ದಾರು ತಲೆಯಾಡಿಸಿ, "ಇಲ್ಲ ಸುಮ್ನಿರು. ನಾನೀಗ ನಿನ್ನ ಬಿಟ್ಟು ಹೋಗ್ತೀನಿ" ಎಂದ. ಅವನತ್ತ ತನ್ನ ಬೆನ್ನನ್ನು ತಿರುಗಿಸಿ ಸ್ಕೂಲಿನ ದಿಕ್ಕಿನಲ್ಲಿ ಎರಡು ದೀರ್ಘ ಹೆಜ್ಜೆಯಿಟ್ಟು, ನಿಶ್ಚಲನಾಗಿ ನಿಂತಿದ್ದ ಅರಬ್ಬನತ್ತ ಅರೆಮನಸ್ಸಿನಿಂದ ತಿರುಗಿ ನೋಡಿ ಮತ್ತೆ ನಡೆಯತೊಡಗಿದ. ತಣ್ಣನೆಯ ನೆಲದ ಮೇಲೆ ಪ್ರತಿಧ್ವನಿಸುತ್ತಿದ್ದ ತನ್ನ ಕಾಲ ಸಪ್ಪಳವನ್ನು ಬಿಟ್ಟರೆ ಅವನು ಮತ್ತೇನನ್ನೂ ಕೇಳಲಿಲ್ಲ. ಸ್ವಲ್ಪ ಹೊತ್ತಿನ ನಂತರ ತಿರುಗಿ ನೋಡಿದಾಗ ಇನ್ನೂ ಅಲ್ಲೇ ನಿಂತಿದ್ದ ಅರಬ್ಬನು ಈಗ ಕೈಗಳನ್ನು ಜೋತುಬಿಟ್ಟು ಸ್ಕೂಲ್ ಮಾಸ್ತರನತ್ತ ನೋಡುತ್ತಿದ್ದ. ದಾರುವಿಗೆ ಕೊರಳುಕ್ಕಿ ಬಂತು. ಆದರೆ ಅಸಹನೆಯಿಂದ ಶಪಿಸಿ, ಅಸಿಸ್ಥಿತವಾಗಿ ಕೈಯಾಡಿಸಿ ಮತ್ತೆ ನಡೆಯತೊಡಗಿದ. ಸ್ವಲ್ಪ ದೂರ ಹೋಗಿ ನಿಂತು, ತಿರುಗಿ ನೋಡಿದಾಗ ಬೆಟ್ಟದ ಮೇಲೆ ಯಾರೂ ಇರಲಿಲ್ಲ.


ದಾರು ಹಿಂಜರಿದ. ನೆತ್ತಿಯ ಮೇಲೆ ಸೂರ್ಯ ಉರಿಯುತ್ತಿದ್ದ. ಸ್ಕೂಲ್ ಮಾಸ್ತರನು ಹಿಂತಿರುಗಿ ಮೊದಲು ಅನಿಶ್ಚಿತವಾಗಿ, ಅನಂತರ ನಿರ್ಧಾರದಿಂದ ನಡೆಯತೊಡಗಿದ. ಅವನು ಚಿಕ್ಕ ದಿಬ್ಬವನ್ನು ತಲುಪುವ ಹೊತ್ತಿಗೆ ಬೆವರಿನಿಂದ ತೊಯ್ದಿದ್ದ. ತನಗೆ ಸಾಧ್ಯವಿದ್ದಷ್ಟು ಬೇಗ ಬೇಗ ಹತ್ತಿ ತುದಿಯಲ್ಲಿ ಏದುಸಿರು ಬಿಡುತ್ತಾ ನಿಂತ. ದಕ್ಷಿಣಕ್ಕೆ ಶಿಲಾವೃತ ಪ್ರದೇಶವು ನೀಲಗಗನದ ಹಿನ್ನೆಲೆಯಲ್ಲಿ ಸ್ಫುಟವಾಗಿ ನಿಂತಿತ್ತು. ಆದರೆ ಪೂರ್ವದ ಬಯಲಿನಲ್ಲಿ ಉಷ್ಣದ ಹಬೆಯು ಆಗಲೇ ಏಳುತ್ತಿತ್ತು. ಭಾರವಾದ ಹೃದಯ ಹೊತ್ತು ದಾರು ಆ ನಸುಮಬ್ಬಿನಲ್ಲಿ ಬಂದೀಖಾನೆಯ ಮಾರ್ಗದಲ್ಲಿ ನಡೆಯುತ್ತಿದ್ದ ಅರಬ್ಬನನ್ನು ಗುರುತಿಸಿದ.

ಸ್ವಲ್ಪ ಹೊತ್ತಿನ ನಂತರ ಅವನು ಕ್ಲಾಸ್ ರೂಮಿನ ಕಿಟಕಿಯಗ ಮುಂದೆ ನಿಂತು ಇಡೀ ಪ್ರಸ್ಥಭೂಮಿಯ ಪಾತಳಿಯು ನಿರ್ಮಲ ಬೆಳಕಿನಲ್ಲಿ ಮೀಯುವುದನ್ನು ನೋಡುತ್ತಿದ್ದ. ಆದರೆ ದಾರು ಅದನ್ನು ಗಮನಿಸಲಿಲ್ಲ. ಅವನ ಹಿಂದೆ, ಕಪ್ಪು ಹಲಗೆಯ ಮೇಲೆ, ಸುತ್ತು ಸುತ್ತಾಗಿ ಹರಿಯುತ್ತಿದ್ದ ಫ್ರೆಂಚ್ ನದಿಗಳ ನಡುವೆ ಅವನು ಈಗ ತಾನೆ ಓದಿ ಮುಗಿಸಿದ್ದ ಫ್ರೆಂಚ್ ಅಕ್ಷರಗಳು ವಿಕಾರವಾಗಿ ಹರಡಿಕೊಂಡಿದ್ದವು.

"ನೀನು ನಮ್ಮ ಸೋದರರನ್ನು ಒಪ್ಪಿಸಿದೆ ಇದಕ್ಕೆ ನೀನು ದಂಡ ತೆರುತ್ತೀಯ."

ದಾರು ಆಕಾಶದತ್ತ, ಪ್ರಸ್ಥಭೂಮಿಯತ್ತ ಮತ್ತು ಅದರಾಚೆ ಕಡಲೆಡೆಗೆ ಚಾಚಿದ್ದ ಅಗೋಚರ ಭೂಭಾಗದತ್ತ ದೃಷ್ಟಿ ಹಾಯಿಸಿದ. ತಾನು ಅಷ್ಟೊಂದು ಪ್ರೀತಿಸಿದ್ದ ಈ ವಿಶಾಲ ಭೂಭಾಗದಲ್ಲಿ ಅವನು ಏಕಾಂಗಿಯಾಗಿದ್ದ.

✡



ಆತ್ಮ ಪರೀಕ್ಷಣೆ ಅಥವಾ ಆತ್ಮ ನಿರೀಕ್ಷಣೆ ಪೂರ್ಣ ರೂಪದಲ್ಲಿ ಆದದ್ದೇ ಆದರೆ ಅದು ಪರಿವರ್ತನೆಯೆಡೆಗೆ ಮನುಷ್ಯ ಇಕ್ಕುವ ಮೊದಲ ಹೆಜ್ಜೆಯಾಗುತ್ತದೆ. ತನ್ನನ್ನು ತಾನರಿಯಲು ಯತ್ನಿಸಿದವ ತಪ್ಪಿದ್ದಿತಿಯಿಂದ ಎಂದೂ ಮುಂದೆ ಹೋಗಲಾರ.

–ಟಾಮಸ್ ಮಾನ್

ತಾಂಬೂಲ ಚರ್ವಣದ ಪ್ರಣಯ

ಡಾ. ಟಿ. ಎನ್. ರಾಮಚಂದ್ರರಾವ್
ಬಿ. ಎ. ಸತ್ಯನಾರಾಯಣರಾವ್

ಪ್ರಪಂಚದ ಅನೇಕ ಸಂಪ್ರದಾಯಗಳಲ್ಲಿ ತಾಂಬೂಲ ಸೇವನೆ ಒಂದು ಅಪೂರ್ವ ಸ್ಥಾನ ಪಡೆದಿದೆ. ನೂರು ಕೋಟಿಗೂ ಮಿಕ್ಕ ಜನರ ನಿತ್ಯ ಜೀವನದಲ್ಲಿ ಹಾಸು ಹೊಕ್ಕಾಗಿದೆ. ನಿಜ! ತಾಂಬೂಲ ಸೇವನೆ ಒಂದು ಅಭ್ಯಾಸ; ಆದರೆ ಬೌದ್ಧ ಮತ್ತು ಹಿಂದೂ ಧರ್ಮಗಳು ಹರಡಿವಲ್ಲೆಲ್ಲ ತಾಂಬೂಲ ಸೇವನೆಯೂ ಅನಿವಾರ್ಯವಾಗಿ ಹಬ್ಬಿದೆ. ಹೀಗಾಗಿ, ಅಭ್ಯಾಸಕ್ಕಿಂತ ಹೆಚ್ಚಿನ ವೈಶಿಷ್ಟ್ಯ ಪಡೆದಿದೆ. ಭಾರತ, ಮಲಯ ಹಾಗೂ ಇಂಡೋನೇಷಿಯನ್ನರಿಗೆ ಜೀವನ ಸಂಗಾತಿಯಾಗಿರುವುದಲ್ಲದೆ, ಅವರು ಹುಟ್ಟುವಾಗ ಅವರನ್ನು ಸ್ವಾಗತಿಸುವ, ವಿವಾಹವಾಗುವಾಗ ಅಲ್ಲದೆ ಜೀವನದ ಕೊನೆಯ ಯಾತ್ರೆಯಲ್ಲೂ ಅವರೊಡನೆ ಪ್ರಯಾಣ ಬೆಳೆಸುವ ಅನುಯಾಯಿಯೂ ಆಗಿರುತ್ತದೆ. ಇಷ್ಟೊಂದು ನಿಷ್ಠೆಯಿರುವ ವಸ್ತು ಬೇರೊಂದುಂಟೆ? ಎಂದು ಧಾರಾಳವಾಗಿ ಪ್ರಶ್ನಿಸಬಹುದು.

ಸುಣ್ಣ ಲೇಪಿಸಿದ ವೀಳ್ಯದೆಲೆ, ಅದರೊಡನಿರುವ ಅಡಿಕೆ ಚೂರು "ತಾಂಬೂಲ" ಆಗುತ್ತದೆ. ಆಯಾ ಪ್ರದೇಶದ ಸಂಪ್ರದಾಯವನ್ನನುಸರಿಸಿ, ಅಲ್ಲಿ ದೊರಕುವ ಇತರ ಸಾಮಗ್ರಿಗಳನ್ನು ಬಳಸಿ ಪರಿಷ್ಕರಿಸಿದ ತಾಂಬೂಲಗಳೂ ಉಂಟು; ಅನೇಕ ವೇಳೆ ವೈವಿಧ್ಯವುಳ್ಳ ತಾಂಬೂಲವು ವ್ಯಕ್ತಿಯ ಪ್ರತಿಷ್ಠೆಯ ಕುರುಹೂ ಆಗಿರುತ್ತದೆ.

ಭೌಗೋಲಿಕವಾಗಿ ತಾಂಬೂಲ ಸೇವನೆಯ ಸಂಪ್ರದಾಯದ ಭಾಗವು ಸಾಧಾರಣವಾಗಿ ೬೦° ಮತ್ತು ೧೭೦° ಪೂರ್ವಕ್ಕೂ ಮತ್ತು ೪೦° ಉತ್ತರ ಹಾಗೂ ೧೫° ದಕ್ಷಿಣಕ್ಕಿರುವ ಭೂಭಾಗವನ್ನು ಒಳಗೊಂಡಿರುತ್ತದೆ. ಅಂದರೆ ಭಾರತ, ಪಾಕಿಸ್ತಾನ, ಬಾಂಗ್ಲಾದೇಶ, ದಕ್ಷಿಣ ಟಿಬೆಟ್, ದಕ್ಷಿಣ ಚೀನ, ಸಯಾಂ, ಇಂಡೋನೇಷಿಯಾ, ಮಲಯಾ, ನ್ಯೂಗಿನಿ ಮತ್ತು ಕಾಂಬೋಡಿಯ– ಇಲ್ಲಿಯ ಜನರ ಜೀವನವನ್ನು ಹಾಸುಹೊಕ್ಕಿದೆ.

ಇದರ ಉಗಮ ಎಲ್ಲಿ ಎಂಬುದನ್ನು ಖಚಿತವಾಗಿ ಹೇಳುವುದು ಸಾಧ್ಯವಿಲ್ಲ. ಇಂಡೋ–ಆರ್ಯನ್‌ಗಿಂತಲೂ, ಆಸ್ಟ್ರೋ–ಏಷ್ಯಾಟಿಕ್ ಇವರ ತೌರಾಗಿರಬೇಕು. ಅಂದರೆ, ಫಿಲಿಪೀನ್ಸ್,

ಬೋರ್ನಿಯೋ, ಜಾವಾ ಅಥವಾ ಸುಮಾತ್ರಗಳು ಇದರ ತೌರಾಗಿರಬೇಕು. ದಕ್ಷಿಣ ಭಾರತದ ಕಡಲತೀರದಿಂದ ಈ ಸಂಪ್ರದಾಯ ಉಗಮವಾಗಿರದಿದ್ದರೂ, ಪೂರ್ವ ಭಾರತದ ಆರ್ಕಿಪಿಲಾಗೋವಿನಿಂದ ಬಹಳ ಮುಂಚೆಯೇ ಆಮದಾಗಿರುವುದು ಸಾಧ್ಯವೆಂದು ಕಂಡು ಬರುತ್ತದೆ.

ಸಸ್ಯ ಶಾಸ್ತ್ರದ ರೀತಿಯಲ್ಲೂ ಇದರ ಮೂಲ ಪತ್ತೆ ಹಚ್ಚುವುದು ಕಷ್ಟ. ಏಕೆಂದರೆ ಅರೆಕ ಕಾಟಚು (Areca Catechu) ಮತ್ತು ಪೈಪರ್ ಬೀಟಲ್ (Piper betal) ಪೂರ್ವದಲ್ಲಿನ ಬೆಳೆಗಳು. ಅರೆಕ ಕಾಟಚುವಿನ ತೌರೂರು ಕಾಂಬೋಡಿಯಾ ಮತ್ತು ಇಂಡೋನೇಷಿಯಾವಾದರೂ, ಇದನ್ನು ಭಾರತದಾದ್ಯಂತ ಬೆಳೆಯುತ್ತಾರೆ. ಪೈಪರ್ ಬೀಟಲ್‌ನ ತೌರು ಜಾವ. ಇವುಗಳ ನಿಜವಾದ ತೌರನ್ನು ಕಂಡು ಹಿಡಿಯುವುದು ಕಷ್ಟ; ಕಾರಣ, ಅಲ್ಲಿಯ ಪೂರ್ವಿಕರು ಬಹಳ ಹಿಂದೆಯೇ ಆ ಜಾಗವನ್ನು ಬಿಟ್ಟು ಬೇರೆಡೆ ವಲಸೆಹೋಗಿದ್ದು ಅವರ ಮೂಲವನ್ನು ಪತ್ತೆ ಹಚ್ಚುವುದೇ ಕಷ್ಟವಾಗಿದೆ. ಶತಮಾನಗಳು ಕಳೆದರೂ ಹಿಂದೂ ಸಂಪ್ರದಾಯವನ್ನು ಮಾತ್ರ ನಾವು ಬಿಟ್ಟಿಲ್ಲ. ನಾಗ ಪಂಚಮಿ ಮುಂತಾದ ಹಬ್ಬಗಳನ್ನು ಆಚರಿಸುತ್ತಲೇ ಇದ್ದೇವೆ. ವೀಳ್ಯದೆಲೆಗೆ ಸಂಬಂಧಿಸಿದಂತೆ ಒಂದು ದಂತ ಕಥೆ ಇದೆ– ಪಾಂಡವರ ಕಾಲದಲ್ಲಿ ವೀಳ್ಯದೆಲೆಯ ಹಂಬಲ ಭೂಮಿಯ ಮೇಲೆ ಇರಲೇ ಇಲ್ಲ. ವಂತೆ. ಅಶ್ವಮೇಧಯಾಗಕ್ಕಾಗಿ ಪಾಟಲ ರಾಜನಾದ ವಾಸುಕಿಯ ಬಳಿಗೆ ದೂತರನ್ನು ಕಳುಹಿಸಿದಾಗ, ಆ ಸರ್ಪ ರಾಜ ಕಿರುಬೆರಳಿನ ಮೇಲ್ಭಾಗವನ್ನು ಕತ್ತರಿಸಿ ಕೊಟ್ಟನಂತೆ. ಇದನ್ನು ಭೂಮಿಯಲ್ಲಿ ನೆಟ್ಟಾಗ ವೀಳ್ಯದೆಲೆಯ ಹಂಬು ಬಂತೆಂದೂ ಅದನ್ನು ನಾಗಬಳ್ಳಿ ಅಥವಾ ಸರ್ಪಬಳ್ಳಿ ಎಂದೂ ಕರೆಯುತ್ತಾರೆಂದು ಪ್ರತೀತಿ. ಈ ದಂತ ಕಥೆ ಹೇಗಾದರೂ ಇರಲಿ, ಕ್ರಿ.ಪೂ. ೨೦೦ಕ್ಕೂ ಮುಂಚೆಯೇ ಭಾರತದಲ್ಲಿ ವೀಳ್ಯದೆಲೆಯನ್ನು ಅಗಿಯುವ ಅಭ್ಯಾಸವಿದ್ದಿತು. ಜಾಗತಿಕ ಕಥೆಗಳಲ್ಲಿ, ಇತರ ಪಾಲಿ ಪುಸ್ತಕಗಳಲ್ಲಿ ಇದರ ಬಗ್ಗೆ ಸೂಚನೆಯಿದೆ, ಜೈನ ಬರವಣಿಗೆಯಲ್ಲೂ ಇದು ಕಂಡು ಬರುತ್ತದೆ. ಸೋಮದೇವನ "ಕಥಾ ಸರಿತ್ ಸಾಗರ"ದಲ್ಲಿ ವೀಳ್ಯದೆಲೆಯ ಬಗ್ಗೆ ಮತ್ತು ತಾಂಬೂಲದ ಬಗ್ಗೆ ಸಾಕಷ್ಟು ಆಧಾರಗಳಿವೆ. ವೀಳ್ಯದೆಲೆಯು, ಸ್ವರ್ಗದಲ್ಲೂ ಕಾಣದ ೧೩ ಗುಣಗಳನ್ನು 'ಹಿತೋಪದೇಶ'ದಲ್ಲಿ ವಿವರಿಸಿದ್ದಾರೆ. ಕ್ರಿ.ಶ. ೧ನೇ ಶತಮಾನದಲ್ಲಿದ್ದ ಶುಶ್ರುತನ ಬರವಣಿಗೆಯಲ್ಲೂ. ವೀಳ್ಯದೆಲೆಯ ಬಗ್ಗೆ ವಿವರಣೆಯಿದೆ.

ಪ್ರಾಕೃತ ಕೃತಿಗಳಲ್ಲಿ ವೀಳ್ಯದೆಲೆ, ಅಡಿಕೆಯನ್ನು 'ತಾಂಬೂಲ' ಎಂದೂ, ಬರಿಯ ಎಲೆಯನ್ನು 'ನಾಗವಲ್ಲಿ' ಎಂದೂ ಕರೆದಿದ್ದಾರೆ. ಸಂಸ್ಕೃತದ ಅಡಿಕೆ–ಎಲೆ ಮಿಶ್ರಣ ಬಹುಶಃ ಇತರ ಭಾಷೆಗಳ ಮೂಲವಾಗಿರಬಹುದು. ತಮಿಳಿನಲ್ಲಿ 'ಪಾಕ್ಕು', ತೆಲುಗಿನಲ್ಲಿ 'ಪೋಕ', 'ವಕ್ಕ' ಆಗಿರಬೇಕು; ಕನ್ನಡದಲ್ಲಿ ಅಡಿಕೆ ಅಥವಾ ಅಡಕೆ, ಮಲಯಾಳದಲ್ಲಿ 'ಅಡಕ್ಕ,' 'ಅಡೆಕ್ಕ' ಆಗಿದೆ. ಒಟ್ಟಿನಲ್ಲಿ ತಾಂಬೂಲ ಸೇವನೆಗೆ ವೀಳ್ಯದೆಲೆ ಅಡಿಕೆ ಅಗತ್ಯ. ಬಹು ಹಿಂದಿನಿಂದ ಬಂದ ಈ ಪದ್ಧತಿಯ ಬಗ್ಗೆ ಭಾರತ ಮತ್ತು ಇಂಡೋನೇಷಿಯಾ ದೇಶಗಳಲ್ಲಿ ಸಂಚಾರ ಮಾಡಿದ ಯಾತ್ರಿಕರ ಬರವಣಿಗೆಯಲ್ಲಿದೆ. ತಾಂಬೂಲ ಸೇವಿಸುವ ವೈವಿಧ್ಯ, ಸಾಮಾಜಿಕ ಹಾಗೂ ಸಾಂಪ್ರದಾಯಿಕ ಮಹತ್ವ, ಔಷಧೀಯಗುಣ, ಅಲ್ಲದೆ ಸಾಂಪ್ರದಾಯಿಕವಾಗಿ ತಾಂಬೂಲ ಚರ್ವಣ ಪ್ರೇಮದ ಕುರುಹಾಗಿ ಮೆರೆದುದು ಇವೆಲ್ಲವೂ ಇವೆ. ಅತ್ಯಂತ ಪ್ರಾಚೀನ ಬರವಣಿಗೆಗಳಾದ ಅರೇಬಿಯಾ ದೇಶದ ಅಲ್ಲಾ ಇಹು ಅಹಮದ್ ಎಂಬ ವೈದ್ಯ ಕ್ರಿ.ಶ. ೧೨೨೪ರಲ್ಲಿ, ಕ್ರಿ.ಶ. ೧೬೨೪ರಲ್ಲಿ ಮಾರ್ಕೋಪೋಲೋ, ಕ್ರಿ.ಶ. ೧೬೨೮ರಲ್ಲಿ ಪೀಟರ್ ಮಂಡಿ ಹಾಗೂ ಕ್ರಿ.ಶ. ೧೭೦೮ರಲ್ಲಿ ವೆನಿಷಿಯಾದ ನಿಕೊಲೆ ಇವರುಗಳ ಬವರವಣಿಗೆಯಲ್ಲಿ ತಾಂಬೂಲದ ಮಹತ್ವದ ವರ್ಣನೆಯಿದೆ.

ಈ ವಿವರಣೆಗಳನ್ನೆಲ್ಲಾ ಹೀಗೆ ಹೇಳಬಹುದು:

೧. ಭಾರತದಿಂದ ಇಂಡೋನೇಷಿಯಾ ದೇಶಕ್ಕೆ :

ಸುವಾಸನೆಯ ವೀಳ್ಯದೆಲೆಯನ್ನು ಪುರುಷರಾಗಲೀ, ಮಹಿಳೆಯರಾಗಲೀ, ಹಗಲು ರಾತ್ರಿ

ಯೆನ್ನದೆ, ಸಾರ್ವಜನಿಕರು ಓಡಾಡುವ ಕಡೆಯಲ್ಲೆಲ್ಲಾ ರಸ್ತೆಗಳಲ್ಲೆಲ್ಲಾ ತಡೆಯಿಲ್ಲದೆ ಸೇವಿಸುತ್ತಾರೆ. ಭಾರತೀಯ ಮಹಿಳೆ ಮತ್ತೊಬ್ಬಳನ್ನು ಸಂಧಿಸಿದಾಗ ಅಥವಾ ಸಂದರ್ಶಿಸುವಾಗ ವೀಳ್ಯದೆಲೆ, ಅಡಿಕೆ, ಸುಣ್ಣ ಒಯ್ಯುತ್ತಾಳೆ. ಇಬ್ಬರೂ ಆನಂದದಿಂದ ಸೇವಿಸುತ್ತಾರೆ. ಹೀಗೆಯೇ ಸಯಾಮ್ ಹಾಗೂ ಲಾವೋಷಿಯನ್ನರು ಯಾವಾಗಲೂ ವೀಳ್ಯದೆಲೆ ಅಗಿಯುತ್ತಿರುತ್ತಾರೆ. ಕೆಲಸವಿರಲಿ, ಸೋಮಾರಿಯಾಗಿರಲಿ, ಕುಳಿತಿರಲಿ, ಓಡಾಡಲಿ, ಹಸ್ಸಿರಲಿ, ಇಲ್ಲದಿರಲಿ ತಾಂಬೂಲ ಸೇವನೆಯಾಗಲೇ ಬೇಕು. ಫಿಲಿಪೀನ್ಸ್ ದ್ವೀಪಗಳಲ್ಲಿ ಸಹ, ಚು-ಫಾನ್ ಚಿ-ಎಂಬ ಚೀನಾಯಾತ್ರಿಕನ ಬರವಣಿಗೆಯಂತೆ ಅಡಿಕೆಗೆ ಆದ್ಯತೆ ಉಂಟಂತೆ. ಪ್ರತಿಯೊಬ್ಬನ ಬಳಿಯೂ ಸುಣ್ಣದ ಡಬ್ಬಿ ಇರಲೇ ಬೇಕು. ಬೆರಳಿನಿಂದ ಅಗೆದು ಎಲೆಯ ಮೇಲೆ ಸವರಲೇ ಬೇಕು; ಅಡಿಕೆಯೊಡನೆ ಅಗಿಯಲೇ ಬೇಕು. ಬಾಯೆಲ್ಲಾ ಒರಟಾದರೂ ಕೆಂಪು ವರ್ಣಕ್ಕೆ ತಿರುಗಿದ ತುಟಿ, ನಾಲಿಗೆ, ಕಪ್ಪಾದ ಹಲ್ಲು ಉಂಟಾದರೂ ಒಸಡನ್ನು ಶುದ್ಧ ಮಾಡುತ್ತದಂತೆ!

ಸುಮಾತ್ರ, ಜಾವ ಮತ್ತು ಬೋರ್ನಿಯೋ ದೇಶಗಳಲ್ಲಿ ಎಲೆ ಮತ್ತು ಅಡಿಕೆ ಹೇರಳವಾಗಿ ದೊರಕುವುದಲ್ಲದೆ ಶ್ರೇಷ್ಠವೆಂದೂ ಕಂಡು ಬಂದಿವೆ. ಬೋರ್ನಿ ಎಂಬಾತ ಈ ಬಗ್ಗೆ ಸ್ವಾರಸ್ಯವಾಗಿ ಹೀಗೆ ಬರೆಯುತ್ತಾನೆ. ಅಲ್ಲಿಯ ರಾಣಿಯು ಅತಿಥಿಗಳನ್ನು ಸ್ವಾಗತಿಸುವಾಗ ವೀಳ್ಯದೆಲೆಯಿರುವ ಚಿನ್ನದ ಡಬ್ಬಿಯನ್ನು ಅವರ ಮುಂದೆ ಇಟ್ಟು ಅದರಿಂದ ಅಲ್ಪವಾದರೂ ಅವರು ಸೇವಿಸುವಂತೆ ಮಾಡುತ್ತಾಳೆ; ಹೀಗೆ ಮರ್ಯಾದಿಸುವುದು ಯುರೋಪಿನ ರಾಜರ ಸಭೆಯಲ್ಲಿ 'ನೈಟ್ ಹುಡ್' ಪದವಿ ಕೊಟ್ಟಷ್ಟೇ ಬೆಲೆಯುಳ್ಳದ್ದು.

ಭಾರತದಿಂದ, ಇಂಡೋನೇಷಿಯಕ್ಕೆ ಹರಡಿದ ಈ ತಾಂಬೂಲ ಸೇವನೆ, ಇಂಡಿಯನ್ ಆರ್ಕಿಲಾಗೋವಿಗಿಂತ ದೂರವಿರುವ ಟಿಕೋಪಿಯಾ ಎಂಬ ಸಣ್ಣ ದ್ವೀಪಕ್ಕೂ ಹರಡಿ, ಅಲ್ಲಿಯ ಜನರ ಜೀವನವನ್ನು ಹಾಸುಹೊಕ್ಕಿದೆ.

೨. ಸಾಮಾಜಿಕ ಹಾಗೂ ಧಾರ್ಮಿಕ ನೀತಿ :

ಬಂದ ಅತಿಥಿಗಳಿಗೆ ಎಲೆ- ಅಡಿಕೆ ಕೊಡುವುದು ಭಾರತದ ಮನೆಗಳಲ್ಲಿ ಪ್ರಾಚೀನ ಕಾಲದಿಂದಲೂ ಬಂದಿರುವ ಪದ್ಧತಿ. ಹಿಂದೂ ಪದ್ಧತಿಯಂತೆ ಅಡಿಕೆ ಕೊಡುವುದು ದೇವರಿಗೆ ಅರ್ಪಿಸುವುದರ ಸೂಚ್ಯ. ಇದಕ್ಕೆ ವಿಶೇಷ ಸಂದರ್ಭಗಳಲ್ಲಿ ಮತ್ತು ಶುಭಕಾರ್ಯಗಳಲ್ಲಿ ಹೆಚ್ಚಿನ ಮಹತ್ವವಿದೆ. ಭಾರತದ ಎಲ್ಲ ಜನಾಂಗದವರಲ್ಲೂ, ಎಲ್ಲ ಮತದವರೂ, ಮದುವೆ ಸಂದರ್ಭದಲ್ಲಿ ಎಲೆ ಅಡಿಕೆ ಕೊಡುವ ಪದ್ಧತಿ ಕಾಣುತ್ತೇವೆ. ಬ್ರಾಹ್ಮಣನ ಉಪನಯನ ಕಾಲದಲ್ಲಿ ಎಲೆ-ಅಡಿಕೆ ಮೊದಲ ಬಾರಿಗೆ ಕೊಡಿಸಿದರೆ, ಮದುವೆಯಾದಾಗ, ಮೊದಲ ಬಾರಿಗೆ ತಾಂಬೂಲ ಸೇವಿಸುವ ಅವಕಾಶ ಪಡೆಯುತ್ತಾನೆ. ಅಲ್ಲದೆ ಮರಣಕಾಲದಲ್ಲೂ ಇದರ ಉಪಯೋಗವುಂಟು. ನೇಯ್ಗೆಯವರಲ್ಲಿ ತಾಳಿ ಕಟ್ಟುವಾಗ, ವೀಳ್ಯದೆಲೆಯನ್ನು ಅದಲು ಬದಲು ಮಾಡಿದರೇನೇ ಮದುವೆ ಪೂರ್ಣವಾದಂತೆ. ಒಡಿಸ್ಸಾದ ಕೃಷಿಕಾರರು ಐದು ಅಡಿಕೆಯನ್ನು ಒಂದು ಡಬ್ಬದಲ್ಲಿಟ್ಟು ದೇವರೆಂದೇ ವಿಶೇಷ ಸಂದರ್ಭಗಳಲ್ಲಿ ಪೂಜಿಸುತ್ತಾರೆ. ಮದುವೆಯ ಕೊನೆಯಲ್ಲಿ ಹಣ್ಣು-ಹೂವು, ಎಲೆ-ಅಡಿಕೆ ಕೊಡುವುದು ವಾಡಿಕೆಯಲ್ಲಿದೆ. ಸಯಾಂ ಜನರಲ್ಲೂ ಭಾರತದಲ್ಲಿನಂತೆ ಅಡಿಕೆಗೆ ಪ್ರಾಮುಖ್ಯವಿದೆ. ಲಗ್ನವನ್ನು 'ಕಾನ್ ಮಾಕ್' ಎನ್ನುತ್ತಾರೆ; ಇದರ ಅರ್ಥ 'ಪಾತ್ರೆಯು ತುಂಬ ಎಲೆ ಅಡಿಕೆ' ಎಂದು. ಮಲಯ ದೇಶದ ಜನರಲ್ಲಿ ಮರ್ಯಾದೆಗೆ ಗೌರವಕ್ಕೆ ಮತ್ತು ಒಳ್ಳೆಯ ನೀತಿಯ ಕುರುಹಾಗಿ ಎಲೆ ಅಡಿಕೆಯಿದೆ. ಅವಮರ್ಯಾದೆ ಮಾಡಿದರೆ, ಹದ್ದು ಮೀರಿ ವರ್ತಿಸಿದರೆ, ಮಲಯ ಶಾಸನದಂತೆ ಶಿಕ್ಷೆಗೆ ಅರ್ಹವಾಗಬಲ್ಲ ಎಂಬಷ್ಟು ಸಾಮಾಜಿಕ ಜೀವನದಲ್ಲಿ ಬೆರೆತು ಹೋಗಿದೆ. ಎರಡು ಮನೆತನದವರು ತಾಂಬೂಲ ಅದಲು ಬದಲು ಮಾಡಿದರೇನೇ ಮದುವೆಗೆ ನಾಂದಿ ಎಂದರ್ಥ. ಮದುವೆಯ ಸಂದರ್ಭದ ಮೆರವಣಿಗೆಯಲ್ಲಿ ಬಳುವಳಿಯಾಗಿ ವೀಳ್ಯದೆಲೆಯ ಬಳ್ಳಿಯನ್ನು ತೆಗೆದುಕೊಂಡು ಹೋಗುವು

ದಲ್ಲದೆ, ತೆಂಗಿನ ಹಾಗೂ ಅಡಿಕೆಯ ಕೆನೆಯನ್ನು ಬಳುವಳಿಯಾಗಿ ತೆಗೆದುಕೊಂಡು ಹೋಗುತ್ತಾರೆ. ಪುನರ್ಜನ್ಮದಲ್ಲಿ ಸೇವಿಸಲು ಅನುಕೂಲವಾಗಲೆಂದು ವೀಳ್ಯದೆಲೆಯನ್ನು ಶವದೊಡನೆ ಭೂಮಿಯಲ್ಲಿ ಹೂಳುವ ಪದ್ಧತಿ ಮಲಯ ಜನರಲ್ಲಿದೆ. ಸುಮಾತ್ರದಲ್ಲಿ ವಿವಾಹ ವಿಚ್ಛೇದನದ ಕುರುಹಾಗಿ ಅಡಿಕೆಯನ್ನು ಬಳಸುತ್ತಾರೆ. ಹಣ್ಣಾದ ಅಡಿಕೆಯನ್ನು ಮಡದಿಗೆ ಕೊಟ್ಟು ಮೂರು ಸಲ 'ತಲಾವ್' ಎಂದು ನುಡಿದರೆ ವಿಚ್ಛೇದನಕ್ಕೆ ಅನುವು ಮಾಡಿಕೊಟ್ಟಂತೆ.

ಇಂದಿಗೂ ಈ ಪದ್ಧತಿ ರೂಢಿಯಲ್ಲಿವೆ. ಆಯಾ ದೇಶವ ಪೂರ್ವಿಕರ ತಾಂಬೂಲ ಸೇವನೆ ಇಂದಿಗೂ ಪದ್ಧತಿಯಾಗಿದೆ. ತಾಂಬೂಲ ಸೇವನೆಯ ಮದುವೆ ಊಟಗಳಲ್ಲಿ ಪ್ರತಿಷ್ಠೆಯ ಕುರುಹಾಗಿದೆ; ನೃತ್ಯ ಶಾಲೆಗಳಲ್ಲಿ ಹಾಗೂ ಶವ ಸಂಸ್ಕಾರಗಳಲ್ಲಿ ಗೌರವ ಸೂಚ್ಯವಾಗಿದೆ.

೩. ಔಷಧೀಯ ಗುಣ :

ಸೋಮದೇವನ ಬರವಣಿಗೆಯಲ್ಲಿ ೫ ಬಗೆಯ ಹಣ್ಣುಗಳು, ವೀಳ್ಯದೆಲೆ, ಕರ್ಪೂರವನ್ನು ಒಳಗೊಂಡ ಅಡಿಕೆಯ ಬಗ್ಗೆ ವಿವರಣೆಯಿದೆ. ಹಿಂದೂ ಚಿಕಿತ್ಸಾ ವಿಧಾನ ನಿಘಂಟಿನಲ್ಲಿ ವೀಳ್ಯದೆಲೆ ಸೇವನೆಯಲ್ಲಿ ಪಂಚಸುವಾಸನೆಗಳಾಗಿ ಬಳಸುವ ಕರ್ಪೂರ, ಕಂಕಳ, ವಲಂಗ, ಜಾತಿಫಲ ಮತ್ತು ಪುಗ ಎಂದು ಗುರುತಿಸಲಾಗಿದೆ. ಹಿತೋಪದೇಶದಲ್ಲಿ ವೀಳ್ಯದೆಲೆಯನ್ನು ಖಾರ, ಕಹಿ ಎಂದೂ, ಸಾಂಬಾರ ಪದಾರ್ಥದಂತೆ ಚುರುಕೆಂದೂ, ಮನಸ್ಸನ್ನು ಹೊರ ಹಾಕುವುದೆಂದೂ, ಕಫವನ್ನು ಬಡಿದು ಓಡಿಸುವುದೆಂದೂ, ಕ್ರಿಮಿಗಳನ್ನು ನಿರ್ನಾಮಗೊಳಿಸುವುದೆಂದೂ, ಕೆಟ್ಟ ವಾಸನೆಯನ್ನು ತಡೆ ಹಿಡಿಯುವುದೆಂದೂ ವಿವರಿಸಲಾಗಿದೆ. ಊಟವಾದ ನಂತರ ಅಡಿಕೆ ಚೂರು, ಕರ್ಪೂರದೊಡನೆ ವೀಳ್ಯದೆಲೆ ಸೇವನೆ ಪಚನಕಾರಿ ಎಂದು ಶುಶ್ರುತ ತಿಳಿಸಿದ್ದಾನೆ.

ಹೆಸರಾಂತ ಅರಬ್ ಬರಹಗಾರ ಷರಿಫ್ ಎಂಬವನು "ಜಠರದ ನೀರನ್ನು ತೆಗೆಯಲು ಹಾಗೂ ದುರ್ಬಲ ಪಿತ್ತ ಜನಕಾಂಗವನ್ನು ಬಲಕಾರಿಯಾಗಿಸಲು ವೀಳ್ಯದೆಲೆ ಉತ್ತಮ ಸಹಕಾರಿ, ಅಲ್ಲದೆ, ನಿಶ್ವಾಸವನ್ನ ಸುವಾಸನೆಯಾಗಿಸಿ ಮನಸ್ಸಿಗೆ ನೆರವು ನೀಡಿ ಬುದ್ಧಿಯನ್ನು ಚುರುಕುಗೊಳಿಸುತ್ತದೆಂದೂ ತಿಳಿಸಿದ್ದಾನೆ. ಊಟದ ಅನಂತರ ವೈನ್ ಎಂಬ ಮಾದಕ ಪಾನೀಯದ ಬದಲು, ವೀಳ್ಯದೆಲೆ ಸೇವನೆ ಭಾರತೀಯರಲ್ಲಿದೆ. ಇದು ಮನಸ್ಸನ್ನು ಆಹ್ಲಾದಗೊಳಿಸಿ ನಿರಾಂತಕ ಉಂಟು ಮಾಡುತ್ತದೆ," ಎಂದಿದ್ದಾನೆ. ೧೫೧೩ರಲ್ಲಿ ದು ಆರ್ಟೆ ಎಂಬ ಪೋರ್ಚುಗೀಸ್ ಅಧಿಕಾರಿಯು ವೀಳ್ಯದೆಲೆಯ ಸೇವನೆಯು ಬಾಯನ್ನು ಕೆಂಪಾಗಿ ಮಾಡಿ ಹಲ್ಲುಗಳನ್ನು ಕಪ್ಪಾಗಿಸುತ್ತದೆ, ಅಲ್ಲದೆ ಅಪವಾಯುವನ್ನು ತಡೆಯುತ್ತದೆ ಹಾಗೂ ಬಾಯಾರಿಕೆಯನ್ನು ಶಮನಗೊಳಿಸುತ್ತದೆ ಎಂದಿದ್ದಾನೆ. ಹೊಟ್ಟೆಯನ್ನೂ ಮಿದುಳನ್ನೂ ಶುಷ್ಕವಾಗಿಟ್ಟು ಕಾಪಾಡುತ್ತದೆ ಎಂದು ಅಭಿಪ್ರಾಯ ಪಟ್ಟಿದ್ದಾನೆ.

ಹೆಚ್ಚು ಕಡಿಮೆ ಎಲ್ಲ ರೋಗಗಳ ನಿವಾರಣೆಗೆ ಅಡಿಕೆಯನ್ನು ಬಳಸುವುದು ಸುಮಾತ್ರದ ಕೆಲವು ಭಾಗಗಳಲ್ಲಿ ಕಂಡುಬಂದಿದೆ. ಕಾಲರಾ ಗುಣಪಡಿಸಲು ಪುಡಿಮಾಡಿದ ಅಡಿಕೆಯ ಕಷಾಯವನ್ನು ಅಕ್ಕಿ ನೀರಿನಲ್ಲಿ ಸೇವಿಸುತ್ತಾರೆ. ದಕ್ಷಿಣ ಚೀನಾದಲ್ಲಿ ವೀಳ್ಯದೆಲೆಯ ಸೇವನೆ ಪ್ರಾಚೀನ ಕಾಲದಿಂದಲೂ ಇದೆ. ಚೀನಾದೇಶದ ಬೃಹತ್ ಎನ್‌ಸೈಕ್ಲೋಪಿಡಿಯಾದ ಉಲ್ಲೇಖದಂತೆ ದಕ್ಷಿಣ ಭಾಗದ ಹವೆಯು ತೇವದಿಂದ ಕೂಡಿದ್ದು, ಅಡಿಕೆಯನ್ನು ಸೇವಿಸದಿದ್ದರೆ ಮಲೇರಿಯಾವನ್ನು ಉಚ್ಚಾಟನೆ ಮಾಡುವುದೂ ಅಸಾಧ್ಯವೆಂದು ತಿಳಿದು ಬರುತ್ತದೆ.

ಅಡಿಕೆಯ ಗುಣವನ್ನು ಹೀಗೆ ನಿರೂಪಿಸಬಹುದು: ೧) ಸಾಮಾನ್ಯನಿಗೆ ಅಮಲು ಉಂಟು ಮಾಡುವುದು. ೨) ಮದ್ಯಪಾನ ಮಾಡಿದವರನ್ನು ಸಮಾಧಾನಗೊಳಿಸುವುದು. (೩) ಹಸಿವನ್ನು ಇಂಗಿಸುವುದು.

ಎಲೆ–ಅಡಿಕೆ ಸೇವನೆಯಿಂದ ಮಿದುಳು ಮತ್ತು ಜಠರವನ್ನು ಶುದ್ಧಮಾಡಬಹುದು; ಅಲ್ಲದೆ ವಸಡು ಮತ್ತು ಹಲ್ಲುಗಳು ಗಡುಸಾಗುತ್ತವೆ ಎಂದು ಪೋರ್ಚುಗೀಸ್‌ನ ಸಸ್ಯಶಾಸ್ತ್ರಜ್ಞ ಗಾರ್ಸಿಯ–ಡ–ಓರ್ಟ (Garcia Da Orta) ಎಂಬಾತ ೧೫೬೩ರಲ್ಲಿ ಉಲ್ಲೇಖಿಸಿದ್ದ.

೪. ಪ್ರಣಯ ಸೂಕ್ಷ್ಮ :

ವಿಜಯ ನಗರದಲ್ಲಿ ರಾಯಭಾರಿಯಾಗಿದ್ದ ಅಬ್ದುಲ್ ರಜಾಕ್ ಎಂಬಾತನ ಬರವಣಿಗೆಯಲ್ಲಿ ರಾಜನನ್ನು ಭೇಟಿಯಾದಾಗಲೆಲ್ಲ ಎಲೆ ಮತ್ತು ಕರ್ಪೂರ ದೊರಕುತ್ತಿತ್ತೆಂದು ೧೪೪೩ ರಲ್ಲಿ ಬರೆದಿದ್ದಾನೆ. ವೀಳ್ಯದೆಲೆಯನ್ನು ವರ್ಣಿಸುವಾಗ ಗುಪ್ತ ಖಾಯಿಲೆಗಳನ್ನು ಗುಣಪಡಿಸುವ ಗುಣಹೊಂದಿರುವುದಲ್ಲದೆ ಕಾಮೋದ್ರೇಕ ಗುಣಹೊಂದಿರುವುದನ್ನು ಒತ್ತಿ ಹೇಳಿದ್ದಾನೆ. ಹಿತೋಪದೇಶದ ಮೂರನೆ ಪುಸ್ತಕದಲ್ಲಿ ವೀಳ್ಯದೆಲೆಯನ್ನು ಬಾಯನ್ನು ಸುಂದರಗೊಳಿಸುವುದಲ್ಲದೆ ಸ್ವಚ್ಛಮಾಡಿ ಪ್ರೇಮವನ್ನು ಉದ್ರೇಕಿಸುತ್ತದೆ ಎಂದು ತಿಳಿಸಿದೆ. ಅರಬ್ ವೈದ್ಯರ ಬರವಣಿಗೆಯಲ್ಲಿ ತಾಂಬೂಲ ಸೇವನೆಯು ಭಾರತೀಯರಿಗೆ ಹರ್ಷವನ್ನುಂಟುಮಾಡುವುದಲ್ಲದೆ ಮದ್ಯ ಸೇವನೆಯನ್ನು ದೂರ ಮಾಡಿದೆ ಎಂದು ಸೂಚಿಸಲಾಗಿದೆ. ೧೨೯೫ ರಲ್ಲಿ ಕೊಂಕಣಕ್ಕೆ ಭೇಟಿ ಇತ್ತ ಮಾರ್ಕೋ ಪೋಲೋ ತಾಂಬೂಲ ಚರ್ವಣ, ದೇಶೀಯರ ಆರೋಗ್ಯವನ್ನು ಮತ್ತು ರೂಪವನ್ನು ಉತ್ತಮಗೊಳಿಸುವ ಸಾಧನ ಎಂದು ತಿಳಿಸಿದ್ದಾನೆ.

ಭಾರತದ ವಿವಿಧ ರಾಜರುಗಳು ಸಭೆಯಲ್ಲಿದ್ದ ಅರಬ್ಬೀ ಪ್ರಯಾಣಿಕರು ತಾಂಬೂಲ ಸೇವನೆ ಬಹಳ ಗಾಢವಾದುದು ಹಾಗೂ ಸಂತಸಕಾರಿ ಎಂದು ಪ್ರಶಂಶಿಸಿದ್ದಾರೆ. ಪ್ರಾಯಶಃ ರಾಜರ ಅಂತಃಪುರದಲ್ಲಿ ಅನೇಕ ಸ್ತ್ರೀಯರಿರಲು ತಾಂಬೂಲದ ಗುಣವೇ ಕಾರಣ ಹಾಗೂ ಆಕರ್ಷಣ ಎಂದಿದ್ದಾರೆ.

೧೫೯೮ ರಲ್ಲಿ ಲಿನ್ಸ್ಕೋಟನ್ (Linschoten) ಎಂಬಾತ, ಸ್ತ್ರೀಯರು ಗೌಪ್ಯವಾಗಿ ತಮ್ಮ ಗಂಡಂದಿರೊಡನೆ ಇರುವಾಗ ತಾಂಬೂಲ ಸೇವನೆಯಾದ ನಂತರ ಪ್ರಣಯ ಕೇಳಿಯಲ್ಲಿ ತೊಡಗುತ್ತ ಇದ್ದರೆಂದು ಬರೆದಿದ್ದಾನೆ. ಮಲಯ ದೇಶದ ಜನರು ಮದುವೆಗಳಲ್ಲಿ ಹೇರಳವಾಗಿ ವೀಳ್ಯದೆಲೆಯನ್ನು ಬಳಸುತ್ತಾರೆ. ಮದುವೆಯ ಉಡುಗೊರೆಗಳಲ್ಲಿ ತಾಂಬೂಲ ತುಂಬಿರುವ ತಟ್ಟೆ ಹಾಸಿಗೆಯ ಮೇಲೆ ಅಗ್ರಸ್ಥಾನ ಪಡೆದು ರಾರಾಜಿಸುತ್ತಿರುತ್ತದೆ. ಸುಮಾತ್ರದಲ್ಲಿ ವಿವಾಹ ವಿಚ್ಛೇದನದ ಕುರುಹು, ಅಡಕೆ. ಕೋಪಗೊಂಡಿದ್ದಾಗ ಪತಿಯನ್ನು 'ಮೂರು ಚೂರು ಅಡಕೆ ಕೊಡು' ಎಂದರೆ ಆತ ತೆಪ್ಪಗಾಗುತ್ತಾನೆ.

ಬೋರ್ನಿಯೋ ಮತ್ತು ಸೆಲಲ್ ಬೆಸ್ (Celelbes) ಎಂಬಲ್ಲಿ ಯುವಕ ಯುವತಿಯನ್ನು ಪ್ರೀತಿಸಿದರೆ, ಪ್ರೀತಿಯ ಕಾಣಿಕೆಯಾಗಿ ತಯಾರಿಸಿದ ಅಡಿಕೆಯನ್ನು ಆಕೆಗೆ ಕಳುಹಿಸುತ್ತಾನೆ. ಆಕೆ ಅದನ್ನು ಸ್ವೀಕರಿಸಿದರೆ ತನ್ನ ಪ್ರೀತಿಗೆ ಆಹ್ವಾನ ಕೊಟ್ಟಂತೆ. ತನಗೂ ಕಳುಹಿಸುವಂತೆ ಆಕೆಗೆ ಮನವಿ ಮಾಡುತ್ತಾನೆ. ಆಕೆ ಕಳುಹಿಸಲು ನಿರಾಕರಿಸಿದರೆ ಅಥವಾ ತಯಾರಿಸಿಲ್ಲದ ಅಡಿಕೆಯನ್ನು ಕಳುಹಿಸಿದರೆ ತಿರಸ್ಕರಿಸಿದಳೆಂದೇ ಅರ್ಥ. ಆದರೆ ಆತನ ಪತ್ನಿಯಾಗಲು ಇಚ್ಛಿಸಿದರೆ, ಸೇವಿಸಲು ಅನುಕೂಲವಾಗುವಂತಹ ಬಲಿತ ಅಡಿಕೆ ಸೂಕ್ತ ಪರಿಕರದೊಡನೆ ಕಳುಹಿಸುವಳು. ಆಗ ಆಕೆ ಒಪ್ಪಿರುವಳೆಂದು ಪ್ರೇಮಿ ತಿಳಿಯುತ್ತಾನೆ. ಯುವಕ ಪ್ರೇಮ ಗಾನ ನುಡಿಸುತ್ತಾ, 'ನಲ್ಲೇ ಅಡಿಕೆಯ ಚೂರೊಂದನ್ನು ನನ್ನ ಬಾಯಲ್ಲಿಡು, ಎಂದೆಂದಿಗೂ ನನ್ನ ಪ್ರೀತಿ ನಿನ್ನಲ್ಲೇ' ಎನ್ನುತ್ತಾನೆ.



"ಕೈ ಹಿಡಿದವರಿಂದ ನಷ್ಟ-ಅಂತ ಅಂದ್ರಲ್ಲ, ಅದು ಮಾತ್ರ ಸರಿ ಜೋಯಿಸರೆ, ನೀವು ಇಷ್ಟು ಹೇಳಿದ್ದರಲ್ಲಿ!"

೫. ನಾಣ್ಯದ ಇನ್ನೊಂದು ಮುಖ :

ತಾಂಬೂಲ - ಸೇವನೆಯು ಧಾರ್ಮಿಕ ಸೂಚಕ ಹಾಗೂ ಸಾಮಾಜಿಕ ನೀತಿಯನ್ನಲ್ಲದೆ ಇನ್ನೊಂದು ಹಗುರ ರೂಪವನ್ನು ಹೊಂದಿದೆ. ಅನೇಕ ಪ್ರಯಾಣಿಕರ ಬರವಣಿಗೆಯಲ್ಲಿನ ಘಟನೆಗಳಿಂದ ಇದು ವ್ಯಕ್ತವಾಗುತ್ತದೆ. ಬಾಯಿ ಮತ್ತು ಹಲ್ಲುಗಳು ಕಪ್ಪು ರಕ್ತಲೇಪನವಾಗಿದ್ದು ಉಗುಳುವಾಗಲೆಲ್ಲ ರಕ್ತವನ್ನು ಚಿಮ್ಮಿದಂತೆ ಕಾಣುತ್ತದೆ ಎಂದು ಒಬ್ಬ ಪ್ರಯಾಣಿಕ ಬರೆಯುತ್ತಾ, .. ಹಸು ಮೇವು ತಿನ್ನುವಂತೆ, ನಿಂತಲ್ಲಿ, ಕೂತಲ್ಲಿ, ಓಡಾಡುವಾಗ ಹಗಲೆಲ್ಲಾ ತಾಂಬೂಲ ಸೇವಿಸುತ್ತಾರೆ ಎನ್ನುತ್ತಾನೆ; ಅಲ್ಲದೆ, "ಸ್ತ್ರೀಯರಿಗೆ ಬೇರೆ ಕೆಲಸ ವಿಲ್ಲದೆ ಬಾಯಿ ತೊಳೆದು ಕೊಳ್ಳುವುದು, ತಾಂಬೂಲ ಜಗಿಯುವುದು ಅಷ್ಟೇ ಕೆಲಸ' ಎಂದೂ ಬರೆಯುತ್ತಾನೆ.

ಪಾಶ್ಚಿಮಾತ್ಯರ ಮೇಲೆ ತಾಂಬೂಲ ಸೇವನೆಯ ಪ್ರಭಾವವೇ ಬೇರೆಯದಾಗಿದೆ. ೧೬೫೩ರಲ್ಲಿ ಸೂರತ್‌ನಲ್ಲಿ ಈ ಅಭ್ಯಾಸ ಮೊದಲಬಾರಿಗೆ ಕಂಡಾಗ 'ನಿಕಲೊ ಮನಸ್ಸಿ' (Niccolo Manucci) ಎಂಬಾತ ಹೀಗೆ ಬರೆಯುತ್ತಾನೆ. 'ಪ್ರತಿಯೊಬ್ಬರೂ ಕೆಂಪಗೆ ರಕ್ತದಂತೆ ಉಗಿಯುವುದನ್ನು ಕಂಡಾಗ ನನಗೆ ಆಶ್ಚರ್ಯವಾಯಿತು, ಅವರ ಹಲ್ಲುಗಳೆಲ್ಲ ಮುರಿದಿರಬೇಕು ಎಂದು ಊಹಿಸಿದೆ. ಹಾಗೂ ಒಬ್ಬಾಕೆಯನ್ನು ಕೇಳಿದೆ 'ಏನಮ್ಮ! ಇಲ್ಲಿ ಪ್ರತಿಯೊಬ್ಬರಿಗೂ ಹಲ್ಲು ಕೀಳಿಸಿಕೊಳ್ಳುವ ಅಭ್ಯಾಸವಿದೆಯೇ?' ಎಂದು. ಆಗ ಆಕೆ ತಾಂಬೂಲ ತರಲು ಅಪ್ಪಣೆ ಮಾಡಿ, ನನಗೂ ತಿನ್ನಲು ಕೊಟ್ಟಳು. ಸೇವಿಸಿದ ನಂತರ, ನನ್ನ ತಲೆ ತಿರುಗಲು ಆರಂಭವಾಯಿತು. ಸಾಯುತ್ತಿರುವೆನೇನೋ ಎಂಬ ಭೀತಿಯುಂಟಾಯಿತು. ವಿವರ್ಣನಾದೆ. ವೇದನೆಗೊಳಪಟ್ಟೆ: ಆಕೆ ಸ್ವಲ್ಪ ಲವಣವನ್ನು ತಿನ್ನಿಸಿ ಪ್ರಜ್ಞೆ ಬರುವಂತೆ ಮಾಡಿದಳು. ಮೊದಲ ಬಾರಿ ಸೇವಿಸಿದ ಎಲ್ಲರಿಗೆ ಹೀಗೆಯೇ ಅನುಭವವಾಗುತ್ತದೆಂದು ತಿಳಿಸಿದಳು'.

ಅಸ್ಸಾಂನಲ್ಲಿನ ಬುಡ ಕಟ್ಟಿನ ಜನ, ಅದರಲ್ಲೂ ಖಾಸಿಸ್ (Khasis) ಎಂಬ ಜನಾಂಗ ತಾಂಬೂಲ ಸೇವಿಸುತ್ತಲೇ ಇರುತ್ತಾರೆ. ಪ್ರಯಾಣದ ದೂರವನ್ನು ಅಳೆಯ ಬೇಕಾದರೆ ಎಷ್ಟು ಅಡಿಕೆಯನ್ನು ಅಗಿದರು ಎಂಬುದೇ ಲೆಕ್ಕ!

ಉತ್ತರ ಬರ್ಮೀಯರು ಸಹ ತಾಂಬೂಲ ಸೇವಿಸುವವರು. ಅವರುಗಳ ಹಲ್ಲುಗಳು ಕಪ್ಪಾಗಿ ಹೊಳಪಾಗಿರುತ್ತವೆ. ಇದು ಅಸಹ್ಯವೆಂದು ಯಾರಾದರೂ ಹೇಳಿದರೆ ಅದನ್ನು ಸೌಂದರ್ಯದ ಕುರುಹು ಎನ್ನುತ್ತಾರೆ. ಎಲ್ಲ ಕ್ರೂರ ಮೃಗಗಳ ಹಲ್ಲೂ ಬಿಳುಪು' ಎನ್ನುತ್ತಾರೆ. ಬರ್ಮದಲ್ಲಿನ ಸನ್ಯಾಸಿಗಳು ಯಾವಾಗಲೂ ಒಳ್ಳೆಯ ತಾಂಬೂಲ ಸೇವಿಸುವುದರಲ್ಲಿ ಅಗ್ರಗಣ್ಯರು. ಧೂಮಪಾನ ನಿಷೇಧವೆಂದರೂ ತಾಂಬೂಲ ಸೇವನೆಯ ಬಗ್ಗೆ ಯಾರೂ ಚಕಾರವೆತ್ತುವುದಿಲ್ಲ. 'ತಾಂಬೂಲ ಸೇವಿಸುವ ತನಕ ಯಾರೊಬ್ಬನೂ ಬರ್ಮಿ ಭಾಷೆಯನ್ನು ಚೆನ್ನಾಗಿ ಮಾತನಾಡಲಾರ' ಎಂಬ ನಂಬಿಕೆ ಅವರಲ್ಲಿದೆ.

ತಾಂಬೂಲ ಪೆಟ್ಟಿಗೆ ಹೊಂದಿರುವ ಹೆಂಗಸು ಒಳ್ಳೆಯ ಕಾವಲುಗಾರಳು ಎಂದು ಬೋರ್ನಿಯೋದಲ್ಲಿನ ನಂಬುಗೆ. ಏಕೆಂದರೆ, ತಾಂಬೂಲ ಚರ್ವಣ ಮಾಡುತ್ತಾ, ಆಕೆ ಎಚ್ಚರದಿಂದ ಇರುತ್ತಾಳೆ; ಆದರೆ ಹೆಂಗಸು ಒಬ್ಬಳೇ ಇರುವುದು ಅಪಾಯಕಾರಿಯಾದ್ದರಿಂದ ಅವಳ ಜೊತೆಗೆ ಒಬ್ಬ ಗಂಡಸಿರಲೇ ಬೇಕು!

ಇದು ತಾಂಬೂಲ ಚರ್ವಣದ ಕೋಟಿ ಜನರ ಕಥೆ. ಅವರ ಪ್ರಣಯ, ಆರೋಗ್ಯ ಅಂತಿಮ, ಎಲ್ಲವೂ ತಾಂಬೂಲದ ಪೆಟ್ಟಿಗೆಯಲ್ಲಿ ಅಡಕವಾಗಿದೆ. ❁

ನಿರುಪಯುಕ್ತ ಮಾಹಿತಿ

ಅಮೇರಿಕದ ನೇತ್ರಪರೀಕ್ಷಣ ಸಂಸ್ಥೆಯೊಂದು ಅಂದಾಜು ಮಾಡಿದಂತೆ ನಾವು ಪ್ರತಿ ೧.೫ ಸೆಕೆಂಡಿಗೊಮ್ಮೆ ಎವೆಇಕ್ಕುತ್ತೇವೆ, ಅಂದರೆ ನಿಮಿಷಕ್ಕೆ ೨೫ ಸಲದಂತೆ.

ನಿಲ್ಲುವ ಜಾಗ....೩ ಡಾಲರು

ನನ್ನ ಟೇಬಲ್ ಮುಂದಿರುವ ಇತರರು ಮಾತು ನಿಲ್ಲಿಸುತ್ತಾರೆ. ನನಗೆ ನೆರವಾಗಲು ಅವರ ಕಾತರ ನನಗೆ ಅರ್ಥವಾಗುತ್ತದೆ. ಏನೂ ಅರ್ಥವಾಗದವನಂತೆ ಕೈ ಎತ್ತುತ್ತೇನೆ. ಪರಿಣಾಮವಾಗುತ್ತದೆ. "ಏನಾಗಬೇಕಿತ್ತು?" ಮೂವರೂ ಒಟ್ಟಾಗಿಯೇ ಕೇಳಿದಂತೆ ಕೇಳುತ್ತಾರೆ.

ಅವರು ಥಿಯೇಟರ್‌ಗಳ ಗುರುತು ಹಾಕುತ್ತಿದ್ದಂತೆ ನಾನು ಬೀಯರ್ ಸೇವಿಸುತ್ತಿರುತ್ತೇನೆ. ನಾನು ಇದ್ದಲ್ಲಿಂದ ಥಿಯೇಟರ್‌ಗಳಿದ್ದಲ್ಲಿಗೆ ನಡೆದೇ ಹೋಗಬಹುದಂತೆ. ಅವರು ಮಾರ್ಗದರ್ಶನ ಮಾಡುತ್ತಾರೆ; ವರ್ಷಾನುಗಟ್ಟಲೆ ನಡೆಯುತ್ತಿರುವ ಪ್ರದರ್ಶನಗಳ ಕುರಿತು ಅವರು ಹೇಳುತ್ತಾರೆ. ಮ್ಯಾಟಿನಿ ಟಿಕೆಟ್ ಪಡೆಯುವುದು ಕಷ್ಟವಾಗದು ಅನ್ನುತ್ತಾರೆ. ನೇರವಾಗಿ ಥಿಯೇಟರಿಗೆ ಹೋದರೆ ಏಜೆಂಟ್‌ಗೆ ನೀಡಬೇಕಾದ ಒಂದೆರಡು ಡಾಲರ್ ಕಮೀಷನ್ ಉಳಿತಾಯವಾಗಬಹುದು. ಇವರು ಒಳ್ಳೆಯವರಂತೆ ಕಾಣುತ್ತಾರೆ. ಇವರಿಗೆ ಮಸ್ಕಾ ಹಾಕಿದರೆ ಲಾಭವಾಗಬಹುದು. ಊಟ ಮತ್ತು ಬೀಯರ್ ಸಿಕ್ಕಿದರೂ ಸಿಗಬಹುದು. ನಾನು ನನ್ನ ಪರಿಚಯ ಮಾಡಿಕೊಳ್ಳುತ್ತೇನೆ. ಅವರು ಎಷ್ಟು ಒಳ್ಳೆಯವರೆಂದು ಹೇಳುತ್ತೇನೆ. ನನಗೆ ಗೊತ್ತಿರುವ ವಿಚಾರಗಳ ಕುರಿತು ಅವರ ಸಲಹೆ ಕೇಳುತ್ತೇನೆ. ಟ್ಯಾಕ್ಸಿ ಡ್ರೈವರ್‌ಗೆ, ವೈಟರ್‌ಗೆ, ಸೇವಕನಿಗೆ ಎಷ್ಟು ಟಿಪ್ ಕೊಡಬೇಕು? ಅವರು ಭಾರತಕ್ಕೆ ಭೇಟಿ ನೀಡಿದಾಗ ನನ್ನ ಅತಿಥಿಗಳಾಗಬೇಕೆಂದು ಆಹ್ವಾನ ನೀಡುತ್ತೇನೆ.

ಅವರು ಅವಸರದಲ್ಲೇ ನುಂಗಿ, "ಮಜಾಮಾಡಿ" ಎಂಬ ಹಾರೈಕೆಯೊಂದಿಗೆ ಹೊರಟು ಹೋಗುತ್ತಾರೆ. ನನ್ನ ಊಟ ಮತ್ತು ಬೀಯರ್‌ಗೆ ನಾನೇ ದುಡ್ಡು ಕೊಡಬೇಕಾಯಿತು.

ರಸ್ತೆಗಿಳಿದರೆ ಬಿಸಿಲೂ ಇದೆ, ಗಾಳಿಯೂ ಇದೆ, ಚಳಿಯೂ ಇದೆ. ಗ್ಲೌವ್ಸ್ ಅಥವಾ ಮಫ್ಲರ್ ಇದ್ದರೆ ಚೆನ್ನಾಗಿತ್ತು. ಆದರೆ ಈಗ ಭರದಿಂದ ನಡೆಯುವುದೊಂದೇ ದಾರಿ; ಇದು ಅಗ್ಗ ಹಾಗೂ ಆರೋಗ್ಯಕರ. ಥಿಯೇಟರುಗಳು ಆರಂಭವಾಗುವುದಕ್ಕೆ ಅರ್ಧ ಗಂಟೆ ಮೊದಲೇ ನಾನು ಬಂದಿರುತ್ತೇನೆ. 'ಹಲ್ಲೋ ಡಾಲಿ' ಆರು ವರ್ಷಗಳಿಂದ ನಡೆಯುತ್ತಿದೆ. ಮ್ಯಾಟಿನಿ ಟಿಕೆಟ್ ಕಷ್ಟವಾಗದು, ಅಗ್ಗದ ಟಿಕೆಟ್ ಕೇಳುತ್ತೇನೆ. ಕೌಂಟರ್ ಮುಂದಿರುವಾತ ಒಂದು ಟಿಕೆಟ್ ಹರಿದು ೭.೫೦ ಡಾಲರ್ ಮುದ್ರೆ ಒತ್ತುತ್ತಾನೆ. ನಾನು ಪ್ರತಿಭಟಿಸುತ್ತೇನೆ. "ಅದಕ್ಕಿಂತ ಅಗ್ಗದ ಟಿಕೆಟ್ ಇರಬೇಕು!" ಮುದ್ರೆ ಒತ್ತಿದ ಟಿಕೆಟ್ ವಾಪಸು ತೆಗೆದುಕೊಂಡು ಅವನನ್ನುತ್ತಾನೆ–"ಬರೇ ನಿಲ್ಲುವ ಜಾಗ. ೩ ಡಾಲರ್."

ನಾನು ಮುಂದಿನ ಥಿಯೇಟರ್‌ಗೆ ಹೋಗುತ್ತೇನೆ. ಆ ಮೇಲೆ ಇನ್ನೊಂದಕ್ಕೆ. ೬.೫೦ ಡಾಲರ್‌ಗಿಂತ ಕಡಿಮೆ ದರದ ಟಿಕೆಟ್ ಇಲ್ಲ. ಕೌಂಟರ್‌ಗಳ ಮುಂದೆ ಕ್ಯೂಗಳು ಬೆಳೆಯುತ್ತಿವೆ.

ನಾನು ಮತ್ತೆ 'ಹೆಲ್ಲೊ ಡಾಲಿ'ಗೆ ಹಿಂತಿರುಗುತ್ತೇನೆ. ಥಿಯೇಟರ್‌ನಲ್ಲಿ ಎರಡೂವರೆ ಗಂಟೆಗಳ ಕಾಲ ನಿಲ್ಲುವ ಹಕ್ಕು ಖರೀದಿ ಮಾಡುತ್ತೇನೆ. ಪ್ಲೇಬಿಲ್ ಬೇಡವೆನ್ನುತ್ತೇನೆ. ಅದು ಪುಕ್ಕಟೆ ಎಂದು ಗೊತ್ತಾದ ಕೂಡಲೇ ಎರಡು ತಗೊಳ್ಳುತ್ತೇನೆ.

ಪ್ರದರ್ಶನ ಬಲು ಚೆನ್ನಾಗಿತ್ತು. ತೀವ್ರ ಗತಿಯಲ್ಲಿ ಸಾಗುತ್ತದೆ. ಒಂದೇ ಕಾಲಿನಲ್ಲಿ ನಿಂತು ಆರಾಮ ಮಾಡುವುದು ಹೇಗೆಂಬುದನ್ನು ನಾನು ಕಲಿಯುತ್ತೇನೆ. ಮುಂದುಗಡೆ ಇರುವ ಕಂಬಿಗಳ ಮೇಲೆ ಕೈ ಮತ್ತು ಮುಖ ಇಟ್ಟು, ಹಿಂದಿರುವ ಗೋಡೆಗೆ ಒರಗುವ ಕಲೆಯನ್ನು ಕಲಿಯುತ್ತೇನೆ. ಅಡ್ಡಾಡುವ ಮನಸ್ಸಾದಾಗ ಅಡ್ಡಾಡುತ್ತೇನೆ. ದುಬಾರಿ ಬೆಲೆಯ ಸೀಟುಗಳಲ್ಲಿ ಕೂತವರಿಗೆ ಈ ಅವಕಾಶ ಒಂದೂ ಇಲ್ಲ. ಪ್ರದರ್ಶನದಲ್ಲಿನ ಪಾತ್ರಧಾರಿಯೊಬ್ಬನ ಮಾತನ್ನು ಹೇಳುವುದಾದರೆ, "ದುಡ್ಡು ಅಥವಾ ಅಂತಾದ್ದೇನೂ ಮಹತ್ವದ್ದಲ್ಲ." ದಿನಕ್ಕೆ ೧೭ ಡಾಲರ್ ಖರ್ಚಿನಲ್ಲಿ ನ್ಯೂಯಾರ್ಕ್ ನೋಡುವ ಮಜಾ ನನ್ನದು.

ವಿಶ್ರಾಂತಿ ವೇಳೆಗೆ ನನ್ನ ಕಾಲುಗಳು ಕುಸಿದು ಬೀಳುವಂತೆ ಭಾಸವಾಗುತ್ತದೆ. ನಾನು ಒಂದು ಆರೇಂಜೇಡ್ ಖರೀದಿ ಮಾಡುತ್ತೇನೆ. (ಅರ್ಧ ಡಾಲರ್ ಹೊರಟು ಹೋಗುತ್ತದೆ.) ಸುಧಾರಿಸಿಕೊಂಡು ಮತ್ತೆ ಪ್ರದರ್ಶನಕ್ಕೆ ಹಿಂತಿರುಗುತ್ತೇನೆ. "ದುಡ್ಡು ಅಂದರೆ ಗೊಬ್ಬರದಂತೆ. ಈ ಹೋಲಿಕೆಗಾಗಿ ಕ್ಷಮಿಸಿ, ದುಡ್ಡಿನಿಂದ ಚೆನ್ನಾಗಿ ಲಾಭ ಬರಬೇಕಿದ್ದರೆ ಅದನ್ನು ಹರಡಬೇಕು" ಎಂಬುದಾಗಿ ನನಗೊಬ್ಬ ಹೇಳಿದಾಗ ಆತ ನನ್ನನ್ನು ಉದ್ದೇಶಿಸಿಯೇ ಹೇಳಿದಂತೆ ನನಗೆ ಭಾಸವಾಗುತ್ತದೆ.

ಥಿಯೇಟರ್‌ನಿಂದ ಹೊರಬೀಳುವಾಗ ನನಗೆ ಆಯಾಸವಾಗಿರುತ್ತದೆ. ನನ್ನ ಬಗ್ಗೆನೇ ತಾತ್ಸಾರ ಬಂದಂತಾಗುತ್ತದೆ. ಜೇಬಿನಲ್ಲಿ ಉಳಿದಿರುವ ೨.೨೫ ಡಾಲರ್ ಹಣವನ್ನು ಚೆನ್ನಾದ ಪಾನೀಯಕ್ಕಾಗಿ ಮತ್ತು ಅಷ್ಟೊಂದು ಪವಿತ್ರವಲ್ಲದ ಅಮೇರಿಕನ್ ಹಸುವಿನ ಮಾಂಸದಿಂದ ತಯಾರಿಸಿದ ಸ್ಟೀಕ್‌ಗಾಗಿ ಹರಡಲಿದ್ದೇನೆ.

ಬಾರ್ ಒಂದಕ್ಕೆ ಹೋಗಿ ಒಂದು ಸ್ಕಾಚ್ ಮತ್ತು ಸೋಡಾ ತರುವಂತೆ ಆರ್ಡರ್ ಮಾಡುತ್ತೇನೆ. ಮತ್ತೆ ೧.೫೦ ಡಾಲರ್ ಹೊರಟು ಹೋಗುತ್ತದೆ. ಆದರೆ, ನನ್ನ ಮಾನಸಿಕ ಭಾವನೆಗಳಿಗೆ ಈಗ ಪುಷ್ಟಿ ಬಂದಿದೆ. ಟೈಂಸ್‌ಸ್ಕ್ವೇರ್‌ನಲ್ಲಿ ದೀಪಗಳು ಝಗಝಗಿಸುತ್ತಿವೆ. ಜನ ನಕ್ಕು ನಲಿಯುತ್ತಿದ್ದಾರೆ. ಮೇಳದಂತಹ ವಾತಾವರಣ. ಪಿನ್ ಬಾಲ್ ಮೆಷೀನ್‌ಗಳಿರುವ ಕೋಣೆಯೊಂದಕ್ಕೆ ಹೋಗುತ್ತೇನೆ. ಹತ್ತು ಸೆಂಟ್‌ಗಳಿಗೆ ಬರಿ ಷರೀಫ್ ಕಡೆ ಮೂರು ಶಾಟ್‌ಗಳನ್ನು ಹೊಡೆಯಬಹುದು. ಬದಲಾಗಿ ಆತನೇ ಶೂಟ್ ಮಾಡಿ ನನ್ನನ್ನು 'ಗ್ರೀನ್ ಹಾರ್ನ್' ಅಂತಾನೆ. ನಾನು ಹೊರಗೆ ಜನಜಂಗುಳಿ ಇದ್ದಲ್ಲಿ ಬರುತ್ತೇನೆ. ಸುಂದರಿಯರಾದ ಹುಡುಗಿಯರನ್ನು ಕಂಡು ಬಾಯಿ ಬಿಡುತ್ತೇನೆ. ಆದರೆ, ಅವರಿಂದ ಪ್ರತಿಕ್ರಿಯೆ ಇಲ್ಲ. ಲೈಂಗಿಕ ಪುಸ್ತಕಗಳನ್ನು ನೋಡುತ್ತಿದ್ದ ಗಂಡಸರ ಜತೆ ಸೇರುತ್ತೇನೆ. ಒಳಗೆ ಹೋಗಿ ಕೇವಲ ೨೫ ಸೆಂಟುಗಳಿಗೆ 'ಆ್ಯಕ್ಷನ್' ನೋಡುವಂತೆ ಭಿತ್ತಿಪತ್ರವೊಂದು ನನ್ನನ್ನು ಆಹ್ವಾನಿಸುತ್ತದೆ. ಈ ಆಹ್ವಾನವನ್ನು ನಾನು ಒಪ್ಪುತ್ತೇನೆ. ಮರಿಗೂಬೆಯ ತರಹ ಕಾಣುವ ಬದಲು, ಭಾರೀ ವಿದ್ಯಾವಂತನಂತೆ ಕಾಣುವ ಪ್ರಯತ್ನ ಮಾಡುತ್ತೇನೆ. ಒಳಹೋಗುತ್ತೇನೆ. ಅಲ್ಲೊಂದು ಡಬ್ಬ. ಅದಕ್ಕೊಂದು ತೂತು. ಅದರೊಳಗೆ ಕಾಲು ಡಾಲರ್ ಹಾಕಿದರೆ ಅದರಲ್ಲಿ ಬೆಳಕು ಹತ್ತಿಕೊಳ್ಳುತ್ತದೆ. ಒಳಗೆ ಇಣುಕಿ ನೋಡಿದರೆ, ಭಾರೀ ದೃಶ್ಯ! ನಾನು ಬೇರೆ ಕಡೆ ಏನೇನೋ ನೋಡಿರಬಹುದು. ಆದರೆ, ನಗರದ ಕೇಂದ್ರಭಾಗದಲ್ಲಿ ಇಷ್ಟೊಂದು ಜೋರಾದ ವಾತಾವರಣ ಬೇರೆಲ್ಲೂ ಕಂಡಿಲ್ಲ. ನನ್ನ ಕುತೂಹಲ ಕೆರಳುತ್ತದೆ. ಪ್ರದರ್ಶಿಸಿರುವ ಪುಸ್ತಕಗಳು ಮ್ಯಾಗಜೀನ್‌ಗಳನ್ನು ಪರಿಶೀಲಿಸುತ್ತೇನೆ.

ಒಬ್ಬ ಮನುಷ್ಯ ನನ್ನ ಪಕ್ಕಕ್ಕೆ ಬರುತ್ತಾನೆ. ಒಂದಷ್ಟು ಚಿತ್ರಗಳನ್ನು ತೋರಿಸುತ್ತಾನೆ. "ನಿಮಗಿವು ಹಿಡಿಸುತ್ತವೆಯೋ ? ಎಲ್ಲವೂ ಸೇರಿ ಐದು ಡಾಲರ್" ಎಂದವನೇ ಚಿತ್ರಗಳನ್ನು ನನ್ನ ಕೈಗೆ ತುರುಕುತ್ತಾನೆ. ನಾನು ಅವುಗಳನ್ನು

ವಾಪಸ್ಸು ತುರುಕಿಸುತ್ತೇನೆ. "ಇನ್ನೂ ಸ್ವಲ್ಪ ನೋಡೋಣ" ನಾನು ಪ್ರತಿಭಟಿಸುತ್ತೇನೆ. ಆತ ನನ್ನ ಬಗ್ಗೆ ತಪ್ಪು ತಿಳಿದುಕೊಳ್ಳುತ್ತಾನೆ. ಮತ್ತಷ್ಟು ಚಿತ್ರಗಳನ್ನು ನನ್ನ ಕೈಗೆ ತುರುಕುತ್ತಾನೆ. ಇನ್ನೊಂದು ಸೆಟ್ ತುರುಕುತ್ತಾನೆ. ಆತನ ತಾಳ್ಮೆ ತಪ್ಪುತ್ತದೆ. ಒಬ್ಬ ಕುರ್ಚಿ ಮೇಲೆ ಹತ್ತಿ ಬೊಬ್ಬಿಡುತ್ತಾರೆ: "ಪುಸ್ತಕಗಳನ್ನು ಮತ್ತು ಚಿತ್ರಗಳನ್ನು ಖರೀದಿ ಮಾಡಿ ಮನೆಗೆ ಒಯ್ಯಿರಿ." ಇನ್ನೊಬ್ಬ, ನನ್ನ ಪಕ್ಕ ಬಂದು ನಿಲ್ಲುತ್ತಾನೆ, ನನಗಿಂತ ಒಂದು ಅತಿ ಎತ್ತರದವ. ಸ್ಟೋರ್ ತುಂಬ ಜನರಿದ್ದಾರೆ. ಆದರೆ, ನನಗೆ ಏಕಾಕಿಯಾದ ಭಾವನೆ ಬರುತ್ತದೆ. ಶೆಲ್ಫ್‌ನಲ್ಲಿ ಕಾಣುವ ಅತ್ಯಂತ ಕಡಿಮೆ ಬೆಲೆಯ ಪುಸ್ತಕವೊಂದನ್ನು ನಾನು ಎತ್ತಿಕೊಳ್ಳುತ್ತೇನೆ. 'ದಿ ಡೈರಿ ಎಫ್ ಎ ಸಿಂಫೆಟ್', ಬೆಲೆ ೧೭.೫ ಡಾಲರ್. ಧಗಡಾ ಮನುಷ್ಯನ ಕೈಗೆ ೨ ಡಾಲರ್ ಕೊಡುತ್ತೇನೆ. ಪುಸ್ತಕವನ್ನು ಕವರಿನಲ್ಲಿ ಹಾಕಿ ಕೊಟ್ಟು ನನ್ನನ್ನು ಅಲ್ಲಿಂದ ಕಳುಹಿಸುತ್ತಾನೆ. "ಟ್ಯಾಕ್ಸ್ ಸೇರಿ ೨ ಡಾಲರ್."

ಈಗ ರಾತ್ರಿ ಊಟಕ್ಕೆ ನನ್ನಲ್ಲಿ ೨ ಡಾಲರೂ ಇಲ್ಲ. ಆದರೆ, ನನ್ನಲ್ಲಿ ಬುದ್ಧಿಗೆ ಕೊರತೆ ಇಲ್ಲ.

ಸ್ಟೀಕ್ ಹೌಸ್‌ಗಳಿಗೆ ಪಿಝಾ ಅಂಗಡಿಗಳಿಗೆ ಮತ್ತು ಮೀನು ದೊರೆಯುವ ರೆಸ್ಟೋರಾಗಳಿಗೆ ಭೇಟಿ ನೀಡುತ್ತೇನೆ. ಬೀಯರ್ ಆರೆಂಜೇಡ್ ಮತ್ತು ಸ್ಕಾಚ್ ಕುಡಿದದ್ದು ಕಾರಣ ಮೂತ್ರಬಾಧೆ ಆರಂಭವಾಗುತ್ತದೆ. ಎಲ್ಲೂ 'ಪುರುಷರು' ಎಂಬ ನಾಮಫಲಕವಾಗಲಿ, ನನ್ನ ಬಾಧೆ ತೀರಿಸಿಕೊಳ್ಳಲು ಅನುಕೂಲವಾದ ಸ್ಥಳವಾಗಲಿ ಕಾಣುತ್ತಿಲ್ಲ. ನನ್ನ ಹೋಟೇಲು ಸಾಕಷ್ಟು ದೂರವಿದೆ. ೧.೨೫ ಡಾಲರಿನ ಸ್ಟೀಕ್ ದೊರೆಯುವ ಬಾರ್–ಕಂ–ರೆಸ್ಟೋರಾ ಒಂದಕ್ಕೆ ಹೋಗುತ್ತೇನೆ.

ಕೆತ್ತಲು ಭಾಗ ಒಂದು ಮೂಲೆಯಲ್ಲಿ 'ವಿಶ್ರಾಂತಿ ಕೋಣೆ' ಎಂಬ ನಾಮಫಲಕ ಕಂಡು ಹಾಯೆನಿಸುತ್ತದೆ. ನಾನು ಮೆಟ್ಟಲು ಇಳಿದು ವೇಗವಾಗಿ ನಡೆಯುತ್ತೇನೆ. ನನ್ನ ಎಡಕ್ಕೆ 'ಸ್ತ್ರೀಯರು' ಎಂಬ ನಾಮಫಲಕವಿದೆ. ಇದರ ಕೆಳಗೆ ಪೆನ್ಸಿಲ್‌ನಲ್ಲಿ ಬರೆದುದು ಕಾಣುತ್ತದೆ 'ಪೋಪ್ ಬೇಡ ಅನ್ನುತ್ತಾರೆ. ಆದ ಕಾರಣ ಪ್ರಿಯೆ–' ಬಾಗಿಲು ತೆರೆದಾಗ ನನ್ನ ಕೆಲಸ ಇನ್ನೂ ಮುಗಿದಿಲ್ಲ. ಮಹಿಳೆಯೊಬ್ಬಳು ನನ್ನನ್ನು ಕಂಡು ಬೆದರಿದವಳಂತೆ ಹಾರುತ್ತಾಳೆ. ಸರಕ್ಕನೆ ಹಿಂದೆ ಸರಿದು ಬಾಗಿಲು ಮುಚ್ಚುತ್ತಾಳೆ. ಆಕೆ ಗದ್ದಲ ಎಬ್ಬಿಸುವ ಮೊದಲೇ ನಾನು 'ಪುರುಷರು' ನಾಮಫಲಕವಿರುವ ಬಾಗಿಲೊಳಗೆ ತೂರುತ್ತೇನೆ. ಗೋಡೆಯ ಮೇಲೆ ಬರೆದಿರುವುದನ್ನು ಓದುತ್ತೇನೆ; 'ಮೂತ್ರಬಾಧೆ ಹತೋಟಿಯಲ್ಲಿಡಲು ಅಸಮರ್ಥನಾದವ ಸಾಮಾಜಿಕವಾಗಿ ಉನ್ನತಿಗೇರಲಾರ'. ಎಷ್ಟೊಂದು ನಿಜ! ಅಮೇರಿಕನ್ ವಿವೇಕದ ಈ ಮುತ್ತಿನಂತಹ ಮಾತು, ಮಹಿಳೆಗೆ ಪೌರ್ವಾತ್ಯರು ನೀಡುವ ಸ್ಥಾನವನ್ನೇ ನೀಡುತ್ತದೆ. ಕಾಣುವಂತೆ ಇರಿಸಲಾಗಿರುವ ಬೆಲೂನ್ ಒಂದರ ಮೇಲೆ ಅಮೇರಿಕನ್ ಧೋರಣೆ ಸಂಕ್ಷಿಪ್ತವಾಗಿ ಉಲ್ಲೇಖಿತವಾಗಿದೆ, 'ಬಾಂಬುದಾಳಿ ಆರಂಭವಾಗಲಿ.'



"ನಿಮ್ಮದ್ದು ಒತ್ತಾಳೆ ಕಿವಿಯಿಂದು ಪತ್ರಿಕೆಯಲ್ಲಿ ಪ್ರಕಟವಾದ್ದು ನೋಡಿ ತುಂಬಾ ಜನ ನಿಮ್ಮನ್ನು ನೋಡಲು ಬಂದಿದ್ದಾರೆ ಸಾರ್!"

ಆಂತರಿಕ ಪರಿಸ್ಥಿತಿಯ ಬಗ್ಗೆ ಮತ್ತೊಂದು ವ್ಯಾಖ್ಯಾನವಿದೆ. 'ಕರಿಯರೇ ವಾಪಸ್ಸು ಹೋಗಿ.' ಅಲ್ಲೇ ಪ್ರತಿವ್ಯಾಖ್ಯಾನವೂ ಇದೆ. 'ಬಿಳಿಯರೇ ತೊಲಗಿರಿ. ಈ ದೇಶ ಇಂಡಿಯನ್‌ರಿಗೆ ಸೇರಿದ್ದು.' ನನಗೆ ಉಲ್ಲಾಸವೆನಿಸುತ್ತದೆ. ಟೈಂಸ್ ಸ್ಕ್ವೇರ್ ನನ್ನದೇ ಎಂಬಂತೆ ಭಾಸವಾಗುತ್ತದೆ. ನ್ಯೂಯಾರ್ಕ್, ಇಡೀ ಅಮೇರಿಕವೇ ನನ್ನದೆಂಬಂತೆ ಅನ್ನಿಸುತ್ತದೆ. ಈಗ ಮಾಲಕನಂತೆ ನಾನು ಬಾರ್ ಪ್ರವೇಶಿಸುತ್ತೇನೆ.

ನೀವು ಯಾವ ದೇಶದವರು?

ಸುತ್ತ ಕಣ್ಣು ಹಾಯಿಸುತ್ತೇನೆ. ಕೆಲವರು ಗಟ್ಟಿಯಾಗಿ ಮಾತಾಡುತ್ತಿದ್ದಾರೆ. ಎಲ್ಲರೂ ಹರ್ಷಚಿತ್ತರಾಗಿದ್ದಾರೆ. ಉದಾರಿಗಳಾಗಿದ್ದವರಂತೆ ಕಾಣುತ್ತಾರೆ. ನನ್ನನ್ನೇ ದುರುಗುಟ್ಟಿ ನೋಡುತ್ತಿದ್ದ ಮಧ್ಯವಯಸ್ಸಿನ ದಂಪತಿಗಳೆಡೆಗೆ ಸಾಗುತ್ತೇನೆ. ಬಹಳ ಸ್ನೇಹಿತನಂತೆ ನಕ್ಕು, ಅವರ ಪಕ್ಕದ ಟೇಬಲ್‌ನಲ್ಲಿ ಕೊಡುತ್ತೇನೆ. ನಾನು ಮೆನೂ ನೋಡುತ್ತಿದ್ದರೆ, ನನ್ನ ಬಗ್ಗೆ ಅವರ ಕುತೂಹಲ ನನಗೆ ಅರ್ಥವಾಗುತ್ತದೆ. ಮೆನೂ ಕೆಳಗಿಟ್ಟು ಮತ್ತೆ ನಗುತ್ತೇನೆ. ಅವರೂ ನಗುತ್ತಾರೆ.

ಮಹಿಳೆ ಪ್ರಶ್ನಿಸುತ್ತಾಳೆ– "ನಿಮಗೆ ಇಂಗ್ಲಿಷ್ ಬರುತ್ತೆ?"

"ಕೊಂಚ."

"ನಮ್ಮ ಕುತೂಹಲಕ್ಕಾಗಿ ಕ್ಷಮಿಸಿ. ನೀವು ಯಾವ ದೇಶದಿಂದ ಬಂದಿರಬಹುದೆಂದು ನಾವು ಆಲೋಚಿಸುತ್ತಿದ್ದೇವೆ."

"ಊಹೆಗೆ ನಿಮಗೆ ಮೂರು ಅವಕಾಶ ಕೊಡುತ್ತೇನೆ."

ಅರೇಬಿಯಾ?–ಅಲ್ಲ. ಆಫ್ರಿಕಾ,–ಅಲ್ಲ. ಪಾಕಿಸ್ತಾನ?– ಅಲ್ಲ, ಆದರೆ ಸಮೀಪ."ಹಾಗಿದ್ದರೆ ಎಲ್ಲಿ?"–ಗಂಡ ಸಿಗಾರ್ ಅಲುಗಾಡಿಸುತ್ತ ಕೇಳುತ್ತಾನೆ.

"ನಾನು ಇಂಡಿಯನ್."

ಆತನಿಗೆ ನಿರಾಶೆಯಾದಂತೆ ಕಾಣುತ್ತದೆ. "ರಿಸರ್ವೇಶನ್?"

"ಅಲ್ಲ. ನಿಮ್ಮ ಇಂಡಿಯನ್ ತರಹ ಇಂಡಿಯನ್ ಅಲ್ಲ. ನಾನು ಒಬ್ಬ ಇಂಡಿಯಾದ ಇಂಡಿಯನ್."

"ಹಾಗೊ! ನೀವು ಪಾಕಿಸ್ತಾನದ ಇಂಡಿಯನ್." ಆತ ಅನ್ನುತ್ತಾನೆ, ಅಂತಿಮ ತೀರ್ಪು ನೀಡುವಂತೆ.

ಇವರಿಗಿರುವ ಪ್ರಪಂಚಜ್ಞಾನವೇನೆಂಬುದು ಇವರಿಂದಲೇ ಸ್ಪಷ್ಟ. ಮುಂದಿನ ಪ್ರಶ್ನೆ ಕೇಳುತ್ತೇನೆ– "ನಾನು ಯಾವ ಮತಸ್ಥನೆಂದು ಹೇಳಲು ನಿಮಗೆ ಖಂಡಿತಾ ಸಾಧ್ಯವಿಲ್ಲ."

ಆಕೆ ಉದ್ಗರಿಸುತ್ತಾಳೆ. "ಅಯ್ಯೋ ದೇವರೇ!" ಆತ ಸಿಗಾರ್ ಜಗಿಯುತ್ತಾನೆ. ಆಕೆ ನನ್ನ ಗಡ್ಡ ಪರಿಶೀಲಿಸುತ್ತಾಳೆ.

"ಯಹೂದಿ?"– ಅಲ್ಲ.

"ಹುಚ್ಚರಂತೆ ಮಾತಾಡ್ಬೇಡ. ಆತ ಯಹೂದಿ ಆಗುವವುದಾದರೂ ಹೇಗೆ ?"

"ಕ್ರಿಶ್ಚಿಯನ್?"– ಅಲ್ಲ. ಆಕೆಗೆ ಹತಾಸೆ ಉಂಟಾಗುತ್ತದೆ. "ನೀವು ಮುಸಲ್ಮಾನರೇ?"

"ಇಲ್ಲಮ್ಮ. ನಾನು ಮುಸಲ್ಮಾನ್ ಅಲ್ಲ".

ಸಿಗಾರ್ ಅಲ್ಲಾಡಿಸುತ್ತಾ ಆತ ಗುಡುಗುತ್ತಾನೆ- "ನೀವು ಮುಸಲ್ಮಾನ್ ಅಲ್ಲವೆಂದಾದರೆ ಇಸ್ಲಾಮಿಕ್ ಇರಬೇಕು."

"ಇಲ್ಲ ಸ್ವಾಮಿ. ಅದಾವುದೂ ನಾನಲ್ಲ. ನೀವು ನನಗೆ ಡ್ರಿಂಕ್ ಕೊಡಬೇಕಾಗುತ್ತದೆ. ನಾನು ಸೀಖ್."

(ಮುಂದುವರಿಯುವುದು)

ತಾರುಣ್ಯದಲ್ಲಿ ಜಗತ್ತನ್ನೇ ಬದಲಾಯಿಸುವ ಮಹತ್ವಾಕಾಂಕ್ಷೆಯುಳ್ಳವರು ಹಾಗೇ ಮುಂದುಕರಾದರೆ ತರುಣರು ಬದಲಾಗಬೇಕೆಂದು ಬಯಸುವುದು ಮೊದಲಿನಿಂದಲೂ ನಡೆದು ಬಂದ ಪದ್ಧತಿ.

–ಬಾಬ್ ಜಾನ್

ಹೊಟ್ಟೆ ಹಾಕೋದು ಗೊತ್ತಿರದಿದ್ರೂ ಆಮ್ಲೆಟ್ ರುಚಿ ಗೊತ್ತಿರಲ್ವೆ ?

–ಉತ್ಪಲ ದತ್

('ಎಬಾರ ರಾಜಾರ ಪಾಲಾ' ನಾಟಕದಿಂದ)

‘ಗಂಗಾ’ ಪಾದೇಕಲ್

ಒಳಗಿಂದ ಉತ್ತರ ಬಾರದೇ ಇದ್ದಾಗ ಅವ್ವ ಒಳಗೆ ಇರಲಿಕ್ಕಿಲ್ಲ, ಇಲ್ಲೇ ಎಲ್ಲೋ ಹೋಗಿರಬಹುದು. ಚಿಂತೆಯಿಲ್ಲ. ದೇಗುಲ ಸಮೀಪವಿದೆ.' ಹೋಗಿ ಬೇಗ ಬಂದುಬಿಡುವೆ’ ಎಂದು–ಕೊಂಡವಳೇ ತಲೆ ಬಾಗಿಲನ್ನು ಮುಂದುಮಾಡಿಕೊಂಡು ಅಂಗಳಕ್ಕಿಳಿದವಳು ಲಲಿತೆ. ಚೆಲುವೆ ಲಲಿತೆ ನಡೆದಾಗ ಬೀದಿಯೆಲ್ಲ ಬೆಳಕು ಚೆಲ್ಲಿತು. ಸಂಜೆಯ ಕಂಬೆಳಕು ಅವಳನ್ನು ಹೊನ್ನ ಪುತ್ಥಳಿಯಾಗಿರಿಸಿದ್ದಂತೆ ಆಕೆ ಅಂಬಲದ ಬಳಿ ಸಾರಿದ್ದಳು. ಅಂಬಲದ ಹೊರಸುತ್ತಿನ ಮೆಟ್ಟ–ಲೇರುವಾಗ ಬದಿಗೆ ನಿಂತಿದ್ದ ಪರಯ ತರುಣ ನೋರ್ವ ಅವಳ ಗಮನ ಸೆಳೆದ. ದಿಟ್ಟಿ ತೆಗೆ–ಯದೇ ಆತ ತನ್ನನ್ನೇ ನೋಡುತ್ತಿದ್ದುದನ್ನು ಕಂಡು ಲಜ್ಜೆ, ಸಿಟ್ಟುಗಳಿಂದ ಆಕೆಯ ಕದಪುಗಳು ಕೆಂಪೇರಿದವು, ‘ಛೀ ಈ ಪರಯ ಕುನ್ನಿಯ ಸೊಕ್ಕೇ, ನುಂಗಿಬಿಡುವಂತೆ ನೋಡುತ್ತಿದ್ದಾನಲ್ಲ, ದುರುಳ’ ಎಂದು ಮನದೊಳಗೆ ಶಪಿಸುತ್ತ ಅವಳು ವೇಗನಾಗಿ ನಡೆದು ಒಳ ಪ್ರಾಕಾರ ಹೊಕ್ಕಳು. ತಾಯಿ ಭಗವತಿಯ ಮಂದಿರ ವಿಶಾಲವಾಗಿದ್ದು ಭಕ್ತ ಜನರಿಂದ ತುಂಬಿತ್ತು; ಅವಳು ಹಣ್ಣು ಕಾಯಿಗಳ ತಟ್ಟೆಯನ್ನು ಪೂಜಾರಿಗೆ ಕೊಟ್ಟು ಕೈ ಮುಗಿದು ನಿಂತಳು. ಮಂದಹಾಸವನ್ನು ಬೀರುತ್ತ ಅಭಯ ನೀಡುವಂತೆ ಬಲ ಹಸ್ತವನ್ನೆತ್ತಿ ನಿಂತಿ–ದ್ದಾಳೆ ಆ ಕರುಣಾಮಯಿ ತಾಯಿ. ನೋಡ ನೋಡುತ್ತ ಲಲಿತೆ ಪರವಶಳಾದಳು. ‘ಅಮ್ಮ, ಮುದ್ದಾದ ಗಂಡು ಮಗುವನ್ನು ಕರುಣಿಸು’ ಎಂದು ಭಕ್ತಿಭಾವದಿಂದ ಪ್ರಾರ್ಥಿಸಿದಾಗ ಮೂರು ತಿಂಗಳ ಎಳೆಬಸುರಿಯ ಕಂಗಳು ಹರ್ಷ ಬಾಷ್ಪದಿಂದ ತುಂಬಿದ್ದವು. ಭಕ್ತನೊಬ್ಬ ಗಂಟೆಯನ್ನು ‘ಢಾಂ’ ಎಂದು ಬಡಿಯುವದಕ್ಕೂ ತಾಯಿಯ ಬಲಗಡೆಯಿಂದ ಕಣಗಿಲೆ ಹೂ ಉದುರುವುದಕ್ಕೂ ತಾಳೆಯಾಯ್ತು. “ಮಂಗಳಸ್ವರದೊಂದಿಗೆ ತಾಯಿ ಅನುಗ್ರಹಿಸಿದಳು. ತೆಗೆದುಕೋ ಅಮ್ಮ, ನಿನ್ನ ಇಷ್ಟಾರ್ಥ ನೆರವೇರುತ್ತದೆ” ಪೂಜಾರಿ ಇತ್ತ ಕಾಯಿ ಹೋಳು, ಹೂವುಗಳನ್ನು ಸ್ವೀಕರಿಸಿ ಹೂವನ್ನು ಮುಡಿದುಕೊಂಡು ಲಲಿತೆ ಹೊರನಡೆದಳು. ಮನಸ್ಸು ಹರ್ಷದುಯ್ಯಾಲೆಯೇರಿತ್ತು.

ಅಂಬಲದಿಂದ ನಾಲ್ಕು ಮಾರು ದೂರ ಬಂದಿದ್ದಳೋ ಇಲ್ಲವೋ, ಹಿಂದಿನಿಂದ ಬಂದ ಆ ಪರಯ ತರುಣ ಬಳಿಸಾರಿ ಅವಳ ಬಲ

‘ಪುಲಪೇಡಿ’ ಪದ್ಧತಿ ಕೇರಳದ ಕೆಲಭಾಗಗಳಲ್ಲಿ ಹದಿನೇಳನೆಯ ಶತಮಾನದ ಉತ್ತರಾರ್ಧದವರೆಗೂ ಆಚರಣೆಯಲ್ಲಿತ್ತು. ಕೆಳವರ್ಗದ ಜನ ಒಂದು ನಿರ್ದಿಷ್ಟ ತಿಂಗಳಿನ ಇಪ್ಪತ್ತು ದಿನಗಳವರೆಗೆ ಮೇಲ್ಜಾತಿಯವರಿಗಿರುವ ಎಲ್ಲಾ ಸವಲತ್ತು-ಗಳನ್ನು ಪಡೆಯಬಹುದಾಗಿದ್ದ ಈ ಪದ್ಧತಿಯಿಂದಾಗಿ ಮೇಲ್ಜಾತಿಯ ಎಷ್ಟೋ ಅಪ್ರಾಯಕ ತರುಣಿಯರ, ಬಾಳು ಗೋಳಾಗುತ್ತಿತ್ತು. ೧೬೯೫ ರಲ್ಲಿ ವೀರ ಕೇರಳವರ್ಮ ಎಂಬಾತ ಈ ಪದ್ಧತಿಯನ್ನು ನಿಷೇಧಿಸಿದ್ದು ಕಲಕ್ಕುಳಂ ತಾಲೂಕಿನ ತಿರುವಿದಾಂಕೋಡು ಶಾಸನದಿಂದ ವಿದಿತವಾಗುತ್ತದೆ. ಶ್ರೀ ಎ. ಆರ್. ಪರಮೇಶ್ವರ ಪಿಳ್ಳೆ, ಇವರ ಸಂಶೋಧನಾತ್ಮಕ ಗ್ರಂಥ “ಪ್ರಾಚೀನ ಶಿಲಾ ಲಿಪಿತಂಗಳ್”(ಪುಟ ೩೬೧ – ೩೬೮)ರಲ್ಲಿರುವ “ಚಿಲ ಲಿನಾಚಾರಂಗಳ್” ಎಂಬ ಅಧ್ಯಾಯದಲ್ಲಿ ‘ಪುಲಪೇಡಿ’ ಪದ್ಧತಿಯ ವಿವರಣೆ ಇದೆ.

ಹೆಗಲ ಮೇಲೆ ತನ್ನ ಕೈಯನ್ನಿರಿಸಿದ. ಆತನ ಬಲದ ಹಸ್ತ ಅವಳ ತೋಳನ್ನು ಹಿಡಿದಿದ್ದಂತೆ ಆತ ಉಚ್ಚ ಸ್ವರದಿಂದ, “ಪುಲಪೇಡಿ, ಪುಲಪೇಡಿ, ನಾಡನಾಳುವ ದೊರೆಯ ಆಜ್ಞೆಯಂತೆ ನಾನು ನಿಮ್ಮನ್ನು ಸೋಕಿದೆ. ಇಂದಿನಿಂದ ನೀವು ನನ್ನವ ರಾದಿರಿ” ಎಂದು ಘೋಷಿಸಿದ. ಈ ಅನಿರೀಕ್ಷಿತ ಘಟನೆಯಿಂದ ಆಕೆ ವಿಹ್ವಲೆಯಾದಳು. ಕ್ಷಣ ದಲ್ಲೇ ತನ್ನ ನಾಯರ್ ಕುಲದ ಶ್ರೇಷ್ಠತೆಯೂ ಆತನ ಪರಯ ಕುಲದ ಕೀಳ್ಮೆಯೂ ನೆನಪಿಗೆ ಬಂದು ಆಕೆಯ ಮೈಯ ನೆತ್ತರು ಕುದಿಯಿತು, ತನ್ನ ಮೈ ಸೋಕಲು ಈ ದುರುಳನಿಗೆ ಎಷ್ಟು ಧಾರ್ಷ್ಟ್ಯ! ಮರುಕ್ಷಣದಲ್ಲಿ ಅವಳು ಕೈಯೆತ್ತಿ ಅವನ ಕೆನ್ನೆಗೆ ಬಲವಾಗಿ ಹೊಡೆದಳು. ಹೊಡೆತ ತಿಂದರೂ ಆ ತರುಣ ಅಳುಕಲಿಲ್ಲ. “ಪುಲಪೇಡಿ, ಪುಲಪೇಡಿ, ಕಿರಿಯ ತಂಬುರಾಟಿ, ನಾಡನ್ನಾಳುವ ದೊರೆಗಳ ಅನುಜ್ಞೆ ಇದೆಂಬುದನ್ನು ಮರೆಯ ದಿರಿ” ಎಂದ ದೊಡ್ಡ ದನಿಯಲ್ಲಿ. ಬೀದಿಯಲ್ಲಾದ ಗದ್ದಲವನ್ನು ಕಂಡ ಅಂಬಲವಾಸಿಗಳು ಕುತೂಹಲದಿಂದ ಓಡಿ ಬಂದರು. ಚೆಂಡೆ ಕುಟ್ಟುವ ಮಾರಾರರು, ಅಂಬಲವಾಸಿಗಳು ನಡೆದ ವಿದ್ಯಮಾನವನ್ನು ಗ್ರಹಿಸಿ “ಪುಲಪೇಡಿ, ಪುಲಪೇಡಿ” ಎಂದು ಕೂಗಿದಾಗ ಲಲಿತೆ ಭಯದಿಂದ ನಡುಗಿದಳು. ಕೈಯ ಹರಿವಾಣ ನೆಲಕ್ಕುರುಳಿ ಪ್ರಸಾದ ಮಣ್ಣು ಪಾಲಾದುದನ್ನೂ ಲಕ್ಷಿಸದೇ ಅವಳು ತರವಾಡಿನ ಕಡೆಗೆ ಓಡಿದಳು. ತಪ್ಪಿಸಿಕೊಂಡೋ–ಡುವ ಬೇಟೆಯ ಬೆನ್ನಟ್ಟುವ ಬೇಟೆಗಾರನಂತೆ ಆ ಪರಯ ತರುಣನೂ ಅವಳನ್ನು ಹಿಂಬಾಲಿಸಿದ. ಲಲಿತೆ ತರವಾಡಿನ ಅಂಗಳ ಸೇರಿದಾಗ ಜಗುಲಿ ಯಲ್ಲಿ ಕುಳಿತಿದ್ದ ಅವಳ ಮಾವ ಎದ್ದು ಬಂದು ಎದುಸಿರು ಬಿಡುತ್ತಾ ಓಡಿ ಬಂದ ಸೊಸೆಯನ್ನೂ ಅವಳ ಹಿಂದಿನ ಪರಯನನ್ನೂ ನೋಡಿದರು. ವಿಸ್ಮಯದಿಂದ ಅವರ ಹುಬ್ಬುಗಳು ಗಂಟಾ ದಂತೆ ತರುಣ ಬಾಗಿ ನಮಿಸಿ ವಿಜ್ಞಾಪಿಸಿದ, “ತಂಬುರಾನೆ” ಅಚ್ಚರಿ ಕ್ರೋಧ ಗಾಬರಿಗಳಿಂದ ಅವರು ಕಿವಿದೆರೆದಂತೆ ಅವನು ಮುಂದರಿದ, “ನಾಡ ನ್ನಾಳುವ ದೊರೆಗಳ ಆಜ್ಞೆಯ ಡಂಗುರವನ್ನು ನೀವೂ ಕೇಳಿಯೇ ಇರುತ್ತೀರಿ. ನಿನ್ನೆಯಿಂದ ಇಪ್ಪತ್ತು ದಿನಗಳವರೆಗೆ ಪುಲಪೇಡಿ ಪದ್ಧತಿ ಯನ್ನು ಆಚರಿಸಲು ದೊರೆಗಳ ಅನುಮತಿ ಇದ್ದುದ ರಿಂದ ನಾನು ಹೀಗೆ ಎಸಗಿದೆ. ತಂಬುರಾನೆ, ಕಿರಿಯ ತಂಬುರಾಟಿಯನ್ನು ನನ್ನೊಂದಿಗೆ ಕಳುಹಿಸಿ.” ಪರಯ ತರುಣ ಮಾತು ಮುಗಿಸಿದಾಗ ಅವರ ಮೋರೆ ಬಿಳುಪೇರಿತು. ಹಣೆಯಲ್ಲಿ ಎದ್ದ ಸ್ವೇದ ಜಲವನ್ನು ತೊಡೆಯುತ್ತ ಅವರು ಉದ್ಗರಿಸಿದರು, “ಅಮ್ಮಾ, ಭಗವತೀ, ಏನು ಮಾಡಿ ಬಿಟ್ಟೆ? ನಾಡನ್ನಾಳುವ ಅರಸಿನ ಡಂಗುರದ ವಿಷಯವನ್ನು ನೀನೇಕೆ ಮನೆಯಲ್ಲಿ ತಿಳಿಸಲಿಲ್ಲ?” ಅವರು ಕಂಗೆಟ್ಟು ಯೋಚಿಸುತ್ತಿದ್ದಂತೆ ಜಾವಣಿಗೆ



ಪ್ರವೇಶಿಸಿದ ಅವ್ವೆ ಸುಳಿಗಾಳಿಗೆ ಸಿಲುಕಿದಂತೆ ಕಂಪಿಸುತ್ತಿದ್ದ ಮಗಳನ್ನೂ ಅಲ್ಲಿನ ಜನಸಮೂಹವನ್ನೂ ಕಂಡು ಬೆರಗಾಗಿ, "ಅಣ್ಣ, ಏನು ಸಂಗತಿ?" ಎಂದು ಪ್ರಶ್ನಿಸಿದಳು. ಪರಯನೇ ಮತ್ತೊಮ್ಮೆ ತನ್ನ ಗೆಲುವನ್ನು ಅರುಹಿದಾಗ ಆಕೆಯ ಮೋರೆ ಬಿಳುಪೇರಿತು. "ಲಲಿತೆ, ಏನು ಮಾಡಿಕೊಂಡೆಯಮ್ಮ? ನನ್ನಲ್ಲಿ ತಿಳಿಸಿದ್ದಲ್ಲಿ ನಾನೂ ಬರುತ್ತಿದ್ದೆನಲ್ಲ." ಅವಳ ಕಂಬನಿಯೊಂದಿಗೆ ಲಲಿತೆಯ ಅಶ್ರುಗಳು ಬೆರೆತವು. ಕಣ್ಣೀರು ಸುರಿಸುತ್ತ ಚಾವಣಿ ಒಳಗೆ ಹೆಜ್ಜೆ ಇಡಲು ಬಂದ ಸೊಸೆಯನ್ನು ತಡೆದರು ಮಾವ. "ಮಗಳೆ ಲಲಿತೆ, ಅರಸಿನ ಆಜ್ಞೆಗೆ ಎದುರಿಲ್ಲ. ನಿನಗೆ ಈ ತರವಾಡಿನ ಋಣ ಇಂದಿಗೆ ಮುಗಿಯಿತು. ನೀನು ಇವನೊಂದಿಗೆ ಹೋಗಲೇಬೇಕಾಗುವುದು," ಎಂದರು. ಶೋಕ, ಭಯಗಳಿಂದ ಬೆವರಿ ಬಿಳುಪೇರಿ ಗಡಗಡನೇ ನಡುಗುತ್ತಿದ್ದ ಮಗಳನ್ನು ಕಂಡಾಗ ಅವ್ವೆಯ ಮಾನವಕ್ಕಿ ಕಿಚ್ಚೆದ್ದಿತು. ಮರುಕ್ಷಣದಲ್ಲೇ ನೆನಪಾದ ವಿಷಯದಿಂದ ಅವಳ ಆತಂಕ ಸ್ವಲ್ಪ ಮಟ್ಟಿಗೆ ಕಡಿಮೆಯಾಯಿತು. "ಅಣ್ಣ, ಲಲಿತೆ ಮೂರು ತಿಂಗಳ ಬಸುರಿ." "ಹೌದೆ?" ಅವರ ಮೊಗದಲ್ಲಿ ಆಶೆಯ ಸೆಳಕೊಂದು ತೋರಿತು. "ಕಣ್ಣ ಲಲಿತೆ ಬಸುರಿಯಂತೆ. ಅವಳು ಹೆರುವವರೆಗೆ ನೀನವಳನ್ನು ಸೋಕಲಾಗದು. ಹುಟ್ಟುವ ಮಗು ಗಂಡಾದಲ್ಲಿ ಅವಳನ್ನು ಮಗುವಿನೊಂದಿಗೇ ಪುಣ್ಯಾಹದಿಂದ ಶುದ್ಧಗೊಳಿಸಿ ತರವಾಡಿನೊಳಗೆ ಕರೆದು ಕೊಳ್ಳಲಾಗುವುದು. ಹೆಣ್ಣಾದಲ್ಲಿ ಮಗುವಿನೊಂದಿಗೆ ಅವಳು ನಿನ್ನೊಡನೆ ಬರುವಳು ಹೋಗು." ಬಾಯಿಯವರೆಗೆ ಬಂದಿದ್ದ ತುತ್ತು ಸ್ವಲ್ಪದರಲ್ಲೇ ಕಣ್ಣನ ಕೈ ಜಾರಿತ್ತು. ಆಸೆ, ನಿರಾಸೆಗಳ ಮಧ್ಯೆ ತೂಗುಯ್ಯಾಲೆಯಾಡುತ್ತ ಆತ ಬಾಗಿ ತಂಬುರಾನೆಗೆ ವಂದಿಸಿ ಹೊರಟು ಹೋದ. ಹೋದ ಪರಯನನ್ನೇ ನೋಡುತ್ತ ನಿಂತಿದ್ದ ಲಲಿತೆಗೆ ಭವಿಷ್ಯ ಕರಾಳ ಕತ್ತಲೆಯಾಗಿ ಕಾಣಿಸಿದಾಗ ಆಕೆ ಬವಳಿ ಬಂದಂತಾಗಿ ಅಲ್ಲೇ ಕುಸಿದಳು.

ಎರಡು ದಿನಗಳಲ್ಲಿ ತರವಾಡಿನಿಂದ ನಾಲ್ಕು ಮಾರು ದೂರದೊಳಗೆ ಮರಳಿ ಹುಲ್ಲಿನ ಸಣ್ಣ ಗುಡಿಸಲು ನಿರ್ಮಿತವಾಯಿತ್ತು. ಪರಯ

ತರುಣ ನೋಕಿದ್ದರಿಂದ ಲಲಿತೆ ಮೈಲಿಗೆಯಾಗಿದ್ದಳು. ಆಕೆ ಇನ್ನು ತನ್ನ ಭವಿತವ್ಯ ನಿರ್ಣಯವಾಗುವ ತನಕ ತರವಾಡಿಗೆ ಹೋಗಕೂಡದು. ನಾಲ್ಕು ಮಾಸನಂತರವಲ್ಲಿ ಹರಿವ ಹೊಳೆಗಲ್ಲದೇ ಬೇರೆಲ್ಲೂ ಕಾಲಿಡಕೂಡದು. ಅಂಬಲವನ್ನು ಹೋಗಬಾರದು. ನೆತ್ತಿಯ ಮೇಲಿನ ಕತ್ತಿ ಕೊರಳಿಗೆ ಬೀಳುವುದೇ ಇಲ್ಲವೇ ಎಂದು ಕಾತರದಿಂದ ಕಾಯುತ್ತ ತನ್ನ ಜೊತೆಗಾಗಿ ಮಾವ ಕಳಿಸಿದ ಹೆಣ್ಣಾಳು ಕಾವೇರಿಯೊಂದಿಗೆ ಲಲಿತೆ ಉಳಿದಳು. ಬಂಧು ಬಾಂಧವರಿಲ್ಲದೆ, ಅವ್ವೆಯ ಅಕ್ಕರೆಯ ಸವಿ ಮಾತುಗಳಿಲ್ಲದೆ, ಇನಿಯ ರಾಮನ್ ನಂಬೂದರಿಯ ದರ್ಶನವಿಲ್ಲದೇ ಲಲಿತೆ ಕೊರಗಿದಳು. "ಅಮ್ಮ, ನೀವು ಸುಮ್ಮನೇ ಯೋಚಿಸಿ ಕೊರಗಬೇಡಿ. ಆ ಶಬರಿಮಲೆ ಐಯ್ಯಪ್ಪ ತಾಯಿ ಭಗವತಿ ನಮ್ಮ ಕೈ ಬಿಡಲಾರರು." ಮನೆಯವರಂತೇ ಇದ್ದ ಹೆಣ್ಣಾಳು ಕಾವೇರಿಯ ಸಾಂತ್ವನದ ನುಡಿಗಳು ಲಲಿತೆಯ ಕಿವಿಗೇ ಬೀಳುತ್ತಿರಲಿಲ್ಲ. ಶಿಲೆಯಂತೆ ಕುಳಿತು ಗಂಟೆಗಟ್ಟಲೆ ಯೋಚಿಸುವ ಲಲಿತೆಯನ್ನು ನೋಡಿ, ಆ ಹೆಣ್ಣಿನ ಹಣೆಯಲ್ಲೇನು ಬರೆದಿದೆಯೋ ಎಂದು ನಿಟ್ಟುಸಿರು ಬಿಡುತ್ತಿದ್ದಳು ಕಾವೇರಿ.

*

ಗುಡಿಸಲ ಮುಂಗಡೆ ಕುಳಿತ ಕಣ್ಣ ಚಿಂತಾಪರವಶನಾಗಿದ್ದ. ಕಳಿತ ಹಣ್ಣು ಇನ್ನೇನು ತನ್ನ ಬಾಯಿಗೆ ಬೀಳುವುದು ಎಂದು ಆತ ಎಣಿಸಿದ್ದು ಸರಿಯಾಗಿತ್ತು. ಸರಿ ನಿಜ, ಆದರೆ ಈಗಿನ ಮಟ್ಟಿಗೆ. ತನ್ನ ಭಾಗ್ಯ ಹಿರಿದಾಗಿದ್ದಲ್ಲಿ ಕಿರಿಯ ತಂಬುರಾಟಿ ತನ್ನ ಗುಡಿಸಲ ಹಣತೆಯನ್ನೇಕೆ ಬೆಳಗಬಾರದು ? ಕಳೆದುಹೋದ ದಿನಗಳು ಆತನ ಕಣ್ಣ ಮುಂದೆ ಗೋಚರಿಸಿದುವು. ಅಂದು, ಸಂಜೆ ತಾನು ಕೇಳಿದ ಆ ಡಂಗುರ, "ಕೇಳಿರಿ, ನಾಡನ್ನಾಳುವ ದೊರೆಗಳ ಅಪ್ಪಣೆಯಂತೆ ಇಂದಿನಿಂದ ಇಪ್ಪತ್ತು ದಿನಗಳವರೆಗೆ ಪುಲಪೇಡಿ ಪದ್ಧತಿಯನ್ನಾಚರಿಸಬಹುದು. ಪರಯರು ಮತ್ತು ಇನ್ನುಳಿದ ಐತ್ತಕಾರರು ಇಪ್ಪತ್ತು ದಿನಗಳೂ ಬೀದಿಗಳಲ್ಲಿ ಓಡಾಡಬಹುದು. ಮೇಲು ಜಾತಿಯವರ ಕೊಳಗಳಲ್ಲಿ ಮಿಂದು ಅಂಬಲಕ್ಕೆ ಹೋಗಿ ದೇವರ ದರ್ಶನ ಮಾಡಬಹುದು. ಈ ಸಮಯದಲ್ಲಿ ಮೇಲು ಜಾತಿಯ ಹೆಣ್ಣುಗಳು ಒಂಟಿಯಾಗಿ ಬೀದಿಗಳಲ್ಲಿ ಸಂಚರಿಸಲಾಗದು. ಹಾಗೆ ಸಂಚರಿಸುವ ಒಂಟಿ ಹೆಣ್ಣನ್ನು ಪರಯನು ನೋಕಿದರೆ ಅವಳು ಅವನವಳಾಗುವಳು, ಕೇಳಿರಿ." ಬೀದಿಗಳಲ್ಲಿಯಂತೆ ಆ ಡಂಗುರ ತನ್ನ ಹೃದಯದಲ್ಲೂ ಕೋಲಾಹಲ ಎಬ್ಬಿಸಿತ್ತು. ದಿನಾಲೂ ಅಂಬಲಕ್ಕೆ ಹೋಗುವ ಆ ಕಿರಿಯ ತಂಬುರಾಟಿ! ಎಂತಹ ಸೊಬಗಿನ ಶರೀರವದು! ಅವನು ಆಸೆ ತುಂಬಿ ಯೋಚಿಸಿದ್ದ. ಇಂದು, ನಾಳೆ ಎನ್ನುವಷ್ಟರಲ್ಲಿ ಡಂಗುರದ ಸುದ್ದಿ ಊರ ತುಂಬಾ ಹರಡುವುದು. ನಂತರ ಆಕೆ ಒಬ್ಬಳೇ ಬರಲಾರಳು. ನೋಡಿಯೇ ಬಿಡೋಣ ನನ್ನ ಅದೃಷ್ಟವನ್ನು, ಕಣ್ಣ ಊಹಿಸಿದಂತೇ ಸುಲಲಿತವಾಗಿ ಮೊದಲರ್ಧ ಜರುಗಿದರೂ ಮತ್ತಿನ್ನರ್ಧ ಆತನನ್ನು ಗೊಂದಲದ ಮಡುವಿನೊಳಗೆ ಅದ್ದಿತ್ತು.' ನನ್ನ ಅದೃಷ್ಟ ಹೇಗೆ ಇದೆಯೋ?' ಕಿರಿಯ ತಂಬುರಾಟಿ ನನ್ನವಳಾದರೆ?" ಅವನು ನಿಟ್ಟುಸಿರು ಸೂಸಿ ಗಂಜಿ ಕುಡಿಯಲು ಎದ್ದು ಒಳಗೆ ಹೋದ.

*

ಕಿರುಕೋಣೆಯ ಮೂಲೆಯಲ್ಲಿ ಕುಳಿತು ಅಂಗಳವನ್ನು ವೀಕ್ಷಿಸುತ್ತಿದ್ದಳು. ಲಲಿತೆ. ಅಲ್ಲಿ ತೋರವಾದ, ಉದ್ದವಾದ, ಕಳಿತ ಹಲಸಿನ ಹಣ್ಣೊಂದು ಬಿದ್ದಿತ್ತು. ಬೆಳಗ್ಗೆಯಷ್ಟೇ ಕಣ್ಣ ಕಳಿಸಿದ್ದು, ಉಡುಗೊರೆ ಎಂದು! ಉಪಹಾಸದ ನಗುವೊಂದು ಅವಳ ತುಟಿಗಳ ಮೇಲೆ ಮಿನುಗಿತು. ತಾನೆಂದರೆ ಏನೆಂದು ತಿಳಿದಿದ್ದಾನೋ ಕುನ್ನಿ! ಈ ಐದು ತಿಂಗಳುಗಳಲ್ಲಿ ಆತ ಗೆಳೆಯ ತಿಮ್ಮನೊಡನೆ ಕಳಿಸಿದ ಕಾಣಿಕೆಗಳಿಗೆ ಲೆಕ್ಕವಿದೆಯೆ? ಜೇನು, ಅಡವಿಯ ಬಗೆಬಗೆಯ ಫಲಗಳು, ಜಿಂಕೆಯ ಕೋಡು, ಒಮ್ಮೆಯಂತೂ ಹುಲಿಯ ಚರ್ಮವನ್ನೆ ತಂದಿದ್ದನಾತ. ಛೀ, ಮರುಳೇ ಆತನಿಗೆ. ಇದೆಲ್ಲವನ್ನೂ ನೋಡಿ ತಾನು ಅವನ ಪೌರುಷಕ್ಕೆ ಒಲಿದೇನೆಂದು ಆತನ ಭ್ರಾಂತಿಯೇನೊ! ಅದು ಭ್ರಾಂತಿಯೇ ಆಗಿ ಉಳಿಯಲಿ. 'ಅಮ್ಮ ಭಗವತಿ, ನೀನು ನನ್ನ ಕೈ ಬಿಡಬೇಡ,' ಎಂದು ಭಕ್ತಿಯಿಂದ ಕೈಜೋಡಿಸಿ ದೇಗುಲದ ದಿಕ್ಕಿಗೆ ಕೈ ಮುಗಿದಾಗ ಎದುರು

ಅಳಲು ಕಣ್ಣೀರಾಗಿ ಹರಿಯಿತು. "ಅಮ್ಮ, ನೀವು ಸುಮ್ಮನೇ ಯೋಚಿಸಿ ತಲೆ ಕೆಡಿಸಿಕೊಳ್ಳುತ್ತೀರಿ. ತಿಂಗಳು ಕಳೆಯಲಿ. ಮುದ್ದು ಗಂಡು ಮಗುವಿನ ತಾಯಾಗಿ, ಕಂದನನ್ನೆತ್ತಿಕೊಂಡು ತರವಾಡಿಗೆ ಮರಳುತ್ತೀರಾ." ಕಾವೇರಿಯ ಸಮಾಧಾನದ ನುಡಿಗಳಿಂದ ಲಲಿತೆಯ ಶೋಕಾಗ್ನಿ ಮತ್ತಷ್ಟು ಕೆರಳಿತು. ಉರಿಗೆದರಿ ವಿಜೃಂಭಿಸುತ್ತಿದ್ದ ಜ್ವಾಲೆಯೊಳಗೆ ಕಾಣಿಸುತ್ತಿತ್ತು ರಾಮನ್ ನಂಬೂದರಿಯ ಗಂಭೀರ ನಿಲುವು. ಅರಿಷಿಣ ಮಿಶ್ರಿತ ಬಿಳಿ ಮೈಬಣ್ಣ. ಉದ್ದಕ್ಕೆ ತಕ್ಕ ತೋರ. ಹಿಂಬದಿಗೆ ಬಾಚಿ ಗಂಟು ಹಾಕಿದ ಶಿಖೆ. ಎಳೆ ಪರೆಯದ ಆತನಿಗೆ ಪತ್ನಿ ಮಾಸಂತಿಗಿಂತಲೂ ಉಪಪತ್ನಿಯಾದ ತನ್ನಲ್ಲೇ ಹೆಚ್ಚು ಮಮತೆ. ತಟಕ್ಕನೇ ಲಲಿತೆಗೆ ತೋಚಿತು. ನಿಜಕ್ಕೂ ಆತನಿಗೆ ತನ್ನಲ್ಲಿ ಪ್ರೀತಿ ಇದೆಯೆ? ಆತನ ಕುಡಿಯನ್ನು ತಾನು ಒಡಲಲ್ಲಿ ಧರಿಸಿರುವ ವಿಚಾರ ತಿಳಿದರೂ ಆತ ಈ ದೀರ್ಘ ಅವಧಿಯಲ್ಲಿ ಒಮ್ಮೆಯಾದರೂ ಕೊನೆಗೆ ದೂರದಿಂದಲಾದರೂ ತನ್ನನ್ನು ಕಾಣಲು ಬರಲಿಲ್ಲವೇಕೆ? ತಾನು ಸೇರಿದ ನಂಬೂದರಿ ಮನೆತನದ ಆಚಾರ, ವಿಚಾರಗಳು ಅವಳ ಮನಸ್ಸಿಗೆ ನೋವು ಕೊಡುವ ಬರೆಗಳಾಗಿದ್ದವು. ತಾನು ನಾಯರ್ ಕುಲದವಳಾದ್ದರಿಂದ ರಾತ್ರಿಯ ಏಕಶಯ್ಯೆಯ ಹೊರತಾಗಿ ಉಳಿದಂತೆ ತಾನು ಅವರನ್ನು ಸೋಕಬಾರದು. ತನ್ನ ಕೈ ಅಡಿಗೆ ಅವರು ಉಣ್ಣುವಂತಿಲ್ಲ. ತನ್ನ ಉದರದಲ್ಲಿ ಹುಟ್ಟಿದ ಶಿಶು ಗಂಡಾದರೆ ತರವಾಡಿನಲ್ಲಿ ಅದಕ್ಕೆ ಹಕ್ಕು. ಹೆಣ್ಣಾದರೆ ತಾಯ ಮನೆಯಲ್ಲೇ ಇರಬೇಕು. ಈ ಸತ್ಯವನ್ನು ಅರಗಿಸಿಕೊಳ್ಳಲಾರದೇ ಅವಳು, ರಾಮನ್ ನಂಬೂದರಿಯನ್ನು ತಾನು ವಿವಾಹ ಆಗೆನೆಂದು ಹೇಳಿದ್ದರೂ ಮಾವ ಅದಕ್ಕೆ ಒಪ್ಪಿರಲಿಲ್ಲ. "ತಲೆ ತಲಾಂತರಗಳಿಂದಲೂ ಬ್ರಾಹ್ಮಣರಲ್ಲೇ ನಾವು ಸಂಬಂಧ ಬೆಳೆಸಿದೆವು. ಯಾರಿಗೆ ಗೊತ್ತು? ನಿನ್ನ ಅದೃಷ್ಟ ಚೆನ್ನಾಗಿದ್ದು ನೀನು ನಂಬೂದರಿಯ ಗಂಡು ಮಗುವಿನ ತಾಯಿ ಆಗಲೂ ಎಡೆಯಿದೆ." ಮಾವನ ಇಚ್ಛೆಗೆ ಅವಳು ತಲೆ ಬಾಗಿಸ್ದಳು. ಆದರೆ ನಂತರದ ಜೀವನದಲ್ಲಿ ಅವಳು ಅಸುಖಿಯಾಗಿರಲಿಲ್ಲ. "ಲಲಿತೇ, ಮಾಸಂತಿಗಿಂತಲೂ ನನಗೆ ಪ್ರಿಯಳಾದವಳು ನೀನೇ" ಎಷ್ಟೋ ಬಾರಿ ಅವರು ಇರುಳು ತನ್ನಲ್ಲಿ ಹೇಳಿರಲಿಲ್ಲವೇ? ಹೆಚ್ಚಿನ ಇರುಳುಗಳನ್ನು ಅವರು ತನ್ನ ಸಂಗದಲ್ಲೇ ಕಳೆಯುತ್ತಿರಲಿಲ್ಲವೇ? ಆದ್ದರಿಂದ ಉಳಿದ ಕಟ್ಟು ಕಟ್ಟಳೆಗಳು ಅವಳನ್ನು ಹೆಚ್ಚಾಗಿ ನೋಯಿಸಿರಲಿಲ್ಲ. ತಲೆಮಾರುಗಳಿಂದ ಹರಿದು ಬಂದ ಸಂಪ್ರದಾಯಕ್ಕವಳು ಕಣ್ಣು ಮುಚ್ಚಿ ಜೋತು ಬಿದ್ದಿದ್ದಳು. ಹೀಗಿರುತ್ತ ಅವಳ ಉದರದಲ್ಲಿ ಬೆಳೆಯುತ್ತಿದ್ದ ಶಿಶು ಗಂಡಾಗಲೆಂದು ಅವಳು ಇನ್ನಿಲ್ಲದ ಭಕ್ತಿಯಿಂದ ಪ್ರಾರ್ಥಿಸುತ್ತಿದ್ದಳು. ಅವಳ ಈಗಿನ ಸ್ಥಿತಿಯಲ್ಲಿ ಅದು ಅತಿ ಅವಶ್ಯಕವಾಗಿತ್ತು. ಒಂದು ವೇಳೆ ಹೆಣ್ಣೇ ಹುಟ್ಟಿದರೆ? ಲಲಿತೆಯ ಶರೀರವಿಡೀ ಕಂಪಿಸಿತು. ಆಮೇಲೆ ತಾನು ಜೀವಮಾನ ಪರ್ಯಂತ ಕಣ್ಣನ ಪರಯತ್ತಿಯಾಗಿ, ಬಂಧು ಬಾಂಧವರನ್ನು ತೊರೆದು ಅವನೊಂದಿಗೆ ಬಾಳಬೇಕಾಗುತ್ತದೆ. ಎಂತಹ ವಿವೇಕಶೂನ್ಯ ಕ್ರೂರ ಕಟ್ಟಳೆಯಿದು! ಅವಳು ಅರಸಿಗೆ ಹಿಡಿ ಶಾಪ ಹಾಕಿದಳು. ಹೆಣ್ಣು ಹುಟ್ಟಿದಲ್ಲಿ ತಾನು ಮತ್ತೊಮ್ಮೆ ಅವರ ಜನಕನ ಮೋರೆ ನೋಡುವಂತಿಲ್ಲ. ಎಷ್ಟೋ ದಿನಗಳಿಂದ ಅವಿತಿಟ್ಟಿದ್ದ ಬಸಿರಿಗೆ ಸಹಜವಾದ ಬಯಕೆ ಧಿಗ್ಗನೇ ಮೇಲೆದ್ದಿತು. ತನ್ನ ಭವಿಷ್ಯ ನಿರ್ಣಯವಾಗುವುದಕ್ಕೆ ಮೊದಲೊಮ್ಮೆ ತಾನು ರಾಮನ್ ನಂಬೂದಿರಿಯನ್ನು ಕಾಣಬೇಕು. ಆದರೆ ಹೇಗೆ? ಈ ಕಿರುಮನೆಗೆ ಬಂದ ಹೊಸತಿನಲ್ಲಿ ಅವಳು ಸ್ನಾನಕ್ಕಾಗಿ ಕೆಲವೊಮ್ಮೆ ಹೊಳೆಗೆ ಹೋಗಿದ್ದಳು. ಆದರೆ ತಾನು ಹೋದಾಗಲೆಲ್ಲ ಕಣ್ಣನ ಚಪಲ ತುಂಬಿದ ಕಂಗಳು ತನ್ನನ್ನು ಬೇಟೆಯಾಡುತ್ತಿವೆ ಎಂದು ಅರಿವಾದಾಗ ಹೋಗುವುದನ್ನೇ ನಿಲ್ಲಿಸಿದಳು. ದಿನಾ ಸಂಜೆಯ ಪೂಜೆಗೆ ಮೊದಲು ಮೀಯಲಿಕ್ಕಾಗಿ ನಂಬೂದಿರಿ ಹೊಳೆಗೆ ಬರುತ್ತಾರೆಂದು ಲಲಿತೆಗೆ ಗೊತ್ತಿತ್ತು. ಹೊಳೆಯಿಂದ ಏಳೆಂಟು ಮಾರು ದೂರದಲ್ಲಿದ್ದ ಅಂಬಲಕ್ಕೆ ಅವರು ಒದ್ದೆಬಟ್ಟೆಯಲ್ಲೇ ಹೋಗುವರು. ಮನದಲ್ಲಿ ಎದ್ದ ಆಸೆ ರೂಪ ತಳೆಯಿತು, "ಕಾವೇರಿ" ದನಿಯೆರಿಸಿ ಕೂಗಿದಳು ಲಲಿತೆ."ಕರೆದಿರಾ ಅಮ್ಮ?"

"ಹೂಂ, ಮನೆಯಲ್ಲೇ ಕುಳಿತು ಬೇಸರ ಹಿಡಿಯಿತು. ಹೊಳೆಯ ವರೆಗೆ ಹೋಗಿ ಬರುವೆನು. ನೀನು ಮನೆಯಲ್ಲಿರು." ಕಾವೇರಿ ಸಂಗಡವೇ ಬಂದರೆ ನಂಬೂದಿರಿ ತನ್ನೊಂದಿಗೆ ಮಾತನಾಡಲಾರರೆಂಬ ಶಂಕೆ ಅವಳದು. "ಆಗಲಿ. ಬೇಗನೇ ಬಂದುಬಿಡಿ" ತುಂಬಿ ಬರುತ್ತಿದ್ದ ಅವಳ ಒಡಲನ್ನೇ ನೋಡುತ್ತ ಕಾವೇರಿ ಸಮ್ಮತಿಸಿದಳು.

ನಂಬೂದಿರಿ ಮೀಯಲು ಬರುವ ತಾಣಕ್ಕೆ ಲಲಿತೆ ತಲಪಿದಾಗ ಏದುಸಿರು ಬಿಡುತ್ತಿದ್ದಳು. ಬಸಿರಲ್ಲಿನ ಕಂದ ಒದೆಯುತ್ತ ಗಲಾಟೆ ಮಾಡುತ್ತಿದ್ದ. ಉಸ್ಸೆನ್ನುತ್ತ ಅವಳು, ಹೊಳೆಯ ಪಡವಲ್ಲೇ ಬೆಳೆದಿದ್ದ ಒಂಟಿ ಮಾಮರದ ಬೊಡ್ಡೆಗೆ ಒರಗಿ ಕುಳಿತಳು. ವಿಶಾಲವಾಗಿ ಬೆಳೆದಿದ್ದ ಆ ಮರದ ಕೊಡೆಯಂತೆ ಚಾಚಿದ್ದ ರೆಂಬೆಗಳ ನೆರಳಲ್ಲಿ ಲಲಿತೆಯ ದಣಿವು ಸ್ವಲ್ಪ ನೀಗಿತು.

'ಇನ್ನೇನು ಅವರೂ ಬರುವ ಹೊತ್ತು, ನನ್ನನ್ನು ಕಂಡಾಗ ಅವರಿಗೆ ಸಂತೋಷವೆನಿಸೀತು. ನಾನು ದೂರದಿಂದಲೇ ಅವರನ್ನು ಕಣ್ಣು ತುಂಬಿಕೊಂಡು ಪಾದಕ್ಕೆ ಮಣಿಯುವೆನು' ಎಂದು ಅವಳು ಯೋಚಿಸುತ್ತಿರುವಾಗಲೇ ದೇಗುಲದ ಆನೆ 'ರಾಜ'ನನ್ನು ಮೀಯಿಸಲೆಂದು ಅಟ್ಟಿಕೊಂಡು ಮಾವಟಿಗ ಬಂದ. ತುಂಟಾಟ ಮಾಡುತ್ತಿದ್ದ ಅದನ್ನು ಆತ ಉಪಾಯದಿಂದ ನೀರಿಗಿಳಿಸಿದುದನ್ನೇ ತದೇಕ ಚಿತ್ತದಿಂದ ನೋಡಿದಳು ಲಲಿತೆ. ಆನೆ ನೀರಿಗಿಳಿದರೂ ನೀರಾಟವಾಡದೇ ಮೇರುವಿನಂತೆ ಗಂಭೀರವಾಗಿ ನಿಂತಿತ್ತು. ಅಷ್ಟರಲ್ಲಿ ನಂಬೂದಿರಿಯೂ ಬಂದರು. ಲಲಿತೆ ಉತ್ಸಾಹದಿಂದ ಎದ್ದು ನಿಂತು ಅವರನ್ನು ದಿಟ್ಟಿಸಿದಾಗ ಅವರ ಮೋರೆಯಲ್ಲಿ ಅಸಮಾಧಾನದ ನೆರಿಗೆಗಳು ಸ್ಪಷ್ಟವಾಗಿ ಗೋಚರಿಸಿದವು. ಅವಳ ಉತ್ಸಾಹ ಜರ್ರನಿಳಿಯಿತು. ತನ್ನರಿವಿಲ್ಲದೇ ಅವಳು ತಲೆ ಬಾಗಿಸಿದಳು. ನಂಬೂದಿರಿ ವೇಗವಾಗಿ ಹೊಳೆಗಿಳಿದು ಮೀಹದ ಶಾಸ್ತ್ರ ಮುಗಿಸಿ ಮುಂಡು ಸುತ್ತಿಕೊಂಡು ಮೇಲೆ ಬಂದರು. ರಾಮನ್ ನಂಬೂದಿರಿಯ ಅಲಕ್ಷ್ಯ ಲಲಿತೆಯ ಮನಸ್ಸಿಗೆ ಗೀರಿದ ಮುಳ್ಳಿಕಣೆಯಾಗಿತ್ತು. ಮನಸ್ಸಿನ ನಿರಾಶೆ ತಡೆಯದೇ ಉದುರಿದ ಕಂಬನಿಗಳನ್ನು ಒರೆಸುವ ಪ್ರಯತ್ನದಲ್ಲಿದ್ದಾಗಲೇ ಮಾವಟಿಗ ಬೊಬ್ಬಿರಿದ, "ಓಡ್ರಿ, ತಂಬುರಾಟಿ, ಆನೆಗೆ ಮದವೇರಿದೆ," ಲಲಿತೆ ತಬ್ಬಿಬ್ಬಾದಳು. ಭಯದಿಂದ ಶರೀರವಿಡೀ ನಡುಗಿತು. ಎಲ್ಲಿಗೆ ಓಡಲಿ ? ಆಶ್ರಯಕ್ಕಾಗಿ ಅವಳು ಸುತ್ತೂ ನೋಡಿದಳು. ನಿರ್ಜನವಾದ ಬಯಲಿನಲ್ಲಿ ಶಾಂತವಾಗಿ ಹರಿವ ಹೊಳೆ. ದೇಗುಲಕ್ಕೆ ಹೋಗುವಂತಿಲ್ಲ. ನಿಂತಲ್ಲಿಂದ ಅವಳು ಎರಡು ಹೆಜ್ಜೆ ಹಿಂದೆ ಸರಿದು ಮರವನ್ನು ದಿಟ್ಟಿಸಿದಳು. ಕವಲು ಕವಲಾಗಿ ಬೆಳೆದಿದ್ದ ಮರ. ಮೊದಲನೆಯ ಕವಲು ಆರೇಳು ಅಡಿ ಎತ್ತರದಲ್ಲಿತ್ತು. ಆ ವೇಳೆಗಾಗಲೇ ನಂಬೂದಿರಿ ಓಡಿ ಬಂದು ಮರವೇರಿದ್ದರು. ಆನೆ ಧಾವಿಸಿ ಬರುತ್ತಿತ್ತು. ಯೋಚಿಸಲೂ ಸಮಯವಿರಲಿಲ್ಲ. ಅವಳು ಮರದ ಬುಡಕ್ಕೆ ಓಡಿದಳು. ಮೇಲಿದ್ದ ನಂಬೂದಿರಿಯನ್ನೇ ಭಯಾರ್ತಳಾಗಿ ನೋಡುತ್ತ ಕೂಗಿಕೊಂಡಳು. "ಕೈ ಹಿಡಿದು

ಎಳಕೊಳ್ಳಿ. ನಾನೇ ಪತ್ತಲಾರೆ." ಆಸರೆಗೆಂದು ಕೈ ಮೇಲೆ ನೀಡಿದ್ದ ಅವಳನ್ನು ತಿರಸ್ಕಾರದಿಂದ ನೋಡಿದ ನಂಬೂದಿರಿ ಸರಸರನೇ ಮತ್ತೂ ನಾಲ್ಕು ರೆಂಬೆಗಳ ಮೇಲೇರಿದ. ಲಲಿತೆಗೆ ಬರಸಿಡಿಲೆರಗಿದಂತಾಯಿತು. ಈ ಸಮಯದಲ್ಲೂ ಇಂಥಾ ನಡತೆಯೇ! ಎವೆ ಇಕ್ಕುವದರೊಳಗೆ ಆನೆ ತುಳಿದುಬಿಡುತ್ತದೆಯಲ್ಲ... ಆಕೆ ಮೂರ್ಛೆ ತಪ್ಪಿ ಕೆಳಗುರುಳಿದಳು.

ಲಲಿತೆಗೆ ಎಚ್ಚರವಾದಾಗ ಆಕೆ ಗುಡಿಸಲಿನ ಕಿರುಕೋಣೆಯೊಳಗೆ ಮಲಗಿದ್ದಳು. "'ಆನೆ, ಆನೆ" ಮೆತ್ತಗೆ ಜಡ ಹೆಜ್ಜೆಯ ಸಪ್ಪಳ ತನ್ನ ಬೆನ್ನ ಹಿಂದೇ ಕೇಳಿದಂತಾಗಿ ಚೀರಿಕೊಂಡಳಾಕೆ. "ಹೆದರಬೇಡಿ ಅಮ್ಮ. ನೀವು ಸುರಕ್ಷಿತವಾಗಿದ್ದೀರಿ." ಕಾವೇರಿಯ ಮೆದು ಮಾತುಗಳಿಂದ ಎಚ್ಚತ್ತ ಅವಳು ಕಣ್ಣರಳಿಸಿ ಸುತ್ತಲೂ ನೋಡಿದಳು. ನಿಜ, ತಾನು ತನ್ನ ಕಿರುಮನೆಯಲ್ಲೇ ಇದ್ದೇನೆ. "ಕಾವೇರಿ, ನಾನು ಹೇಗೆ ಇಲ್ಲಿಗೆ ಬಂದೆ? ನನಗೆ ಆನೆ ಅಪಾಯ ಮಾಡಲಿಲ್ಲವೆ? ಬಹುಶಃ ಅವರು ಮೇಲೆ ಉಳಿದುಕೊಂಡಿರಬಹುದಲ್ಲವೆ ?" ಒಟ್ಟೊಟ್ಟಿಗೇ ಬಂದ ಅವಳ ಪ್ರಶ್ನೆಗಳಿಗೆ ಸಾವಧಾನವಾಗಿ ಉತ್ತರಿಸಿದಳು ಕಾವೇರಿ. "ಅಮ್ಮ, ನೀವು ಹೊರಟ ಮೇಲೆ ನಾನೂ ನಿಮ್ಮ ಬೆನ್ನ ಹಿಂದೆಯೇ ಬಂದು ನಡೆದದ್ದನ್ನು ನೋಡಿದೆ. ಪಾಪ! ಆ ಪರದೇಸಿಗಾದ ಗತಿಯೆ?" "ಏನು ಕಾವೇರಿ? ಸರಿಯಾಗಿ ಹೇಳು." ಲಲಿತೆಯ ದನಿ ಉತ್ಸುಕವಾಗಿತ್ತು. "ಅದೇ, ನಿಮ್ಮನ್ನು ಮುಟ್ಟಿ ಐತಗೊಳಿಸಿದನಲ್ಲ, ಅವನೇ ಕಣ್ಣ ನೀವು ಬೀಳುತ್ತಲೂ ಎಲ್ಲಿದ್ದನೋ, ತನ್ನ ತಲೆಗೆ ಸುತ್ತಿದ ಕೆಂಪು ವಸ್ತ್ರವನ್ನು ತೆಗೆದು ಬೀಸುತ್ತ ಅವರ ಮುಂದೆಯೇ ಬಂದ. ಆನೆ ನಿಮ್ಮನ್ನು ಬಿಟ್ಟು ಅವನನ್ನು ಬೆನ್ನಟ್ಟಿತು." "ಹಾಂ ಮುಂದೆ?" ಲಲಿತೆಯ ಸ್ವರ ಕಂಪಿಸುತ್ತಿತ್ತು. "ಮುಂದೇನು? ನಿಮ್ಮನ್ನು ಐತ ಮಾಡಿದುದಕ್ಕೆ ತಕ್ಕ ಶಿಕ್ಷೆಯನ್ನು ಆತನಿಗೆ ಭಗವತಿ ನೀಡಿದಳು. ಆನೆ ಅವನನ್ನು ಕೆಳಕ್ಕೆ ನೂಕಿ ತುಳಿಯಿತು." "ಅಯ್ಯೊ!" ಲಲಿತೆಯ ಕೊರಳಿಂದ ಚೀತ್ಕಾರ ಹೊರಟಿತು. "ಆದರೆ ಆತ ಸಾಯಲಿಲ್ಲ ಅಮ್ಮ. ಆತನ ಎದೆಗೆ ಪೆಟ್ಟಾಗಿದೆಯಂತೆ. ಮುಂದೆ ನಾನು ನಿಮ್ಮನ್ನು ಎಚ್ಚರಿಸಿ ಮುಖಕ್ಕೆ ನೀರು ಹಾಕಿ ಮೆಲ್ಲಗೆ ನಡೆಸಿಕೊಂಡು ಕರೆ ತಂದೆ. ಬಂದೊಡನೇ ನೀವು ತಿರುಗಿ ಮಲಗಿಬಿಟ್ಟಿರಿ" ಲಲಿತೆ ಕಲ್ಲಾಗಿದ್ದಳು. ನಿಜವೆ? ತನ್ನ ಜೀವಕ್ಕೋಸ್ಕರ ಆತ ಪ್ರಾಣವನ್ನೇ ಪಣವಾಗಿಟ್ಟನೆ? ಅವಳ ಎದೆಯಲ್ಲಿ ಹಿಂಡಿದಂತಾಗುತ್ತಿತ್ತು. ಮಿದುಳಲ್ಲಿ ವಿಚಿತ್ರ ವೇದನೆ. "ಕಾವೇರಿ, ಅವರು ಏನಾದರೆ?" "ಆ ಶಬರಿಮಲೆ ಅಯ್ಯಪ್ಪನ ದಯದಿಂದ ಅವರಿಗೇನೂ ಕೇಡುಂಟಾಗಲಿಲ್ಲ ಅಮ್ಮ." ಹೆಣ್ಣಾಳು ಉತ್ತರಿಸಿ ಒಳಗಿದ್ದು ಹೋದಾಗ ಲಲಿತೆಯ ಚಿತ್ತ ಭ್ರಮಾಧೀನವಾಗಿತ್ತು. ಕಣ್ಣ ಮುಂದೆ ಸುಳಿಯುತ್ತಿದ್ದುದು ಒಂದೇ ದೃಶ್ಯ; ಮರದ ಮೇಲಿದ್ದ ನಂಬೂದಿರಿ ಅಸಹಾಯಳಾಗಿ ನಂಬೂದಿರಿಯ ಮಗುವನ್ನು ಬಸಿರಿನಲ್ಲಿ ಹೊತ್ತು ಕೆಳಗೆ ನಿಂತ ತಾನು. ತನ್ನನ್ನು ರಕ್ಷಿಸಲೆಂದು ಪ್ರಾಣವನ್ನೇ ಪಣವಾಗಿಟ್ಟ ಕಣ್ಣನನ್ನು ತುಳಿಯುವ ಆನೆ. ಅದನ್ನು ನೋಡಲಾರದೇ ಲಲಿತೆ ಕಿಟಾರನೇ ಕಿರುಚಿಕೊಂಡು ಪ್ರಜ್ಞಾಹೀನಳಾದಳು.

ಮುಂದಿನ ಹತ್ತು ದಿನಗಳೂ ಲಲಿತೆ ತೀರಾ ವಿಕ್ಷಿಪ್ತಳಾಗಿದ್ದಳು. ದಿನವಿಡೀ ಯೋಚಿಸುವ ಲಲಿತೆಯನ್ನು ಕಂಡು ತನಗೆ ತೋಚಿದ ಸಮಾಧಾನ ಹೇಳುತ್ತಿದ್ದಳು ಕಾವೇರಿ. "ಅಮ್ಮ, ಚಿಂತಿಸದಿರಿ, ಭಗವತಿ ನಿಮ್ಮ ಮೇಲೆ ದಯ ತೋರಿದ್ದಾಳೆಂಬುದಕ್ಕೆ ಮೊನ್ನಿನ ಘಟನೆಯೇ ಸಾಕ್ಷಿ. ನಾಯರ್ ಕುಲದ ಹೆಣ್ಣನ್ನು ಐತ ಮಾಡುವುದೆಂದರೆ ಸುಮ್ಮನಾಯಿತೆ? ನೋಡಿ ಆನೆ ನಿಮ್ಮಿಬ್ಬರಿಗೂ ಏನು ಮಾಡಿತು?" ಎಷ್ಟೋ ಹೊತ್ತಿನಿಂದ ಮೂಕಳಾಗಿ ಕುಳಿತಿದ್ದ ಲಲಿತೆ ಕೇಳಿದಳು, "ಕಾವೇರಿ, ನಾನು ಬಿದ್ದಾಗಲೂ ಅವರು ಕೆಳಗಿಳಿಯಲಿಲ್ಲವೆ ?" "ಇಲ್ಲ ಅಮ್ಮ" ತಾನಿತ್ತ ಉತ್ತರದಿಂದ ಅವಳನ್ನು ಸೀಗೆಮೆಳೆಯೊಳಗೆ ಹೊರಳಿಸಿದಂತಾದೀತೆ ಎಂಬುದನ್ನರಿಯದ ಕಾವೇರಿ ಸರಳವಾಗಿ ಹೇಳಿದಳು. "ಕೆಳಗಿಳಿದರೂ ಅವರು ನಿಮ್ಮನ್ನು ಸೋಕಿಯಾರೆ? ಆಚಾರಕ್ಕೆ ಕಟ್ಟು ಬಿದ್ದು ಹಾಗೆ ಮಾಡಿದರು. ನೋಡುತ್ತಿರಿ, ನಾಳೆ ನಿಮಗೆ ಗಂಡುಮಗುವಾಗಲಿ ಅವರೇ ಬರುತ್ತಾರೆ. ಅವರ ಪೂಜೆ ಪುರಸ್ಕಾರಗಳೇ ನಿಮ್ಮನ್ನು ಕಾದುವವಮ್ಮ." ಲಲಿತೆ ನಿಟ್ಟುಸಿರಿಟ್ಟಳು. ಆ ನಿಟ್ಟುಸಿರಿನೊಂದಿಗೆ ಅವಳ ಹೃದಯದಲ್ಲಿ ಪ್ರತಿ

ಪ್ರಾಪಿತನಾಗಿದ್ದ ನಂಬೂದಿರಿ ಕೆಳಗೆ ಉರುಳಿದ್ದನೆಂದು ಕಾವೇರಿಗೆ ಹೇಗೆ ತಿಳಿಯಬೇಕು ?

ಎರಡು ದಿನಗಳ ಸತತ ನೋವು ತಿಂದು ಲಲಿತೆಗೆ ಹೆರಿಗೆಯಾಯಿತು. "ಕಾವೇರಿ ಎಂಥ ಮಗು?" ಲಲಿತೆಯ ದನಿ ಅವಳ ಹತೋಟಿಯಲ್ಲಿರಲಿಲ್ಲ. "ಅಮ್ಮ, ನೀವು ಗೆದ್ದಿರಿ. ಗಂಡು ಮಗು." "ತಾಯಿ ಭಗವತಿ, ನೀನು ನನ್ನನ್ನು ಕೊಂದೆ," ಲಲಿತೆ ಒಮ್ಮೆಲೇ ಉದ್ಗರಿಸಿದಳು. ನೋವು ತುಂಬಿದ ಆ ಉದ್ಗಾರವನ್ನು ಕೇಳಿದ ಕಾವೇರಿ ಚಕಿತಳಾಗಿ ನುಡಿದಳು. "ನಾನೆಂದಿದ್ದು ಗೊತ್ತಾಗಲಿಲ್ಲವೆ ಅಮ್ಮ, ಹುಟ್ಟಿದ್ದು [illegible] ಗಂಡು." ಲಲಿತೆ ಉತ್ತರಿಸಲಿಲ್ಲ. ಇನ್ನೆರಡು ದಿನಗಳಲ್ಲಿ ಲಲಿತೆ, ಮಗು ಕಿರುಮನೆಯಿಂದ ತರವಾಡಿಗೆ ತೆರಳುವರು. ಲಲಿತೆಯ ಅಪ್ಪೆಗೂ ಮಾವನಿಗೂ ಸಂತೋಷವೋ ಸಂತೋಷ. ಅಪ್ಪೆ ಈಗಲೇ ಎರಡು ಬಾರಿ ಬಂದು ಹೋಗಿದ್ದಾಳೆ. ಆದರೆ ಹರ್ಷ ತುಂಬಿದ ಆ ವಾತಾವರಣವನ್ನು ಆಗಾಗ ಹೊರಸೂಸುವ ತನ್ನ ನಿಟ್ಟುಸಿರಿಂದ ಕಲುಷಿತಗೊಳಿಸುತ್ತಿದ್ದಳು ಲಲಿತೆ. ಅವಳ ಮನ ದಾರಿ ತಪ್ಪಿ ಅಲೆಯುತ್ತಿತ್ತು. ಮನದಾಳದಲ್ಲಿ ಕಣ್ಣನ ಧೀರಾಕೃತಿ ನಲಿಯುತ್ತ ಹೇಳುತ್ತಿತ್ತು. 'ತಂಬುರಾಟಿ ನೀವು ಇಂದಿನಿಂದ ನನ್ನವರಾದಿರಿ.' 'ಕಣ್ಣ, ನಿಜಕ್ಕೂ ನಾನು ನಿನ್ನವಳೆ' ಲಲಿತೆ ಹಲುಬಿದಳು. 'ನನ್ನ ಜೀವಕ್ಕೋಸ್ಕರ ನಿನ್ನ ಜೀವನವನ್ನು ಪಣಕ್ಕಿಟ್ಟೆಯಲ್ಲ ಕಣ್ಣ, ನನ್ನ ಕಣ್ಣ ಬೇಕೆ? ನನ್ನ ಎದೆಯ ಅಳಲನ್ನು ನಿನಗೆ ಹೇಗೆ ತೋರಿಸಲಿ? ಇನ್ನೆರಡೇ ದಿನ ನಂತರ ನಾನು ನಂಬೂದಿರಿಯ ಕಾರಾವಾಸದೊಳಗೆ ಬಂಧಿತಳಾಗುವೆನು.' ಲಲಿತೆ ಯೋಚಿಸಿ ಬೆಂಡಾದಳು. ಒಂದು ಬಾರಿ ಒಂದೇ ಬಾರಿ ಕಣ್ಣನನ್ನು ನೋಡಲಾಗನೆ? ಆತ ಹೇಗಿರುವನೋ? ಆತನ ಶುಶ್ರೂಷೆಗೆ ಯಾರಿರುವರೋ? ಕೆಲವು ದಿನಗಳಿಂದಲೂ ತನ್ನಲ್ಲಿ ಹೊತ್ತಿ ಉರಿಯುತ್ತಿದ್ದ ಭಾವನೆಗಳನ್ನು ಮುಚ್ಚಿಡಲಾರದೇ ಬಿಚ್ಚಲೂ ಆಗದೇ ಲಲಿತೆ ಕೇಳಿದಳು. "ಕಾವೇರಿ, ಕಣ್ಣನಿಗೆ ಈಗ ವಾಸಿಯೆ?" "ಈ ಶುಭದಲ್ಲಿ ಅವನ ಸುದ್ದಿಯೇಕೆ ಅಮ್ಮ ?" ಒಂಭತ್ತು ದಿನಗಳ ಹಸುಳೆಯನ್ನು ಎತ್ತಿಕೊಂಡಿದ್ದ ಕಾವೇರಿ ಉತ್ತರಿಸಿದಳು. "ಅವನ ಎದೆಗೆ ಪೆಟ್ಟು ಜೋರಾಗಿದೆಯಂತೆ. ವೈದ್ಯ ಮಾಡಿದ್ದು ಫಲಕಾರಿ ಆಗಲಿಲ್ಲಂತೆ. ಆತ ಬೇಗನೇ ಪರಲೋಕಕ್ಕೆ..." "ಕಾವೇರೀ!" ಬಾಣಂತಿ ಚೀರಿದ್ದರಿಂದ ಆಶ್ಚರ್ಯಚಕಿತಳಾದ ಹೆಣ್ಣಾಳು, "ಹೋಗಲಿ ಬಿಡಿ ಅಮ್ಮ ಆ ಸುದ್ದಿ ನಮಗೇಕೆ?" ಎಂದು ಮುಕ್ತಾಯ ಹಾಡಿದಳು.

ನಾಳೆಯೆ ತರವಾಡಿಗೆ ತೆರಳುವ ದಿನ. ರಾತ್ರಿಯ ಕಪ್ಪು ಜವನಿಕೆಯ ಎಡೆಯಲ್ಲಿ ಅಲ್ಲಲ್ಲಿ ಕಿರು ತಾರೆಗಳು ಮಿನುಗುತ್ತಿದ್ದವು. ಲಲಿತೆ ನಿದ್ದೆ ಬಾರದೇ ಹೊರಳುತ್ತಿದ್ದಳು. ಜೀವ ಸಂಕಟನಲ್ಲಿ ಬೇಯುತ್ತಿತ್ತು. ಇದೇ ಕೊನೆಯ ದಿನ ತನ್ನ ಸ್ವಾತಂತ್ರ್ಯಕ್ಕೆ. ನಂತರ ತಾನು ತರವಾಡಿನ ಕತ್ತಲು ಕೋಣೆಗಳಲ್ಲಿ ಕಳೆದುಹೋಗುತ್ತೇನೆ. ನಂಬೂದಿರಿಯ ಇರುಳು ಶಯ್ಯೆಯಲ್ಲಿ ಪಾಲುಗಾತಿಯಾಗುತ್ತೇನೆ. ನಂತರ ಎಂದೆಂದೂ ತನ್ನ

ಕಣ್ಣನನ್ನು ತನ್ನ ಮನವನ್ನು ಗೆದ್ದವವನನ್ನು ನೋಡಲಾರೆ. ರಾಮನ್ ನಂಬೂದಿರಿಯ ತಿರಸ್ಕಾರದ ಭಯದಿಂದ ಕೂಡಿದ ಮೊಗ ಅವಳ ಮನಕ್ಕೆ ಗೋಚರಿಸಿತು. ತನ್ನ ಕುಡಿಯನ್ನು ಹೊತ್ತವಳನ್ನು ಕಣ್ಣೆದುರೇ ಅಪಾಯಕ್ಕೆ ಈಡು ಮಾಡಿದ ಆತನೂ ಒಬ್ಬ ಗಂಡಸೇ? ಲಲಿತೆ ತಿರಸ್ಕಾರದಿಂದ ನಕ್ಕಳು. ಮುಂದೇನಾದೀತೋ ಎಂಬ ಅರಿವಿದ್ದರೂ ತನ್ನ ಸಹಜ ಧೀರಗುಣವನ್ನು ಮೆರೆದ ವೀರ ಕಣ್ಣ! ಅವಳ ಹೃದಯ ಮೆಚ್ಚುಗೆಯಿಂದಲೂ ಶೋಕದಿಂದಲೂ ತುಂಬಿತ್ತು. ಯೋಚಿಸಿ ಯೋಚಿಸಿ ಅವಳೊಂದು ನಿರ್ಧಾರಕ್ಕೆ ಬಂದಳು. ಕಾವೇರಿಯ ಗೊರಕೆ ಅಲ್ಲಿಗೆ ಕೇಳಿಸುತ್ತಿತ್ತು. ಲಲಿತೆ ನಿಧಾನವಾಗಿ ಎದ್ದಳು. ಮೆಲು ಹೆಜ್ಜೆಗಳನ್ನಿಡುತ್ತ ಬಾಗಿಲ ಹೊರಗೆ ಬಂದು ಕದವನ್ನೆಳೆದು ಕೊಂಡಳು. ಕಣ್ಣನ ಗುಡಿಸಲೆಡೆಗೆ ಸಾಗಿದ ಅವಳ ಹೆಜ್ಜೆಗಳು ದೃಢವಾಗಿದ್ದವು. ಹತ್ತು ನಿಮಿಷಗಳಲ್ಲಿ ಅವನ ಗುಡಿಸಲ ಮುಂದೆ ನಿಂತಿದ್ದಳು. ಗುಡಿಸಲಿನ ಬಾಗಿಲು ಮುಂದು ಮಾಡಿತ್ತು. ಅರೆತೆರೆದ ಅದರೊಳಗೆ ಹಣಕಿನೋಡಿದಳಾಕೆ. ಒಳಗೆ ಹಣತೆಯೊಂದು ಮಂದವಾಗಿ ಉರಿಯುತ್ತಿತ್ತು. ಒಂದು ಮೂಲೆಯಲ್ಲಿ ಕಣ್ಣ ಹಸೆಯಲ್ಲಿ ಮಲಗಿದ್ದ. ಪುಷ್ಟವಾಗಿದ್ದ ಶರೀರ ಬತ್ತಿ ಬಡಕಲಾಗಿದ್ದನ್ನು ಬೆಳಕಲ್ಲೂ ಗುರುತಿಸಿದಳು ಲಲಿತೆ. ಕಣ್ಣನ ಮೋರೆಯಲ್ಲಿ ಗಡ್ಡ ಮೀಸೆಗಳು ಪೊದರವಾಗಿ ಬೆಳೆದಿದ್ದುವು. ಉಳಿದಂತೆ ಎಲ್ಲಾ ಸ್ವಚ್ಛವಾಗಿದ್ದುದನ್ನು ಗುರುತಿಸಿದವಳು ಬಹುಶಃ ಯಾರೋ ಮಾಡಿಟ್ಟು ಹೋಗಿರಬಹುದೆಂದುಕೊಂಡಳು. ಅವಸಿಗಾರೂ ಇಲ್ಲವೆಂದು ಕಾವೇರಿ ಒಮ್ಮೆ ಹೇಳಿರಲಿಲ್ಲವೆ? ಅಷ್ಟರಲ್ಲಿ ಅವನು ಹೊರಳಿದ. ಅವನ ಬಾಯಿಂದ ಹೊರಟ ಶಬ್ದಗಳಿಗೆ ಕಿವಿಗೊಟ್ಟಳು. "ತುಂಬುರಾಟಿ, ನೀವೆನ್ನ ಮನೆಗೆ ಬೆಳಕಾದೀರೆಂದು ಭಾವಿಸಿದೆ. ನಿಮಗಾಗಿ ಕಾತರದಿಂದ, ತಾಳ್ಮೆಯಿಂದ ಕಾದೆ, ನಿಮಗಾಗಿ ಹುಚ್ಚನಾದೆ. ಆದರೆ ತುಂಬುರಾಟಿ ನೀವು ಬರಲೇ ಇಲ್ಲ. ದೇವಿ ಭಗವತಿಗೆ ನನ್ನ ಮೇಲೆ ಮುನಿಸೇನೋ." ಅವನು ಕ್ಷಣ ಕಾಲ ಸುಮ್ಮನಾದ. ಲಲಿತೆ ಉಸಿರು ಬಿಗಿ ಹಿಡಿದಿದ್ದಳು. "ಆದರೆ ತುಂಬುರಾಟಿ, ನಿಮ್ಮ ಜೀವಕ್ಕಾಗಿ ನನ್ನನ್ನೇ ಒಡ್ಡಿಕೊಂಡೆ. ಅದರಷ್ಟು ತೃಪ್ತಿ ಇನ್ನಾವುದರಲ್ಲಿದೆ? ಜೀವ ತುಂಬುರಾಟಿಯನ್ನೊಮ್ಮೆ ನೋಡುತ್ತಿದ್ದರೆ? ಆದರೆ ನನಗೆ ಆ ಭಾಗ್ಯವಿಲ್ಲ. ಅವರು ನಾಳೆಯೇ ತರವಾಡಿಗೆ ತೆರಳುವರು." ಕಣ್ಣ ಬಿಟ್ಟ ನಿಟ್ಟುಸಿರ ಕಾವು ಲಲಿತೆಯನ್ನು ಸೋಕಿತು. ಇನ್ನು ಅಲ್ಲಿ ನಿಂತಿರಲಾಗದೇ ಲಲಿತೆ, ತನ್ನರಿವೇ ಇಲ್ಲದೆ ಒಳಗೆ ಸರಿದಳು. ಮಾತನಾಡಿ ಆಯಾಸವಾದ ಕಣ್ಣ ಕಣ್ಣು ಮುಚ್ಚಿ ಮಲಗಿದ್ದ. "ಕಣ್ಣ, ನಾನು ಬಂದಿದ್ದೇನೆ." ಯಾವ ಸಂಕೋಚವೂ ಇಲ್ಲದೇ ಮತ್ತೆ ಲಲಿತೆ ಅವನ ಬಳಿ ಮಂಡಿಯೂರಿ ಕುಳಿತಳು. "ಯಾರು?" ಕಣ್ಣರಳಿಸಿದವನು ನಂಬದವನಂತೆ ಮತ್ತೆ ನೋಡಿದ. "ತುಂಬುರಾಟಿ, ನೀವೇ ನಿಜಕ್ಕೂ ನೀವೇ!" "ಹೌದು ಕಣ್ಣ ನಾನೇ," ಉಕ್ಕಿ ಬರುತ್ತಿದ್ದ ಅಳುವನ್ನು ನಿಗ್ರಹಿಸಲು ಕಷ್ಟಪಡುತ್ತ ಹೇಳಿದಳು ಲಲಿತೆ. "ಕೊನೆಗೂ ಬಂದಿರಿ ನನ್ನಲ್ಲಿ ದಯತೋರಿ. ನನ್ನ ಮನೆ ಪಾವನವಾಯಿತು. ನನ್ನ ಜನ್ಮ ಸಾರ್ಥಕವಾಯಿತು." "ಕಣ್ಣ ಹಾಗೆ ಹೇಳದಿರು," ಅವನ ಕೈಗಳನ್ನು ತನ್ನ ಕೈಯಲ್ಲಿ ಹಿಡಿದುಕೊಂಡಂತೇ ಅವಳು ಬಾಗಿ ಪಿಸುಗುಟ್ಟಿದಳು. ಕಣ್ಣ ಎನ್ನೊಲವೆ, ಎನ್ನ ಬದುಕೆ ನಾನೆಂದಿಗೂ ನಿನ್ನವಳು." ಮಾತಿನ ಕೊನೆಯೊಂದಿಗೆ ಕುಸಿದು ಅವನ ವಿಶಾಲ ವಕ್ಷಕ್ಕೆ ತಲೆ ಇಟ್ಟಳು. ಕಣ್ಣೀರು ಧಾರಾಕಾರವಾಗಿ ಹರಿದು ಆತನ ವಕ್ಷಸ್ಥಳವನ್ನು ನೆನೆಯಿಸಿತು. "ತುಂಬುರಾಟಿ, ನಾನೇನು ಕೇಳುತ್ತಿದ್ದೇನೆ?" ಉದ್ವೇಗದಿಂದ ಕಣ್ಣನೆದೆ ಜೋರಾಗಿ ಬಡಿದುಕೊಳ್ಳುತ್ತಿತ್ತು. ಎದೆಗೊರಗಿ ಬಿಕ್ಕುತ್ತಿದ್ದ ಲಲಿತೆಯ ತಲೆಯನ್ನು ನೇವರಿಸುತ್ತಿದ್ದಂತೇ ಹರ್ಷವನ್ನು ತಾಳಲಾರದೆ ಹೃದಯ ಕಾರಿದ ರಕ್ತ ಬಾಯಿಂದ ಹೊರಗೆ ಚಿಮ್ಮಿ ಹಾಸಿಗೆಯನ್ನು ಒದ್ದೆ ಮಾಡಿತು. ✡

ಓಂ ನಮೋ ಭಗವತೇ ಶಂಕರಾನಂದಾಯ

ಸನಾತನ ಧರ್ಮಿಗಳ ಧರ್ಮಗ್ರಂಥವಾದ

ಶ್ರೀಮದ್ಭಗವದ್ಗೀತಾ ಮೂಲ

ದಪ್ಪಕ್ಷರಗಳಲ್ಲಿ ಪಾರಾಯಣ ವಿಧಿ ಸಹಿತ ಅಂದವಾದ ತಪ್ಪಿಲ್ಲದ ಮುದ್ರಣ

೧/೧೬ ಡೆಮ್ಮಿ ಸೈಜ. ೫೯೨+೩೨ ಪುಟಗಳು
ಅಂದವಾದ ಕ್ಯಾಲಿಕೋ ಮತ್ತು ಮುದ್ರಿತ ಪ್ಲಾಸ್ಟಿಕ್
ಕವಚಗಳಲ್ಲಿ ಸೇವಾ ದೃಷ್ಟಿಯಿಂದ ಉತ್ಪಾದನೆಯ
ವೆಚ್ಚಕ್ಕಿಂತ ಕಡಿಮೆ ದರದಲ್ಲಿ ಮಾರಾಟ.

ಕ್ಯಾಲಿಕೋ ಕವಚಗಳದ್ದು ಕೇವಲ ೩ ರೂಪಾಯಿಗಳು
ಪ್ಲಾಸ್ಟಿಕ್ ಕವಚಗಳದ್ದು ಕೇವಲ ೪ ರೂಪಾಯಿಗಳು

ಆಂಧ್ರ ಮತ್ತು ಕರ್ನಾಟಕ ಪ್ರದೇಶಗಳಲ್ಲಿ
"ಗೀತಾ ಸ್ವಾಮೀಜಿ" ಎಂದು ಪ್ರಖ್ಯಾತರಾದ
ಶ್ರೀ ಶ್ರೀ ಶ್ರೀ ಸ್ವಾಮಿ ಶಂಕರಾನಂದಜಿ
ಇವರಿಂದ ವಿನ್ಯಾಸ.





ಬ್ರಹ್ಮಲೀನ
ಶ್ರೀ ಶ್ರೀ ಶ್ರೀ ಸ್ವಾಮಿ ಶಂಕರಾನಂದಜೀಯವರು

ತಾರೀಖು ೧-೧೧-೭೯ ರಂದು ಬಿಡುಗಡೆಯಾದ ಇವರ ಇತರ ಸದ್ಗ್ರಂಥಗಳು.

೧) ಶ್ರೀ ಗೀತಾ ತಾತ್ಪರ್ಯಪ್ರದೀಪ (ಕನ್ನಡ ಮತ್ತು ತೆಲುಗು)
೨) ಶ್ರೀ ಸ್ವಾಮೀಜಿಯವರ ಗೀತೋಪನ್ಯಾಸಗಳು – ಮೂರನೆಯ ಅಧ್ಯಾಯ – ಕರ್ಮಯೋಗ
೩) ವಿಚಾರ ಸಾಗರ – ಎರಡನೆಯ ಭಾಗ

ಪುಸ್ತಕಗಳು ದೊರಕುವ ಸ್ಥಳ —

ದೂರವಾಣಿ : ಅಜ್ಜಂಪುರ - ೨೫
ಬೆಂಗಳೂರು - ೫೬೩೦೯೫

ಶ್ರೀ ಶಿವಾನಂದಾಶ್ರಮ,
ಅಜ್ಜಂಪುರ ೫೭೭೫೪೭

ಹಾಗೂ ಶ್ರೀ ಗೀತಾ ಏಜನ್ಸೀಸ್ ಬಳೇಪೇಟೆ ಚೌಕ, ಬೆಂಗಳೂರು-೫೩

ನಿಮ್ಮ ಹತ್ತಿರದ ಪುಸ್ತಕ ವ್ಯಾಪಾರಿಗಳಲ್ಲಿ ವಿಚಾರಿಸಿ ✫ ಪುಸ್ತಕ ವ್ಯಾಪಾರಿಗಳಿಗೆ ಧಾರಾಳ ಕಮಿಷನ್

ಪರಿಶೀಲಿತ

ಕ್ಯಾನಡಾದ ಎಡ್ಮಂಟನ್ ನಗರದ ಮೇಯರ್ ಐವ್ಲೇರ್ ಡೆಂಟ್ ಕಛೇರಿಗೆ ಬಂದ. ಆತನ ಕೋಣೆ ಎರಡನೆ ಅಂತಸ್ತಿನಲ್ಲಿತ್ತು. ಅಲ್ಲಿಗೆ ಹೋಗಲು ಲಿಫ್ಟ್‌ನೊಳಕ್ಕೆ ಹೋದ. ಅಷ್ಟರಲ್ಲೇ ಓರ್ವ ಮಧ್ಯ ವಯಸ್ಕ ಮಹಿಳೆಯೂ ಲಿಫ್ಟ್ ಸೇರಿದಳು. ಲಿಫ್ಟ್‌ನೊಳಗಿದ್ದವನು ಯಾರೆಂದು ತಿಳಿಯದೇ "ಏಳನೇ ಅಂತಸ್ತಿಗೆ" ಎಂದಳು. ಐವ್ಲೇರ್ ಅನ್ಯಥಾ ಭಾವಿಸದೇ ಏಳನೇ ಅಂತಸ್ತಿನ ಬಟನ್ ಒತ್ತಿದ. ಎರಡನೆ ಅಂತಸ್ತು ಬಂದಾಗ ಲಿಫ್ಟ್ ನಿಲ್ಲಿಸಲು ಬಟನ್ ಒತ್ತ ಹೋರಟಾಗ ಆಕೆ "ನನಗೆ ಶೀಘ್ರವೇ ಹೋಗಬೇಕು" ಎಂದಳು. ಆತ ಮರುನುಡಿಯದೇ ಅದನ್ನು ಏಳನೇ ಅಂತಸ್ತಿಗೆ ಹೋಗಗೊಟ್ಟ. ಅಲ್ಲಿ ನಾಲ್ಕೈದು ಜನ ಲಿಫ್ಟ್‌ನೊಳಕ್ಕೆ ಬಂದು "ಮೊದಲಂತಸ್ತಿಗೆ" ಎಂದರು. ಸರಿ, ಐವ್ಲೇರ್ ಅವರನ್ನು ತೆಪ್ಪಗೆ ಮೊದಲಂತಸ್ತಿಗಿಳಿಸಿ, ನಂತರ ಎರಡನೆ ಅಂತಸ್ತಿಗೆ ಹೋಗಿ ತನ್ನ ಕೋಣೆ ಸೇರಿ ಮಹತ್ವದ ಕಾಗದ ಪತ್ರಗಳ ಪರಿಶೀಲನೆಯಲ್ಲಿ ಮಗ್ನನಾದ.

ಒಂದು ಗಂಟೆ ಕಳೆದಿರಬೇಕು. ಟೆಲಿಫೋನ್ ಗಂಟೆ ಬಾರಿಸಿತು. ರಿಸೀ-ವರ್ ಎತ್ತಿ "ಹಲೋ" ಎಂದ. ಆತ್ತಕಡೆಯಿಂದ ಮಹಿಳೆಯ ದನಿ. "ಹಲೋ ಮೇಯರ್. ನಾನು ಏಳನೇ ಅಂತಸ್ತಿನಲ್ಲಿ ಸುಮಾರು ಅರ್ಧ ಗಂಟೆಯಿಂದ ಕಾಯ್ತಾ ಇದೀನಿ, ಲಿಫ್ಟ್ ಬಾಯ್ ಲಿಫ್ಟ್ ತರ್‍ತಾನೇ ಇಲ್ಲ. ದಯವಿಟ್ಟು ಆತನಿಗೆ ಎಚ್ಚರಿಕೆ ನೀಡಿ."

"ಆಗಲಿ" ಎಂದವನೇ ಐವ್ಲೇರ್ ಕೂಡಲೆ ಲಿಫ್ಟ್‌ಗೆ ಹೋಗಿ, ಏಳನೇ ಅಂತಸ್ತಿಗೆ ಲಿಫ್ಟ್ ಏರಿಸಿದ. ಅಲ್ಲಿ ನಿಂತಿದ್ದಾಕೆ ಗಂಟೆಯ ಹಿಂದೆ ಬಂದಾಕೆಯೇ. ಆತನನ್ನು ಕೆಕ್ಕರುಗಣ್ಣುಗಳಿಂದ ನೋಡುತ್ತ, "ನಾನು ಮೇಯರ್‌ಗೆ ಫೋನ್ ಮಾಡ್ದೇ ಹೋಗಿದ್ರೆ ನೀನು ಬರ್‍ತಾನೇ ಇರಲಿಲ್ವೋ ಏನೋ ಶೋಂಬೇರಿ. ನಡೆ ಮೊದಲಂತಸ್ತಿಗೆ" ಎಂದಳು. ಐವ್ಲೇರ್ ಆಕೆಯನ್ನು ಮೊದಲಂತಸ್ತಿಗಿಳಿಸಿದಾಗ ಹೊರಗೆ ನಿಂತಿದ್ದ ಸಭ್ಯಗೃಹಸ್ಥನೊಬ್ಬ "ಹಲ್ಲೊ ಮೇಯರ್ ಹೇಗಿದ್ದೀರಿ?" ಎಂದು ಕೈಕುಲುಕಿದಾಗ ಆ ಮಹಿಳೆಯ ಮುಖ ನೋಡಬೇಕಿತ್ತು.

ದೇವತೆಗಳ ಚಟಗಳು

ಪಿ. ವಿ. ಆಚಾರ್ಯ

ದೇವತೆಗಳು ಅಂದರೆ ನನಗೆ ತುಂಬಾ ಇಷ್ಟ. ನಾನು ಬೇರೆ ಧರ್ಮಗಳ ದೇವರುಗಳ ಬಗ್ಗೆ ಹೇಳುತ್ತಾ ಇಲ್ಲ. ನಾನು ಹೇಳುವುದು ನಮ್ಮ ಹಿಂದುಗಳ, ಗ್ರೀಕರ, ರೋಮನ್ನರ, ಟ್ಯೂಟನ್ನರ ಪುರಾತನ ದೇವತೆಗಳ ವಿಚಾರ. ಇಂದ್ರ, ಅಗ್ನಿ ಅಥವಾ ಗಣೇಶ, ಇಲ್ಲವೆ ಗ್ರೀಕರ ಜೂವಸ್, ರೋಮನ್ನರ ಜುಪಿಟರ್, ಟ್ಯೂಟನ್ನರ ವೋಡೆನ್ ಇತ್ಯಾದಿಗಳು ನನ್ನನ್ನು ತುಂಬಾ ಆಕರ್ಷಿಸುತ್ತಾರೆ. ಅವರು ನಿಮ್ಮ ನಮ್ಮ ಹಾಗೆಯೆ ಪ್ರೀತಿ–ವಿಶ್ವಾಸ–ಕೋಪ–ತಾಪ, ಮರೆ–ಮೋಸ, ಚಟ ಅಭ್ಯಾಸ ಇವೆಲ್ಲ ಗುಣಗಳಲ್ಲಿ ನಮಗಿಂತ ತುಂಬಾ ಹಿಗ್ಗಿಸಿದ ಆವೃತ್ತಿಗಳು (enlarged editions) ಅಷ್ಟೇ, ಕೆಲವೊಂದು ಭೇದಗಳನ್ನು ಮಾತ್ರ ಕಾಣುತ್ತೇವೆ. ಅವರು ಯಾವಾಗಲೂ ಕಣ್ಣು ಮುಚ್ಚುವುದಿಲ್ಲವಂತೆ. ಅಂದರೆ ಅವರು ಯಾವಾಗಲೂ ನಿಮ್ಮನ್ನು ನೋಡುತ್ತಲೇ ಇರುತ್ತಾರೆ ಅಂತ ಭಯಪಡಬೇಕಾಗಿಲ್ಲ. "ಜಡಗಣ ಮರೆಗೆ ಕಾಣುವುದಿಲ್ಲ," ಅಂತ ಬೇಂದ್ರೆಯವರು ಹೇಳಿದ್ದಾರೆ. ದೇವತೆಗಳು ಯಾವಾಗಲೂ ನೆಲಮುಟ್ಟಿ ನಡೆಯುವುದೇ ಇಲ್ಲವಂತೆ. ಅಧಿಕಾರ ಬಂದರೆ ನಾವು ಮಾಡೋದೂ ಅದೇ ಅಲ್ಲವೆ? ಎಲ್ಲಕ್ಕಿಂತ ಹೆಚ್ಚಾಗಿ ಅವರು ಸಾಯುವುದಿಲ್ಲವಂತೆ. ಅದೂ ಇತ್ತೀಚೆಗೆ ಹಾಲಿನ ಸಮುದ್ರ ಕಡೆದು ಅಮೃತ ತೆಗೆದು ಕುಡಿದ ಮೇಲೆ ಅವರು ಸಾಯುವುದನ್ನು ಬಿಟ್ಟರು. ಅದಕ್ಕಿಂತ ಮುಂಚೆ ಗ್ರೀಕ್ ದೇವತೆ ಜೂವಸ್ ತನ್ನ ತಮ್ಮಂದಿರೊಡನೆ ಪಿತೂರಿ ಮಾಡಿ ತನ್ನ ಅಪ್ಪ ಕ್ರೋನಸ್ನನ್ನು ಕೊಂದು ತಾನೇ ದೇವಾಧಿದೇವ ಆದನಂತೆ. ಆ ಕ್ರೋನಸ್ಸನೂ ಅಷ್ಟೇ. ತನ್ನ ಅಪ್ಪನ ಮೇಲೆ ದಂಗೆ ಎದ್ದು ಅಧಿಕಾರ ಕಸಿದುಕೊಂಡವನೇ. ನಮ್ಮ ದೇಶದಲ್ಲಿ ಶಿಶುನಾಗ ವಂಶದವರು ಈ ಗ್ರೀಕ್ ದೇವತೆಗಳ ಮೇಲ್ಪಂಕ್ತಿಯನ್ನೇ ಅನುಸರಿಸಿದರೆಂದು ಎಲ್ಲಿಯೋ ಓದಿದ ನೆನಪು.

ಸಮುದ್ರ ಕಡೆದು ಅಮೃತ ತೆಗೆದರು–ಅಂದೆನಲ್ಲ–ಇದರಲ್ಲಿ ಕೂಡ ದೇವತೆಗಳು ಮಾನವನ ಹಿಗ್ಗಿಸಿದ ಆವೃತ್ತಿಗಳಂತೇಯೇ ನಡೆದುಕೊಂಡರು. ಕಡೆಯುವುದರಲ್ಲಿ ಪಾರ್ಟನರ

ರಾದ ಅಸುರರಿಗೆ ಪಾಲು ಕೊಡದೆ ತಾವೇ ದಕ್ಕಿಸಿಕೊಂಡರು.

ದೇವತೆಗಳ ಚಟಗಳು ಅನ್ನೋ ವಿಷಯ ಹೇಳಬೇಕು. ಅಂತ ಹೊರಟು ದೇವತೆಗಳು ನಮ್ಮದೇ ದೊಡ್ಡ ಆವೃತ್ತಿಗಳು ಅನ್ನುವ ಅತಿಪ್ರಸಂಗಕ್ಕೆ ಈತ ಇಳಿಯುತ್ತಿದ್ದಾನಲ್ಲ ಅಂದುಕೋಬೇಡಿ. ಅವರಿಗೂ ನಮಗೂ ಸಾದೃಶ್ಯ ಉಂಟು ಅನ್ನೋದನ್ನ ತೋರಿಸಿಕೊಡದೆ ಅವರ ಚಟಗಳ ಸುದ್ದಿ ಹೇಳಿದರೆ ಅದು ಬುನಾದಿ ಇಲ್ಲದ ಕಟ್ಟಡ ಆದೀತು. ನಾವು ಸುಳ್ಳುಗಳನ್ನ ಕೂಡ ಗಟ್ಟಿಮುಟ್ಟಾದ ಬುನಾದಿಯ ಮೇಲೇ ಕಟ್ಟಬೇಕಾಗುತ್ತೆ.

ದೇವತೆಗಳ ಚಟ ಅನ್ನೋ ವಿಷಯ ಮಾತಾಡಬೇಕಾದರೆ ವಿಷಯದ ಮಿತಿಗಳನ್ನ ಮೊದಲೇ ಹೇಳಿಬಿಡುತ್ತೇನೆ. ದೇವತೆಗಳ heydayಯ ಅಥವಾ ಶುಕ್ರದೆಶೆಯ ಕಾಲದಲ್ಲಿ ಸಿಗರೇಟು ಇರಲಿಲ್ಲ. ಅಫೀಮು, ಭಾಂಗ್, ಎಲ್.ಎಸ್.ಡಿ. ಇರಲಿಲ್ಲ. ಇಸ್ಪೇಟು ಇರಲಿಲ್ಲ. ಕ್ಯಾಸಿನೋಗಳು ಖಂಡಿತ ಇರಲಿಲ್ಲ. ಓಪನ್ ಕ್ಲೋಸ್ ಇವರಿಗೆ ಗೊತ್ತೇ ಇರಲಿಕ್ಕಿಲ್ಲ. ಪಗಡೆ ಆಟ ಇತ್ತೋ ಇಲ್ಲವೋ ಸರಿಯಾಗಿ ತಿಳಿಯದು.

ಗಣೇಶನ ಕೈಲಿ ಬೀಡಿ ಕೊಟ್ಟ ಚಿತ್ರಗಳನ್ನ ನೀವು ನೋಡಿರಬೇಕು. ಆದರೆ ಗಣೇಶನ ಯಾವ ಕಥೆಯಲ್ಲಿ ಕೂಡ ಆತ ಬೀಡಿ ಸಿಗರೇಟು ಸೇದುತ್ತಿದ್ದ ಅನ್ನೋದಕ್ಕೆ ಪ್ರಮಾಣ ಸಿಗೋದಿಲ್ಲ ಅಂತ ನಾನು ಎದೆ ತಟ್ಟಿ ಹೇಳಬಲ್ಲೆ. ನಿಜ ಕೇಳಿದರೆ ಅವರ ಕಾಲ ತುಂಬಾ ಭೋಳೇ ಯುಗ ಆಗಿತ್ತೆಂದು ತೋರುತ್ತೆ. ಆದರೆ ಅವರು ಚಟಗಳಿಂದ ಮುಕ್ತರಾಗಿದ್ದರು ಅಂತಲ್ಲ. ತಿನ್ನೋದು, ಕುಡಿಯೋದು, ಹೆಣ್ಣುಗಳ ಮೇಲೆ ಕಣ್ಣು ಹಾಕೋದು, ತಮ್ಮತಮ್ಮೊಳಗೇ ಜಗಳ ಮಾಡಿಕೊಂಡು ಪಾರ್ಟಿ ಕಟ್ಟೋದು ಮತ್ತು ಮನುಷ್ಯರನ್ನು ಕಾಡೋದು ಈ ಚಟಗಳು ಅವರಿಗೆ ಇದ್ದವು.

ಗಣಪತಿಯನ್ನೇ ಮೊದಲು ತೆಗೆದುಕೊಳ್ಳಬೇಕು. ಇವನ ಮುಖ್ಯ ಚಟ ಸಿಹಿ ತಿಂಡಿ, ಎರಡನೆಯದು ಕವಿತೆ ಬರೆಯೋದು ಅಂತ ಕಾಣುತ್ತೆ. "ಗಣಾನಾಂ ತ್ವಾ ಗಣಪತಿಂ ಹವಾಮಹೇ ಕವಿಂ ಕವೀನಾಂ" ಅಂತ, "ವಿಪ್ರತಮಂ ಕವೀನಾಂ" ಅಂತ ವೇದದಲ್ಲಿ ಹೇಳಿದ್ದರಿಂದ ಅವನಿಗೆ ಕವಿತೆ ಬರೆಯುವ ಚಟ ಇತ್ತು ಅಂತ ಅರ್ಥವಾಗುತ್ತೆ. ಸುದೈವದಿಂದಲೋ ದುರ್ದೈವದಿಂದಲೋ ಅವನು ಬರೆದಿರಬಹುದಾದ ಕವಿತೆಗಳು ಈಗ ದೊರೆಯೋದಿಲ್ಲ. ಆದರೆ ಅವನ ತಿಂಡಿಯ ಚಟದ ಕೀರ್ತಿ ಮಾತ್ರ ಅಜರಾಮರವಾಗಿ ಉಳಿದಿದೆ. ಮೋದಕ, ಉಂಡೆ, ಪಂಚಕಜ್ಜಾಯ, ಎಳ್ಳಿನ ಚಿಗಳಿ. ಕಬ್ಬು, ಪಾಯಸ, ಚಕ್ಕುಲಿ ಮತ್ತು ಇನ್ನೇನೇನೋ ಅವನಿಗೆ ಬೇಕು. ಅವನ ಅಭಿರುಚಿ ನಾಜೂಕು ಅಂತ ಯಾರೂ ಒಪ್ಪಬೇಕು. ಆದರೆ ಬೇರೆ ನಾಜೂಕಯ್ಯಗಳ ಹಾಗೆ ರುಚಿಯಾದ ತಿಂಡಿಯನ್ನು ಬರೀ ಮೂರು ಬೆರಳುಗಳಿಂದ ಎತ್ತಿ ಬಾಯಲ್ಲಿ ಹಾಕಿಕೊಂಡು ಚಪ್ಪರಿಸಿ, 'ವಾಹ್' ಅಂದುಬಿಟ್ಟು ಅಷ್ಟಕ್ಕೇ ಇನ್ನೊಂದಕ್ಕೆ ಕೈ ಚಾಚುವವನಲ್ಲ ಈ ಗಿರಾಕಿ. ರುಚಿಯೂ ಚೆನ್ನಾಗಿರಬೇಕು, ಪಟ್ಟಾಗಿ ಹೊಡೆಯಲಿಕ್ಕೂ ಬೇಕು.



ಚೆನ್ನಾಗಿ ಮೋಡಕ ಹೊಟ್ಟೆಯನ್ನು ಎಷ್ಟು ಬೆಳೆಸಿಕೊಂಡ ಅಂದರೆ ಒಂದು ದಿನ ಅದು ಒಡೆದೇಹೋಯಿತು. ಆದರೆ ಇಂಥಾ ಸಣ್ಣ ಪುಟ್ಟ ಆಪತ್ತು, ಅಪಘಾತಗಳಿಂದ ಸೊಪ್ಪು ಹಾಕುವವನಲ್ಲ ನಮ್ಮ ಗಣೇಶ. ಅಲ್ಲೇ ಕೈಗೆ ಸಿಕ್ಕಿದ ಹಾವನ್ನು ಒಡೆದ ಹೊಟ್ಟೆಗೆ ಸುತ್ತು ಹಾಕಿ ಕಟ್ಟಿ, ಮಜವಾಗಿ ಮುಂದಿನ ಮನೆಗೆ ಸಾಗಿದ–ಉಂಡೆ, ಚಕ್ಕುಲಿ, ಕಪ್ಪ ವಸೂಲು ಮಾಡಲಿಕ್ಕೆ.

ಗಣಪತಿ ನೋಡೋಕೆ ಸಪ್ಪಗಾದರೂ ಬಲು ಚೂಟಿ ಅಂತ ಗಣೇಶ ಕಥೆಗಳು ಹೇಳುವುದು ಉತ್ಪ್ರೇಕ್ಷೆ ಇರಲಿಕ್ಕಿಲ್ಲ. ಬುದ್ಧಿವಂತನಾದ್ದರಿಂದಲೇ ಅವನು ಮದುವೆ ಮಾಡಿಕೊಳ್ಳಲಿಲ್ಲ. ಮದುವೆ ಮಾಡಿಕೊಂಡರೆ ಅವಳು ಅಡಿಗೆ ಮಾಡಿ ಹಾಕ ಬಹುದು; ಆದರೆ ಅವಳ ಹೊಟ್ಟೆಗೆ ಹಾಕಬೇಕಲ್ಲ; ಆ ಎಲ್ಲ ರಗಳೆ ಬೇಡ ಅಂತ ರೆಡಿಮೇಡ್ ತಿಂಡಿಗಳನ್ನು ಮನೆಮನೆಯಿಂದ ಗಿಟ್ಟಿಸಿಸೋದಕ್ಕೆ ಉಪಾಯ ಹುಡುಕಿಕೊಂಡಿದ್ದಾನೆ. ಅದೆಂದರೆ, ತನಗೆ ಉಂಡೆ, ಚಕ್ಕುಲಿ ಕೊಡದಿದ್ದವರ ಕೆಲಸಕ್ಕೆ ವಿಘ್ನ ತಂದು ಹಾಕುವುದು, ತನ್ನಷ್ಟೆ ಎತ್ತರದ ಕಡುಬಿನ ರಾಶಿ ನೈವೇದ್ಯ ಮಾಡಿದರೆ ಅವನಿಗೆ ಭಲೇ ಖುಷಿ – ನಿಮಗೆ ಬೇಕಾದ ಕೆಲಸ ಮಾಡಿ ಕೊಡುತ್ತಾನೆ.

ನನಗೆ ಒಂದೇ ಸೋಜಿಗ, ದೇವತೆಗಳಿಗೆ ಹಸಿವೇ ಇಲ್ಲವಂತೆ. ಗಣೇಶನಿಗೂ ಇಲ್ಲವೆಂದೇ ಗ್ರಹಿಸಬೇಕಷ್ಟೇ; ಹಸಿವೆ ಇಲ್ಲದೆಯೂ ಬಾಯಿ ರುಚಿ ಉಳಿಸಿಕೊಂಡಿದ್ದಾನೆ ಹೇಗೆ ಈ ದೇವ? ಕೇವಲ ನಾಲಗೆಯ ಚಟಕ್ಕಾಗಿಯೇ ತಿನ್ನುವ ಗಣಪತಿಗೆ, ಹಸಿವಿಲ್ಲದಿದ್ದರೆ ಎಂಥಾ ಸವಿ ಪದಾರ್ಥವನ್ನೂ ಸವಿಯಲಾರದ ನಾನು ನಮೋ ನಮೋ ಎಂಬೆ.

ಇಂದ್ರ ಹಿಂದಿನ ಕಾಲದಲ್ಲಿ ಆರ್ಯರ ಪರಮ ದೇವತೆಯಾಗಿದ್ದ. ದೇವತೆಗಳಿಗೆಲ್ಲ ರಾಜ. ಸಮುದ್ರ ಕಡೆದ ಮೇಲೆ ಸಿಕ್ಕಿದ ಅಮೃತವನ್ನು ಕುಡಿದು ಎಲ್ಲಾ ದೇವತೆಗಳ ಹಾಗೆ ಇವನೂ ಅಮರನಾಗಿ ಹಸಿವು ತೃಷೆಗಳನ್ನೂ ಹಿಂಗಿಸಿ ಕೊಂಡಿದ್ದ. ಆದರೆ ಆಮೇಲೆ ಅಮೃತ ಅವನಿಗೆ ಬೇಜಾರು ಬಂದ ಹಾಗೆ ಕಾಣುತ್ತೆ. "ಅಮೃತ ಕುಡಿದರೂ ಮತ್ತು ಬರುತ್ತೆ" ಅಂತ ಬೇಂದ್ರೆಯವರು ಹೇಳಿದ್ದಾರೆ. ಇಂದ್ರನಿಗೆ– ಮತ್ತು ಇತರ ದೇವತೆಗಳಿಗೆ ಅದರ ಮತ್ತು ಏನೇನೂ ಸಾಲದೆ ಹೋಗಿರಬೇಕು– ಆದ್ದರಿಂದ ಇಂದ್ರ ಸೋಮ ಲತೆಯ ರಸದಿಂದ ಮಾಡಿದ ಸೋಮರಸದ ಚಟಕ್ಕೆ ಬದಲಾಯಿಸಿದ. "ಸ್ವಾದಿಷ್ಟಯಾ ಮದಿಷ್ಠಯಾ ಪವಸ್ವ ಸೋಮಧಾರಯಾ ಇಂದ್ರಾಯ" ಅಂತ ವೇದ ಹೇಳುತ್ತೆ. ಇಂದ್ರನಿಗೆ ಬರೇ ಸ್ವಾದಿಷ್ಟ ಪೇಯಗಳು ಅಂದರೆ ನೀರಾದಂಥವು–ಸಾಲುತ್ತಿರಲಿಲ್ಲ; ಮದಿಷ್ಟವೂ ಅಂದರೆ ಮದ ಬರಿಸುವಂಥವೂ ಬೇಕಾಗುತ್ತಿದ್ದವು. ಅರ್ಥಾತ್ ಎಂಡ್ಕುಡ್ಕ ರತ್ನ ಹೇಳೋ ಒಳ್ಳೇವುಳಿ ಯಂಡ"ದ ಹುಚ್ಚು ಅವನಿಗೆ ಇತ್ತು. "ಮಧು ನಕ್ತಂ ಉತೋಕ್ಷಸಿ" ಅಂತ ವೇದ ಹೇಳೋದರಿಂದ ರಾತ್ರಿಯಲ್ಲಿಯೂ ಬೆಳಗಿನ ಹೊತ್ತಿನಲ್ಲಿಯೂ ಅವನಿಗೆ ಮಧು ಬೇಕಾಗುತ್ತಿತ್ತು ಅಂತ ಅರ್ಥವಾಗುತ್ತದೆ. ಚೆನ್ನಾಗಿ ಕುಡಿದುಬಿಟ್ಟ ಅಂದರೆ "ಮಧುಮತ ಪಾರ್ಥಿವಂ



ರಜಃ"– ನೆಲದ ಧೂಳು ಕೂಡ ಸೋಮರಸದ ಹಾಗೆ ಅವನಿಗೆ ಕಾಣಿಸುತ್ತಿತ್ತು. "ಎಲೆಲೆ ಮಂಕೆ ರಸ್ತೆ–ಏನು ಅವ್ವೆವಸ್ತೆ" ಅಂತ ರತ್ನನಿಗೆ ಕುಡಿ ದಾಗ ಕಾಣಿಸುತ್ತಿರಲಿಲ್ಲವೆ?

ಚೆನ್ನಾಗಿ ಸೋಮರಸ ಬಿದ್ದರೆ ಇಂದ್ರ ನಿಗೆ ಎಂಥಾ ದೈತ್ಯರನ್ನೂ ಎದುರಿಸುವ ಧೈರ್ಯ ಬರುತ್ತಾ ಇತ್ತು. ಬಲಿ, ನಮುಚಿ, ಪುಲೋಮ, ಬಲ ಮೊದಲಾದ ದೈತ್ಯರನ್ನ ಸೋಮರಸದ ಪ್ರಭಾವದಲ್ಲೇ ಅವನು ಕೊಂದ. ಆದರೆ ಅದರ ಪ್ರಭಾವದಲ್ಲಿ ಅವನು ಕೆಲವು ಸಲ ತನ್ನ ಕೈಲಿ ನೀಗದ ಕೆಲಸಗಳಿಗೂ ಕೈಹಾಕಿ ಫಜೀತಿ ಬೀಳುತ್ತಿದ್ದದ್ದುಂಟು. ಚ್ಯವನ ಋಷಿಯನ್ನ ಕೊಲ್ಲುವುದಕ್ಕೆ ವಜ್ರಾಯುಧವನ್ನು ಎತ್ತಿದ್ದ; ಋಷಿ ಸುಮ್ಮನೆ ಬಿಟ್ಟಾನೆ; ಅವನ ಬಾಹು ಗಳನ್ನ ಸ್ತಂಭಿಸಿ ಬಿಟ್ಟ. ಇಂದ್ರ ಬಾಲ ಮುದುಡಿಕೊಂಡು ವಾಪಸ್ಸು ಬರುವಂತಾ ಯಿತು– ತನ್ನ ಗುರುವನ್ನೇ ಧಿಕ್ಕರಿಸಿ ರಾಜ್ಯ ಕಳೆದುಕೊಂಡು.



ಅನೇಕ ನೇತಾರರಿಗೆ ಇಂದಿನ ಕಾಲದಲ್ಲಿ ಇರುವ ಇನ್ನೊಂದು ದೌರ್ಬಲ್ಯ ಇಂದ್ರನಿ ಗಿತ್ತು. ಅದೇ ಹೆಣ್ಣಿನ ಹುಚ್ಚು. ದೇವಲೋಕ ದಲ್ಲಿ ಆತನಿಗೆ ಶಚೀದೇವಿಯಲ್ಲದೆ ಎಷ್ಟು ಬೇಕಾದರೂ ಅಪ್ಸರೆಯರು ಇದ್ದರು. ಆದರೂ ಮರ್ತ್ಯಲೋಕದ ಹೆಣ್ಣುಗಳನ್ನು ನೋಡಿ ಅವನ ಬುದ್ಧಿ ಕೆಡುತ್ತಿತ್ತು. ಲೈಂಗಿಕ ಹತಾಶೆಯಿಂದ ಬಳಲುತ್ತಿದ್ದ ಭೂಲೋಕದ ನಾರಿಯರನ್ನು ಸಂತೋಷಪಡಿಸೋದು ತನ್ನ ವಿಶೇಷ ಕರ್ತವ್ಯ ವೆಂದು ಆತ ತಿಳಿದುಕೊಂಡಿದ್ದ.

ಗೌತಮ ಋಷಿಯ ಪತ್ನಿ ಅಹಲ್ಯೆಯನ್ನ ಹೀಗೆ ತೃಪ್ತಿಪಡಿಸೋಕೆ ಹೋಗಿ ಆತ ಪೇಚಿಗೆ ಬೀಳಬೇಕಾಯಿತು. ಗೌತಮನಿಗೆ ಹೆಂಡತಿಯನ್ನು ಮೆಚ್ಚಿಸೋ ಶಕ್ತಿ ಇಲ್ಲದಿದ್ದರೇನು? ಶಾಪ ಕೊಡುವ ಶಕ್ತಿ ಇತ್ತಲ್ಲ. ಪರಿಣಾಮವಾಗಿ ಇಂದ್ರನಿಗೆ ಮೈಯೆಲ್ಲ ಹುಳಕೋ ಹುಳಕು ಆಯಿತು.

ನರಲೋಕದಲ್ಲಿ ಇಂದ್ರಿಯ ಭೋಗ ಪಡೆ ಯುವ ಹಂಬಲ ದೇವಲೋಕದ ಇಂದ್ರಾದಿ ಗಂಡು ದೇವತೆಗಳಿಗೆ ಮಾತ್ರ ಇದ್ದದ್ದಲ್ಲ; ಅಲ್ಲಿನ ಹೆಂಗಸರಿಗೂ ಆ ಚಟ ಇತ್ತು. ರಂಭೆ, ಊರ್ವಶಿ, ತಿಲೋತ್ತಮೆ, ಘೃತಾಚಿ ಮತ್ತು ಇನ್ನೂ ಎಷ್ಟೆಷ್ಟೋ ಅಪ್ಸರೆಯರು ಇಂದ್ರನ ಹುಬ್ಬು ಹಾರಿದ ಕೂಡಲೇ ಭೂಲೋಕ ಋಷಿಗಳ ತಪಸ್ಸು ಕೆಡಿಸುವುದಕ್ಕೆ ಧಾವಿಸು– ತ್ತಿದ್ದುದ್ದು ಬರೇ ಒಡೆಯನ ಅಪ್ಪಣೆ ಪಾಲಿ ಸೋಕೆ ಅಂತ ನನಗೆ ನಂಬಿಕೆ ಆಗಲ್ಲ. ಅಪ್ಸರೆ ಗಣಕ್ಕೆ ಸೇರದೆ ಇದ್ದ ದೇವನಾರಿಯರ ಬಗ್ಗೆ ಓದಿದರೆ ನೀವು ಇದನ್ನು ಒಪ್ಪುತ್ತೀರಿ. ಗಂಗಾ ದೇವಿಯನ್ನೇ ತೆಗೆದುಕೊಳ್ಳಿ; ದೇವಲೋಕದಲ್ಲಿ ಬ್ರಹ್ಮಾದಿ ದೇವತೆಗಳು ನೆರೆದಿರುವಲ್ಲೇ ಭೂ– ಲೋಕದಿಂದ ಅತಿಥಿಯಾಗಿ ಬಂದಿದ್ದ ಮಹಾ ಭಿಷ ರಾಜನನ್ನು ನೋಡಿ ಅವಳ ಸೆರಗು ಜಾರಿತಂತೆ, ಬ್ರಹ್ಮನಿಗೆ ಇವನ್ನು ನೋಡಿ ಸಿಟ್ಟು ಬಂದು ಅವಳನ್ನು ಭೂಲೋಕಕ್ಕೆ ಹೋಗಿ ರಾಜ ನಿಗೆ ಇನ್ನೊಂದು ಜನ್ಮದಲ್ಲಿ ಹೆಂಡತಿಯಾಗೆಂದು ಶಾಪವಿತ್ತ. ಇದಕ್ಕಿಂತ ಹಿತವಾದ ಶಾಪವನ್ನು ಯಾರೂ ಯಾವ ಹೆಂಗಸಿಗೂ ಕೊಟ್ಟಿರಲಿಕ್ಕಿಲ್ಲ. ಬ್ರಹ್ಮನಿಗೆ ಖಂಡಿತವಾಗಿ ಸೆನ್ಸ್ ಆಫ್ ಹ್ಯೂಮರ್ ಇತ್ತು.

ಸುರಲೋಕದವರಿಗೆ ನರಲೋಕದವರ "ಮಾಂಸ"ದ ಹುಚ್ಚು ಇರೋದು ನಮ್ಮ ಭಾರತೀಯ ದೇವೀದೇವತೆಯರದೇ ವಿಶೇಷ ದೌರ್ಬಲ್ಯವಲ್ಲ, ಗ್ರೀಕ್ ದೇವತೆಗಳಿಗೂ ಅದು ಇತ್ತು. ಒಲೀಪಿಯ ಪರ್ವತದ ಮೇಲಿದ್ದ ದೇವಲೋಕದ ಒಡೆಯ ಜ್ಯೂಪಸನಿಗೆ ನಮ್ಮ ಇಂದ್ರನಂತೆ ಅಲ್ಲಿ ಹೇರಾ ಎಂಬ ಹೆಂಡತಿ ಇದ್ದಳು. ಆದರೆ ಅವನಿಗೆ ದೇವಲೋಕದಲ್ಲಿ ಮಾತ್ರವಲ್ಲ, ಭೂಲೋಕದಲ್ಲಿಯೂ ತುಂಬಾ ಪ್ರೇಯಸಿಯರು ಇದ್ದರು. ಭಾರತೀಯ ದೇವತೆಗಳ ಹೆಂಡಂದಿರ ಹಾಗೆ ಹೇರಾ ಕೂತು ಮೌನವಾಗಿ ವೇದನೆ ನುಂಗಿಕೊಳ್ಳುವವಳಲ್ಲ. ಜೂವಸ್ ಅತಿಚಾರ ಮಾಡಿದಾಗೆಲ್ಲ ಅವಳು ಅವನನ್ನು ಪೀಡಿಸಿ ಪೀಡಿಸಿ ಹಣ್ಣು ಮಾಡುತ್ತಿದ್ದಳು ಮಾತ್ರವಲ್ಲ, ಅವನ ಭೂಸ್ಥಿತ ನಾರಿಯನ್ನೂ ಅವರ ಮಕ್ಕಳನ್ನೂ ಸತಾಯಿಸಿಬಿಡುತ್ತಿದ್ದಳು.

ಗ್ರೀಕ್ ದೇವತಾ ಸ್ತ್ರೀಯರು ನಿಜಕ್ಕೂ ಬಲು ಹೊಟ್ಟೆಕಿಚ್ಚಿನ ಜನ. ಒಬ್ಬಳು ದೇವತೆಗೆ ಇನ್ನೊಬ್ಬಳು ದೇವತೆಯ ಮೇಲೆ ಸದಾಕಾಲ ಕಣ್ಣು—ಸವತಿಯರು ಅಲ್ಲದೆ ಇರುವಾಗ ಕೂಡ. ಮಜಾ ಅಂದರೆ ಗ್ರೀಕ್ ದೇವಲೋಕದಲ್ಲಿ ಕಲಹಕ್ಕೇ ಒಬ್ಬ ವಿಶೇಷ ದೇವತೆಯ ನೇಮಕವಾಗಿತ್ತು. ಅವಳ ಹೆಸರು ಏರಿಸ್. ಯಾವುದೋ ಒಂದು ಮದುವೆಗೆ ಅವಳನ್ನು ಆಮಂತ್ರಿಸೋಕೆ ಮರೆತಿದ್ದರು— ಅವಳು ಇತರರಿಗೆ ಮಾಡುತ್ತೇನೆ ಅಂತ ಒಂದು ಬಂಗಾರದ ಸೇಬು ಹಣ್ಣಿನ ಮೇಲೆ "ಅತ್ಯಂತ ಸುಂದರಿಗೆ" ಅಂತ ಬರೆದು ಅದನ್ನು ಮದುವೆಯಲ್ಲಿ ನೆರೆದಿದ್ದ ದೇವತಾ ಸ್ತ್ರೀಯರ ನಡುವೆ ಒಗೆದಳು.

ಅದು ತನಗೆ ಸಲ್ಲತಕ್ಕದ್ದು, ತನಗೆ ಸಲ್ಲತಕ್ಕದ್ದು ಅಂತ ಮೂವರು ದೇವೀಯರು ಅಫ್ರೊ—ಡೈಟ್, ಅಥೇನಾ ಮತ್ತು ಹೇರಾ—ವರಾತ ಹಚ್ಚಿದರು. ಕಡೆಗೆ ವಿವಾದದ ತೀರ್ಮಾನಕ್ಕೆ ಟ್ರಾಯ್ ದೇಶದ ರಾಜಕುಮಾರ ಪ್ಯಾರೀಸನನ್ನು ಕರೆಸರು. ಅವನು ಸುರಲೋಕ – ನರಲೋಕಗಳಲ್ಲಿ ಸ್ತ್ರೀಲಾವಣ್ಯದ ಅತಿ ಶ್ರೇಷ್ಠ ಪರೀಕ್ಷಕನೆಂದು ಹೆಸರಾಗಿದ್ದ. ಅವನು ಅದಕ್ಕೆ ಅಫ್ರೊಡೈಟಳೇ ತಕ್ಕವಳೆಂದು ತೀರ್ಪು ಕೊಟ್ಟ. ಬಡಪಾಯಿ ಸ್ತ್ರೀಲಾವಣ್ಯದ ಸಂದಿಗೊಂದಿಗಳನ್ನೆಲ್ಲಾ ಬಲ್ಲವನಾಗಿದ್ದ, ಆದರೆ ಸ್ತ್ರೀಬುದ್ಧಿಯನ್ನು ಅರಿತಿರಲಿಲ್ಲ. ದೇವಲೋಕಾಧಿಪತಿಯ ಹೆಂಡತಿಯಾದ ತನ್ನ ಪರ ತೀರ್ಪು ಕೊಡದಿದ್ದ ಕುನಿಸು ಹಿಡಿದು ಹೇರಾ ಟ್ರಾಯ್ ದೇಶಕ್ಕೂ ಗ್ರೀಕ್ ದೇಶಕ್ಕೂ ಯುದ್ಧ ತಂದು ಹಾಕಿ ಅದರಲ್ಲಿ ಟ್ರಾಯ್ ಸೋಲುವ ಹಾಗೆ ಮಸಲತ್ತು ಮಾಡಿ ಸೌಂದರ್ಯ ಪರೀಕ್ಷಕನನ್ನ ಬಲಿತೆಗೆದುಕೊಂಡಳು. ಬಲಿಷ್ಠ ಜಗತ್ತಿನಲ್ಲಿ ನ್ಯಾಯ ತೀರ್ಪು ಕೊಡೋ ನ್ಯಾಯಾಧೀಶರಿಗೆ ಆಗಲೂ ಕುತ್ತು ಇತ್ತು; ಈಗಲೂ ಇದೆ.

ಕಾಲ ಕಳೆದಂತೆ ಯಜ್ಞದಲ್ಲಿ ಹವಿಸ್ಸು ತಿಂದು, ಸೋಮರಸ ಕುಡಿದು, ಮಳೆ ಬೆಳೆ ಕೊಡುವ, ಇಂದ್ರಾದಿ ದೇವತೆಗಳು ಮೂಲೆಗೆ ಬಿದ್ದು ವಿಷ್ಣು, ಶಿವ ಮೊದಲಾದ ಮಹಾ ದೇವತೆಗಳು ಮೇಲುದರು. ಹಳೇ ದೇವರುಗಳು ನಿಮ್ಮ ಪಾಲುಗಾರರು ಅಥವಾ ಗಿರಾಕಿಗಳಾಗಿದ್ದರು. ನೀವು ಯಜ್ಞಮಾಡಿ ಬೆಂಕಿಯಲ್ಲಿ ತುಪ್ಪ ಸುರಿದರೆ ದೇವತೆಗಳು ನಿಮಗೆ ಯಜುರ್ವೇದದಲ್ಲಿ ಹೇಳಿದ ಫಲಗಳನ್ನು ಕೊಡಲೇಬೇಕಿತ್ತು. ಅದು ವ್ಯಾಪಾರ ಧರ್ಮ. ಸ್ವಲ್ಪ ಖರ್ಚಿನ ಧರ್ಮ ಅನ್ನಿ. ಆದರೆ ಈ ದೊಡ್ಡ ದೇವರು ಹಾಗಲ್ಲ. "ನಮಗೆ ಪತ್ರ, ಪುಷ್ಪ, ಹಣ್ಣು–ಹಂಪಲು ಏನಾದರೂ ಕೊಡಿ. ನಾವು ನಿಮಗೆ ಒಲಿಯುತ್ತೇವೆ" ಅಂತಾರೆ! ಇವರ ಸಂಗಡ ವ್ಯವಹಾರ ಸುಲಭ, ಅಗ್ಗ. ಯಜ್ಞದಲ್ಲಿ ಸುರಿಯೋ ತುಪ್ಪವನ್ನು ನಾನೇ ತಿನ್ನಬಹುದು. ನೈವೇದ್ಯ ತೋರಿಸಿ ನಾವೇ ತಿನ್ನಬಹುದು ಅಂತ ಜನ ಇಂದ್ರಾದಿಗಳನ್ನು ಬಿಟ್ಟು ಸೂಪರ್ ದೇವತೆಗಳ ಬೆಂಬತ್ತಿದ್ದರು—ಹಿಂಡು ಹಿಂಡಾಗಿ. ಆದರೆ ಇವರಿಗೆ ಬೇರೆಯೇ ಚಟ–ಭಕ್ತಿಯ ಚಟ. ಭಕ್ತಿ ಎಂದರೆ ನಿಮ್ಮ ಎಲ್ಲವನ್ನೂ ಅರ್ಪಿಸಬೇಕು; ಅವರನ್ನೇ ಧ್ಯಾನಿಸುತ್ತಿರಬೇಕು : "ಅನನ್ಯಾಶ್ಚಿಂತಯಂತೋ ಮಾಂ"—ಎರಡನೇ ವಿಚಾರವೇ ಇರಬಾರದು. ಇವರಿಗೆ ಪೂಜೆ ಮಾಡುವಾಗ, ಆ ಕಡೆ ಬೆಕ್ಕು ಹಾಲು ಕುಡಿಯುತ್ತಾ ಇದೆ ಅಂತ ಆಲೋಚನೆ ಬಂತೋ, ಮುಗಿದುಹೋಯಿತು. ನಿಮ್ಮ ಭಕ್ತಿ ವ್ಯರ್ಥ; ಫಲ ಶೂನ್ಯ. ಆ ದೇವರಗಳು

ಹತ್ತಿರ ನೀವು ಮಾಡಿಕೊಳ್ಳೋದು ಕಾಂಟ್ರಾಕ್ಟ್ ಆಗಿತ್ತು. ಕಾಂಟ್ರಾಕ್ಟ್ ಪೂರೈಸಿದರೆ ರೂಲ್ಸ್ ಪ್ರಕಾರ ನಿಮಗೆ ಅವರು ಫಲ ಕೊಡಲೇ ಬೇಕಿತ್ತು. ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯವೇ ಇರಲಿಲ್ಲ ಅವರಿಗೆ; ಅವರು ನಿಮ್ಮ ಮನಸ್ಸಿನೊಳಗೆ ಕೈ ಹಾಕಿ ನೋಡುತ್ತಿರಲಿಲ್ಲ. ವಿಷ್ಣು, ಶಿವ ಮೊದಲಾದ ಈ ಸೂಪರ್ ದೇವತೆಗಳು ನಿಮ್ಮ ಮನಸ್ಸಿನೊಳಗೇ ಗೂಢಚಾರರನ್ನು ಇಡೋ ಸರ್ವಾಧಿಕಾರಿಗಳು. ನೀವು ತಮಗೆ ನಿಜವಾಗಿ ಲಾಯಕ್ ಇದ್ದೀರ ಅಂತ ತಿಳಿಯೋದಕ್ಕೆ ಇವರು ನಿಮ್ಮನ್ನು ಪರೀಕ್ಷಿಸುತ್ತಾರೆ.


"ಕುಟ್ಟಿ ನೋಡುವ, ಹೆಚ್ಚಿ ನೋಡುವ, ಜಜ್ಜಿ ಬಜ್ಜಿ ಮಾಡಿ ನೋಡುವ, ಏನು ಮಾಡಿದರೂ ನೀನೇ ಗತಿ ಅಂದಿರೋ ನಿಮಗೆ ನಾನೊಲಿವೆ ಎಂಬ ನಮ್ಮ ದೇವರ ದೇವ." "ಪಾಲಿಸೊಳಗಪ್ಪು. ಸಲಹೋಗಪ್ಪು." "ನಿನ್ನ ನಂಬಿದೆನೋ." ಈ ಭಕ್ತಿಯ ಚಟ ಅಮೃತ, ಅಪ್ಸರೆ, ಸೋಮರಸ, ಯಜ್ಞ ಇತ್ಯಾದಿ ಚಟಗಳಿಗಿಂತ ಮಹಾ ಭಯಂಕರ, ಅದು ನಿಮಗೆ ನಿಮ್ಮದು ಅನ್ನೋದನ್ನ ಏನೂ ಉಳಿಸೋದಿಲ್ಲ.

ಈ ಪರಿ ದೈವತಗಳ ಭಕ್ತಿಯ ಚಟಕ್ಕೆ ನೀವು ಒಮ್ಮೆ ಮಣಿದರೆ, ಆ ಮೇಲೆ ಅವರು ಕೇಳಿದ್ದು ಕೊಡುತ್ತಾರಂತೆ. ಆದರೆ ಅಷ್ಟರಲ್ಲಿ ನಿಮಗೂ ಭಕ್ತಿ ಮಾಡುವ ಚಟ ಬ್ರಹ್ಮಕಪಾಲದ ಹಾಗೆ ಅಂಟಿಕೊಂಡಿರುತ್ತದೆ.

ಇಲ್ಲ ಸ್ವಾಮಿ, ಈ ಭಕ್ತಿಯ ಚಟದ ಪರ ದೇವತೆಗಳಿಂದ ನಾನು ಓಡಿಹೋಗಬೇಕೆನ್ನುತ್ತೇನೆ.

✡

(ಕೃಪೆ : ಆಕಾಶವಾಣಿ ಧಾರವಾಡ)



ವೃದ್ಧ ವರ

ಈಶಾನ್ಯ ಇರಾನಿನ ಮಶಾನ್ ನಗರದ ೮೩ ವಯದ ವೃದ್ಧ ರೈತ ಅಬ್ದುಲ್ಲಾ ರಾಂಜಬ್ಬಾರ್ ಹೆಚ್ಚು ಮಕ್ಕಳನ್ನು ಪಡೆಯುವ ತನ್ನಾಶೆಯನ್ನು ನಿರಾಕರಿಸಿದ ಪತ್ನಿಯಿಂದ. ವಿಚ್ಛೇದನ ಪಡೆದುಕೊಂಡ. ಅವರು ಮದುವೆಯಾಗಿ ಕೇವಲ ೨೩ ವರ್ಷಗಳು ಸಂದಿವೆ ಈಗಾಗಲೇ ಅವರಿಗೆ ೧೫ ಮಕ್ಕಳಿದ್ದಾರೆ.

ಸಕೀನಾ ಆತನ ಪತ್ನಿಯ ಹೆಸರು. ೫೦ ವರುಷ ಆಕೆಗೆ. ನ್ಯಾಯಾಲಯದಲ್ಲಿ ಆಕೆ ವಿಚ್ಛೇದನ ಸಂಬಂಧವಾಗಿ ಹಾಜರಾದಾಗ ತಾನು ಕುಟುಂಬ ಯೋಜನೆ ಪಾಲಿಸಬೇಕೆಂಬ ಇಚ್ಛೆಯುಳ್ಳವಳೆಂದು ತಿಳಿಸಿದಳು. ಕಳೆದ ವರುಷ ತಾನು ತನ್ನ ೧೫ ನೆಯ ಮಗುವನ್ನು ಹೆತ್ತ ಮೇಲೆ ಡಾಕ್ಟರುಗಳ ಅಭಿಪ್ರಾಯದಂತೆ ಈ ರೀತಿಯ ನಿರ್ಧಾರಕ್ಕೆ ಬಂದುದಾಗಿಯೂ ಹೇಳಿದಳು. "ನನಗೀಗ ಮಕ್ಕಳು ಸಾಕೆನಿಸಿದೆ." ಎನ್ನುತ್ತಾಳಾಕೆ.

ಅವರ ಹೇಳಿಕೆ ಪಡೆದ ನ್ಯಾಯಾಲಯ ವಿಚ್ಛೇದನಕ್ಕೆ ಅಪ್ಪಣೆಯಿತ್ತಿತು. ನಂತರ ಅಲ್ಲಿ ನೆರೆದಿದ್ದವರೊಂದಿಗೆ ಮಾತನಾಡುತ್ತ ಅಬ್ದುಲ್ಲಾ "ನಾನೀಗ ಮತ್ತೊಬ್ಬ ಕನ್ಯೆಯ ಅನ್ವೇಷಣೆಗೆ ತೊಡಗಬೇಕು. ಆಕೆ ನನ್ನ ಇಚ್ಛೆಯನ್ನು ಪೂರೈಸುವಂತಹವಳಾಗಿರಬೇಕು" ಎಂದನಂತೆ.

ಇದುವೇ ಜೀವನ ಇದು ಜೀವನ

ಮೊನ್ನೆ ಮೊನ್ನೆ ಯುರೋಪು ಪ್ರವಾಸ ಮುಗಿಸಿ ಬಂದ ನನ್ನ ತಮ್ಮನ ಅನುಭವವಿದು.

ಅವನ ಜರ್ಮನ್ ಸ್ನೇಹಿತರೊಬ್ಬರು ಇವರು ಭೆಟ್ಟಿಯಾದ ಮೊದಲ ದಿನವೇ ಭಾರತಕ್ಕೆ ಮರಳುವ ಮೊದಲು ಮನೆಗೆ ಬರಬೇಕೆಂದು ಆಹ್ವಾನಿಸಿದ್ದರಂತೆ. ದಿನವೂ ಸಿಕ್ಕಾಗ "ನಿಮಗೆ ಇಲ್ಲಿಯ ಆಹಾರ ಹಿಡಿಸಲಿಕ್ಕಿಲ್ಲ, ನೀವೆಲ್ಲಾ ಖಾರ ತಿನ್ನುವವರು. ನಾನು, ನನ್ನ ಹೆಂಡತಿ ಭಾರತದಲ್ಲಿ ೩ – ೪ ತಿಂಗಳು ಇದ್ದೆವು. ನನ್ನ ಹೆಂಡತಿ ಭಾರತದ ಅಡಿಗೆ ಎಲ್ಲಾ ಕಲಿತಿದ್ದಾಳೆ. ನಿಮಗೆ ಒಂದು ದಿನ ಒಳ್ಳೇ ಊಟ ಹಾಕಿಸುತ್ತೇನೆ" ಎನ್ನುತ್ತಿದ್ದರಂತೆ.

ನನ್ನ ತಮ್ಮ, ಅವನ ಭಾರತದ ಇಬ್ಬರು ಸ್ನೇಹಿತರು ಸೇರಿ ಆ ಜರ್ಮನ್ ಮಿತ್ರರ ಮನೆಗೆ ಊಟಕ್ಕೆ ಹೋದರಂತೆ. ಇವರನ್ನು ನೋಡುತ್ತಲೇ ಆ ಮಿತ್ರರು, "ಈ ದಿನ ನಿಮ್ಮ ಸಲುವಾಗಿ ನನ್ನ ಹೆಂಡತಿ ವೆಜಿಟೇಬಲ್ ಮಾರ್ಕೆಟ್‌ಗೆ ಹೋಗಿ ಸಿಮ್ಲಾ ಮೆಣಸಿನಕಾಯಿ ತಂದಿದ್ದಾಳೆ. ಸ್ಪೆಶಲ್ ಅಡಿಗೆ" ಎಂದರಂತೆ. ಊಟ ಪ್ರಾರಂಭವಾದ ಕೂಡಲೇ ಗಂಡ-ಹೆಂಡತಿ ತಮ್ಮಿಬ್ಬರಿಗೆ ಸಿಹಿ ಸಿಹಿ ಊಟ, ಈ ಮೂರು ಭಾರತೀಯರಿಗೆ ಮಸಾಲೆ ತುಂಬಿಸಿದ್ದ ದೊಡ್ಡ ದೊಡ್ಡ ಮೆಣಸಿನಕಾಯಿಯ ಸರವನ್ನೇ ತಂದು ಇಟ್ಟರಂತೆ. ನನ್ನ ತಮ್ಮನಿಗಂತೂ ಖಾರ ಅಂದರೆ ಆಗದು. ಹೇಳುವಂತಿಲ್ಲ, ಬಿಡುವಂತಿಲ್ಲ. ಕಣ್ಣೀರು ಸುರಿಸುತ್ತ ಹೇಗೋ ಊಟ ಮುಗಿಸಿದರಂತೆ.

ಊಟದ ನಂತರ ಟೀವಿಯಲ್ಲಿ ಭಾರತದಲ್ಲಿ ನೋಡಿದ ಕೋಣಾರ್ಕ್, ಖುಜರಾಹೋ, ಮಿಥುನ ಶಿಲ್ಪಗಳ ದೇವಸ್ಥಾನಗಳನ್ನು ತೋರಿಸಿದನಂತೆ. ಆಮೇಲೆ "ನಿಮ್ಮ ಭಾರತದಲ್ಲಿ ದೇವಸ್ಥಾನದ ಗೋಡೆಗಳ ತುಂಬ ಈ ತರದ ಕಾಮದ ಚಿತ್ರಗಳೇಕೆ?" ಎಂದು ಕೇಳಿದನಂತೆ. ನನ್ನ ತಮ್ಮ, "ಏಕೆಂದರೆ ಮೊದಲು ಕಾಮವನ್ನು ಗೆದ್ದು ಪರಮಾತ್ಮನನ್ನು ಕಾಣಬೇಕು ಎನ್ನುವದರಿಂದ" ಎಂದನಂತೆ. "ಹೌದಾ! ಹಾಗಾದರೆ ಭಾರತದಲ್ಲಿ ಬಹಳ ಜನ ನೀವು ಈ ದೇವಸ್ಥಾನದ ದೇವರಿಗೆ ಪೂಜೆ ಮಾಡಿದರೆ ಮುಂದಿನ ಜನ್ಮದಲ್ಲಿ, ಈ ತರದ ಸುಖ ಅನುಭವಿಸಬಹುದು ಎಂದರು" ಎಂದನಂತೆ.

–ವಿಜಯಾ ಶ್ರೀಧರ್

ನನ್ನ ಪರಿಚಯಸ್ಥ ವೃದ್ಧರೊಬ್ಬರು ತಮ್ಮ ನಾಲ್ವರು ಗಂಡು ಮಕ್ಕಳಿಗೆ ಸ್ವಾರ್ಜಿತ ಆಸ್ತಿಯನ್ನು ಹಂಚಿಬಿಡಲು ತೀರ್ಮಾನಿಸಿರುವುದಾಗಿ ಹೇಳಿದರು. ಅಷ್ಟೇ ಅಲ್ಲ, ಆಸ್ತಿಯಲ್ಲಿ ಸಮವಾಗಿ ಐದು ಭಾಗ ಮಾಡಿ ನಾಲ್ವರು ಮಕ್ಕಳಿಗೂ ತಮಗೂ ತಲಾ ಒಂದೊಂದು ಭಾಗ ಬರುವಂತೆ ಮಾಡಿರುವುದನ್ನೂ ನನಗೆ ಅರುಹಿದರು. ನನಗೆ ಅಚ್ಚರಿಯಾಯ್ತು. ಇಂಥ ನಿರ್ಧಾರ ಕೈಗೊಂಡಿರೇಕೆ ಎಂದು ಕೇಳಿದೆ. ಆಗ ಅವರು, "ನನಗೀಗ ೬೦ ವರ್ಷ. ಇನ್ನೂ ಹತ್ತಿಪ್ಪತ್ತು ವರ್ಷ ಬದುಕುತ್ತೇನೆಂಬ ಭರವಸೆ ನನಗಿದೆ. ಈ ಇಪ್ಪತ್ತು ವರ್ಷಗಳಲ್ಲಿ ತಮ್ಮ ಪಾಲಿಗೆ ಬಂದ ಆಸ್ತಿಯನ್ನು ಮಕ್ಕಳು ಹೇಗೆ ವಿನಿಯೋಗಿಸಿಕೊಳ್ಳುತ್ತಾರೆಂದು ನೋಡುವ ಭಾಗ್ಯ ನನ್ನದಾಗುತ್ತದೆ. ಕೆಲವರು ಇದನ್ನು ಸರಿಯಾಗಿ ಉಪಯೋಗಿಸಿಕೊಂಡಾರು ಇನ್ನು ಕೆಲವರು ಪೋಲು ಮಾಡಿಯಾರು. ಸದುಪಯೋಗಿಸಿಕೊಂಡರಂತೂ ನನಗೆ ಸಂತೋಷವೇ. ಇನ್ನು ಪೋಲು ಮಾಡಿದರೆ ಅವರಿಗೆ ಬುದ್ಧಿ ಹೇಳಿ ಸರಿದಾರಿಗೆ ತರುವ ಅವಕಾಶವೂ ಸಿಗುತ್ತದಲ್ಲವೇ" ಎಂದು ನನ್ನ ಕಡೆ ನೋಡಿ,

ನಾನೇನೋ ಕೇಳಬೇಕೆಂಬಷ್ಟರಲ್ಲಿಯೇ, "ಅಂದ ಹಾಗೆ ನನಗಾಗಿ ಒಂದು ಪಾಲು ಉಳಿಸಿಕೊಂಡಿರುವುದು ಯಾಕೆ ಗೊತ್ತೆ?" ಎಂದರು. ಒಂದು ಕ್ಷಣ ಬಿಟ್ಟು, "ಯಾರು ತಮ್ಮ ಪಾಲಿನ ಆಸ್ತಿಯನ್ನು ಪೋಲು ಮಾಡಿಕೊಂಡುಬಿಡುತ್ತಾರೋ ಅವರಿಗೆ ನನ್ನ ಪಾಲನ್ನು ಕೊಡಬೇಕೆಂದಿದ್ದೇನೆ. ಯಾಕಂದರೆ ನಾನು ಸತ್ತ ನಂತರ ನನ್ನ ಆಸ್ತಿ ಪಾಲಾದರೆ ಇವನ್ನೆಲ್ಲಾ ನೋಡುವ ಅವಕಾಶವಾದರೂ ಎಲ್ಲಿರುತ್ತದೆ ನೀವೇ ಹೇಳಿ" ಎಂದಾಗ ಅವರ ವ್ಯವಹಾರ ಜ್ಞಾನ, ವಿವೇಕಕ್ಕೆ ನಾನು ಮೂಕನಾದೆ.

-ಪಿ. ಸಿ. ನಾರಾಯಣರಾವ್

ದಿಲ್ಲಿಯಲ್ಲಿ ನಾನು ವಾಸಿಸುವ ಮನೆ ಮಾಲಿಕ ಜಿಪುಣತನಕ್ಕೆ ಇನ್ನೊಂದು ಹೆಸರಾಗಿದ್ದ. ಆದರೆ ಯಾವುದೋ ಉದಾರತೆಯ ಭಾವನೆ ಜಾಗ್ರತಗೊಂಡು ಒಂದು ದಿನ ತನ್ನ ಕಿವುಡು ಹೆಂಡತಿಗೆ ಬ್ಯಾಟರಿ ಚಾಲಿತ ಶ್ರವಣಯಂತ್ರವೊಂದನ್ನು ತಂದುಕೊಟ್ಟ.

ಕಳೆದ ತಿಂಗಳು ಬಾಡಿಗೆ ಸಲ್ಲಿಸಲೆಂದು ನಾನು ಅವರ ಮನೆಯೊಳಗೆ ಹೋದಾಗ ಏರುತ್ತಿರುವ ಬೆಲೆಗಳು, ತಿರುಗಿಬಾರದ ಸಾಲಗಳು ಇತ್ಯಾದಿ ವಾಣಿಜ್ಯ ವ್ಯವಹಾರಗಳ ಕುರಿತು ಮಾತುಕತೆಗೆ ನನ್ನನ್ನೆಳೆದ. ಆದರೆ ಪಕ್ಕದಲ್ಲಿ ಕುಳಿತ ಮಾತಿನ ಮಲ್ಲಿಯಾದ ಆತನ ಪತ್ನಿ ಶ್ರವಣಯಂತ್ರವನ್ನು ಧರಿಸಿದರೂ ಕೂಡ ನಾವು ಮಾತನಾಡುವ ವಿಷಯದ ಬಗ್ಗೆ ನಿರಾಸಕ್ತಳಾಗಿರುವಂತೆ ಕಂಡಳು.

ಸ್ವಲ್ಪ ಸಮಯದಲ್ಲೇ ಏನನೋ ನೆನಪಿಸಿಕೊಂಡು ಮಾಲಿಕ ಒಳಗಡೆ ಹೋದ. ಅವನಿಂದ ಪಾರಾಗಲು ಇದೇ ಸರಿಯಾದ ಸಮಯ ಎಂದುಕೊಂಡು ನಾನು ಹೊರಡಲು ಅಣಿಯಾಗುತ್ತಿದ್ದಂತೆ ಆತನ ಪತ್ನಿಯನ್ನು ನಾವು ಮಾತಾಡುವಾಗ ಇಂದು ನೀವು ಬಾಯನ್ನೇ ಬಿಚ್ಚಲಿಲ್ಲವಲ್ಲ ಏಕೆ? ಏನು ಎಂದು ಕೇಳಿದೆ. ಅದಕ್ಕವಳು ಕೊಟ್ಟ ಉತ್ತರ ಕೇಳುವಂತಿದೆ. "ಇನ್ನೇನು ಮಾಡಲಿ, ಕೆಲಸಕ್ಕೆ ಬಾರದ ವಿಷಯಗಳನ್ನು ಕೇಳುವುದರಲ್ಲಿ ಶ್ರವಣಯಂತ್ರದ ಸೆಲ್‌ಸ್ನು ವ್ಯರ್ಥ ಮಾಡಬಾರದೆಂದು ನನ್ನ ಯಜಮಾನರು ಹೇಳಿದ್ದಾರೆ. ಆದ್ದರಿಂದ ಅವರು ಮಾತನಾಡಲು ಪ್ರಾರಂಭಿಸಿದ ಕೂಡಲೇ ನಾನು ಶ್ರವಣಯಂತ್ರವನ್ನು ಆಫ್ ಮಾಡುತ್ತೇನೆ ಹಾಗೂ ಅವರ ಭಾಷಣ ಮುಗಿಯುತ್ತಿದ್ದಂತೆ ಆನ್ ಮಾಡುತ್ತೇನೆ."

—ವಸಂತಕುಮಾರ ಸಭಾಹಿತ

ಇತ್ತೀಚೆಗೆ ಒಂದು ಶೆಡ್ಯೂಲ್ಡ್ ಬ್ಯಾಂಕಿನವರು ಪ್ರೊಬೇಶನರಿ ಕ್ಲಾರ್ಕ್ ಜಾಗೆಗೆ ಅರ್ಜಿಗಳನ್ನು ಕರೆದಿದ್ದರು. ಕಾಲೇಜಿನಲ್ಲಿ ಓದುತ್ತಿದ್ದ ನನ್ನ ಮಗಳಿಗೆ ಒಂದು ಅರ್ಜಿ ಕಳಿಸಿ ಚಾನ್ಸ್ ತೆಗೆದುಕೊಳ್ಳಲು ಹೇಳಿದೆ. ಅರ್ಜಿ ಟೈಪ್ ಮಾಡಿಸಿ ೧೦ ರೂಪಾಯಿ ಡಿಮಾಂಡ್ ಡ್ರಾಫ್ಟ್ ತೆಗೆದುಕೊಂಡು ಮಗಳ ಅಂಕಿತ ಹಾಕಿ ನಾನೇ ಕಳಿಸಿಕೊಟ್ಟೆ. ಲಿಖಿತ ಪರೀಕ್ಷೆಗಾಗಿ ಬ್ಯಾಂಕಿನಿಂದ ಪತ್ರ ಬರಬಹುದೆಂದು ಕಾದು ಕುಳಿತೆ. ಬಹಳ ದಿನವಾದರೂ ಬರಲಿಲ್ಲ. ಕೆಲವರಿಗೆ ಆಗಲೆ ಬಂದಿರುವದು ಗೊತ್ತಾಗಿ ನನ್ನ ಮಗಳಿಗೇಕೆ ಬರಲಿಲ್ಲವೆಂದು ಬಲ್ಲವರಿಗೆ ಕೇಳಿದೆ. ಅರ್ಜಿ ಫಾರ್ಮು ಕಳಿಸುವಲ್ಲಿ ಏನಾದರೂ ತಪ್ಪಿದ್ದರೆ ಲಿಖಿತ ಪರೀಕ್ಷೆಗೆ ಕರೆಯುವುದಿಲ್ಲವೆಂದು ಹೇಳಿದರು. ದಿನವೂ ಕಾತರದಿಂದ ಕೇಳುತ್ತಿದ್ದ. ಮನೆಯಾಕೆ ಎದುರು ಈ ಸಂದೇಹ ವ್ಯಕ್ತಪಡಿಸಿದೆ. ಆಗ ಅವಳು ತಟ್ಟನೆ "ಓದು ಬರಹ ಬಲ್ಲವರಿಂದ ಬರೆಸಬಾರದಿತ್ತೆ? ನಿಮ್ಮ ಅಪ್ಪನಿಂದ ಯಾಕೆ ಬರೆಸಿದ್ದೆ?" ಎಂದು ಕೇಳಿದಾಗ ನಾನೂ ಸುಶಿಕ್ಷಿತನೆಂದು ಸಹಭಾಗಿನಿಗೆ ಮನವರಿಕೆ ಮಾಡಿಕೊಡಬೇಕೇನೋ ಎಂದು ಅರೆನಿಮಿಷ ಸುಳಿದುಹೋಯಿತು, ಆದರೆ ಬಾಯಿ ಬಿಚ್ಚಲಿಲ್ಲ.

-ವೈ. ಎಸ್. ಜೋಶಿ



ಸಗ್ಗವಕ್ಕಿಗಳು

ಜಿ. ಎಸ್. ಭಟ್ಟ

೧೬ನೇಯ ಶತಮಾನದ ಆದಿಯಲ್ಲಿ ವಿಶ್ವ ಪರ್ಯಟನ ಕೈಗೊಂಡಿದ್ದ ಸ್ಪೇನಿನ ಕ್ಯಾಪ್ಟನ್ ಎಲ್ ಕ್ಯಾನೊ ಎಂಬಾತ ನ್ಯೂಗಿನಿ ಮತ್ತು ಮಲಕಸ್ ದ್ವೀಪ ಸಮೂಹಗಳನ್ನು ಭೇಟಿ ಮಾಡಿ ೧೫೨೨ರಲ್ಲಿ ಮರಳಿ ತಾಯ್ನಾಡಿಗೆ ಬಂದಾಗ ರಾಜನಿಗೆ ಹಲವಾರು ಕಾಣಿಕೆಗಳನ್ನು ತಂದಿದ್ದ. ಅವುಗಳ ಪೈಕಿ ಎಲ್ಲರ ಗಮನವನ್ನು ಸೆಳೆದ ವಸ್ತುಗಳೆಂದರೆ ಸ್ಪೇನಿನ ಜನತೆ ಅದು ವರೆಗೆ ಕಂಡಿರದಿದ್ದ ಕೇಳಿರದಿದ್ದ ಉಜ್ವಲ ವರ್ಣದ ಹಕ್ಕಿಗಳ ಚರ್ಮಗಳು. ತಾನು ಸಂದರ್ಶಿಸಿದ ದ್ವೀಪಸಮೂಹಗಳ ಗೊಂಡಾರಣ್ಯಗಳಲ್ಲಿ ವಾಸಿಸುವ ಇವು ತಮ್ಮ ವರ್ಣ ವೈವಿಧ್ಯದಿಂದಾಗಿ ಚಿತ್ರವಿಚಿತ್ರವಾದ ಗರಿಗಳಿಂದಾಗಿ ಅಲ್ಲಿನ ನಿವಾಸಿಗಳಿಂದ 'ದೇವತೆ ಹಕ್ಕಿಗಳು' ಎಂಬ ಹೆಸರನ್ನು ಪಡೆದಿವೆ, ಎಂದು ಆತ ವಿವರಿಸಿದಾಗ ಅದು ಎಳ್ಳಷ್ಟೂ ಉತ್ಪ್ರೇಕ್ಷೆಯಲ್ಲ ಎನಿಸಿತು. ಕ್ಯಾನೊ ತಂದಿದ್ದ ಹಕ್ಕಿಗಳ ಚರ್ಮಗಳಲ್ಲಿ ಕಾಲುಗಳನ್ನು ಕತ್ತರಿಸಿ ಹಾಕಲಾಗಿತ್ತಾದ್ದರಿಂದ ಜನ ಇವು ಕೇವಲ ಕಾಡು ಪಕ್ಷಿಗಳಲ್ಲ ಸ್ವರ್ಗದಿಂದ ಇಳಿದು ಬಂದ ಹಕ್ಕಿಗಳೆಂದೇ ಭಾವಿಸಿ ಇವನ್ನು 'ಸಗ್ಗವಕ್ಕಿಗ'ಳೆಂದು (ಬರ್ಡ್ಸ್ ಆಫ್ ಪ್ಯಾರಡೈಸ್) ಕರೆದರು. ಹಮ್ಮಿಂಗ್ ಹಕ್ಕಿಗಳನ್ನು ಬಿಟ್ಟರೆ ಸೌಂದರ್ಯದಲ್ಲಿ ಸಗ್ಗವಕ್ಕಿಗಳನ್ನು ಮೀರಿಸುವ ಜೀವಿಗಳೇ ಇಲ್ಲವೆನ್ನಬಹುದು. ಬಹು ಬೇಗ ಯೂರೋಪಿನಾದ್ಯಂತ ಜನಪ್ರಿಯತೆ ಗಳಿಸಿದ ಈ ಹಕ್ಕಿಗಳು ಹಲವಾರು ಕಟ್ಟುಕಥೆಗಳಿಗೆ ವಸ್ತು ಆದವು. ಇವು ಭೂಮಿಗಿಳಿಯುವುದೇ ಇಲ್ಲ, ಸದಾ ಸೂರ್ಯನೆಡೆಗೇ ಹಾರಾಡಿಕೊಂಡು ಇರುವುವು, ಹೆಣ್ಣು ಹಕ್ಕಿ ಗಂಡಿನ ಬೆನ್ನಲ್ಲಿ ಇರುವ ಕುಡಿಯಲ್ಲಿ ಮೊಟ್ಟೆಯಿಡುತ್ತದೆ ಎಂಬ ತಪ್ಪು ಕಲ್ಪನೆಗಳು ಮೂಡಿದುವು. ಸಾಮಾನ್ಯ ಜನರ ಮನಸೆಳೆದ ಈ ಹಕ್ಕಿಗಳ ಬಗ್ಗೆ ಅಂದಿನ ಪ್ರಕೃತಿ ವಿಜ್ಞಾನಿಗಳೂ ಗಮನ ಹರಿಸತೊಡಗಿದರು. ಈ ಹಕ್ಕಿಯ ರೆಕ್ಕೆ ಪುಕ್ಕಗಳಿಗೆ ಹೆಂಗಸರ ಅಲಂಕರಣ ವಸ್ತುಗಳಲ್ಲಿ ಅತ್ಯಂತ ಪ್ರಮುಖ ಸ್ಥಾನ ಲಭಿಸಿದುದರಿಂದ ಇವುಗಳ ಬೇಡಿಕೆ ಅಧಿಕವಾಯಿತು. ಎಲ್ಲ ಸ್ತ್ರೀಯರೂ – ಕ್ಯಾಬರೆ ನರ್ತಕಿಯರಿಂದ ಹಿಡಿದು ರಾಣಿಯರ ವರೆಗೆ – ಸಗ್ಗವಕ್ಕಿಯ ಗರಿಗಳಿಲ್ಲದಿದ್ದರೆ ತಮ್ಮ ಉಡುಗೆ ತೊಡುಗೆ ಪರಿಪೂರ್ಣವಾಗಿಲ್ಲ ಎಂದು ಬಗೆಯುವ ಪರಿಸ್ಥಿತಿ ಮೂಡಿತು. ಹೀಗೆ ಏರಿದ ಬೇಡಿಕೆಯಿಂದಾಗಿ ಇವುಗಳ ಬೆಲೆಯೂ ಗಗನಕ್ಕೇರಿತು. ಸುಲಭವಾಗಿ ಹಣ ಮಾಡುವ ಸಲುವಾಗಿ ಅನೇಕರು ಗರಿಗಳ ವ್ಯಾಪಾರಕ್ಕೆ ಇಳಿದರು. ಬೇಟೆಗಾರರು ಸಹಸ್ರ

ಸಂಖ್ಯೆಯಲ್ಲಿ ನ್ಯೂಗಿನಿ ಮತ್ತಿತರ ದ್ವೀಪಗಳ ದಟ್ಟ ಅರಣ್ಯಗಳಲ್ಲಿ ನುಗ್ಗಿ ಹಕ್ಕಿಗಳ ಬೇಟೆಯಲ್ಲಿ ತೊಡಗಿದರು. ೧೮೮೦ ಮತ್ತು ೧೮೯೦ರ ದಶಕದಲ್ಲಿ ನ್ಯೂಗಿನಿಯಿಂದ ನಿರ್ಯಾತವಾದ ಸಗ್ಗವಕ್ಕಿಯ ಚರ್ಮ ಸಂಖ್ಯೆ ೫೦,೦೦೦ ಎಂದು ಅಂದಾಜಿದೆ. ಹೀಗೆ ಈ ಹಕ್ಕಿಯ ನಿರಂತರ ಬೇಟೆಯಿಂದಾಗಿ ಸಗ್ಗವಕ್ಕಿಯ ಹಲವಾರು ಪ್ರಭೇದಗಳು ನಶಿಸಿ ಹೋಗಿ ಇವುಗಳ ವಂಶವೇ ಜಗತ್ತಿನಿಂದ ಕಣ್ಮರೆಯಾಗುವುದೆಂಬ ದಿಗಿಲು ಪಕ್ಷಿಪ್ರೇಮಿಗಳಲ್ಲಿ ಮೂಡಿತು. ಕೊನೆಗೆ ೧೯೨೨ರಲ್ಲಿ ಸಗ್ಗವಕ್ಕಿಗಳ ಚರ್ಮವ ರಫ್ತನ್ನು ಕಾನೂನಿನ ಮೂಲಕ ನಿಷೇಧಿಸಲಾಯಿತು. ಈ ಚೆಲುವಿನ ಹಕ್ಕಿಗಳ ಮಾರಣ ಹೋಮ ನಿಲ್ಲು-ವಂತಾಯಿತು. ಆದರೆ ಅಲ್ಲಿಯವರೆಗೆ ಎಷ್ಟು ಬಗೆಯ ಸಗ್ಗವಕ್ಕಿಗಳು ನಿರ್ವಂಶಿಗಳಾದುವು ಎಂಬುದನ್ನು ಅಂದಾಜು ಮಾಡಲಾಗಿಲ್ಲ. ಸುಮಾರು ೪೫೦ ವರ್ಷಗಳಿಗೂ ಹಿಂದೆ ನಡೆಸ ಸಗ್ಗವಕ್ಕಿಗಳ ಬೇಟೆ, ಗರಿಗಳ ರಫ್ತಿನ ಇತಿಹಾಸವಿದು. ಕ್ರಮೇಣ ಯೂರೋಪಿನಲ್ಲೂ ಇವುಗಳ ಜನಪ್ರಿಯತೆ ಕುಗ್ಗಿತಲ್ಲದೆ ಇವುಗಳನ್ನು ಯೂರೋಪು ಅಮೇರಿಕೆಗಳಿಗೆ ಆಮದು ಮಾಡಿಕೊಳ್ಳುವುದು ಕಾನೂನುಬಾಹಿರವಾಯಿತು.

ಸಗ್ಗವಕ್ಕಿಗಳ ಬೇಟೆ ಈಗ ಹೆಚ್ಚು ಕಡಿಮೆ ಸಂಪೂರ್ಣ ನಿಂತಿರುವುದರಿಂದ ಈ ಪಕ್ಷಿ ಸಂಕುಲ ಚೇತರಿಸಿ ಕೊಳ್ಳುತ್ತಿದ್ದು ಹಲವು ಪ್ರಭೇದಗಳ ಸಂಖ್ಯೆ ಹೆಚ್ಚುತ್ತಿದೆಯೆಂದು ಹೇಳಲಾಗಿದೆ. ಅಲ್ಲಿನ ಸ್ಥಳೀಯ ನಿವಾಸಿಗಳು ತಮ್ಮ ನೃತ್ಯ ಮತ್ತಿತರ ಉದ್ದೇಶಗಳಿಗಾಗಿ ಅಲಂಕರಿಸಿಕೊಳ್ಳಲು ಕೆಲವೆಡೆ ಮಾತ್ರ ಈ ಹಕ್ಕಿಗಳ ಬೇಟೆಗೆ ಅನುಮತಿ ಇದೆ. ಆದರೂ, ಕೃಷಿ ಉದ್ದೇಶಕ್ಕಾಗಿ ನ್ಯೂಗಿನಿಯ ಅರಣ್ಯಗಳ ನಾಶ ಮುಂದುವರಿದಂತೆ ಸಗ್ಗವಕ್ಕಿಗಳ ಉಳಿ-ವಿಗೆ ಆಪತ್ತು ಇದ್ದದ್ದೇ.

ಇವು ಕುಂಜ ಪಕ್ಷಿಗಳ ಹತ್ತಿರ ಸಂಬಂಧಿಗಳು



ಇವುಗಳಲ್ಲಿ ಸುಮಾರು ೪೦ ಪ್ರಭೇದಗಳುಂಟು. ಎಲ್ಲವೂ ಹೆಚ್ಚು ಕಡಿಮೆ ಗೊರವಂಕ(ಮೈನ)ದ ಗಾತ್ರದವು. ಇವುಗಳಲ್ಲೆಲ್ಲ ವರ್ಣರಂಜಿತವಾಗಿರುವುದು ಗಂಡು ಮಾತ್ರ. ಹೆಣ್ಣು ಮಾಸಲು ಬಣ್ಣದ್ದು. ಸಗ್ಗವಕ್ಕಿಗಳ ಪೈಕಿ ದೊಡ್ಡ ಗಾತ್ರದ್ದೆಂದರೆ ಸುಮಾರು ೪೫ ಸೆಂಟಿಮೀಟರ್ ಉದ್ದದ ಕೆಂಪು ಬಾಲದ ಸಗ್ಗವಕ್ಕಿ (ಪ್ಯಾರಡೀಸಿಯ ಏಪೋಡ ಪ್ರಭೇದ ಚಿತ್ರ ೨.) ಈ ಪ್ರಭೇದದ ಗಂಡು ಹಕ್ಕಿಯ ಮೈ ಧೂಮ್ರವರ್ಣದ್ದು. ತಲೆ ಮತ್ತು ಬೆನ್ನಿನ ಮೇಲೆ ಅಚ್ಚ ಹಳದಿ ಬಣ್ಣದ ಮಚ್ಚೆಗಳುಂಟು. ಕತ್ತಿನ ಮೇಲೆ ಉಜ್ವಲ ಹಸಿರು ಬಣ್ಣದ ತುಪ್ಪಳದಂಥ ಗರಿಗಳಿವೆ. ಬಾಲವಂತೂ ನವುರಾದ ರೇಷ್ಮೆಯಂಥ ಉದ್ದನೆಯ ಕೆಂಪು ಗರಿಗಳಿಂದ ಕೂಡಿದೆ. ಹಕ್ಕಿ ಪ್ರಣಯಾಚರಣೆಯಲ್ಲಿ ತೊಡಗಿರುವಾಗ ಈ ಬಾಲದ ಗರಿಗಳು ಬೀಸಣಿಗೆಯಂತೆ ಹರಡಿಕೊಳ್ಳುವುವು. ಇದೇ ಪ್ರಭೇದದ ಇತರ ಸಂಬಂಧಿಗಳಲ್ಲಿ ಮೈಬಣ್ಣ, ಗರಿಗಳ ಬಣ್ಣ ವ್ಯತ್ಯಾಸವಾಗುವವು. ಸಗ್ಗವಕ್ಕಿಗಳಲ್ಲಿ ಚಿಕ್ಕ ಗಾತ್ರದವೂ ಇಲ್ಲದಿಲ್ಲ. ಉದಾಹರಣೆಗೆ ಕಿಂಗ್ ಬರ್ಡ್ ಆಫ್ ಪ್ಯಾರಡೈಸ್ ಎಂಬುದು. ಇದು ಕೇವಲ ೧೫ ಸೆಂಟಿಮೀಟರ್ ಉದ್ದ ಇದೆ. ಆದರೆ ವರ್ಣವೈವಿಧ್ಯದಲ್ಲಿ ಇದನ್ನು ಮೀರಿಸುವ ಹಕ್ಕಿ ಇನ್ನೊಂದಿಲ್ಲ. ಕಡುಗೆಂಪು ಬಣ್ಣದ ಮೈ, ಬಿಳಿ ಹೊಟ್ಟೆ, ನೀಲಿಬಣ್ಣದ ಕಾಲುಗಳು, ಹಸಿರು ಬಾಲದಿಂದ ಕೂಡಿದ ಇದು ನಿಜಕ್ಕೂ ಪಕ್ಷಿರತ್ನವೆನಿಸಿಕೊಂಡಿದೆ. ಇನ್ನೊಂದು ವಿಚಿತ್ರ ಬಗೆಯ ಸಗ್ಗವಕ್ಕಿ ಎಂದರೆ ಲೋಫೊರೈನ ಸುಪರ್ಬ ಎಂಬುದು (ಚಿತ್ರ ೧). ಇದರ ಬೆನ್ನ ಮೇಲೆ ಮೇಲಂಗಿಯಂತೆ ಹರಡಿರುವ ಗರಿಗಳ ಗುಚ್ಛವುಂಟು. ಎದೆಯ ಮೇಲೆ ಅಗಲವಾದ ಫಲಕದಂತಿರುವ ಲೋಹ ವರ್ಣದ ಗರಿಗಳಿವೆ. ಹೆಣ್ಣನ್ನು ಆಕರ್ಷಿಸಲೆಂದು ಇದು ರೆಂಬೆಗಳ ಮೇಲೆ ಕುಳಿತು ಬೆನ್ನಿನ ಗರಿಗಳ ಮೇಲಂಗಿಯನ್ನು ವಿಸ್ತರಿಸುತ್ತ ಧ್ವನಿಗೈಯುತ್ತದೆ.


ಸಗ್ಗವಕ್ಕಿಗಳ ವಾಸ ಸಮುದ್ರ ಮಟ್ಟದಿಂದ ಹಿಡಿದು ೪೦೦೦ ಮೀಟರ್ ಎತ್ತರದವರೆಗಿನ ಪರ್ವತಗಳಲ್ಲಿ. ಇವುಗಳ ಆಹಾರ ಹಣ್ಣು ಹಂಪಲು, ಬೀಜ, ಸಣ್ಣ ಪುಟ್ಟ ಕೀಟಗಳು, ಕೆಲವು ಬಗೆಗಳು ಮರಕುಟಿಗಗಳಂತೆ ತೊಗಟೆ, ಕೊಳೆಯುತ್ತಿರುವ ಮರಗಳ ಪೊಟರೆಗಳಿಂದ ಕ್ರಿಮಿಕೀಟಗಳನ್ನು ಹೆಕ್ಕಿ ತಿನ್ನುವುದಾದರೆ, ಇನ್ನು ಕೆಲವು ಅರಣ್ಯಗಳ ಹಾವಸೆಗಳನ್ನು ಕೆದಕಿ ಆಹಾರವನ್ನು ಅರಸುವುವು. ಮತ್ತೆ ಕೆಲವಾದರೂ ಹೂಮರಗಳಲ್ಲಿ ಸಿಗುವ ಕೀಟಗಳನ್ನು ಭಕ್ಷಿಸುವುವು.

ಗಂಡು ಸಗ್ಗವಕ್ಕಿಗಳು ಪ್ರಣಯ ಚೇಷ್ಟೆಗಳಿಗೆ ಹೆಸರಾಗಿವೆ. ಹೆಣ್ಣನ್ನು ಆಕರ್ಷಿಸಲೆಂದು ತಮ್ಮ ಬಾಲಗರಿಗಳನ್ನು ಆಗಿಂದಾಗ್ಗೆ ಹಿಗ್ಗಿಸುವುದು, ರೆಂಬೆಕೊಂಬೆಗಳಿಂದ ತಲೆಕೆಳಗಾಗಿ ಬಾಗಿ ರೆಕ್ಕೆ ಅಗಲಿಸುವುದು, ವಿಚಿತ್ರ ರೀತಿಯ ಶಬ್ದಗಳನ್ನು ಸೂಚಿಸುವುದು ಮುಂತಾದ ಚಟುವಟಿಕೆಗಳನ್ನು ಪ್ರದರ್ಶಿಸುವುವು. ಕೆಲವು ಸಗ್ಗವಕ್ಕಿಗಳಲ್ಲಿ ಬಹು ಪತ್ನಿತ್ವ ಕಂಡು ಬಂದಿದೆ. ಇಂಥ ಪ್ರಭೇದಗಳಲ್ಲಿ ಗೂಡು ನಿರ್ಮಾಣದಿಂದ ಹಿಡಿದು ಮರಿಗಳ ಪಾಲನೆವರೆಗಿನ ಎಲ್ಲ ಕಾರ್ಯಗಳನ್ನೂ ಹೆಣ್ಣು ಹಕ್ಕಿಗಳೇ ನಿರ್ವಹಿಸುವುವು. ಆದರೆ ಮ್ಯಾನುಕೋಡಿಯ ಎಂಬ ಗುಂಪಿನ ಸಗ್ಗವಕ್ಕಿಗಳಲ್ಲಿ ಗೂಡು ಕಟ್ಟುವ ಮತ್ತು ಮರಿಗಳ ಪೋಷಣೆಯ ಕೆಲಸಗಳಲ್ಲಿ ಗಂಡು ಹಕ್ಕಿ ಕೂಡ ಪಾಲುಗೊಳ್ಳುತ್ತದೆ. ಗೂಡುಗಳನ್ನು ಎತ್ತರದ ರೆಂಬೆಗಳಲ್ಲಿ ರಚಿಸುವುವು. ಮೊಟ್ಟೆಗಳ ಮೇಲೆ ಒಂದು ತುದಿಯಿಂದ ಇನ್ನೊಂದು ತುದಿಯವರೆಗೆ ಹಬ್ಬಿರುವ ಕಂದುಬಣ್ಣದ ಕಲೆಗಳುಂಟು.

ಇಂಥ ಅಪರೂಪದ ಹಕ್ಕಿಗಳಾದ ಸಗ್ಗವಕ್ಕಿಗಳ ವೈಜ್ಞಾನಿಕ ಅಧ್ಯಯನ ಕೇವಲ ಇತ್ತೀಚಿನದು. ಅಲ್ಲದೆ ಇವು ವಾಸಿಸುವ ಅರಣ್ಯಗಳನ್ನು ಪ್ರವೇಶಿಸುವುದು ಈಗೀಗ ಸಾಧ್ಯವಾಗುತ್ತಿರುವುದರಿಂದ ಇವುಗಳ ಸ್ವಭಾವ ಜೀವನ ಕ್ರಮ ಮುಂತಾದವನ್ನು ಅಧ್ಯಯಿಸಲು ಪಕ್ಷಿವಿಜ್ಞಾನಿಗಳು ಈಗಷ್ಟೆ ತೊಡಗಿದ್ದಾರೆ.


★

ಚಿತ್ರಗಳು: ಕೆ. ಬಿ. ಸದಾನಂದ



ಕ್ಲೆಪ್ಟೋಮೇನಿಯಾ

ರೈಲ್ವೇ ಕಂಡಕ್ಟರನ ಆದೇಶದಂತೆ, ಅಶೋಕ ಭೌಮಿಕ ಮೊದಲ ದರ್ಜೆಯ 'ಡಿ' ಕೋಣೆಗೆ ಹೋಗಿ ತನ್ನ ದೊಡ್ಡ ಸೂಟ್‌ಕೇಸನ್ನು ತನ್ನ ಸೀಟಿನ ಕೆಳಗೆ ತೂರಿಸಿದ. ಅದನ್ನೇನು ಪ್ರಯಾಣದ ನಡುವೆ ತೆಗೆಯುವ ಅವಶ್ಯಕತೆ ಇರಲಿಲ್ಲ. ತನ್ನ ಚಿಕ್ಕ ಕೈಚೀಲವನ್ನು ಮಾತ್ರ ತನ್ನ ಬಳಿಯೇ ಇಟ್ಟುಕೊಳ್ಳುವುದು ಉತ್ತಮ ಎಂದು ಅವನಿಗನ್ನಿಸಿತು. ತನ್ನ ಕೈಚೀಲದಲ್ಲಿ ಹಲ್ಲುಜ್ಜುವ ಬ್ರಷ್ 'ಟೂತ್–ಪೇಸ್ಟ್', ಶೇವಿಂಗ್ ಸೆಟ್ಟು, ಸಮಯ ಕಳೆಯಲು ಓದಲು ಬೇಕಾದಂತಹ ಕೆಲವು ಪತ್ರಿಕೆ ಹಾಗೂ ಪುಸ್ತಕಗಳು ಎಲ್ಲಾ ಇದ್ದವು. ಹಾಗೆಯೇ ಅದೆಲ್ಲದರ ಜೊತೆಗೆ ಅವನ ಗಂಟಲು ನೋವಿನ ಔಷಧಿ ಕೂಡಾ ಅದರಲ್ಲಿತ್ತು. ಈ ತಣ್ಣನೆಯ ಹವಾನಿಯಂತ್ರಿತ ಕೋಣೆಯಲ್ಲಿ, ಶೀತಕ್ಕೆ ಗಂಟಲು ನಾಳ ಕಟ್ಟಿದರೆ, ಗಂಟಲಿನಿಂದ ಹಾಡಲು ಧ್ವನಿ ಹೊರಡಲು ಕಷ್ಟವಾಗಬಹುದು. ಕಿಡಕಿಯ ಬದಿಯಲ್ಲಿನ ಚಿಕ್ಕ ಮೇಜಿನ ಮೇಲೆ ಅಶೋಕ ಭೌಮಿಕ ತನ್ನ ಕೈಚೀಲವನ್ನು ಎತ್ತಿಟ್ಟ. ದಿಲ್ಲಿಗಾಮಿಯಾದ ಈ ರೈಲು ಹೊರಡಲು, ಇನ್ನು ಕೇವಲ ಏಳೇ ನಿಮಿಷಗಳು ಮಾತ್ರ ಉಳಿದಿದ್ದವು. ಇಷ್ಟರವರೆಗೆ ಈ ಕೋಣೆಯ ಮತ್ಯಾವ ಪ್ರವಾಸಿಯೂ ಬಂದಿರಲಿಲ್ಲ. ಅಶೋಕ ಭೌಮಿಕನಿಗನ್ನಿಸಿತು, ಬಹುಶಃ ವೇಳೆ ಪ್ರಯಾಣದ ಕೊನೆಯವರೆಗೂ



ಮೂಲ ಬಂಗಾಲಿ : **ಸತ್ಯಜಿತ್ ರಾಯ್**

ಕನ್ನಡಕ್ಕೆ : **ಗೀತಾ ವಿಜಯಕುಮಾರ್**

ನಾನೊಬ್ಬನೇ ಪ್ರಯಾಣ ಮಾಡಿದರೆ ಎಷ್ಟು ಚೆನ್ನ. ಅಂತಹ ಭಾಗ್ಯ ತನಗೊದಗಬಹುದು ಎಂದು ಯೋಚಿಸುತ್ತ ಸಹಜವಾಗಿಯೇ ಅವನ ಬಾಯಿಂದ ಹಾಡಿನ ತುಣುಕೊಂದು ಹೊಮ್ಮಿತ್ತು.

ಅಶೋಕ ಭೌಮಿಕ ಕಿಟಕಿಯಿಂದ ಹೌರಾ ಸ್ಟೇಶನ್ನಿನ ಫ್ಲಾಟ್‌ಫಾರ್ಮಿನ ಜನಸಮುದಾಯವನ್ನು ಒಮ್ಮೆ ವೀಕ್ಷಿಸಿದ. ಇಬ್ಬರು ಹುಡುಗರು, ಇವನ ಕಡೆಯೇ ನೋಡುತ್ತ, ತಮ್ಮ ತಮ್ಮಲ್ಲಿ ಏನೋ ಮಾತಾಡಿಕೊಳ್ಳುತ್ತಿದ್ದರು. ಅವರು ಅಶೋಕ ಭೌಮಿಕನನ್ನು ಗುರುತಿಸಿದ್ದರು. ಕಲಕತ್ತೆ ಹಾಗೂ ಇನ್ನಿತರ ದೊಡ್ಡ ಪಟ್ಟಣಗಳಲ್ಲಿ ಅಶೋಕನ ಪರಿಚಯ-ದೊಡನೆ, ಅವನ ಮುಖ ಪರಿಚಯವೂ ಸಾಮಾನ್ಯ ಜನರಿಗಿತ್ತು. ಪ್ರತಿ ತಿಂಗಳು ನಾಲ್ಕೈದು ಸಮಾರಂಭಗಳಲ್ಲಿ ಅವನಿಗೆ ಆಮಂತ್ರಣವಿದ್ದೇ ಇರುತ್ತಿತ್ತು. ನಜರುಲ್ ಗೀತೆ ಹಾಗೂ ಆಧುನಿಕ ಬಂಗಾಲಿ ಹಾಡುಗಳನ್ನು ಅಶೋಕ ಬಹಳ ಚೆನ್ನಾಗಿ ಹಾಡುತ್ತಾನೆ. ಅವನು ತನ್ನ ಹಾಡಿನಿಂದ ಬಹಳ ಖ್ಯಾತಿಯನ್ನು ಕೂಡಾ ಪಡೆದಿದ್ದ. ಹಾಡುವ ಕಲೆ ಅವನಿಗೆ ಪ್ರಕೃತಿದತ್ತ ವರವಾಗಿತ್ತು. ಈಗ ಅವನು ದಿಲ್ಲಿಗೆ ಪ್ರಯಾಣ ಮಾಡುತ್ತಿರುವುದೂ ಹಾಡಿನ ಪ್ರೋಗ್ರಾಮ್-ಗಾಗಿಯೇ. ದಿಲ್ಲಿಯ ಬಂಗಾಲಿ ಅಸೋಸಿ-ಯೇಶನ್ನಿನ ಬೆಳ್ಳಿ ಹಬ್ಬದ ಸಂಧರ್ಭಕ್ಕೆ. ಮೊದಲ

ದರ್ಜೆಯ ರೇಲ್ವೇ ಪ್ರಯಾಣದ ಹಣ ನೀಡಿ. ಬೆಳ್ಳಿ ಹಬ್ಬದ ಸಮಾರಂಭದಲ್ಲಿ ನಜರೂಲ್ ಗೀತೆಯನ್ನು ಹಾಡಲು ಅಶೋಕನಿಗೆ ಆಮಂತ್ರಣ ವಿತ್ತಿದ್ದರು. ಎರಡು ದಿನ ದಿಲ್ಲಿಯಲ್ಲಿದ್ದು ಆಗ್ರಾ, ಫತೇಪುರ್‌ಸಿಕ್ರಿ ನೋಡಿಕೊಂಡು ಸರಿಯಾಗಿ ಪುನಃ ಏಳೇ ದಿನದಲ್ಲಿ ಕಲಕತ್ತೆಗೆ ಹಿಂತಿರುಗಿ ಗುವ ವ್ಯವಸ್ಥೆಯನ್ನು ಮಾಡಿಕೊಂಡೇ ಅಶೋಕ ಭೌಮಿಕ ದಿಲ್ಲಿಗೆ ಹೊರಟಿದ್ದ. ಪುನಃ ದುರ್ಗಾ ಪೂಜೆಯ ವೇಳೆಗೆ ಸರಿಯಾಗಿ ಅಶೋಕ ಭೌಮಿಕ ಕಲಕತ್ತೆಯಲ್ಲಿರುವುದು ಬಹಳ ಅವಶ್ಯ ವಾಗಿತ್ತು. ಪೂಜೆಯ ಸಂದರ್ಭದಲ್ಲಿ ಇವನ ಹಾಡನ್ನು ಕೇಳಲು ಜನ ಬಹಳ ಕಾತರರಾಗಿದ್ದರು.

"ತಮ್ಮೂಟದ ಆರ್ಡರ್ ಸ್ವಾಮಿ ?" ಕಂಡ-ಕ್ಟರ್ ಬಂದು ನಿಂತಿದ್ದ.

"ಏನೂಟ ಸಿಗುತ್ತೆ?" ಅಶೋಕ ಪ್ರಶ್ನಿಸಿದ.

"ತಾವು ಮಾಂಸಾಹಾರಿಯಾಗಿದ್ದರೆ, ದೇಶೀ ತೆಗೆದುಕೊಳ್ಳುವಿರೋ ಅಥವಾ ವಿದೇಶೀ? ದೇಶೀ ಎಂದರೆ ನಮ್ಮ ಕಡೆಯ ಊಟ." ಅಶೋಕ ತನಗಿಷ್ಟವಾದದ್ದನ್ನು ಆರ್ಡರ್ ಕೊಟ್ಟ. ಅಷ್ಟ ರಲ್ಲೇ ಮತ್ತೊಬ್ಬ ವ್ಯಕ್ತಿ ಕೋಣೆಯನ್ನು ಪ್ರವೇ ಶಿಸಿದ. ಆತ ಒಳಗೆ ಹೆಜ್ಜೆ ಇಡುತ್ತಿದ್ದಂತೆಯೇ ದಿಲ್ಲಿಗಾಮಿ ರೈಲು ಹೊರಟಿತು.

ಹೊಸದಾಗಿ ಬಂದ ಯಾತ್ರಿಯ ಮುಖಾವ-ಲೋಕನವಾಗುತ್ತಿದ್ದಂತೆಯೇ ಆತನ ಪರಿಚಯ ತನಗಿರುವ ಹಾಗಿದೆ ಎಂದು ಅಶೋಕನಿಗೆ ಅನ್ನಿಸಿತು. ಆಗಂತುಕನ ಕಡೆ ನೋಡಿ ನಗು ಮುಖ ಮಾಡಿದ. ಆದರೆ ಆತನಿಂದ ಪ್ರತಿ ಪರಿಚಿತ ನಗು ಸಿಗದಾಗ ಸುಮ್ಮ ನಾದ. ಅಶೋಕನಿಗೆ ಒಮ್ಮೆಲೇ ತನ್ನ ನಗು ವಿಷ್ಟು ಅಪ್ರಸ್ತುತ ಹಾಗೂ ವ್ಯರ್ಥ ಎಂದೆನ್ನಿ ಸಿತು. ಹೌದು ಹಿಂದೊಮ್ಮೆ ರೇಸಿನ ಬಯಲಿ-ನಲ್ಲಿ ಪಂಜಾಬಿ ವೇಷ ಧರಿಸಿದ್ದ ಒಬ್ಬ ವ್ಯಕ್ತಿ ಯನ್ನು ತನ್ನ ಸ್ನೇಹಿತ ಸಲೀಲ್ ಬ್ಯಾನರ್ಜಿ ಎಂದು ಭಾವಿಸಿ, "ಏನೋ ಸಲೀಲ್, ಏನು ಮಾಡ್ತಾ ಇದ್ದೀಯಾ?" ಅಂತ ಅವನ ಬೆನ್ನಿನ ಮೇಲೆ ಜೋರಾಗಿ ಗುದ್ದಿದಾಗಲೇ ಗೊತ್ತಾ ದದ್ದು, ಆ ವ್ಯಕ್ತಿ ತನ್ನ ಸ್ನೇಹಿತನಲ್ಲ ಎಂದು. ಈ ಘಟನೆ ಅಶೋಕನ ಮನದಿಂದ ಬಹಳ ದಿನಗಳ ವರೆಗೂ ಮರೆಯಾಗಿರಲಿಲ್ಲ.

ಅಶೋಕ ಪುನಃ ತನ್ನೆದುರಿನ ವ್ಯಕ್ತಿಯ ಮುಖ ನೋಡಿದ, ಆತ ತನ್ನ ಬೂಟ್ಸ್ ಕಳಚಿ, ಕಾಲುಗಳನ್ನು ಮೇಲೆತ್ತಿಕೊಂಡು, ಯಾವುದೋ ಪುಸ್ತಕ ನೋಡುತ್ತ ಕುಳಿತಿದ್ದ. ಅಶೋಕನಿಗೆ ಈತನನ್ನು ತಾನು ಮೊದಲು ಎಲ್ಲೋ ಹಿಂದೆ ನೋಡಿದ್ದಂತೆ ಅನಿಸಿತು. ತನಗೆ ತಾನೇ ಖಚಿತ ಪಡಿಸಿಕೊಳ್ಳಲು· ಅಶೋಕ ಮತ್ತೊಮ್ಮೆ ತುಂಬಾ ಹೊತ್ತು ಆತನನ್ನು ದಿಟ್ಟಿಸಿದ. ಹೌದು ಅದೇ ಮುಖ. ಓರಣವಾಗಿ ಬಾಚಿದ ಕೂದಲು, ಗಲ್ಲದ ಮಚ್ಚೆ, ಸಂಶಯವೇ ಇಲ್ಲ. ಆತ ವಿಷ್ಟು ಪರಿಚಿತ ಎಂದು ಅನ್ನಿಸುತ್ತೆ. ಆದರೆ ಆ ವ್ಯಕ್ತಿಯ ಮುಖ ನೋಡಿದರೆ ಆತನಿಗೆ ಅಶೋಕ ಭೌಮಿಕನ ಪರಿಚಯವಿರುವ ಭಾವ ಎಳ್ಳಷ್ಟೂ ಇರಲಿಲ್ಲ.

"ತಮ್ಮ ಊಟದ ಆರ್ಡರ್ ಸ್ವಾಮಿ ?" ಅದೇ ಕಂಡಕ್ಟರ್ ಪುನಃ ಬಂದಿದ್ದ.

ಆ ವ್ಯಕ್ತಿ ಹೇಳಿದ್ದ, "ಊಟ ಇರಲಿ, ಮೊದಲು ಒಂದು ಕಪ್ ಚಹ ಸಿಗುತ್ತಾ?"

"ಖಂಡಿತವಾಗಿಯೂ," ಕಂಡಕ್ಟರ್‌ನೆಂದ.

"ಹಾಗಾದ್ರೆ ನನಗೆ ಎರಡು ಕಪ್ ಚಹ ತಂದು ಕೊಡಿ. ನನಗೋ ಚಹ ಕುಡಿಯುವ ಚಟ ಬಹಳ." ಆ ವ್ಯಕ್ತಿ ಹೇಳಿದ. ಅಶೋಕ ಭೌಮಿಕ ನಿಗೆ ಒಮ್ಮೆಲೇ ಕಾಲ ಕೆಳಗಿನ ನೆಲ ಕುಸಿ ದಂತೆ ಭಾಸವಾಯ್ತು. ಒಮ್ಮೆಲೇ ಅವನ ಸರ್ವಾಂಗ ನಡುಗಿ, ಗಂಟಲೆಲ್ಲ ಒಣಗಿ ಬತ್ತಿ ಹೋದಂತೆ ಅನಿಸಿತು. ಆದರೆ ಆತನ ಮನದ ಒಂದೇ ಒಂದು ವಿಚಾರ ಆತನ ಎಲ್ಲ ಅಸ್ವಸ್ಥತೆ ಯನ್ನು ತಾತ್ಕಾಲಿಕವಾಗಿ ದೂರ ಮಾಡಿದಂತೆ ಅನಿಸಿತು. ಅಶೋಕ ತನ್ನ ಎದುರಿನ ವ್ಯಕ್ತಿ ಯನ್ನು ಮೊದಲೊಮ್ಮೆ ನೋಡಿದ್ದ. ಇಂತ ಹುದೇ ಹವಾನಿಯಂತ್ರಿತ ಕೋಣೆಯಲ್ಲಿ ಜೊತೆ ಯಾಗಿ ಕುಳಿತು ಪ್ರಾಯಶಃ ಎಂಟು ಗಂಟೆಗಳ ಕಾಲ ಪ್ರಯಾಣ ಮಾಡಿರುವಂತೆ ನೆನಪಾಯ್ತು. ತಾನಾಗ ತನ್ನ ಮಾವನ ಮಗಳ ಮದುವೆಗೆ ಹೊರಟಿದ್ದ. ಅದೇ ಪ್ರಥಮ ಬಾರಿ, ಮೂರು ದಿನ ಗಳ ಹಿಂದೆ ರೇಸಿನ ಜೂಜಿನಲ್ಲಿ ಏಳುವರೆ ಸಾವಿರ ರೂಪಾಯಿ ಗೆದ್ದ ಖುಷಿಯಲ್ಲಿ ಪ್ರಥಮ ದರ್ಜೆಯಲ್ಲಿ

ಪ್ರಯಾಣ ಮಾಡಿದ್ದ. ಆಗ ಅವನು ತನ್ನ ಹಾಡಿನಿಂದ ಅಷ್ಟೊಂದು ಖ್ಯಾತಿಯನ್ನು ಪಡೆದಿರಲಿಲ್ಲ. ಈ ಘಟನೆ ನಡೆದದ್ದು ಅರವತ್ನಾಲ್ಕರಲ್ಲಿ. ಇಂದಿಗೆ ಒಂಬತ್ತು ವರ್ಷ ಸಂದಿದೆ. ಆ ವ್ಯಕ್ತಿಯ ಹೆಸರು ಕೂಡಾ ಅಶೋಕನ ಮನಸ್ಸಿನಲ್ಲಿ ಸ್ಪಷ್ಟವಾಗಿ ನೆನಪಿದೆ. ಆತನ ಹೆಸರು 'ಚ'ದಿಂದ ಪ್ರಾರಂಭವಾಗುತ್ತೆ. ಚೌಧರಿ, ಚಕ್ರವರ್ತಿ ಅಥವಾ ಚಟರ್ಜಿಯೋ?

ಕಂಡಕ್ಟರ್ ಊಟದ ಹಾಗೂ ಚಹದ ಆರ್ಡರ್ ತೆಗೆದುಕೊಂಡು ಹೊರಟು ಹೋದ. ಅಶೋಕನಿಗನಿಸಿತು, ತನ್ನಿಂದ ಈಗ ಆ ವ್ಯಕ್ತಿಯ ಎದುರು ಕುಳಿತುಕೊಳ್ಳಲು ಸಾಧ್ಯವಿಲ್ಲ. ಕೂಡಲೇ ಅಶೋಕ ತನ್ನ ಸ್ಥಳದಿಂದ ಎದ್ದು ಹೋಗಿ ಕಾರಿಡಾರಿನಲ್ಲಿ ನಿಂತುಕೊಂಡು ಕಿಡಕಿಯಿಂದ ಹೊರಗಿನ ದೃಶ್ಯಗಳನ್ನು ನೋಡತೊಡಗಿದ. ಬಂಗಾಲಿಯಲ್ಲಿ 'ಕೋಯಿನ್ಸಿಡೆನ್ಸ್'ಗೆ ಏನನ್ನುತ್ತಾರೋ ಅಶೋಕನಿಗೆ ತಿಳಿದಿರಲಿಲ್ಲ. ಆದರೆ ಅವನಿಗೆ ಇಷ್ಟು ಮಾತ್ರ ತಿಳಿದಿತ್ತು. ಪ್ರತಿಯೊಬ್ಬರ ಜೀವನದಲ್ಲಿ ಹಲವು ಘಟನೆಗಳು ಪುನರಾವರ್ತನೆಯಾಗುತ್ತವೆ. ಅದೇ 'ಕೋಯಿನ್ಸಿಡೆನ್ಸ್' ಇರಬೇಕು ಎಂದುಕೊಂಡ ಅಶೋಕ.

"ಆದರೆ 'ಚ' ವ್ಯಕ್ತಿ ನನ್ನನ್ನು ಏಕೆ ಗುರುತಿಸಲಿಲ್ಲ? ನಾನು ಆತನನ್ನ ಗುರುತಿಸಿದಂತೆ, ಆತ ನನ್ನನ್ನು ಗುರುತಿಸದೇ ಇರುವುದಕ್ಕೆ ಕೇವಲ ಎರಡೇ ಕಾರಣ. ಒಂದನೆಯದಾಗಿ ಆತನ ಸ್ಮರಣಶಕ್ತಿ ಕುಂಠಿತವಾಗಿರಬೇಕು. ಅಥವಾ ಈ ಒಂಭತ್ತು ವರ್ಷಗಳಲ್ಲಿ ಆತ ನನ್ನನ್ನು ಗುರುತು ಹಿಡಿಯಲಾರದಷ್ಟು, ನನ್ನಲ್ಲಿ ಬದಲಾವಣೆಗಳಾಗಿರಬೇಕು." ಹೊರಗಿನ ದೃಶ್ಯಗಳನ್ನ ನೋಡುತ್ತ ಅಶೋಕ ಯೋಚಿಸಿದ. 'ಈ ಒಂಭತ್ತು ವರ್ಷಗಳಲ್ಲಿ ನನ್ನ ಮುಖ ಅಷ್ಟು ಬದಲಾವಣೆ ಹೊಂದಿದೆಯೆ? ಹೌದು ನಾನೀಗ ದಪ್ಪಗಾಗಿದ್ದೇನೆ. ಅಷ್ಟೇ ಅಲ್ಲ, ತೂಕವೂ ಹೆಚ್ಚಿದೆ. ಮುಖ ಕೆನ್ನೆ ಎಲ್ಲ ತುಂಬಿಕೊಂಡಿದೆ. ಹಿಂದೆ ಕನ್ನಡಕ ಹಾಕಿಕೊಳ್ಳುತ್ತಿರಲಿಲ್ಲ. ಆದರೀಗ ಹಾಕಿಕೊಳ್ಳುತ್ತಿದ್ದೇನೆ. ಹೌದು, ಹಿಂದಿನಂತೆ ಈಗ ನಾನು ಮೀಸೆ ಬೆಳೆಸಿಲ್ಲ. ಆದರೆ ಮೀಸೆ ಬೋಳಿಸಿಕೊಳ್ಳುವಂಥ ವಯಸ್ಸೇನಾಗಿಲ್ಲ. ಹೌದು, ಹೊಸ ನಾಪಿತನ ಅಂಗಡಿಯಲ್ಲಿ. ಹೊಸ ನಾಪಿತ ನನ್ನ ಮೀಸೆಯನ್ನು ಸರಿಯಾಗಿ ಕತ್ತರಿಸಿರಲಿಲ್ಲ.' ಅಶೋಕನೇನೋ ತನ್ನ ಮೀಸೆಯ ಬಗ್ಗೆ ಅಷ್ಟೇನು ತಲೆ ಕೆಡಿಸಿಕೊಂಡಿರಲಿಲ್ಲ. ಆದರೆ ಆಫೀಸಿನ ಲಿಫ್ಟ್‌ಮನ್‌ನಿಂದ ಹಿಡಿದು ಮುದುಕ ಕ್ಯಾಶಿಯರ್‌ನವರೆಗೂ ಎಲ್ಲರ ಬಾಯಲ್ಲೂ ಸರಿಯಾಗಿ ಕತ್ತರಿಸದ ಮೀಸೆಯ ಮೀಮಾಂಸೆಯೇ. ಅದರಿಂದ ಬೇಸತ್ತು ಪೂರ್ತಿ ಬೋಳಿಸಿದವ ಮುಂದೆ ಮೀಸೆ ಬೆಳೆಸಿರಲೇ ಇಲ್ಲ. ಇದಂತೂ ನಾಲ್ಕು ವರ್ಷದ ಹಿಂದಿನ ಘಟನೆ.

ಮೀಸೆ ಇಲ್ಲದ ತುಂಬಿದ ಮುಖ, ಕಣ್ಣಿನ ಕನ್ನಡಕ. ಹೌದು, ಮುಖದಲ್ಲಿ ಬದಲಾವಣೆಯಂತೂ ಆಗಿದೆ. ಈಗ ಅಶೋಕ ಸ್ವಲ್ಪ ನಿಶ್ಚಿಂತನಾಗಿ ತನ್ನ ಸ್ವಸ್ಥಾನಕ್ಕೆ ಹಿಂತಿರುಗಿ ಕುಳಿತುಕೊಂಡ. ಅದೇ ವೇಳೆಗೆ ಕಂಡಕ್ಟರ್ ಅಶೋಕ ಹಾಗೂ 'ಚ' ವ್ಯಕ್ತಿಗೆ ಚಹ ತಂದುಕೊಟ್ಟ. ಅಶೋಕನಿಗೆ ಚಹ ತಣ್ಣಗಿತ್ತೋ ಬಿಸಿಯಾಗಿತ್ತೋ ಅನ್ನುವುದು ಕೂಡಾ ತಿಳಿಯಲಿಲ್ಲ. ಚಹದ ಬಗ್ಗೆ ಆತ ಒಂದೇ ಒಂದು ಮಾತನಾಡಲಿಲ್ಲ. ಒಂದು ವೇಳೆ ತಾನು ಮಾತನಾಡಿದಾಗ ಎದುರಿನ ವ್ಯಕ್ತಿ ತನ್ನನ್ನು ತನ್ನ ಸ್ವರವನ್ನು ಗುರುತಿಸಿಬಿಟ್ರೆ? ಒಂದು ವೇಳೆ ಆತ ತನ್ನನ್ನು ಗುರುತಿಸಿಬಿಟ್ರೆ ಮುಂದೆ ಏನಾಗಬಹುದು? ಎಂಬ ಕಲ್ಪನೆಯನ್ನು ಊಹಿಸಲೂ ಅಶೋಕ ಇಚ್ಛಿಸಲಿಲ್ಲ. 'ಚ' ಯಾವ ತರಹದ ವ್ಯಕ್ತಿ ಎಂದು ಹೇಳಲು ಬರುವಂತಿಲ್ಲ. ಒಂದುವೇಳೆ ಆತಪ್ರದೀಪಣ್ಣನಂತಿದ್ದರೆ ಮುಂದೇನೂ ಯೋಚನೆಯಿಲ್ಲ. ಒಮ್ಮೆ ಬಸ್ಸಿನಲ್ಲಿ ಪ್ರದೀಪಣ್ಣನ ಹಣದ ಚೀಲವನ್ನು ಯಾರೋ ಕಳವು ಮಾಡಿದರು. ದುರಾದೃಷ್ಟವಶಾತ್ ಸಿಕ್ಕಿ ಬಿದ್ದರು. ಆದರೆ ಪ್ರದೀಪಣ್ಣ ತಮ್ಮ ಹಣದ ಚೀಲದಿಂದ ತಾವೇ ಇಪ್ಪತ್ತು ರೂಪಾಯಿ ತೆಗೆದು, ಬಲವಂತವಾಗಿ ಕಳ್ಳನಿಗೆ ಕೊಟ್ಟು ಮನೆಗೆ ಬಂದು ಹೇಳಿದ್ದರು, "ಪಬ್ಲಿಕ್ ಬಸ್ಸಿನಲ್ಲಿ ಇಂದೊಂದು ಮೋಜಿನ ಘಟನೆ ನಡೆಯಿತು. ಅಲ್ಲಿ ನನ್ನ ಪಾತ್ರವೇ ಮುಖ್ಯವಾಗಿತ್ತು," ಎಂದು ಒಂದು ವೇಳೆ ಎದುರಿನ ವ್ಯಕ್ತಿ ಕೂಡಾ ಪ್ರದೀಪಣ್ಣನಂತೆ ಇದ್ದರೆ–ಆದರೆ ಅವನಂತೆಯೇ ತುಂಬಾ ಜನ ಇರುವುದಿಲ್ಲ. ಈತ ಪ್ರದೀಪಣ್ಣನಂತೆ ಅಲ್ಲ ಎಂದು ಇವನ ಮುಖ ನೋಡಿದರೇ ತಿಳಿಯುತ್ತೆ. ಆತ

ಅಕಸ್ಮಾತ್ತಾಗಿ ಅಶೋಕನನ್ನು ಗುರುತಿಸಿದರೆ, ತನ್ನ ಬಲಿಷ್ಟ ಕೈಗಳಿಂದ ಶರ್ಟಿನ ಕಾಲರ್ ಹಿಡಿದು, ನೀನು ಅದೇ ವ್ಯಕ್ತಿಯಲ್ಲವಾ ಒಂಬತ್ತೊವರ್ಷದ ಹಿಂದೆ ನನ್ನ ಗಡಿಯಾರವನ್ನು ಕದ್ದವನು. ಸ್ಕೌಂಡ್ರಲ್, ರ್‍ಯಾಸ್ಕಲ್, ಈ ಒಂಭತ್ತು ವರ್ಷಗಳಿಂದ ನಿನ್ನ ಹುಡುಕುತ್ತಾ ಇದ್ದೇನೆ. ಇಂದು ನಿನ್ನ ನಾನು...

ಅಶೋಕನಿಂದ ಮುಂದೆ ಯೋಚಿಸಲು ಸಾಧ್ಯವಾಗಲಿಲ್ಲ. ಈ ಹವಾನಿಯಂತ್ರಿತ ಕೋಣೆಯಲ್ಲೂ ಅವನ ಮುಖ ಬೆವತಿತು. ಕೂಡಲೆ ರೆಕ್ಸಿನ್ ತುಂಬಿಸಿದ ಸಿಲ್ಕಿನ ಸೀಟಿನಲ್ಲಿ, ತನ್ನ ಎಡಗೈಯಿಂದ ಕಣ್ಣುಗಳನ್ನು ಮರೆ ಮಾಡಿ ಮಲಗಿಕೊಂಡ. ಒಂದು ವೇಳೆ ಕಣ್ಣು ತೆರೆದ್ರೆ ಆತ ತನ್ನನ್ನು ಗುರುತಿಸಬಹುದು ಎಂದು ಅಶೋಕನ ಭಾವನೆ. ಅಶೋಕ ಕೂಡ ಮೊದಲು 'ಚ' ವ್ಯಕ್ತಿಯನ್ನು ಅವನ ಕಣ್ಣುಗಳನ್ನು ನೋಡಿಯೇ ಗುರುತಿಸಿದ್ದು.

ತನ್ನ ಜೀವನದಲ್ಲಿ ನಡೆದ ಹಲವಾರು ಘಟನೆಗಳು ಅಶೋಕನ ಕಣ್ಣ ಮುಂದೆ ಚಲನಚಿತ್ರದಂತೆ ಹಾದು ಹೋದವು. ಆದರೆ ಅವನಿಗೆ ತಾನು



"ನೀವು ರಾಜಕೀಯದಲ್ಲಿ ಬಾಯ್ಮುಚ್ಚಿಕೊಂಡಿದ್ದಷ್ಟು ಕಾಲ ನಿಮಗೆ ಉಜ್ವಲ ಭವಿಷ್ಯವಿದೆ."

'ಚ'ನ ಗಡಿಯಾರ ಕಳವು ಮಾಡಿದ್ದು ಮಾತ್ರ ನೆನಪಾಗಲಿಲ್ಲ. ಸಣ್ಣ ಹುಡುಗನಾಗಿದ್ದಾಗಿನಿಂದಲೂ ತಾನು ಯಾವ ಯಾವ ವಸ್ತುಗಳನ್ನು ಕಳವು ಮಾಡಿದ್ದನೋ ಅವೆಲ್ಲ ಆತನ ನೆನಪಿನ ಭಂಡಾರದಲ್ಲಿ ಭದ್ರವಾಗಿತ್ತು. ಅವೆಲ್ಲಾ ತೀರಾ ಸಾಮಾನ್ಯ ವಸ್ತುಗಳಾಗಿದ್ದವು. ಡಾಟ್‌ಪೆನ್ನೋ, ಸಾಧಾರಣ 'ಕಫ್‌ಲಿಂಕ್ಸ್' ಅಥವಾ (ತನ್ನ ಶಾಲೆಯ ಸಹಪಾಠಿ ಅಜಯ ಸನ್ಯಾಲನ) ಮ್ಯಾಗ್ನಿಫಾಯಿಂಗ್ ಗ್ಲಾಸ್. ಆದರೆ ಈ ಎಲ್ಲ ವಸ್ತುಗಳಿಂದ ಅಶೋಕನಿಗೆ ಒಂದು ಸ್ವಲ್ಪವೂ ಪ್ರಯೋಜನವಾಗಿರಲಿಲ್ಲ. ಇವೆಲ್ಲವನ್ನು ಆತ ಒಂದು ದಿವಸವೂ ಉಪಯೋಗಿಸಿರಲಿಲ್ಲ. ಆದರೆ ಅವನು ಪರರ ವಸ್ತುಗಳನ್ನು ಕಳ್ಳತನ ಮಾಡುತ್ತಿದ್ದುದಕ್ಕೆ ಮುಖ್ಯ ಕಾರಣ ಅದೆಲ್ಲ ತನ್ನದಾಗಿರದೆ ಪರರಿಗೆ ಸೇರಿದ್ದೆಂಬುದು. ಹನ್ನೆರಡು ವರ್ಷದವನಾಗಿನಿಂದಲೂ, ಈಗ ಅಶೋಕನಿಗೆ ಇಪ್ಪತ್ತೈದು ವರ್ಷ. ಈ ಹಲವು ವರ್ಷಗಳ ಅಂತರದಲ್ಲಿ, ಯಾವುದೋ, ರೀತಿಯಲ್ಲಿ ಪರರ ವಸ್ತುಗಳನ್ನು ಕದ್ದು, ತನ್ನದಾಗಿರಿಸಿಕೊಂಡಿದ್ದ. ಅವೆಲ್ಲವನ್ನು ಅವನು ಮನೆಯಲ್ಲೇ ಇಟ್ಟುಕೊಂಡಿದ್ದಾನೆ. ಇತರ ಬೇರೆ ಕಳ್ಳರು ಅಭಾವದ ಕಾರಣದಿಂದಾಗಿ ಕಳ್ಳತನ ಮಾಡುತ್ತಿದ್ದರೆ ಅಶೋಕ ಭೌತಿಕ ಮಾತ್ರ ಕೇವಲ ಅಭ್ಯಾಸಬಲದಿಂದ ಮಾಡುತ್ತಾ ಬಂದಿದ್ದಾನೆ. ಎಂದೂ ಜನರು ಇವನನ್ನು ಸಂದೇಹದ ದೃಷ್ಟಿಯಿಂದ ಕಂಡಿಲ್ಲ. ಎಂದೂ ಯಾರೂ ಇವನನ್ನು ಕಳ್ಳತನದ ಅಪಾದನೆಯ ಮೇಲೆ ಹಿಡಿದಿಲ್ಲ. ತಾನೀ ರೀತಿ ಕಳ್ಳತನ ಮಾಡುವುದು, ತನಗಿರುವ ವಿಶೇಷ ರೀತಿಯ ಖಾಯಿಲೆಯಿಂದಾಗಿ ಎಂದು ಅಶೋಕನಿಗೆ ಚೆನ್ನಾಗಿ ಗೊತ್ತು. ಒಮ್ಮೆ ತನ್ನ ಸ್ನೇಹಿತ ಡಾಕ್ಟರನನ್ನು ಕಂಡು ತನಗಿರುವ ರೋಗದ ಹೆಸರನ್ನೂ ಕೂಡಾ ತಿಳಿದುಕೊಂಡುಬಂದಿದ್ದ. ಆದರೆ ಈಗ ಆ ರೋಗದ ಹೆಸರು ನೆನಪಾಗ್ತಾ ಇಲ್ಲ. ಇಂದೀಗ ಒಂಭತ್ತು ವರ್ಷಗಳ ಹಿಂದೆ 'ಚ'ನ ಗಡಿಯಾರ ಕಳವು ಮಾಡಿದ ನಂತರ ಇವತ್ತಿನವರೆಗೂ ಅಶೋಕ ಭೌತಿಕ ಮತ್ತ್ಯಾವ ವಸ್ತುವನ್ನೂ ಕದ್ದಿಲ್ಲ. ಹಾಗೂ ಕದಿಯಬೇಕೆಂಬ ಪ್ರಬಲವಾದ ಆಕಾಂಕ್ಷೆಯೂ ಅವನ ಮನದಲ್ಲಿಲ್ಲ. "ಸದ್ಯ ನನಗೀಗ ಭಯಂಕರ ರೋಗ

ದಿಂದ ಮುಕ್ತಿ ದೊರಕಿದೆ" ಎಂದು ಅಶೋಕ ಅಂದುಕೊಂಡಿದ್ದ.

ಆತ ಕಳವು ಮಾಡಿದ ಇತರ ವಸ್ತುಗಳಿಗೂ ಈ ಸಲ ಕಳವು ಮಾಡಿದ್ದ ಗಡಿಯಾರಕ್ಕೂ ಬಹಳ ಭೇದವಿತ್ತು. ಈ ಗಡಿಯಾರದಿಂದ ನಿಜವಾಗಿ ಅವನಿಗೆ ತುಂಬಾ ಪ್ರಯೋಜನವಾಗಿತ್ತು. ಸ್ವಿಜರ್ ಲ್ಯಾಂಡಿನಲ್ಲಿ ತಯಾರಾದ ಬಹಳ ಸುಂದರ ಟ್ರಾವಲಿಂಗ್ ಕ್ಲಾಕ್. ಒಂದು ನೀಲಿ ಚತುಷ್ಕೋಣ ಡಬ್ಬಿ. ಅದರ ಮುಚ್ಚಳ ತೆಗೆಯುತ್ತಿರುವಂತೆಯೇ ಗಡಿಯಾರ ಹೊರಗೆ ಬರುತ್ತೆ. ಅದು ಅಲಾರಾಮ್ ಗಡಿಯಾರ, ಅಲಾರಾಮಿನ ಶಬ್ದದಿಂದ ಸಿಹಿ ನಿದ್ದೆ ಭಂಗವಾದರೂ, ಸುಶ್ರಾವ್ಯ ಶಬ್ದ ಕಿವಿಗೆ ಕೇಳಲು ತುಂಬಾ ಇಂಪು. ಈ ಒಂಭತ್ತು ವರ್ಷ ಅದನ್ನು ತುಂಬಾ ಚೆನ್ನಾಗಿ ಉಪಯೋಗಿಸಿದ್ದ. ತಾನು ಎಲ್ಲಿ ಹೊರಟರೂ ಅವನ್ನು ತನ್ನ ಜೊತೆಯಲ್ಲೇ ಒಯ್ಯುತ್ತಿದ್ದ. ಇಂದೂ ಆ ಗಡಿಯಾರ ಅವನ ಸಂಗಡವೇ ಇದೆ. ಕಿಟಕಿಯ ಬಳಿ ಇಟ್ಟಿರುವ ಕೈಚೀಲದ ಸಾಮಾನಿನ ನಡುವೆ ಭದ್ರವಾಗಿದೆ.

"ತಮ್ಮ ಪ್ರಯಾಣ ಎಲ್ಲಿಯವರೆಗೆ?"

ಅಶೋಕ ಒಮ್ಮೆಲೆ ಹೆದರಿ ಎದ್ದು ಕುಳಿತುಕೊಂಡ. ಅವನ ಎದುರಿನ ವ್ಯಕ್ತಿ ಅವನನ್ನು ಮಾತನಾಡಿಸಿದ್ದ.

"ನನ್ನ ಪ್ರಯಾಣ ದಿಲ್ಲಿಯವರೆಗೆ."

ಮೊದಲ ಬಾರಿಗೆ ಗಂಟಲು ಕುಗ್ಗಿಸಿ ಮೆಲ್ಲಗೆ ಉತ್ತರಿಸಿದ. "ಶೀತಕ್ಕೆ ನಿಮ್ಮ ಗಂಟಲು ಕಟ್ಟಿರೋ ಹಾಗಿದೆಯಲ್ಲಾ. ನಾನಂತೂ ಈ ಬಿಸಿಲಿನ ಝಳದಿಂದ ಪಾರಾಗಲು ಯಾವಾಗಲೂ ಈ ಹವಾ ನಿಯಂತ್ರಿತ ಮೊದಲ ದರ್ಜೆ ಕೋಣೆಯಲ್ಲೇ ಪ್ರಯಾಣ ಮಾಡ್ತೇನೆ."

ಅಶೋಕ ಏನೂ ಮಾತನಾಡದೆ ಸುಮ್ಮನಿದ್ದ. ಮನದಲ್ಲೇ 'ಚ'ನ ಕಡೆ ನೋಡಬಾರದು ಎಂದು ಅಂದುಕೊಂಡ. ಆದರೆ 'ಚ' ತನ್ನನ್ನು ನೋಡುತ್ತಾ ಇದ್ದಾನೋ ಇಲ್ಲವೋ ಎಂದು ತಿಳಿಯಲು ಹಲವು ಬಾರಿ ಅಶೋಕನ ಕಣ್ಣುಗಳು 'ಚ'ನ ಕಡೆಯೇ ಹೊರಳುತ್ತಿದ್ದವು. ಆದರೆ 'ಚ' ಮಾತ್ರ ನಿಶ್ಚಿಂತನಾಗಿದ್ದಂತೆ ತೋರಿತು. ಅಥವಾ ಅದೆಲ್ಲ ಬರಿಯ ಅಭಿನಯವೋ? ಅಶೋಕನಿಗೆ ತಿಳಿಯಲಾಗಲಿಲ್ಲ. ಅಶೋಕನಿಗೆ ಆತ ಈಗಲೂ ಹಿಂದಿನಂತೆಯೇ ಇದ್ದಾನೆ ಅನ್ನಿಸಿತು. ಆತನ ಅಭ್ಯಾಸಗಳು ಕೂಡಾ ಏನೊಂದು ಮಾರ್ಪಾಡು ಕಂಡಿಲ್ಲ. ಅದೇ ಹಾಲು ಸಕ್ಕರೆ ಬೆರೆಸದ ಬರೀ ಚಹ. ಪ್ರತಿಯೊಂದು ನಿಲ್ದಾಣದಲ್ಲೂ ಇಳಿದು ಏನಾದರೂ ತಿಂಡಿ ಕಟ್ಟಿಸಿಕೊಂಡು ಬರೋದು. ಅವನು ಸಿಹಿ ತಿಂಡಿ ತಿನ್ನದೆ ಬರೀ ಉಪ್ಪಿನ ತಿಂಡಿ ಮಾತ್ರ ಯಾವಾಗಲೂ ಕೊಂಡುಕೊಳ್ಳುತ್ತಿದ್ದ. ಹಿಂದೆ ಇದೇ ವ್ಯಕ್ತಿಯೊಡನೆ ತಾನು ತುಂಬಾ ತಿಂಡಿ ತಿಂದಿದ್ದೇನೆ ಎಂದು ಅಶೋಕ ಭೌವಿಕನಿಗನಿಸಿತು.

ರೈಲು ಪಾಟ್ನಾ ಸ್ಟೇಷನ್ ಸಮೀಪಿಸುತ್ತಿರುವಂತೆಯೇ ಅಶೋಕನಿಗೆ 'ಚ' ವ್ಯಕ್ತಿಯ ಮತ್ತೊಂದು ವಿಷಯ ಮನಸ್ಸಿಗೆ ಹೊಳೆಯಿತು. ಅದೇ ವೇಳೆಗೆ ಫಕ್ಕನೆ ಅವನಿಗೆ ಗಡಿಯಾರ ಕಳ್ಳತನ ಮಾಡಿದ ವಿಚಾರ ಕೂಡಾ ಒಂದೊಂದಾಗಿ ಮನದಲ್ಲಿ ಮೂಡತೊಡಗಿತು. ಆ ಘಟನೆ ಅಶೋಕನ ಮನಃಪಟಲದ ಮೇಲೆ ಅಚ್ಚಳಿಯದೆ ಹಾಗೇ ಮೂಡಿಬಂತು. ಈಗ ಆ ಹಿಂದಿನ ಘಟನೆ ಸ್ಪಷ್ಟವಾಯ್ತು. ಹಿಂದೆ ತಾನು ಪ್ರಯಾಣ ಮಾಡಿದ ರೈಲು, –ಅಮೃತ್‌ಸರ್ ಮೇಲ್'–ಆ ರೈಲು ಪಾಟ್ನಾ ಸೇರೋದು ಬೆಳಗಿನ ಜಾವ ಐದು ಘಂಟೆಗೆ. ಕಂಡಕ್ಟರ್ ನಾಲ್ಕೂವರೆಗೇ ಬಂದು ಅಶೋಕನನ್ನು ಎಬ್ಬಿಸಿದ್ದ. 'ಚ' ಕೂಡಾ ಅಶೋಕನೊಡನೆ ಎದ್ದಿದ್ದ. ಆತನ ನಿದ್ರೆ ಪೂರ್ತಿಯಾಗಿ ಇನ್ನೂ ಹರಿದಿರಲಿಲ್ಲ. ಆಗ 'ಚ' ದಿಲ್ಲಿಗೆ ಪ್ರಯಾಣ ಮಾಡುತ್ತಲಿದ್ದ. ರೈಲು ಪಾಟ್ನಾ ಸೇರುವ ಮೂರು ನಿಮಿಷಗಳ ಮೊದಲು ಕರ್ಕಶಧ್ವನಿ ಮಾಡಿ ನಿಂತಿತು. ಇನ್ನೂ ಅಷ್ಟೇನೂ ಬೆಳಕಾಗಿರಲಿಲ್ಲ. ಟಾರ್ಚಿನ ಬೆಳಕಿನಲ್ಲಿ ಕಂಡದ್ದು ಏನೋ ಗದ್ದಲ, ಗಲಾಟೆ. ಅಷ್ಟರಲ್ಲೇ ಕಂಡಕ್ಟರ್ ಸುದ್ದಿ ತಂದ. "ಯಾವನೋ ಒಬ್ಬ ರೈಲಿನಡಿಗೆ ಬಿದ್ದು ಸತ್ತಿದ್ದಾನೆ. ಆ ಹೆಣ ತೆಗೆಯೋವರೆಗೂ ರೈಲು ಹೊರಡಲ್ಲ." ಸುದ್ದಿ ತಿಳಿದು, 'ಚ' ಅವನ್ನು ನೋಡಿ ಬರುವ ಸಲುವಾಗಿ, ಸ್ಲಿಪರ್ ಮೆಟ್ಟಿ ಕತ್ತಲಲ್ಲೇ ರೈಲಿನಿಂದ ಇಳಿದು

ಹೊರಟ. ಅಶೋಕನಿಗೆ ಎಲ್ಲಾ ಕಣ್ಣಿಗೆ ಕಟ್ಟಿದಂತೆ ಅನಿಸಿತು. ಆ ಎಲ್ಲಾ ಘಟನೆ ಎಷ್ಟು ಸ್ಪಷ್ಟವಾಗಿದೆ. ಅದೇ ವೇಳೆಯಲ್ಲೆ ಅಶೋಕ 'ಚ'ನ ಪೆಟ್ಟಿಗೆಯಿಂದ ಗಡಿಯಾರವನ್ನು ಕಳವುಮಾಡಿದ್ದು, ಭೌಮಿಕನಿಗೆ ಕಳವು ಮಾಡಲು ಬೇಕಾದದ್ದು ಕೇವಲ ಹದಿನೈದು ಸೆಕೆಂಡು. 'ಚ' ಪುನಃ ಹಿಂತಿರುಗಿದ್ದು ಐದು ನಿಮಿಷಗಳ ನಂತರ. "ಹಾರಿಬಲ್ ಸ್ವಾಮಿ, ಕಣ್ಣಿನಿಂದ ನೋಡೋಕಾ–ಗೋಲ್ಲ!" ಚ' ನೋಡಿಬಂದದ್ದು ಹೇಳಿದ್ದ.

ಪಾಟ್ನಾದಲ್ಲಿ ಇಳಿದು ಸೋದರಮಾವನ ಕಾರಿನಲ್ಲಿ ಕುಳಿತುಕೊಳ್ಳುತ್ತಿರುವಂತೆಯೇ ಭೌಮಿಕನಿಗೆ ಸ್ವಲ್ಪ ಹಾಯೆನಿಸಿತ್ತು. ಸದ್ಯ ಅನಂತವಾಗಿ ಗಡಿಯಾರದ ಮಾಲಿಕನ ಜೊತೆ ತಪ್ಪಿತಲ್ಲ ಎಂದು. ಆದರೆ ಇದೀಗ ಅದೇ ಏಟು, ಗಂಟೆಯ ಸಾಮೀಪ್ಯದ ವ್ಯಕ್ತಿಯ ಸಾನಿಧ್ಯ ಪುನಃ ಅಶೋಕನಿಗೆ ಲಭಿಸಿದೆ. ಹೀಗಾಗಬಹುದೆಂದು ಅಶೋಕ ಕನಸು ಮನಸಿನಲ್ಲೂ ನೆನಸಿರಲಿಲ್ಲ. ಪುನಃ ಒಬ್ಬರನ್ನೊಬ್ಬರು ಅದೂ ಒಂಭತ್ತು ವರ್ಷಗಳ ನಂತರ ಸಂಧಿಸಿದ್ದು ಎಷ್ಟು ಆಕಸ್ಮಿಕ.

"ಏನು ನೀವು ದಿಲ್ಲಿ ನಿವಾಸಿಗಳೋ ಅಥವಾ ಕಲ್ಕತ್ತೆ ನಿವಾಸಿಗಳೋ?" ಅಶೋಕನಿಗೆ ನೆನಪಾಯ್ತು–ಹಿಂದೆಯೂ ಇದೇ ವ್ಯಕ್ತಿ ತನ್ನನ್ನು ಹೀಗೇ ಪ್ರಶ್ನಿಸಿದ್ದ. "ನಾನು ಇರೋದು ಕಲ್ಕತ್ತೆಯಲ್ಲೇ" ಅಶೋಕ ಉತ್ತರಿಸಿದ.

ಅವನ ಗಂಟಲಿನಿಂದ ಅವನಿಗರಿವಿಲ್ಲದಂತೆಯೇ ಸ್ವಾಭಾವಿಕ ಸಹಜ ಧ್ವನಿ ಹೊರಟಿತ್ತು. ಅಶೋಕ ತನ್ನನ್ನು ತಾನೇ ಗದರಿಕೊಂಡ, ಒಂದು ವೇಳೆ ಅವನು ನನ್ನನ್ನು ಗುರುತಿಸಿದ್ದರೆ ಏನು ಗತಿ?

ಆದರೆ ಎದುರಿನ ವ್ಯಕ್ತಿ ತನ್ನನ್ನ ಯಾಕೆ ಹೀಗೆ ದಿಟ್ಟಿಸಿ ನೋಡ್ತಿದಾನೆ. ಮುಖದಲ್ಲಿ ಕುತೂಹಲದ ಭಾವವಿದೆ. ಅಶೋಕನಿಗೆ ತನ್ನ ಹೃದಯದ ಬಡಿತ ಒಮ್ಮೆಗೆ ಜೋರಾದಂತೆ ಅನಿಸಿತು.

"ನೀವು ಸದ್ಯದಲ್ಲೇ ಯಾವುದಾದ್ರೂ ಚಿತ್ರ ಬರೆದಿದ್ದೀರಾ?" ಆತ ಪ್ರಶ್ನಿಸಿದ.

ಅಶೋಕನಿಗೆ ಧೈರ್ಯ ಬಂತು. 'ಸದ್ಯ ಈತನಿಂದ ನನ್ನನ್ನು ಹಿಡಿಯುವಂತಹ ಬುದ್ಧಿವಂತ ಕೆಲಸ ಸಾಧ್ಯವಿಲ್ಲ. ಈ ರೈಲಿನಲ್ಲಿ ಬೇಕಾದಷ್ಟು ಅನ್ಯ ಬಂಗಾಲಿ ಪ್ರಯಾಣಿಕರಿದ್ದಾರೆ. ಅದರಲ್ಲಿ ಯಾರು ಬೇಕಾದರೂ ಅಶೋಕನನ್ನು ಗುರುತಿಸಿಯೇ ಗುರುತಿಸುತ್ತಾರೆ. ಅಂದಮೇಲೆ ತನ್ನ ನಿಜ ಪರಿಚಯ ಈತನಿಗೆ ಮಾಡಿಕೊಟ್ಟರೆ ಹಾನಿ ಏನಿಲ್ಲ," ಎಂದು ಅಶೋಕ ಅಂದುಕೊಂಡ. ಇಂದು ಅಶೋಕ ಭೌಮಿಕ ತುಂಬಾ ಖ್ಯಾತಿ ಪಡೆದ ವ್ಯಕ್ತಿ. ಒಂಭತ್ತು ವರ್ಷದ ಹಿಂದೆ ನಡೆದ ಗಡಿಯಾರ ಕಳುವಿನ ಪ್ರಸಂಗವನ್ನು ನನ್ನ ಈಗಿನ ಪರಿಚಯ ಮಾಡಿಕೊಟ್ಟರೆ ಆತ ನನ್ನನ್ನು ಸಂಶಯದ ದೃಷ್ಟಿಯಿಂದ ನೋಡಲಿಕ್ಕಿಲ್ಲ.

"ನೀವು ಆ ಚಿತ್ರವನ್ನು ಎಲ್ಲಿ ನೋಡಿದಿರಿ?" ಅಶೋಕ ಆತನನ್ನೇ ಪುನಃ ವಿಚಾರಿಸಿದ.

"ನೀವು ಹಾಡೂ ಚೆನ್ನಾಗಿ ಹಾಡ್ತೀರ. ಅಲ್ಲವಾ?" ಆತ ಅಶೋಕನ ಪ್ರಶ್ನೆಗೆ ಉತ್ತರಿಸದೆ ಮರು ಪ್ರಶ್ನೆ ಮಾಡಿದ.

"ಹೌದು. ಆಗೊಮ್ಮೆ ಈಗೊಮ್ಮೆ ಹಾಡ್ತಾ ಇರ್ತೇನೆ."

ಅಶೋಕ ಹೇಳಿದ.

"ನಿಮ್ಮ ಹೆಸರು."

"ಅಶೋಕ ಭೌಮಿಕ."

"ಅಂದರೆ ಈಗಾಗ್ಲೇ, ನೀವು ಹಲವು ಸಲ ರೇಡಿಯೋದಲ್ಲಿ ಹಾಡಿದ್ದೀರ, ಅಲ್ವಾ? ಅದಕ್ಕೇ ನಿಮ್ಮನ್ನ ನೋಡಿದಾಗಲೇ ನನಗನಿಸಿತು, ಎಲ್ಲೋ ಗುರುತು ಇರೋ ಹಾಗಿದೆಯಲ್ಲಾ ಅಂತ. ನನ್ನ ಹೆಂಡತಿಯಂತೂ ನಿಮ್ಮ ಪರಮ ಭಕ್ತೆ. ಏನು, ಹಾಡಿನ ಪ್ರೋಗ್ರಾಂಗಾಗಿಯೇ ದಿಲ್ಲಿಗೆ ಪ್ರಯಾಣಿಸ್ತಾ ಇರೋ ಹಾಗಿದೆ ಅಂತ ಕಾಣುತ್ತೆ."

"ಹೌದು."

ಅಶೋಕ ತುಂಬಾ ಮಾತನಾಡದೆ ಬರೀ 'ಹೌದು' 'ಇಲ್ಲ' ಗಳಲ್ಲಿಯೇ ಸಮರ್ಪಕ ಉತ್ತರ ಎಲ್ಲಾ ಪ್ರಶ್ನೆಗಳಿಗೆ ನೀಡುತ್ತಿದ್ದ.

"ದಿಲ್ಲಿಯಲ್ಲಿ ಭೌಮಿಕ್ ಅಂತ ಒಬ್ರಿದಾರೆ. ಫೈನಾನ್ಸ್‌ನಲ್ಲಿ. ನನ್ನ ಜೊತೇಲೇ ಅವರು ಓದುತ್ತಾ ಇದ್ದರು. ನಿತೀನ್ ಭೌಮಿಕ್ ಅಂತ ಅವರೇನಾದ್ರೂ ನಿಮಗೆ ದೂರದ ಸಂಬಂಧವೆ?" ಆತ ಪ್ರಶ್ನಿಸಿದ.

ನಿತೀನ್ ಭೌಮಿಕ ಖಾಸಾ ತನ್ನ ದೊಡ್ಡಪ್ಪನ ಮಗ. ಅಶೋಕನಿಗೆ ಅಣ್ಣನಾಗ

ಬೇಕು. ಬಹಳ ಗಂಭೀರ ಹಾಗೂ ಕಟ್ಟುನಿಟ್ಟಿನ ಮನುಷ್ಯ ಆತ. ಆದರೆ ಅಶೋಕನಿಗೆ ಮಾತ್ರ ಆತ ಆತ್ಮೀಯ ಅಣ್ಣ.

"ಇಲ್ಲ ಅವರ್‍ಯಾರೋ ನನಗೆ ಗೊತ್ತಿಲ್ಲ ನಮ್ಮ ಪೈಕಿಯವರಲ್ಲ," ಅಶೋಕನಿಗೆ ಇಲ್ಲಿ ಸುಳ್ಳು ಹೇಳೋದರಲ್ಲಿಯೇ ಜಾಣತನವಿದೆ ಅಂತ ಅನ್ನಿಸಿತು. ಆ ವ್ಯಕ್ತಿ ಪುನಃ ಮಾತು ಮುಂದುವರಿಸಲಿಲ್ಲ. ಅಷ್ಟರಲ್ಲೇ ಊಟ ಬಂದಿದ್ದರಿಂದ ಆತನ ಪ್ರಶ್ನಮಾಲಿಕೆಯಿಂದ ಪಾರಾದೆನಲ್ಲಾ ಎಂದು ಅಶೋಕನಿಗೆ ಸಮಾಧಾನವಾಯ್ತು.

'ಚ' ತುಂಬಾ ಭೋಜನಪ್ರಿಯ. ಬಾಯಲ್ಲಿ ತುತ್ತು ಇಳಿಯಿತೆಂದರೆ ಮಾತಿಗೆ ಸಂಪೂರ್ಣ ವಿರಾಮ. ಅಶೋಕನಿಗೆ ತನ್ನ ಭಯ ಈಗ ಸ್ವಲ್ಪ ಕಡಿಮೆಯಾದಂತೆ ಅನಿಸಿತು. ಇನ್ನೂ ಇಪ್ಪತ್ತು ಘಂಟೆಗಳ ಪ್ರಯಾಣ ಬಾಕಿ ಇದೆ. ಮನುಷ್ಯನ ಸ್ಮೃತಿಭಂಡಾರ ತುಂಬಾ ಆಶ್ಚರ್ಯಕರವಾದದ್ದು, ಎಷ್ಟು ಬೇಗ ಸಂಕುಚಿತಗೊಳ್ಳುತ್ತೋ ಅಷ್ಟೇ ಬೇಗ ತೀಕ್ಷ್ಣ ಕೂಡಾ ಆಗಿಬಿಡುತ್ತೆ.

ಇವೆಲ್ಲ ಯೋಚಿಸುತ್ತಾ, ಅಶೋಕ ಸ್ಥಿರವಾಗಿ ಕುಳಿತುಕೊಂಡ. ಏನೊಂದು ಮಾತನಾಡದೆ ಬೇಗ ಊಟ ಮುಗಿಸಿ, ಮುಖದೆದುರು ಪುಸ್ತಕ ಅಡ್ಡವಾಗಿ ಇಟ್ಟುಕೊಂಡು ಹಾಗೇ ಮಲಗಿಕೊಂಡ. ಮೊದಲ ಅಧ್ಯಾಯ ಓದಿ ಮುಗಿಸಿ ನೋಡಿದಾಗ 'ಚ' ನಿದ್ದೆ ಮಾಡುತ್ತಲಿದ್ದ. ಆತ ಕೈಯಲ್ಲಿ ಪುಸ್ತಕ ಹಿಡಿದೇ ನಿದ್ದೆ ಮಾಡುತ್ತಲಿದ್ದ. ನಿದ್ದೆಯಲ್ಲಿರುವ ವ್ಯಕ್ತಿಯ ಉಸಿರಾಟ ಸಹಜವಾಗಿತ್ತು. ಅಶೋಕ ಸದ್ದು ಮಾಡದೆ ಕಿಟಕಿ ತೆಗೆದು ಹೊರಗಿನ ದೃಶ್ಯ ನೋಡಿದ. ಕಿಡಕಿಯ ದಪ್ಪ ಗಾಜನ್ನು ಬೇಧಿಸಿಕೊಂಡು ರೈಲಿನ ಶಬ್ದ ಒಳ ಬರುವಂತಿರಲಿಲ್ಲ. ಆದರೆ ಅದ್ಯಾರೋ ದೂರದಲ್ಲಿ, ರೈಲಿನಲ್ಲಿ, ಮೃದಂಗ ಬಾರಿಸುತ್ತಾ ಇದ್ದರು. ಮೃದಂಗದ ನಾದದೊಡನೆ 'ಚ'ನ ಗೊರಕೆ ಪಂದ್ಯ ಕಟ್ಟಿದಂತಿತ್ತು.

ಅಶೋಕನಿಗೆ ಬಹಳ ನಿಶ್ಚಿಂತೆ ಎನಿಸಿತು. ನಜರೂಲ್ ಗೀತೆಯ ಒಂದು ತುಣುಕು ತನಗೇ ತಾನು ಹಾಡಿಕೊಂಡು ನೋಡಿದ. ಅವನ ಧ್ವನಿ ಬೆಳಗಿನಷ್ಟು ಈಗ ಕೆಟ್ಟಿರಲಿಲ್ಲ. ಅವನ ಹಾಡು ಇದ್ದಕ್ಕಿದ್ದಂತೆಯೇ ನಿಂತಿತು. ಒಂದು ರೀತಿಯ ಭೀಕರ ಶಬ್ದ ಅವನ ಗಂಟಲೊಳಗಿತ್ತು. ಹಾಡು ಅರ್ಧಕ್ಕೇ ನಿಂತಿತು.

ಗಡಿಯಾರದ ಅಲಾರಾಮಿನ ಧ್ವನಿ.

ಅಶೋಕನ ಕೈಚೀಲದಿಂದ ಸ್ವಿಸ್ ಗಡಿಯಾರದ ಅಲಾರಾಮಿನ ಧ್ವನಿ. ಅಲಾರಾಮ್ ಇನ್ನೂ ಬಾರಿಸ್ತಾನೆ ಇದೆ. ಅಶೋಕನ ಕೈಕಾಲುಗಳೆರಡೂ ಒಮ್ಮೆಲ್ಲೇ ತಣ್ಣಗಾಯ್ತು. ಅವನ ದೇಹ ಮರಗಟ್ಟಿದಂತಾಯ್ತು. ಅಶೋಕನ ದೃಷ್ಟಿ 'ಚ'ನ ಕಡೆಯೇ ಇತ್ತು.

'ಚ' ನಿದ್ದೆಯಲ್ಲಿ ಸ್ವಲ್ಪ ಹೊರಳಿದೊಡನೆ, ಅಶೋಕನಿಗೆ ತುಂಬಾ ಭಯವಾಯ್ತು. ನಿದ್ದೆಯಲ್ಲೇ 'ಚ' ತನ್ನ ತಲೆ ದೆಸೆಗೆ ಇಟ್ಟಿದ್ದ ಲೋಟವನ್ನು ಕೆಡವಿದ್ದ. ಆತನ ಕಣ್ಣ ಮರೆ ಮಾಡಿದ್ದ ಕೈ ಸರಿಯಿತು.

"ಲೋಟ ಬಿತ್ತು ಅಂತ ಕಾಣುತ್ತೆ. ಸ್ವಲ್ಪ ಎತ್ತಿಡ್ತೀರಾ?" ತನ್ನಡೆಗೇ ನೋಡುತ್ತಿದ್ದ ಅಶೋಕನಿಗೆ 'ಚ' ಹೇಳಿದ. ಅಶೋಕ ಕೆಳಗೆ ಬಿದ್ದಿದ್ದ ಲೋಟವನ್ನು ಮೇಲೆತ್ತಿ ಇಡುತ್ತಿರುವಂತೆಯೇ ಅಲಾರಾಂ ನಿಂತಿತು. ಅಶೋಕ ಮೊದಲು ಲೋಟಕ್ಕೆ ನೀರು ಬಗ್ಗಿಸಿಕೊಂಡು ಗಟಗಟನೆ ಕುಡಿದ. ಅವನ ಗಂಟಲಿಗೆ ಹಾಯೆನಿಸಿತು.

ಹಜಾರೀಬಾಗ್ ರೋಡಿನ ಸ್ವಲ್ಪ ಮೊದಲು ಚಹ ಬಂತು. ಬೇಗನೆ ಎರಡು ಕಪ್ ಬಿಸಿ ಬಿಸಿ ಚಹ ಕುಡಿದ 'ಚ' ನಿಂದ ಯಾವ ರೀತಿಯ ಸೂಚನೆಯೂ ಬಾರದಿದ್ದಾಗ ಅವನಿಗೆ ಸ್ವಲ್ಪ ನೆಮ್ಮದಿ ಎನಿಸಿತು. ಒಂದು ಆಧುನಿಕ ಬಂಗಾಲಿ ಹಾಡನ್ನು ಗುಣಗುಣಿಸುತ್ತಾ ತನ್ನ ಮನದ ಅಶಾಂತಿಯನ್ನು ಕಡಿಮೆ ಮಾಡಿಕೊಳ್ಳಲು ಪ್ರಯತ್ನಿಸಿದ.

ಗಯಾದಲ್ಲಿ 'ಚ' ಎದ್ದು ತನ್ನ ಹಿಂದಿನ ಅಭ್ಯಾಸದಂತೆ, ತಿಂಡಿ ಕಟ್ಟಿಸಿಕೊಂಡು ಬಂದ. ತಿಂಡಿಯನ್ನು ಅಶೋಕನಿಗೂ ಕೊಟ್ಟು ತಾನೂ ಸ್ವಲ್ಪ ತಿಂದ. ರೈಲು ಹೊರಡುತ್ತಲೇ ಸೂರ್ಯ ಅಸ್ತಮಿಸಿದ. ಲೈಟು ಹಾಕುತ್ತ 'ಚ' ಅಶೋಕನಿಗೆ ಹೇಳಿದ, "ರೈಲು ಸ್ವಲ್ಪ ಲೇಟು ಅಂತ ಕಾಣುತ್ತೆ. ನಿಮ್ಮ ಗಡಿಯಾರದಲ್ಲಿ ಈಗ ಎಷ್ಟು ಗಂಟೆ?" ಪ್ರಪ್ರಥಮವಾಗಿ ಇದೇ ಮೊದಲು

ಅಶೋಕನಿಗೆ ಗೊತ್ತಾದದ್ದು 'ಚ'ನ ಬಳಿ ಗಡಿಯಾರ ಇಲ್ಲಾ ಅಂತ. ತನ್ನ ಗಡಿಯಾರದತ್ತ ದೃಷ್ಟಿ ಹೊರಳಿಸಿ ಅಶೋಕ ನುಡಿದ, "ಏಳೂ ಮೂವತ್ತೈದು. ಆದರೆ ರಾತ್ರಿ ಸಮಯ ಹೋಗೋದು ತಿಳಿಯಲ್ಲ." 'ಚ' ಹೇಳಿದ "ನನ್ನ ಗಡಿಯಾರ ಎಚ್.ಎಮ್.ಟಿ.ದು. ಇದು ಬೆಳಗ್ಗೆ ಕೂಡಾ ಸರಿಯಾದ ಸಮಯ ತೋರಿಸುತ್ತಾ ಇತ್ತು. ಆದರೆ ನಮ್ಮ ಕೆಲಸದಾಳು ಹಾಸಿಗೆ ಸುತ್ತಿಡುವಾಗ, ಗಡಿಯಾರ ಇಟ್ಟಿರೋದು ಗೊತ್ತಿಲ್ಲದೆ, ಹಾಸಿಗೆಯನ್ನ ಜೋರಾಗಿ ಒದರಿ ಬಿಟ್ಟ, ಜೋರಾಗಿ, ಗಡಿಯಾರ ನೆಲದ ಮೇಲೆ ಬಿದ್ದು ಕೆಟ್ಟುಹೋಯ್ತು."

ಅಶೋಕ ಏನೂ ಮಾತನಾಡದೆ ಸುಮ್ಮನೆ ಕೇಳುತ್ತಾ ಇದ್ದ. ಈಗ ನಿಜವಾಗಿ ಅವನಿಗೆ ಗಡಿಯಾರದ ಮಾತು ಹದಿನಾರಾಣೆ ಬೇಡದ ವಿಷಯ. "ನಿಮ್ಮದು ಯಾವ ಗಡಿಯಾರ?" 'ಚ' ಪ್ರಶ್ನಿಸಿದ "ನನ್ನದೂ ಎಚ್.ಎಮ್.ಟಿ.ನೇ." ಅಶೋಕ ಉತ್ತರಿಸಿದ.

"ಒಳ್ಳೇ ಸರ್ವೀಸ್ ಕೊಟ್ಟಿದೇಯಾ?"

"ಹೌದು", ಅಶೋಕ ಒಪ್ಪಿಕೊಂಡ.

'ಚ' ಬೇಸರದ ಧ್ವನಿಯಲ್ಲಿ ಹೇಳಿದ. "ಅದ್ಯಾಕೋ ನೋಡಿ ನನಗೂ ಗಡಿಯಾರಕ್ಕೂ ಎಂದೂ ಕೂಡಿ ಬಂದಿಲ್ಲ."

ಅಶೋಕ ನಿದ್ದೆ ಬಂದವನಂತೆ ಜೋರಾಗಿ ಆಕಳಿಸಿದ. ಒಮ್ಮೆಲೇ ತನ್ನ ಶ್ರವಣ ಶಕ್ತಿ ಕುಂಠಿತವಾಗಬಾರದೇ ಎಂದು ಅವನಿಗೆ ಅನ್ನಿಸಿತು. ಆದರೆ ಆ ರೀತಿ ಏನೂ ಆಗಲಿಲ್ಲ. ಅಶೋಕನಿಗೆ 'ಚ'ನ ಮಾತುಗಳು ಸರಿಯಾಗಿ ಪುನಃ ಕೇಳಿಸಿದವು.

"ಒಂದು ಸ್ವಿಸ್ ಗಡಿಯಾರ ನೋಡಿ, ಬಂಗಾರದ್ದು. 'ಟ್ರಾನ್ಸಿಸ್ಟರ್ ವಾಚ್'. ನನ್ನ ಒಬ್ಬ ಮಿತ್ರ ಜಿನೀವಾದಿಂದ ನನಗೆ ಉಡುಗೊರೆ ಅಂತ

ತೆಗೆದುಕೊಟ್ಟಿದ್ದ. ಅದನ್ನ ನಾನು ಒಂದು ತಿಂಗಳು ಕೂಡಾ ಉಪಯೋಗಿಸಿರಲಿಲ್ಲ. ರೈಲಿನಲ್ಲೇ ಒಂಬತ್ತು ವರ್ಷಗಳ ಕೆಳಗೆ ದಿಲ್ಲಿಗೆ ಹೊರಟಿದ್ದೆ. ನನ್ನ ಎದುರು ಮತ್ತೊಬ್ಬ ಪ್ರಯಾಣಿಕ. ಆತನೂ ಬಂಗಾಲಿಯೇ. ಈಗಿನ ಜನಕ್ಕೆ ಅದೇನು ಧೈರ್ಯ ನೋಡಿ. ನಾನು ಬಾತ್ ರೂಮಿಗೋ ಅಥವಾ ಇನ್ಯಾವದಕ್ಕೋ ನನ್ನ ಜಾಗ ಬಿಟ್ಟು ಎದ್ದು ಹೋಗಿದ್ದಾಗ ಸಮಯ ಸಾಧಿಸಿ ನನ್ನ ಗಡಿಯಾರವನ್ನ ಕಳ್ಳತನ ಮಾಡಿಬಿಟ್ಟಿದ್ದಾನೆ. ಆದರೆ ಅವನ ಮುಖ ನೋಡಿದ್ದರೆ ಕದ್ದಿರಬಹುದೂ ಎಂದು ಅನ್ನಿಸುತ್ತಿರಲಿಲ್ಲ. ನೋಡಿ ಅದಕ್ಕೇ ನನಗೆ ತುಂಬಾ ಬೇಜಾರಾಗಿ, ಅಂದಿನಿಂದ ನಾನು ರೈಲಿನಲ್ಲಿ ಪ್ರಯಾಣ ಮಾಡೋದೇ ಬಿಟ್ಟುಬಿಟ್ಟಿದ್ದೆ. ಈ ಸಲಾನೂ ನಾನು ವಿಮಾನದಲ್ಲೇ ಪ್ರಯಾಣ ಮಾಡೋಣ ಅಂತ ಇದ್ದೆ. ಪಾಳು ವಿಮಾನ ಚಾಲಕರ ಮುಷ್ಕರ ಶುರುವಾಗಿದೆ, ಅದಕ್ಕೋಸ್ಕರ ರೈಲಿನಲ್ಲೇ ಪ್ರಯಾಣ ಮಾಡಬೇಕಾಯ್ತು."

ಅಶೋಕನಿಗೆ ಬಾಯಿ ಒಣಗಿತು. 'ಚ' ನ ಇಷ್ಟೊಂದು ಮಾತು ಕೇಳಿಯೂ, ಪುನಃ ತಾನೇನೂ ಮಾತಾಡದೇ ಇದ್ದರೆ ತುಂಬಾ ಅಸ್ವಾಭಾವಿಕ ಅಂತ ಕಾಣುತ್ತೆ. ಅದೂ ಅಲ್ಲದೆ, ಸಂಶಯಕ್ಕೆ ಅಸ್ಪದ ಕೊಡುತ್ತೆ. ಪ್ರಾಣಾಂತಿಕ ಕಷ್ಟ. ಧೈರ್ಯ ಮಾಡಿ ಏನಾದರೂ ಹೇಳಲೇ ಬೇಕು ಎಂದು ಬಾಯಿ ತೆರೆದ.

"ನೀವು ಕಳ್ಳನನ್ನ ಹುಡುಕಲಿಲ್ಲವಾ?"

"ಹುಡುಕೋದು! ಹುಡುಕೋದು ಇನ್ನೆಲ್ಲಿ ಸ್ವಾಮಿ? ಒಂದು ವೇಳೆ ಹುಡುಕಿದರೂ ಅವನು ಸಿಗ್ತಾನಾ? ಆದರೂ ನನ್ನ ಎದುರಿನ ವ್ಯಕ್ತಿಯ ಮುಖವನ್ನ ನಾನು ಬಹಳ ದಿನಗಳಿಂದಲೂ ಜ್ಞಾಪಕದಲ್ಲಿಟ್ಟುಕೊಂಡಿದ್ದೇನೆ. ಆ ಅಸಾಮಿಗೆ ಬಿಳೀ ಬಣ್ಣ, ಮುಖದಲ್ಲಿ ಮೀಸೆ ಇದೆ. ಒಂದು ಪಾರ್ಶ್ವದಿಂದ ನೋಡಿದರೆ ಸ್ವಲ್ಪ ನಿಮ್ಮ ತರಹಾನೇ ಇದ್ದ ಅಂತ ಹೇಳಬಹುದು. ಒಂದು ವೇಳೆ ಪುನಃ ನಾನು ಅವನನ್ನ ಕಂಡರೆ, ಅವನು ಹುಟ್ಟಿದ್ದ ಅನ್ನೋದನ್ನೆ ಮರೆಯೋ ಹಾಗೆ ಮಾಡ್ತೀನಿ. ನಾನೂ ಒಂದು ಕಾಲದಲ್ಲಿ ಬಾಕ್ಸಿಂಗ್ ಕಲ್ತಿದ್ದೀನಿ. ಲೈಟ್ ಹೆವೀವೇಟ್ ಚಾಂಪಿಯನ್ ಕೂಡಾ ಆಗಿದ್ದೆ. ಅವನ ಅದೃಷ್ಟ ಅಂತ ಕಾಣುತ್ತೆ, ಪುನಃ ಅವನು ನನ್ನ ಎದುರು ಬಂದಿಲ್ಲ."

ಅಶೋಕನಿಗೆ ತಟ್ಟನೆ ತನ್ನೆದುರಿನ ವ್ಯಕ್ತಿಯ ಹೆಸರು ನೆನಪಾಯ್ತು ಚಕ್ರವರ್ತಿ ಹೌದು ಮೋಹನ ಚಕ್ರವರ್ತಿ. ಬಾಕ್ಸಿಂಗ್ ಹೆಸರು ಕೇಳಿದೊಡನೆಯೇ, ಅಶೋಕನಿಗೆ ಚಲನಚಿತ್ರಗಳಲ್ಲಿ ಹೆಸರು ತೋರಿಸುವಂತೆ, ತನ್ನೆದುರಿನ ವ್ಯಕ್ತಿಯ ಹೆಸರು ನೆನಪಿಗೆ ಬಂತು. ಹೌದು, ಹಿಂದೆ ಕೂಡ ಮೋಹನ ಚಕ್ರವರ್ತಿ ಬಾಕ್ಸಿಂಗ್ ಬಗ್ಗೆ ಬಹಳ ಮಾತನಾಡಿದ್ದ. ಆದರೂ ಅವನ ಹೆಸರು ನೆನಪಾದ್ರೇನು, ಅವನಂತೂ ಏನೂ ಅಪರಾಧ ಮಾಡಿಲ್ಲ. ನಿಜವಾದ ಅಪರಾಧಿ ಅಶೋಕ. ಆ ತನ್ನ ಅಪರಾಧದಿಂದಲೇ ಅವನು ಬಹಳ ಅಶಾಂತನಾಗಿದ್ದಾನೆ. ಈಗ ಒಂದು ವೇಳೆ ಎಲ್ಲವನ್ನೂ ಒಪ್ಪಿಕೊಂಡರೇನು? ಗಡಿಯಾರವನ್ನ ಅದರ ಮಾಲಿಕನಿಗೇ ಒಪ್ಪಿಸಿದರೆ? ಕೈಬೀಲ ಬಿಚ್ಚಿಡರೆ?


ತಕ್ಷಣ ಅಶೋಕನ ಒಳ ಧ್ವನಿ ನುಡಿಯಿತು. 'ಅಯ್ಯೋ ಹುಚ್ಚ ಏನು ಯೋಚಿಸುತ್ತಾ ಇದ್ದೀಯಾ? ನಿನ್ನ ನೀನೇ ಕಳ್ಳ ಅಂತ ಪರಿಚಯ ಮಾಡಿ ಕೊಡತ್ತೀಯಾ? ನೀನಿಂದು ಪ್ರಖ್ಯಾತ ಗಾಯಕ. 'ನಾನು ಪರರ ವಸ್ತುಗಳನ್ನ, ಅವರನ್ನ ಕೇಳದೆ ತೆಗೆಯೋತೀನಿ' ಅಂತ ಹೇಳುತ್ತೀಯಾ? ಒಂದು ವೇಳೆ ನೀನೀ ರೀತಿ ಹೇಳಿದರೆ ನಿನ್ನ ಖ್ಯಾತಿಯೆಲ್ಲಾ ಮಣ್ಣು ಪಾಲು ಆದಂತೆಯೇ ಸರಿ. ಇನ್ನು ಮುಂದೆ ನಿನ್ನ ಯಾರು ಹಾಡು ಹೇಳಲು ಕರೀತಾರೆ? ನಿನ್ನ ಭಕ್ತರು ನಿನ್ನ ಬಗ್ಗೆ ಏನು ತಿಳಿದುಕೊಳ್ಳಬಹುದು?

'ಹೌದು ಕಳ್ಳತನದ ಅಪಮಾನವನ್ನ ಸ್ವೀಕಾರ ಮಾಡಿಕೊಂಡರೂ ಪ್ರಯೋಜನವಿಲ್ಲ. ಮೋಹನ ಚಕ್ರವರ್ತಿ ದಿಟ್ಟಿಸಿ ನನ್ನನ್ನೆ ನೋಡುತ್ತಾ ಇದ್ದಾನೆ. ಇನ್ನೂ ದಿಲ್ಲಿ ಸೇರಲು ಹದಿನಾರು ಗಂಟೆಗಳಿವೆ. ಯಾವುದೋ ಒಂದು ವಿಷ ಗಳಿಗೆಯಲ್ಲಿ ಒಂದು ವೇಳೆ ಅವನು ನನ್ನ ಗುರುತಿಸಿದರೆ? ಮುಂದೆ ನನ್ನ ಗತಿ ಏನು? ಸಮಯ ಬೇಕಾದಷ್ಟಿದೆ. ಆದರೂ ಅವನಂತೂ ಅದೇ ವ್ಯಕ್ತಿ, ಇದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ. ಆತನ ತಲೆಗೂದಲೂ ಸ್ವಲ್ಪ ಸ್ವಲ್ಪವಾಗಿ ಬೆಳ್ಳಗಾಗ್ತಾ

ಇದೆ. ಗಲ್ಲ ಸ್ವಲ್ಪ ಒಳಹೋಗಿದೆ. ಕಣ್ಣಿಂದ ಕನ್ನಡಕ ತೆಗೆಯಲಾಗಿದೆ. ಮೋಹನ ಚಕ್ರವರ್ತಿ ನನ್ನನ್ನೇ ನೋಡುತ್ತಾ ಇದ್ದಾನೆ. ಅವನ ದೃಷ್ಟಿ ಬಹಳ ತೀಕ್ಷ್ಣವಾಗುತ್ತಾ ಇದೆ' ಎಂದು ಅಶೋಕನಿಗೆ ಅನ್ನಿಸಿತು. ಈಗ ಸುಮಾರು ಗಂಟೆ ಕಳೆದಿರಬೇಕು. ಅಶೋಕನಿಗೆ ಜ್ವರ ಬಂದಂತಾಯ್ತು. ಕಂಡಕ್ಟರ್‌ನನ್ನು ಕರೆದು ಅವನು ಇನ್ನೊಂದು ಕಂಬಳಿ ಇಸಿದುಕೊಂಡ. ಎರಡೂ ಕಂಬಳಿ ಜೋಡಿಸಿ ಹೊದ್ದುಕೊಂಡ. ಮೋಹನ ಚಕ್ರವರ್ತಿ ಎದ್ದು ಹೋಗಿ ಬಾಗಿಲು ಭದ್ರಪಡಿಸಿ ಬಂದ. ತನ್ನ ಜಾಗಕ್ಕೆ ಬಂದು ಮಲಗುವ ಮುನ್ನ ಅಶೋಕನ ಕಡೆ ನೋಡಿ ವಿಚಾರಿಸಿದ, "ನಿಮಗೆ ಅಸೌಖ್ಯ ಅಂತ ಕಾಣುತ್ತೆ. ನನ್ನ ಹತ್ತಿರ ಔಷಧಿ ಇದೆ. ಎರಡು ಗುಳಿಗೆ ತೊಗೊಳ್ಳಿ. ನಿಮಗೆ ಏರ್ ಕಂಡೀಷನ್ ಅಭ್ಯಾಸವಿಲ್ಲ ಅಂತ ಕಾಣುತ್ತೆ."

ಅಶೋಕ ಮೋಹನ ಚಕ್ರವರ್ತಿ ಕೊಟ್ಟ ಗುಳಿಗೆಗಳನ್ನು ನುಂಗಿ ನೀರು ಕುಡಿದ. ಒಂದು ವೇಳೆ ಗಡಿಯಾರ ಕದ್ದವನೆಂದು ತನ್ನನ್ನು ಹಿಡಿದರೂ ಅಸೌಖ್ಯದ ನೆವವಲ್ಲಾದರೂ ಕಠಿಣ ಶಿಕ್ಷೆ ವಿಧಿಸಲಿಕ್ಕಿಲ್ಲ ಎಂದು ಅಶೋಕ ಯೋಚಿಸಿದ. "ಇನ್ನೂ ಮೋಹನ ಚಕ್ರವರ್ತಿ ನನ್ನನ್ನು ಗುರುತಿಸಿಲ್ಲ. ನಾಳೆ ದಿಲ್ಲಿ ಸೇರೋ ಮೊದಲು ಹೇಗಾದ್ರು ಮಾಡಿ ಸ್ವಿಸ್ ಗಡಿಯಾರವನ್ನು ಅದರ ನಿಜವಾದ ಮಾಲಿಕನ ಪೆಟ್ಟಿಗೆಯ ಇತರ ವಸ್ತುಗಳೊಡನೆ ಸೇರಿಸಿಬಿಡಬೇಕು. ಒಂದು ವೇಳೆ ಸಾಧ್ಯವಾದರೆ ಮಧ್ಯ ರಾತ್ರಿಯೇ ಈ ಕೆಲಸ ಸಾಧಿಸಬೇಕು. ಆದರೆ ಒಂದು ವೇಳೆ ಜ್ವರ ಕಡಿಮೆಯಾಗದೇ ಇದ್ದರೆ. ಈ ಕಂಬಳಿಯ ಮರೆಯಲ್ಲಿ ಏನು ಮಾಡಲಿಕ್ಕೂ ಆಗುವುದಿಲ್ಲ.' ಈಗ ಅಶೋಕನ ಮೈ ಜೋರಾಗಿ ನಡುಗುತ್ತಾ ಇದೆ.

ಮೋಹನ ಚಕ್ರವರ್ತಿ ತನ್ನ ತಲೆ ಬದಿಯ ರೀಡಿಂಗ್ ಲ್ಯಾಂಪ್ ಉರಿಸಿಟ್ಟುಕೊಂಡು, ಕೈಯಲ್ಲಿ ಯಾವುದೋ ಕತೆ ಪುಸ್ತಕ ಹಿಡಿದಿದ್ದ. ಆದರೆ ಆತ ನಿಜವಾಗಿ ಪುಸ್ತಕ ಓದುತ್ತಿದ್ದನೋ ಅಥವಾ ಪುಟಗಳ ಮರೆಯಲ್ಲಿ ಬೇರೆ ಇನ್ನೇನಾದರೂ ಯೋಚಿಸುತ್ತಾ ಇದ್ದನೋ ತಿಳಿಯಲಿಲ್ಲ. ಪುಸ್ತಕವನ್ನೇ ಕೈಯಲ್ಲಿ ಹಿಡಿದಿದ್ದಾನೆ. ಆದರೆ ಒಮ್ಮೆಯಾದರೂ ಪುಟ ತಿರುಗಿಸಿಲ್ಲ. ಮೋಹನ ಚಕ್ರವರ್ತಿ ಓದುವುದನ್ನು ಬಿಟ್ಟು ಈಗ ಅಶೋಕನನ್ನೇ ನೋಡುತ್ತಾ ಇದ್ದಾನೆ. ತಕ್ಷಣ ಅಶೋಕ ತನ್ನ ಕಣ್ಣುಗಳನ್ನ ಮುಚ್ಚಿಕೊಂಡ. ಒಂದು ವೇಳೆ ಮೋಹನ ಚಕ್ರವರ್ತಿ ತನ್ನನ್ನು ನೋಡುತ್ತಾ ಇದ್ದಾನೋ ಇಲ್ಲವೋ ಎನ್ನುವುದನ್ನು ಖಚಿತಪಡಿಸಿಕೊಳ್ಳಲು ಅಶೋಕ ಸ್ವಲ್ಪವೇ ಸ್ವಲ್ಪ ಕಣ್ಣು ಬಿಟ್ಟು ನೋಡಿದ. ಅಶೋಕ ವಿದ್ಯುತ್ ಆಘಾತ ಆದವನಂತೆ ತನ್ನ ಕಣ್ಣುಗಳನ್ನು ತಕ್ಷಣ ಮುಚ್ಚಿಕೊಂಡ. ಇನ್ನೂ ಆತ ಇವನ ಕಡೆಯೇ ನೋಡುತ್ತಿದ್ದ. ರೈಲಿನ ಜೋರು ಶಬ್ದದೊಟ್ಟಿಗೆ ತನ್ನ ಹೃದಯದ ಬಡಿತವೂ ಸೇರಿಕೊಂಡಂತಿದೆ ಎಂದು ಅಶೋಕನಿಗೆ ಅನಿಸಿತು. ಕಚ್ ಎಂಬ ಶಬ್ದದೊಡನೆ ಆ ಕೋಣೆಯಲ್ಲಿ ಉರಿಯುತ್ತಿದ್ದ, ಏಕಮಾತ್ರ ದೀಪ ಕೂಡ ಆರಿಸಲ್ಪಟ್ಟಿತು ಎಂಬುದು ಕಣ್ಣು ಮುಚ್ಚಿಕೊಂಡೇ ಇದ್ದ ಅಶೋಕನಿಗೆ ತಿಳಿಯಿತು. ಈ ಸಲ ಬಹಳ ಧೈರ್ಯ ಮಾಡಿ ಒಂದು ಕಣ್ಣು ತೆರೆದ. ಹೊರಗಿನಿಂದ ಬಂದ ಮಂದ



"ಹೌದು ಈ ಸ್ವೆಟರ್‌ನ ಆಫೀಸ್‌ನಲ್ಲಿ ಹಾಕಿ ಮುಗಿಸ್ದೆ. ಮನೇಲಿ ವಿಪರೀತ ಕೆಲ್ಸ"

ಪ್ರಕಾಶದಲ್ಲಿ ಅಶೋಕ ಕಂಡದ್ದು, ಮೋಹನ ಚಕ್ರವರ್ತಿ ತನ್ನ ಪುಸ್ತಕವನ್ನು ಕೈಚೀಲದ ಮೇಲೇ ಇಟ್ಟಿದ್ದಾನೆ.

ಅಶೋಕ ಪುನಃ ತನ್ನ ಯೋಚನೆಯಲ್ಲಿ ಮುಳುಗಿದ. ಈಗ ಆತನ ಹೃದಯದ ಬಡಿತ ವೇಗ ಮೊದಲಿನಷ್ಟು ಜೋರಾಗಿರಲಿಲ್ಲ. ಕ್ರಮಶಃ ಸಹಜವಾಗುತ್ತ ಬಂದಿತ್ತು. ನಾಳೆ ಬೆಳಕು ಹರಿಯುವ ಮುನ್ನವೇ ಮೋಹನ ಚಕ್ರವರ್ತಿಯ ಟ್ರಾವಲಿಂಗ್ ಕ್ಲಾಕನ್ನು ತನ್ನ ಬ್ಯಾಗಿನಿಂದ ಅವನ ಪೆಟ್ಟಿಗೆಗೆ ರವಾನಿಸಬೇಕು. ಸ್ವಲ್ಪ ಹೊತ್ತಿನ ಮೊದಲೇ ಅಶೋಕ ನೋಡಿದ್ದ ಮೋಹನ್ ಚಕ್ರವರ್ತಿ ತನ್ನ ಸ್ಲೀಪಿಂಗ್–ಸೂಟ್ ಪೆಟ್ಟಿಗೆಯಿಂದ ತೆಗೆದು, ಪೆಟ್ಟಿಗೆಯ ಬೀಗ ಹಾಕಿರಲಿಲ್ಲ. ಅಶೋಕನ ಮೈ ಚಳಿ ಈಗ ಬಿಟ್ಟಿತ್ತು. ನಡುಕವೂ ಈಗ ಸಂಪೂರ್ಣ ನಿಂತಿದೆ. ಮೋಹನ ಚಕ್ರವರ್ತಿ ಕೊಟ್ಟ ಔಷಧಿ ಚೆನ್ನಾಗಿ ಕೆಲಸ ಮಾಡಿದೆ. ಯಾವ ಔಷಧಿ ಕೊಟ್ಟನೋ ಏನೋ ಮಹಾರಾಯ ಅದರ ಹೆಸರನ್ನ ಕೇಳಿ ತಿಳಿದು ಕೊಳ್ಳಲು ಮರೆತೇಹೋಯಿತು. ನಾಳೆ ದಿಲ್ಲಿಯ ರಸಿಕರ ಮನವನ್ನ ನೋಯಿಸಬಾರದು ಎಂಬ ಉದ್ದೇಶದಿಂದ ಅವನು ಗುಳಿಗೆಯನ್ನು ಸೇವಿಸಿದ್ದ.

'ಇಲ್ಲಿ ನಿನ್ನ ಅಸ್ವಸ್ಥಕ್ಕೆ ಕಾರಣ ಆ ಗಡಿಯಾರದ ಶಬ್ದ' ಎಂದಿತು ಅಶೋಕನ ಮನಸ್ಸು. ಅವನು ಯೋಚಿಸುತ್ತಿದ್ದಂತೆಯೇ ನಿದ್ದೆ ಆವರಿಸಿತು.

ಚಹದ ತಟ್ಟೆ ಕೆಳಗಿಟ್ಟ ಶಬ್ದದಿಂದ ಅಶೋಕನ ನಿದ್ರೆಗೆ ಭಂಗವಾಯ್ತು. ಕಂಡಕ್ಟರ್ ಚಹ ತೆಗೆದುಕೊಂಡು ಬಂದಿದ್ದ. ಚಹದ ಜೊತೆ ಫಲಹಾರವೂ ಇತ್ತು. ಚಹ ಬ್ರೆಡ್ ಹಾಗೂ ಆಮ್ಲೆಟ್. ನಿನ್ನೆಯೆಲ್ಲ ಜ್ವರದಿಂದ ಮೈ ಸುಡುತ್ತಿತ್ತು. ತಿನ್ನಲೋ ಬೇಡವೋ, ಅಶೋಕ ಯೋಚಿಸಿದ. ಮೈಯೇನೋ ತುಂಬಾ ಹಗುರವಾಗಿತ್ತು. ಜ್ವರವಿರುವ ಲಕ್ಷಣವೇನಿರಲಿಲ್ಲ. ಮೋಹನ ಚಕ್ರವರ್ತಿ, ಪಾಪ, ಒಳ್ಳೇ ಔಷಧಿ ಕೊಟ್ಟಿದ್ದಾನೆ. ಒಂದೇ ರಾತ್ರಿಯಲ್ಲಿ ಜ್ವರ ಇಳಿದುಹೋಗಿದೆ. ಅಶೋಕನ ಮನದಲ್ಲಿ ಮೋಹನ ಚಕ್ರವರ್ತಿಯ ಬಗ್ಗೆ ಕೃತಜ್ಞತೆಯ ಭಾವನೆ ಮೂಡಿತು. ಅಂದ ಹಾಗೆ ಎದುರಿನ ಮೋಹನ ಚಕ್ರವರ್ತಿ ಎಲ್ಲಿ? ಕಾಣಿಸುತ್ತಾ ಇಲ್ಲವಲ್ಲ. ಬಾತ್ರೂಮ್‌ಗೆ ಹೋಗಿರಬೇಕು. ಕಂಡಕ್ಟರ್ ಹೊರಟು ಹೋದ ಮೇಲೆ ಅಶೋಕ ತಕ್ಷಣ ತನ್ನ ಜಾಗದಿಂದ ಎದ್ದು ಕಾರಿಡಾರಿನಲ್ಲಿ ಯಾರೂ ನಿಂತಿಲ್ಲ ಎಂಬುದನ್ನು ಖಚಿತ ಪಡಿಸಿಕೊಂಡ. ಮೋಹನ್ ಚಕ್ರವರ್ತಿ ಬಾತ್ರೂಮಿಗೆ ಹೋಗಿ ಬಹಳ ಹೊತ್ತಾಗಿದೆ, ಒಳ್ಳೆ ಸುಸಮಯ. ಬಂಗಾರದಂಥ ಅವಕಾಶವನ್ನು ತಪ್ಪಿಸಿಕೊಳ್ಳಬಾರದು.

ಅಶೋಕ ಅವಕಾಶವನ್ನೇನೂ ಉಪಯೋಗಿಸಿದ. ಆದರೆ ತನ್ನ ಕಾರ್ಯದಲ್ಲಿ ಸಫಲನಾಗಲಿಲ್ಲ. ತನ್ನ ಕೈಚೀಲದಿಂದ ಗಡಿಯಾರ ತೆಗೆದು ಮೋಹನ ಚಕ್ರವರ್ತಿಯ ಪೆಟ್ಟಿಗೆಯ ಚೈನು ತೆಗೆಯುತ್ತಿರುವಷ್ಟರಲ್ಲಿಯೇ ಕೈಯಲ್ಲಿ ಕ್ಷೌರದ ಸಾಮಾನಿನ ಸಮೇತ ಮೋಹನ ಚಕ್ರವರ್ತಿ ಒಳಬಂದ. ಅಶೋಕ ಭಾವಿಕನಿಗೆ ಒಮ್ಮೆಲೇ ವಿದ್ಯುತ್ ಸಂಚಾರವಾದಂತಾಗಿ ಎದ್ದು ನಿಂತು ತನ್ನ ಎಡ ಮುಷ್ಟಿಯಲ್ಲಿ ಗಡಿಯಾರವನ್ನ ಬಚ್ಚಿಟ್ಟುಕೊಂಡ.

"ಹೇಗಿದ್ದೀರಾ ಸ್ವಾಮಿ? ನಿದ್ದೆ ಸರಿಯಾಗಿ ಬಂತೇ? ಈಗ ಜ್ವರ ಇಲ್ಲಾಂತ ಕಾಣುತ್ತೆ." ಮೋಹನ ಚಕ್ರವರ್ತಿ ವಿಚಾರಿಸಿದ.

"ಹುಷಾರಾಗಿದ್ದೀನಿ" ಅಶೋಕ ಉತ್ತರಿಸಿದ. ಈಗಂತೂ ಅವನು ನಿಜವಾಗಿ ತನ್ನನ್ನು ಗುರುತಿಸಿರಬೇಕೆಂದು ಅಶೋಕ ಮನದಲ್ಲೇ ತರ್ಕಿಸುತ್ತಿದ್ದ. ಅಶೋಕನ ಮುಖ ಬಿಳಿಚಿಕೊಂಡಿತು. ಮೆಲ್ಲನೆ ಅವನು ತನ್ನ ಮುಷ್ಟಿಯನ್ನು ಸಡಿಲಿಸಿದ, ಗಡಿಯಾರವನ್ನು ಮೋಹನ ಚಕ್ರವರ್ತಿಯ ಎದುರು ಹಿಡಿದ. ಮೋಹನ ಚಕ್ರವರ್ತಿ ತನ್ನ ಕ್ಷೌರದ ಸಾಮಾನನ್ನು ಎತ್ತಿಡುತ್ತಾ ಹಾಗೇ ಅವಾಕ್ಕಾಗಿ ನಿಂತುಬಿಟ್ಟ. ಅಶೋಕನೇ ಈಗ ಮಾತನಾಡಿದ. "ನೀವು ಈ ಒಂಭತ್ತು ವರ್ಷಗಳಿಂದ ಹುಡುಕುತ್ತಿರುವ ವ್ಯಕ್ತಿ ನಾನೇ. ಈಗ ದೊಡ್ಡವನಾಗಿದ್ದೇನೆ. ಮೀಸೆ ಕತ್ತರಿಸಿದ್ದೇನೆ. ಹಾಗೂ ಕನ್ನಡಕ ಬೇರೆ ಹಾಕಿಕೊಳ್ಳುತ್ತೇನೆ. ನಾನಾಗ ಪಾಟ್ನಾಗೆ ಹೊರಟಿದ್ದೆ, ನೀವು ದಿಲ್ಲಿಗೆ. ಸರಿಯಾಗಿ ಅರವತ್ನಾಲ್ಕರಲ್ಲಿ, ಒಬ್ಬ ರೈಲಿನ ಕೆಳಗೆ ಬಿದ್ದು ಸತ್ತಿದ್ದ, ನೀವು ಅದನ್ನ ನೋಡಿಕೊಂಡು ಬರಲು ರೈಲಿನಿಂದ ಇಳಿದು

ಹೋಗಿದ್ದೀರಿ. ಆಗ ನಾನು ಕಳುವು ಮಾಡಿದೆ."

ಮೋಹನ ಚಕ್ರವರ್ತಿಯ ದೃಷ್ಟಿ ಈಗ ಗಡಿಯಾರದಿಂದ ಅಶೋಕನ ಕಡೆಗೆ ಹೊರಳಿತು. ಮಾತಾಡಬೇಕೆಂದುಕೊಂಡ ಚಕ್ರವರ್ತಿಯ ಬಾಯಿಂದ ಏನೂ ಶಬ್ದ ಹೊರಡಲಿಲ್ಲ. ಅಶೋಕ ತನ್ನ ಮಾತನ್ನ ಮುಂದುವರೆಸಿದ.

"ನೋಡಿ ಮೋಹನ್, ನಿಜವಾಗಿ ನೋಡಿದರೆ ಈ ರೀತಿ ಕಳ್ಳತನ ಮಾಡೋದು ನನ್ನ-ಗೊಂದು ರೋಗ. ನಾನು ನಿಜವಾಗಿ ಇತರ ಕಳ್ಳರಂತೆ ಅಲ್ಲ. ಡಾಕ್ಟರ್‌ಗಳು ಕೂಡ ಈ ರೋಗಕ್ಕೆ ಒಂದು ಹೆಸರಿಟ್ಟಿದ್ದಾರೆ. ಈಗ ಸದ್ಯಕ್ಕೆ ನನಗೆ ನೆನಪಾಗ್ತಾ ಇಲ್ಲ. ಆದರೆ ನಾನು ಈಗ ನಾರ್ಮಲ್ ಆಗಿದ್ದೀನಿ. ನಿಮ್ಮ ಗಡಿಯಾರವನ್ನು ನಾನು ಇವತ್ತಿನವರೆಗೂ ಉಪಯೋಗಿಸಿದ್ದೇನೆ. ಇಂದೂ ಅದು ನನ್ನೊಡನೆಯೇ ಇತ್ತು. ಆಕಸ್ಮಿಕವಾಗಿ ಇಂದು ನಿಮ್ಮನ್ನು ನೋಡಿ ನನ್ನ ಮನದಲ್ಲೇನೋ ಅಪೂರ್ವ ಬದಲಾವಣೆ-ಯಾಯ್ತು. ಒಂದು ತರಹ ಪವಾಡ. ನೀವು ದೊಡ್ಡ ಮನಸ್ಸು ಮಾಡಿ ನನ್ನ ಕ್ಷಮಿಸುತ್ತೀರಿ ಅಂತ ಭಾವಿಸಿದ್ದೇನೆ."

ಮೋಹನ ಚಕ್ರವರ್ತಿ ಕೇವಲ, ಧನ್ಯವಾದ ಮಾತ್ರ ಹೇಳಿದ. ಇಂದು ಕಳುವಾದ ಗಡಿಯಾರ ಪುನಃ ಒಂಭತ್ತು ವರ್ಷಗಳ ನಂತರ ಅವನ ಬಳಿ ಹಿಂತಿರುಗಿ ಬಂದಿದೆ. ವಿವೇಚನಾಮೂಢನಾಗಿ ಆತ ಅದನ್ನು ಕೈಯಲ್ಲಿ ಹಿಡಿದು ಇನ್ನೂ ನಿಂತೇ ಇದ್ದ. ಅಶೋಕ ತನ್ನ ಕೈಚೀಲದಿಂದ ತನ್ನ ಹಲ್ಲುಜ್ಜುವ ಬ್ರಷ್, ಪೇಸ್ಟ್, ಕ್ಷೌರದ ಸಾಮಾನು ಎಲ್ಲ ತೆಗೆದುಕೊಂಡು ಬಾತ್ ರೂಮಿನ ಕಡೆ ನಡೆದ. ಬಾತ್‌ರೂಮಿನ ಬಾಗಿಲನ್ನು ಹಾಕಿಕೊಂಡಾಗ ತನ್ನಷ್ಟಕ್ಕೆ ತಾನೇ ಅವನ ಬಾಯಿಂದ ನಜರೂಲ್‌ನ ಗೀತೆಯ ಸಾಲು ಹೊರಟಿತು. ಅಶೋಕನಿಗೆ ತನ್ನ ಗಂಟಲಿನ ಸಹಜತನನ್ನು ಹಿಂತಿರುಗಿ ಪಡೆದಂತೆ ಅನಿಸಿತು.

ಅಶೋಕನಿಗೆ ಫೈನಾನ್ಸರ್ ಎನ್. ಸಿ. ಭೌಮಿಕರನ್ನ ಟೆಲಿಫೋನಿನಲ್ಲಿ ಸಂಪರ್ಕಿಸಲು ಬಹುಶಃ ಮೂರು ನಿಮಿಷಗಳೇ ಹಿಡಿದವು. ಆಚೆಯಿಂದ ತೀರ ಪರಿಚಿತ ಧ್ವನಿ ಕೇಳಿ ಬಂತು. "ಹಲೋ ನಾನು ಅಶೋಕ ಮಾತನಾಡುತ್ತಾ ಇರುವುದು." ನಿತೀನ್‌ನ ಧ್ವನಿ. ಪುನಃ "ಅಗಲೇ ನೀನು ದಿಲ್ಲಿಗೆ ಬಂದಾಯ್ತೋ? ಏನಪ್ಪಾ ಬಹಳ ದೊಡ್ಡ ಮನುಷ್ಯ ಆಗಿಬಿಟ್ಟಿದ್ದಿಯಾ? ಏನು ಸಮಾಚಾರ? ಏನಾದಿ 'ಮೋಹನ್ ಚಕ್ರವರ್ತಿ ಗೊತ್ತಾ' ಅಂತ ಕೇಳ್ತಾ ಇದ್ದೀಯಾ? ಅದೇ ನನ್ನ ಜೊತೆ ಓತ್ತಾ ಇದ್ದನಲ್ಲ. ಹೌದು ಅದೇ ಬಾಕ್ಸಿಂಗ್ ಚಾಂಪಿಯನ್. ಓಹೋ ನನಗವನ ಪರಿಚಯ ಚೆನ್ನಾಗಿದೆ. ಆ ಕಳ್ಳನ್ನ ಮರೆಯೋಕಾಗುತ್ತಾ?"

ಅಶೋಕ ಕೇಳಿದ, "ಏನೆಂದೆ ಕಳ್ಳ?" ನಿತೀನ್ ಉತ್ತರಿಸಿದ, "ಹೌದು ಕಳ್ಳ. ಆದರೆ ಬೇರೆ ಕಳ್ಳರಂತಲ್ಲ. ಆದರೂ ಬೇರೆಯವರ ಸಾಮಾನು ಕದೀತಾನೆ. ಪಾಪ ಅವನಿಗೊಂದು ರೋಗ. ಬೇರೆಯವರ ಪೆನ್ನು, ಕಾಮನ್ ರೂಮಿನ ಟೇಬಲ್ ಟೆನ್ನಿಸ್ ಬ್ಯಾಟ್. ದೊಡ್ಡ ಶ್ರೀಮಂತ ಪಾಪ. ಅವನಿಗೆ ಆ ಖಾಯಿಲೆಯಿಂದ ಮುಕ್ತಿ ದೊರಕಿಲ್ಲ."

ಅಶೋಕ ಕೇಳಿದ "ರೋಗ?"

ನಿತೀನನ ಧ್ವನಿ ಬಂತು. "ಹೌದು ಕಳ್ಳತನ ಮಾಡೋ ರೋಗ, ನಿನಗೆ ಗೊತ್ತಿಲ್ವೆ ಕ್ಲೆಪ್ಟೋಮನಿಯಾ."

ಟೆಲಿಫೋನ್ ಕೆಳಗಿಟ್ಟು ಅಶೋಕ ತನ್ನ ಹೋಟೆಲಿನ ಕೋಣೆಗೆ ಹಿಂತಿರುಗಿದ. ಏನೋ ಸಾಮಾನು ತೆಗೆಯಲು ತನ್ನ ಸೂಟ್‌ಕೇಸಿನ ತೆರೆದ ಬಾಗಿಲು ತೆರೆದು ನೋಡುತ್ತಿದ್ದಂತೆಯೇ ಅವನಿಗೆ ತನ್ನ ಕೆಲವು ಸಾಮಾನು ಕಾಣೆಯಾಗಿರುವಂತೆ ಕಂಡಿತು. ಆತನ ಗಮನ ಸೆಳೆದದ್ದು, ತನ್ನ ಫಾರಿನ್ ಸಿಗರೇಟ್ ಡಬ್ಬ, ಜಪಾನಿನ ಬೈನಾಕ್ಯುಲರ್ ಇನ್ನೂ ಹಲವು ಸಾಮಾನುಗಳು.

ಅವನಿಗೆ ನೀತೀನನ ಮಾತು ನೆನಪಾಯ್ತು, 'ಅದು ರೋಗ. ಕ್ಲೆಪ್ಟೋಮನಿಯಾ ಅಂತ ಹೇಳ್ತಾರೆ.'

ಅಶೋಕ ತನಗೇ ಹೇಳಿಕೊಂಡ: "ಕ್ಲೆಪ್ಟೋಮನಿಯಾ." ✡

****

ಅಭಿಜಾತ ಶಿಲ್ಪಿ ವರ್ಖೇಡಿಯವರು



'ಜೀವಿ' ಕುಲಕರ್ಣಿ

ನನ್ನ ಮಿತ್ರರೂ ವಯೋವೃದ್ಧರೂ ಅಭಿಜಾತ ಶಿಲ್ಪಿಗಳೂ ಚಿತ್ರಕಾರರೂ ಆದ ಶ್ರೀ ಗುರುರಾಜ ವರ್ಖೇಡಿಯವರ ಪರಿಚಯ ಲೇಖನವನ್ನು ಬರೆಯುವಾಗ ಎಲ್ಲಿ ಪ್ರಾರಂಭಿಸಬೇಕು ಎಲ್ಲಿ ಮುಕ್ತಾಯಗೊಳಿಸಬೇಕೆಂಬುದೇ ಸಮಸ್ಯೆಯಾಗಿದೆ. ಅವರನ್ನು ನೂರಾರು ಸಲ ಕಂಡಿದ್ದೇನೆ, ಹಲವರು ಸಾಹಿತಿಗಳ, ಗಣ್ಯ ಮಿತ್ರರ ಪರಿಚಯ ಮಾಡಿಕೊಟ್ಟಿದ್ದೇನೆ. ಹೀಗಾಗಿ ನೂರಾರು ಘಟನೆಗಳು ಸ್ಮೃತಿಪಟಲದಲ್ಲಿ ಸುಳಿದು ಹೋಗುತ್ತವೆ. ಮುದವೀಡು ಕೃಷ್ಣರಾಯರು, ಕೈಲಾಸಂ, ಶ್ರೀರಂಗ, ಬೇಂದ್ರೆ, ಗೋವಿಂದ ಪೈ, ವಿಶ್ವೇಶ್ವರಯ್ಯ ಮುಂತಾದ ಗಣ್ಯ ಕನ್ನಡಿಗರ ಶಿಲ್ಪಕೃತಿ ನಿರ್ಮಿಸಿದ್ದಾರೆ. ಅವರ ಇತ್ತೀಚಿನ ಶಿಲ್ಪಕೃತಿ ಕವಿ ಕುವೆಂಪು ಅವರ ಪ್ರತಿಮೆ (bust) ಜೂನ್ ೭೯ರಲ್ಲಿ ತಯಾರಿಸಿದ್ದು.

ಕುವೆಂಪು ಪ್ರತಿಮೆಯನ್ನು ಕೈಕೊಳ್ಳುವ ಆಶೆ. ವರ್ಖೇಡಿಯವರಿಗೆ ಅನೇಕ ವರ್ಷಗಳಿಂದ ಇತ್ತು. ಅವರ ಆಸೆಯನ್ನು ನಾನು ದಿಲ್ಲಿಯ ಸಾಹಿತ್ಯ ಸಮ್ಮೇಲನದಲ್ಲಿ ಜಿ. ನಾರಾಯಣರ ಮುಂದೆ ಪ್ರಸ್ತಾಪಿಸಿದ್ದೆ. ಜಿ. ನಾರಾಯಣ, ತಿಪ್ಪೇಸ್ವಾಮಿ, ಹಿ. ಮ. ನಾಗಯ್ಯ ಇವರೊಂದಿಗೆ 'ಯುಥ್ ಹಾಸ್ಟೆಲ್'ನಲ್ಲಿ ಇರುವ ಸುಯೋಗ ನನಗೆ ಒದಗಿತ್ತು. ಪರಿಷತ್ತಿನವರು ವರ್ಖೇಡಿಯವರ ಕೆಲ ಕೃತಿಗಳನ್ನು ತಮ್ಮಲ್ಲಿ ಇಡುವುದಾಗಿಯೂ, ತಾವು ಕುವೆಂಪು ಪ್ರತಿಮೆ ತಯಾರಿಸಲು ಎಲ್ಲ ಅನುಕೂಲಗಳನ್ನು ಒದಗಿಸುವುದಾಗಿಯೂ ನಾರಾಯಣರು ಆಶ್ವಾಸನ ಕೊಟ್ಟಿದ್ದರು.

ಕಳೆದ ವರ್ಷ ಡಿಸೆಂಬರಿನಲ್ಲಿ ಮುಂಬೈಯಲ್ಲಿ ಸಾಹಿತ್ಯ ಸಮ್ಮೇಲನ (ಜಿಲ್ಲಾ ಮಟ್ಟದ್ದು) ನಡೆದಾಗ ಹಂ. ಪ. ನಾಗರಾಜಯ್ಯ ಬಂದಿದ್ದರು. ಆಗ ಅವರನ್ನು ವರ್ಖೇಡಿಯವರ ಮನೆಗೆ ಕರೆದುಕೊಂಡು ಹೋದೆ. ಅವರಲ್ಲಿರುವ ಪ್ರತಿಮೆಗಳನ್ನು ನೋಡಿ ಸಂತೋಷಗೊಂಡು ೭೯ ಜೂನ್ ತಿಂಗಳಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ವರ್ಖೇಡಿಯವರ ಸತ್ಕಾರ ಏರ್ಪಡಿಸಿದರು. ಮೈಸೂರಲ್ಲಿ ಕುವೆಂಪು–ಪ್ರತಿಮೆಯ ನಿರ್ಮಾಣಕ್ಕೆ ಅನುಕೂಲತೆ. ಒದಗಿಸಿದರು.



ಮುದವೀಡು ಕೃಷ್ಣರಾಯರು


ವರ್ಖೇಡಿಯವರ ಜೀವನದಲ್ಲಿಯ ಅವಿಸ್ಮರಣೀಯ ಅನುಭವ ಮಹಾಕವಿಗಳ ಸಂದರ್ಶನವಾಗಿತ್ತು. ಶನಿವಾರ ೩೦ ಜೂನ್ ೧೯೭೯ರಂದು ಕುವೆಂಪು ಮೊದಲನೆಯ ಸಿಟ್ಟಿಂಗ್ ಕೊಟ್ಟರು. ಹಾ. ಮಾ. ನಾಯಕರು ಮಾನಸಗಂಗೋತ್ರಿಯ ಅತಿಥಿಗೃಹದಲ್ಲಿ ಉಳಿದುಕೊಳ್ಳುವ ಏರ್ಪಾಡು ಮಾಡಿದ್ದರು. ಪಿ. ಆರ್. ತಿಪ್ಪೇಸ್ವಾಮಿಯವರು ಕಲಾವಿದರಿಗೆ ಬೇಕಾಗುವ ಎಲ್ಲ ಸಲಕರಣೆಗಳ ಅನುಕೂಲತೆ ಒದಗಿಸುವ ಕಾರ್ಯದಲ್ಲಿ ತತ್ಪರರಾಗಿದ್ದರು. ಮೊದಲು ಜೇಡಿ ಮಣ್ಣಿನಲ್ಲಿ ಕುವೆಂಪು ಅವರ ಪ್ರತಿಮೆ ನಿರ್ಮಿಸಲಾಯಿತು. ಇದಕ್ಕೆ ನಾಲ್ಕು ದಿನ ತಾಗಿದವು. ನಂತರ ಪ್ಲಾಸ್ಟರ್ ಮಾಡೆಲ್ ತಯಾರಿಸಲಾಯಿತು. ಜುಲೈ ೮ಕ್ಕೆ ಈ ಕೆಲಸ ಮುಗಿಯಿತು. ಕುವೆಂಪು ಅವರ ಸನ್ನಿಧಾನದಲ್ಲಿ ಕಳೆದ ಎಂಟು ದಿನಗಳ ಬಗ್ಗೆ ವರ್ಖೇಡಿಯವರು ಹೀಗೆಂದರು: "ಮೊದಲನೆಯ ದಿನ ಕುವೆಂಪು ಅವರೊಡನೆ [illegible] ಮಾತಾಡಲಿಲ್ಲ. ನನಗೆ ಭಯ ಹಾಗೂ ಭಕ್ತಿ. ನಂತರ ಅನೇಕ ವಿಷಯ ಚರ್ಚಿಸಿದೆ. ಅವರ ಅಂತಃಕರಣದಿಂದ ಹೃದಯ ಉಕ್ಕಿಬಂತು. ನನ್ನ ಕೃತಿ ನಡೆದಾಗ ಅವರ ಮನೆಯವರೆಲ್ಲ ಬಹಳೇ ಆತ್ಮೀಯತೆಯಿಂದ ನಡೆದುಕೊಂಡರು. ಕೊನೆಯ ದಿನಗಳಲ್ಲಿ ಪ್ಲಾಸ್ಟರ್ ಮಾಡೆಲ್ ಕೆಲಸ ರಾತ್ರಿ ೧೧ ಗಂಟೆಯವರೆಗೂ ನಡೆಯುತ್ತಿತ್ತು. ಆಗ ಪೂರ್ಣಚಂದ್ರ ತೇಜಸ್ವಿಯವರು ನಮ್ಮನ್ನು ಹಾಸ್ಟೆಲ್ಲಿಗೆ ಬಿಡಲು ಬರುತ್ತಿದ್ದರು." ಕುವೆಂಪು ಕೊಟ್ಟ ಹಲವಾರು ಪುಸ್ತಕ ತೋರಿಸಿದರು. ಅದರಲ್ಲಿ 'ಶ್ರೀ ರಾಮಾಯಣ ದರ್ಶನಂ' ಮಹತ್ವದದ್ದು, 'ಶ್ರೀ ಗುರುರಾಜ ಬಾಲಕೃಷ್ಣ ವರ್ಖೇಡಿ ಅವರಿಗೆ ಗೌರವ ಪೂರ್ವಕವಂದನೆಗಳೊಡನೆ – ಕುವೆಂಪು' ಎಂದು ಮುತ್ತಿನಂತಹ ಅಕ್ಷರದಲ್ಲಿ ಕುವೆಂಪು ಬರೆದದ್ದು ನೋಡಿ ನನಗೆ ಬಹಳೇ ಸಂತೋಷವಾಯ್ತು. ವರ್ಖೇಡಿಯವರೆಂದರು, "ಇದೆಲ್ಲ credit ನಿಮಗೆ" ಎಂದು. ನಾನೆಂದೆ, "ನಾನು ಕವಿ ಕುವೆಂಪು ಅವರನ್ನು ಇನ್ನೂ ಕಂಡಿಲ್ಲ. ಅವರ ಭೆಟ್ಟಿಯಾಗಬೇಕಾದರೆ ನಿಮ್ಮಿಂದ ಪರಿಚಯಪತ್ರ ಒಯ್ಯಬೇಕಾಗುವುದು." ಆಗ ಕಲಾವಿದರು ಹೊಟ್ಟೆತುಂಬ ನಕ್ಕರು.

ವರ್ಖೇಡಿಯವರು ಹುಬ್ಬಳ್ಳಿಯವರು (ಜನನ ೧೯೧೫). ಇವರ ತಂದೆಯವರು ಬಹಳ ದೊಡ್ಡ ಶಿಲ್ಪಿಗಳಾಗಿದ್ದರು. ರೊದ್ದ ಶ್ರೀನಿವಾಸರಾಯರ ಪ್ರತಿಮೆಯನ್ನು ಅವರು ಮಾಡಿದ್ದನ್ನು ನೋಡಿದ್ದೇನೆ. ಅವರು ಬಡೋದಾದಲ್ಲಿ ರಾಜಾಶ್ರಯ ಪಡೆದಿದ್ದರು. ಗುರುರಾಜ ವರ್ಖೇಡಿಯವರು ಡಾ. ಹರ್ಡೀಕರರ ಸೇವಾದಲದಲ್ಲಿದ್ದರು. ಹುಬ್ಬಳ್ಳಿಯಲ್ಲಿ ವ್ಯಾಯಾಮಶಾಲೆ ಸ್ಥಾಪಿಸಿದ್ದರು. ೧೯೩೦ರಲ್ಲಿ ಕಾಯದೇ ಭಂಗ ಚಳವಳಿಯಲ್ಲಿ ಹಿಂಡಲಗಾ ಜೇಲಿನಲ್ಲಿ ಶಿಕ್ಷೆ ಅನುಭವಿಸಿದರು. ತಂದೆಯವರಿಂದ ಚಿತ್ರಕಲೆ ಹಾಗೂ ಶಿಲ್ಪಕಲೆಯಲ್ಲಿ ಪಾಠ ಕಲಿತರು. ನಂತರ ೧೯೩೬–೩೯ ರವರೆಗೆ ಮುಂಬೈಯ ಜೆ. ಜೆ. ಸ್ಕೂಲಿನಲ್ಲಿ ಅಭ್ಯಾಸ ಮಾಡಿ ಪ್ರಥಮ ಶ್ರೇಣಿಯಲ್ಲಿ ಪ್ರಥಮ ಸ್ಥಾನ ಪಡೆದರು.

ಚಾರ್ಲಸ್ ಜೆರಾರ್ಡ್ ಎಂಬ ಅಧಿಕಾರಿ ಆಗ ವಿದೇಶಿ ವಿದ್ಯಾರ್ಥಿವೇತನಗಳ ಡೈರೆಕ್ಟರ್

ಆಗಿದ್ದ. ವರ್ಣೇಡಿಯುವರಿಗೆ ಇಂಗ್ಲೆಂಡ್ ಹಾಗೂ ಇಟಲಿಗಳಲ್ಲಿ ಉಚ್ಚ ಶಿಕ್ಷಣಕ್ಕೆ ವೇತನ ನೀಡಿದ. ವಿದೇಶ ಪ್ರಯಾಣದ ತಯಾರಿ ಆಯಿತು. ಆದರೆ ದ್ವಿತೀಯ ಜಾಗತಿಕ ಯುದ್ಧ ಪ್ರಾರಂಭವಾಯಿತು. ಈ ಅನುಕೂಲತೆ ತಪ್ಪಿ ಎರಡನೆಯ ಸಲ ೧೯೫೦ರಲ್ಲಿ ಅಮೇರಿಕದ ಸಿರೆಕ್ಯೂಸ್ ವಿಶ್ವ ವಿದ್ಯಾಲಯದಲ್ಲಿ ಅಭ್ಯಾಸ ಮಾಡಲು ಫುಲ್ ಬ್ರೈಟ್ ಸ್ಕಾಲರ್‌ಶಿಪ್ ದೊರೆಯುವುದಿತ್ತು. ಮತ್ತೆ ದುರ್ದೈವ ಅವರನ್ನು ಬಿಡಲಿಲ್ಲ. ಮುಂಬೈಯಲ್ಲಿ ಕೆಡೆಲ್ ರೋಡಿನಲ್ಲಿರುವ ಅವರ ಸ್ಟುಡಿಯೋವನ್ನು ಕಾರ್ಪೋರೇಶನ್ನಿನವರು ಕಸಿದುಕೊಂಡುಬಿಟ್ಟರು – ಮಹಾತ್ಮಾ ಗಾಂಧಿ ಸ್ವಿಮಿಂಗ್ ಪೂಲ್ ಕಟ್ಟಲು. ನಂತರ ಇವರಿಗೆ ಸ್ವಂತದ ಸ್ಟುಡಿಯೋ ಕೊಳ್ಳುವುದೇ ಆಗಲಿಲ್ಲ. ಚಿಕ್ಕ ಮನೆಯಲ್ಲೆ ತಮ್ಮ ಪ್ರತಿಮೆಗಳನ್ನೆಲ್ಲ ಇಟ್ಟುಕೊಂಡು ಕುಳಿತಿರುವ ಅವರ ಸ್ಥಿತಿ ಕಂಡರೆ ಕನಿಕರ ಬರುತ್ತದೆ. ಕನ್ನಡಿಗನೆಂದು ಮಹಾರಾಷ್ಟ್ರ ಸರಕಾರದ ಸಹಾಯವಿಲ್ಲ. ಮಹಾರಾಷ್ಟ್ರದಲ್ಲಿ ವಾಸಿಸುವುದರಿಂದ ಕನ್ನಡಿಗರಿಂದ ಪ್ರೋತ್ಸಾಹವಿಲ್ಲ. ಇಂಥ ತ್ರಿಶಂಕು ಸ್ಥಿತಿಯಲ್ಲಿ ಇವರಿದ್ದಾರೆ.


ಬುದ್ಧ, ಗಾಂಧಿ, ಸಿ. ವಿ. ರಾಮನ್ ಮುಂತಾದ ನೂರಾರು ಮಹನೀಯರ ಶಿಲ್ಪಕೃತಿಗಳನ್ನು ಇವರು ನಿರ್ಮಿಸಿದ್ದಾರೆ. ಕನ್ನಡ ನಾಡಿನ ಪ್ರತಿಭಾವಂತರ ಬಗ್ಗೆ ಇವರು Live Sitting ತೆಗೆದುಕೊಂಡು ಪ್ರತಿಮೆ ನಿರ್ಮಿಸಲು ಕಾರಣವೇನೆಂದು ಕೇಳಿದಾಗ ಅವರು ಹೀಗೆಂದರು: "ಒಂದೊಮ್ಮೆ ಇಲಸ್ಟ್ರೇಟೆಡ್ ವೀಕ್ಲಿಯಲ್ಲಿ ಒಂದು ಲೇಖನ ಓದಿದ್ದೆ. 'ಇಂಗ್ಲಿಶ್ ಲ್ಯುಮಿನರೀಸ್ ಬಾಯ್ ಫ್ರೆಂಚ್ ಸ್ಕಲ್ಪ್ಟರ್ಸ್' ಎಂದು. ಆಗ ಕನ್ನಡ ಪ್ರತಿಭಾವಂತರ ಬಗ್ಗೆ ಯಾಕೆ ಕೆಲವು ಪ್ರತಿಮೆ ತಯಾರಿಸಬಾರದು ಎಂಬ ಸ್ಫೂರ್ತಿ ದೊರೆಯಿತು. ನಾನು ಮೊದಲು ತಯಾರಿಸಿದ ಪ್ರತಿಮೆ ಮುದವೀಡು ಕೃಷ್ಣರಾಯರದು (೧೯೫೭). ಅವರ ಒಂದು ಭಾಷಣ ಕೇಳಿ ಮಂತ್ರ ಮುಗ್ಧನಾಗಿದ್ದೆ. ವಿದ್ಯಾವರ್ಧಕ ಸಂಘಕ್ಕೆ ಹಣ ಸಂಗ್ರಹಿಸಲು ಮುಂಬೈಗೆ ಬಂದಿದ್ದರು. ನೆಗಳೂರ ಹಾಗೂ ಎಚ್.ಎಸ್. ಪಾಟೀಲರು



ಗೋವಿಂದ ಪೈ

ಈ ವಿಷಯ ಹೇಳಿದರು. ಆಗ ಬೆಟಗೇರಿ ಕೃಷ್ಣಶರ್ಮರ 'ಜಯಂತಿ'ಯಲ್ಲಿ ಮುದವೀಡರ ಬಗ್ಗೆ ಒಂದು ಲೇಖನ ಬಂದಿತ್ತು. ಅದರಲ್ಲಿ 'ಚುರಮುರಿಯವರ ಶಾಕುಂತಲವನ್ನು ಮುದವೀಡು ಕೃಷ್ಣರಾಯರ ಬಾಯಿಂದ ಕೇಳಬೇಕು.' ಎಂದು ಬರೆದಿತ್ತು. ನಮ್ಮ ಮನೆಯಲ್ಲಿ ಅವರ ಶಾಕುಂತಲ ವ್ಯಾಖ್ಯಾನ. ನಮ್ಮ ಮನೆ ಕಿಕ್ಕಿರಿದು ತುಂಬಿರುತ್ತಿತ್ತು. ನಾನು ಜೇಡಿ ಮಣ್ಣಿನ ಮುದ್ದೆಯನ್ನು ಸ್ಟೂಲ್ ಮೇಲೆ ಇರಿಸಿ ಅವರ (ಪ್ರತಿಮೆ) ನಿರ್ಮಿಸುತ್ತಿದ್ದೆ.

"೧೯೪೬–೪೭ರ ಸುಮಾರಿಗೆ ಕೈಲಾಸಂ ಅವರ ಭೆಟ್ಟಿಯಾಯ್ತು. ಈ ವಿಕ್ಷಿಪ್ತ ವ್ಯಕ್ತಿ ನಿಮಗೆ ಸಿಟ್ಟಿಂಗ್ ಕೊಡಲು ಸಾಧ್ಯವಿಲ್ಲ ಎಂದು ಅನೇಕರು ಹೇಳಿದರು. ಬೇಕಾದರೆ ಫೋಟೋದಿಂದ ಪ್ರತಿಮೆ ಮಾಡಿರಿ ಅಂದರು. ಆದರೆ ಆ ವ್ಯಕ್ತಿಯನ್ನು ಜೀವಂತವಾಗಿ ಎದುರಿಗೆ ಕುಳ್ಳಿರಿಸಿಕೊಂಡು ಪ್ರತಿಮೆ ಮಾಡುವುದು ಕಠಿಣವಾಗಿದ್ದರೂ ನಿಜವಾದ ಕಲಾವಿದನಿಗೆ ಪೂರ್ಣ ತೃಪ್ತಿ ಕೊಡುತ್ತದೆ. ಕೈಲಾಸಂ



ದ. ರಾ. ಬೇಂದ್ರೆ

ಅಸೋಸಿಯೇಶನ್ ಹೋಗಿ ಕೈಲಾಸಂ ಅವರನ್ನು ಕಾಣಬೇಕೆಂದೆ. ಅವರು ಬಿಲಿಯರ್ಡ್ಸ್ ಆಟವನ್ನು ಇಲ್ಲಿಯ ಚಾಂಪಿಯನ್ನರಿಗೆ ಕಲಿಸುತ್ತಾರೆ ಎಂದು ತಿಳಿಯಿತು. ಒಂದು ಚೀಟಿ ಕಳಿಸಿ ಒಬ್ಬ ಕಲಾವಿದ ಎಂದು ಬರೆದೆ. 'ಕೈ' ಹೊರಗೆ ಬಂದರು. ೫ ನಿಮಿಷಗಳಲ್ಲಿ ನಮ್ಮ ಮಾತು ಮುಗಿದವು. ತಾವೇ ಮೂರು ದಿನ ನನ್ನ ಮನೆಗೆ ತಪ್ಪದೇ ಮುಂಜಾನೆ ಬಂದು ಸಿಟ್ಟಿಂಗ್ ಕೊಟ್ಟರು. ನಾನು ಕೈಲಾಸಂ ಅವರಿಗೆಂದೆ, 'ಇನ್ನೊಂದು ದಿನ ಬೇಕಾದೀತು' ಎಂದು. ಆಗ ಅವರು 'It is very good. ಇನ್ನೇನು ಆಗೋದು ಉಳಿದಿದೆ? You must know where to stop, ಎಂದರು. ಆ ಮಾತು ಬೀಜ ಮಂತ್ರದಂತೆ ನನ್ನ ಜೀವನದಲ್ಲಿ ಮಾರ್ಗದರ್ಶನ ಮಾಡಿದೆ. 'You have that spark keep it up!' ಎಂದರು. ಜಗತ್ತಿನ ಶಿಲ್ಪದ ಬಗ್ಗೆ ಮೂರು ದಿನ ವ್ಯಾಖ್ಯಾನ ಮಾಡಿದರು. ಅವರದು ಅಗಾಧ ಪಾಂಡಿತ್ಯ. ಮತ್ತೊಮ್ಮೆ ಪ್ರತಿಮೆ ನೋಡಿ 'ಒಂದು ವಿಷಯ, ಅಂದ್ರೆ detail ತೋರಿಸಲು ಮರೆತಿದ್ದೀರಿ' ಅಂದರು. ನನಗೆ ಅರ್ಥವಾಗಲಿಲ್ಲ. 'ಬನಿಯನ್ ಹತ್ರ ಜನಿವಾರ ತೋರಿಸಿರಿ. ನಾನು ಸಂಧ್ಯಾವಂದನೆ ಬಿಟ್ಟಿದ್ದೇನೆ ಆದರೆ ಜನಿವಾರ ಬಿಟ್ಟಿಲ್ಲ. And don't forget to show ಬ್ರಹ್ಮಗಂಟು ಎಂದರು. ಬ್ರಹ್ಮಗಂಟಿನ ಬಗ್ಗೆ ಅರ್ಧ ಗಂಟೆ ವ್ಯಾಖ್ಯಾನ ಮಾಡಿದರು. (ಕೈಲಾಸಂ ಪ್ರತಿಮೆ' ಈಗ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿದೆ.) ಕೆಳಗೆ ತಮ್ಮ ಕೈಯಿಂದ 'ಡೆಮಾಕ್ರಟಸ್' ಎಂದು ಬರೆದರು. ನಾನು ಆ ಗ್ರೀಕ್ ನಾಟಕಕಾರನಂತೆ ಬರೀತೇನೆ' ಎಂದರು."

ಇಂತಹ ಕನ್ನಡ ಮಹನೀಯರ ಬಗ್ಗೆ ಹೇಳುತ್ತ, "ಪ್ರೊ. ಜಹಗೀರದಾರ (ಶ್ರೀರಂಗ) ಕರ್ನಾಟಕ ಕಾಲೇಜಿನಿಂದ ರಾಜೀನಾಮೆ ಇತ್ತಾಗ, ಮುಂಬೈಯಲ್ಲಿದ್ದರು. ೧೯೪೮–೪೯ರಲ್ಲಿ ಅವರು ೩ ದಿನ ಸಿಟ್ಟಿಂಗ್ ಕೊಟ್ಟರು. ೧೯೪೯ರಲ್ಲೇ ಬೇಂದ್ರೆಯವರು ರಾಮಕೃಷ್ಣ ಮಿಶನ್ನಿನಲ್ಲಿ ಭಾಷಣ ಮಾಡಲು ಬಂದಾಗ ಅವರಿಗೆ ಸಿಟ್ಟಿಂಗ್ ಕೊಡಲು ಕೇಳಿದೆ. ಬೇಂದ್ರೆಯವರೆಂದರು, 'ಏನೂ ಕೆಲಸ ಮಾಡದೇ ಸುಮ್ನೇ ತಾಸುಗಟ್ಟಲೇ ಕೂಡೋದು ಹ್ಯಾಗಪ್ಪಾ!' ಎಂದು. ನಾನೆಂದೆ, 'ನೀವು ಪದ್ಯ ಓದುತ್ತ ಕುಳಿತುಕೊಳ್ಳಿರಿ.' ಅವರು ಪದ್ಯ ಓದಿದರು 'ನಾನು ಅವರ ಪ್ರತಿಮೆ ಮಾಡಿದೆ. ೧೯೫೧ರಲ್ಲಿ ಮುಂಬೈಯಲ್ಲಿ ಸಾಹಿತ್ಯ ಸಮ್ಮೇಳನವಾದಾಗ ಗೋವಿಂದ ಪೈ ಅಧ್ಯಕ್ಷರಾಗಿದ್ದರು. ಅವರು, ಕೃಪೆ ಮಾಡಿ ನಮ್ಮ ಮನೆಗೆ ಬಂದರು. ಅವರ ಪ್ರತಿಮೆಗೆ ನನಗೆ ಬಹುಮಾನ ಕೂಡ ದೊರೆತಿದೆ. ಇನ್ನು ಕಾರಂತರು ಒಂದು ಸಿಟ್ಟಿಂಗ್ ಕೊಟ್ಟರು. ಇನ್ನೆರಡು ಸಲ ಅವರು ಬಂದರೆ ಅವರದೂ ಪೂರ್ತಿಯಾಗುತ್ತದೆ. ೧೯೭೮ರಲ್ಲಿ ಅದನ್ನು ಪ್ರಾರಂಭಿಸಿದೆ."

"ನಿಮಗೆ ಅ.ನ.ಕೃಷ್ಣರಾಯರ ಸ್ನೇಹ ಬಹಳ ಇತ್ತು ಎಂದು ಕೇಳಿದ್ದೆ. ಅವರ ಬಗ್ಗೆ ಕೆಲ ವಿವರ ಹೇಳಿರಿ!" ಎಂದಾಗ ಪಚೇಡಿಯವರು ಕೆಲ ಮಾತು ಹೇಳಿದರು.

"ಅನಕೃ ಮುಂಬೈ ಬಂದಾಗ ಅವರ ಸ್ನೇಹವಾಯ್ತು. ಅವರಿಂದಾಗಿ ನಾನು ಬೆಂಗಳೂರಿಗೆ

ಹೋದೆ. ಮುದುವೀಡರ ಪ್ರತಿಮೆ ನಿರ್ಮಿಸಲು ಅವರೇ ಕಾರಣ. ಪ್ರಜಾಮತದಲ್ಲಿ ಸುದೀರ್ಘ ಲೇಖನ ಬರೆದು ನನ್ನ ಪ್ರಸಿದ್ಧಿಗೆ ಕಾರಣರಾದರು. ಡಿ.ವಿ.ಜಿ. ಅವರ ಪರಿಚಯ ಮಾಡಿಕೊಟ್ಟರು. ೧೯೪೮ರಲ್ಲಿ ಸರ್ ಸಿ. ವಿ. ರಾಮನ್ ಅವರ ಪ್ರತಿಮೆ ಮಾಡಿದ್ದೆ. ಸಿ. ವಿ. ರಾಮನ್‌ರೇ ಹೇಳಿದರು, 'ನೀವು ವಿಶ್ವೇಶ್ವರಯ್ಯನವರ ಪ್ರತಿಮೆ ತಯಾರಿಸಬೇಕು' ಎಂದು. ನಾನು ವಿಶ್ವೇಶ್ವರಯ್ಯನವರನ್ನು ಕಂಡೆ. ಅವರ ನಿರಾಶೆಯಿಂದ ತೆರಳಬೇಕಾಯಿತು. ಫೋಟೋದಿಂದ ನನಗೆ ಮಾಡಲು ಮನಸ್ಸಿರಲಿಲ್ಲ. ಡಿವಿಜಿಯವರು ಹೇಳಿದರು, 'ನೋಡಿ, ನಾನೊಂದು ಪತ್ರ ಕೊಡುವೆ. ಪ್ರಯತ್ನಿಸಿ.' ಅವರ ಪತ್ರ ಒಯ್ದಾಗ ಎಂವಿ. ಅಂದರು. 'Don't press me' ಡಿವಿಜಿಯವರು ನಮ್ಮ ಮನೆಗೆ (ವಿಲ್ಸನ್ ಗಾರ್ಡನ್) ಬಂದರು. ಒಂದು ಉಪಾಯ ಹೂಡಿದರು. 'ನೋಡಿ, ನೀವು ಎಂವಿ. ಅವರನ್ನು ನೋಡಿ, ಬದಿಯ ಕೋಣೆಯಲ್ಲಿ ಕುಳಿತು ಮೂರ್ತಿ ಮಾಡಬಹುದೇ?' 'ನಾನೆದುರು ಕನಿಷ್ಟ ೨ ಗಂಟೆ ಯಾದರೂ ನೋಡಲು ಅವಕಾಶವಿರಬೇಕು" ಡಿ.ವಿ.ಜಿ. ಅಂದರು. 'Done ! ಚೇಂಬರ್ ಆಫ್ ಕಾಮರ್ಸ್ ಮೀಟಿಂಗ್ ಇದೆ. ಅವರ ಜನರಲ್ ಬಾಡಿ ಮೀಟಿಂಗ್ ೪–೫ ತಾಸು ನಡೆಯುತ್ತದೆ. ಎಂವಿ. ಅವರೇ ಅಧ್ಯಕ್ಷರು, ಅವರ ಭಾಷಣ ೩ ತಾಸಿನ ಮೇಲಾಗುತ್ತದೆ. ಅಂಕಿ ಸಂಖ್ಯೆ ವಿವರಣೆ ನೀಡುತ್ತಾರೆ. ನಿಮ್ಮನ್ನು ಪ್ರೆಸ್ ಖುರ್ಚಿಯಲ್ಲಿ ಮುಂದೆ ಕೂಡಿಸುವೆವು. ನೀವು ಅವರನ್ನು ಹತ್ತಿರದಿಂದ ನೋಡಿರಿ. ಬದಿಯಲ್ಲಿ ಒಂದು ಕೋಣೆಯಲ್ಲಿ ನಿಮ್ಮ ಸಕಲರಣೆ ಇಟ್ಟುಕೊಳ್ಳಿರಿ. ಅವರ ಪ್ರತಿಮೆ ಮಾಡಿರಿ.' ಹಾಗೆಯೇ ಪ್ರತಿಮೆ ಮಾಡಿದೆ. ಅದನ್ನು ಕಂಡು ಡಿವಿಜಿಯವರಿಗೆ ಆದ ಸಂತೋಷ ಅಷ್ಟಿಷ್ಟಲ್ಲ." (ಈ ಪ್ರತಿಮೆ ಈಗ ಸಾಹಿತ್ಯ ಪರಿಷತ್ತಿನಲ್ಲಿದೆ.)

"ನೀವು ಡಿವಿಜಿಯವರ ಪ್ರತಿಮೆಯನ್ನೇಕೆ ಮಾಡಲಿಲ್ಲ?"

"ನನ್ನದೇನು ಅವಸರ, ದೊಡ್ಡವರದೆಲ್ಲಾ ನೀವು ಮಾಡಿರಿ. ನಂತರ ನೋಡೋಣ' ಅಂದರು.



ಟಿ. ಪಿ. ಕೈಲಾಸಂ

ಡಿವಿಜಿಯವರು ಈಗ ನಮ್ಮನ್ನಗಲಿದ್ದಾರೆ. ಅವರ ಪ್ರತಿಮೆ ಮಾಡಲಿಲ್ಲ ಎಂಬ ಕೊರಗು ನನಗಿದೆ!" ಎಂದರು.

"ನೀವು ಬೆಂಗಳೂರು ಯಾಕೆ ಬಿಟ್ಟಿರಿ?"

"ಬರಿ ಮೆಚ್ಚಿಕೆ, ಹಣ ಮಾತ್ರ ಇಲ್ಲ! ಎಂದರೆ ಯಾವ ಕಲಾವಿದ ಬದುಕುವ? ಬೆಂಗಳೂರಿನಲ್ಲಿ ದೊಡ್ಡ ಮನೆ ಹಿಡಿದಿದ್ದೆ. ಅದೇ ನನ ಮದುವೆ ಆಗಿತ್ತು. ಸಿ. ವಿ. ರಾಮನ್ನರದು ಮಾತ್ರ ಹಣ ದೊರೆಯಿತು. ನಂತರ ಅನೇಕ ಪ್ರತಿಮೆ ಮಾಡಿದೆ. ಹಣವೇ ಇಲ್ಲ. ಪಂಡಿತ ತಾರಾನಾಥರ ಭೆಟ್ಟಿಯಾಯ್ತು. ಪ್ರಭಾವಿತನಾದೆ. ಅವರ ಪ್ರತಿಮೆ ಮಾಡಿದೆ. ಒಬ್ಬ ಪ್ರಾಧ್ಯಾಪಕರ ಮಾತು ಕೇಳಿ ಎನ್.ಎಸ್. ಸುಬ್ಬರಾಯರ ಪ್ರತಿಮೆ ಮಾಡಿದೆ. ಅದರಿಂದ ಹಣ ಬರಲಿಲ್ಲ. ಕೊಡುತ್ತೇವೆ ಎಂದು ಅಂದರಾದರೂ ಏನೂ ಸಿಗಲಿಲ್ಲ. ಹೀಗಾಗಿ ಬೆಂಗಳೂರು ಬಿಟ್ಟು ಮುಂಬೈ ಸೇರುವುದು ಅನಿವಾರ್ಯವಾಯ್ತು."

"ಬೆಂಗಳೂರು ಬಿಡುವುದಕ್ಕಿಂತ ಮುಂಚೆ ಮತ್ತೆ ಯಾವುದಾದರೂ ಮಹತ್ವದ ಕೃತಿ ಮಾಡಿದಿರಾ?

"ಹೌದು, ರಮಣ ಮಹರ್ಷಿಗಳ ಪ್ರತಿಮೆ ತಯಾರಿಸಿದೆ. ಅದೊಂದು ನನ್ನ ಜೀವನದಲ್ಲಿಯ ಅವಿಸ್ಮರಣೀಯ ಘಟನೆ. ನಮ್ಮ ಮನೆಯ ಹತ್ತಿರ ಬೋಸ್ ಎಂಬ ಬಂಗಾಲಿ ಗೃಹಸ್ಥ ಇದ್ದರು. ಬಹಳ ದೊಡ್ಡ ಇಂಜಿನಿಯರ್. ಅವನ ಹೆಂಡತಿ ಜರ್ಮನ್ ಮಹಿಳೆ. ಅವರ ಮಗ ಆಕಸ್ಮಿಕದಿಂದ ನಿಧನ ಹೊಂದಿದ್ದ. ಅವನ ಫೋಟೋ ಕೊಟ್ಟು ಪ್ರತಿಮೆ ಮಾಡಲು ಹೇಳಿದ್ದರು. ನಾನು ಮಾಡಿಕೊಟ್ಟಾಗ ಅವರಿಗೆ ಬಹಳೇ ಆನಂದವಾಯ್ತು. ಅವರು ಮಹರ್ಷಿ ರಮಣರ ಭಕ್ತರು. ತಮ್ಮ ಗುರುಗಳ ಪ್ರತಿಮೆ ಮಾಡಲು ಕೇಳಿಕೊಂಡರು. ಎಲ್ಲಾ ವೆಚ್ಚ ಕೊಡುವುದಾಗಿ ಹೇಳಿದರು. ಈ ಕೆಲಸಕ್ಕಾಗಿ ನಾನು ನನ್ನ ಪತ್ನಿಯೊಂದಿಗೆ ತಿರುವಣ್ಣಾಮಲೈಗೆ ಹೋದೆ. ಬೋಸ್ ಅವರ ಎಸ್ಟೇಟು ರಮಣರ ಆಶ್ರಮದ ಎದುರಿಗೇ ಇತ್ತು. ನಮಗೊಂದು ಮನೆಯನ್ನೇ ಕೊಟ್ಟರು. ರಮಣರು ದರ್ಶನ ಕೊಡುತ್ತಿದ್ದರು. ತಾಸು ನೋಡಿ, ಮತ್ತೆ ನನ್ನ ಮನೆಯಲ್ಲಿ ಪ್ರತಿಮೆ ತಯಾರಿಸಲು ಪ್ರಯತ್ನಿಸಿದೆ. ಕಷ್ಟಕರವಾಯ್ತು. ವಿಶ್ವೇಶ್ವರಯ್ಯನವರನ್ನು ತಯಾರಿಸಿದಾಗ ಬದಿಯ ಕೋಣೆಯಲ್ಲಿಯೇ ಸಲಕರಣೆಗಳಿದ್ದವು. ರಮಣರು ಬೋಸ್ ಅವರನ್ನು ಕರೆದು ನನ್ನ ಬಗ್ಗೆ ವಿಚಾರಿಸಿದರು. ಮಧ್ಯಾಹ್ನ ೧ ರಿಂದ ೨ ಗಂಟೆಯ ಮಧ್ಯೆ ೨೦ ನಿಮಿಷ ಸಿಟ್ಟಿಂಗ್ ಕೊಡಲು ಒಪ್ಪಿದರು. ಬೋಸ್ ಆನಂದದಿಂದ ಉದ್ಗಾರ ತೆಗೆದರು; 'ನೀವು ಪುಣ್ಯವಂತರು, ಮಹರ್ಷಿಗಳು ನಿಮಗೆ ಸಿಟ್ಟಿಂಗ್ ಕೊಡಲು ಒಪ್ಪಿದ್ದಾರೆ. ೫ ಫೂಟು ದೊಡ್ಡ ಲೈಫ್‌ಸೈಜಿನ ಪ್ರತಿಮೆ ಮಾಡಿದೆ. ಇಂದು ಅದು ಆಶ್ರಮದಲ್ಲಿದೆ."

ವರ್ಖೇಡಿಯವರಿಗೆ ಈಗ ೬೪ ವರ್ಷ. ಶಿಲ್ಪದ ಕೆಲಸದ ಶ್ರಮ ಅವರಿಂದಾಗದು. ಹೀಗಾಗಿ ಕೆ. ಕೆ. ಹೆಬ್ಬಾರರ ಸಲಹೆಯ ಮೇರೆಗೆ ಚಿತ್ರ ಬಿಡಿಸಲು ಪ್ರಾರಂಭಿಸಿದ್ದಾರೆ. ಈ ವರ್ಷ ಜಹಾಂಗೀರ್ ಆರ್ಟ್ ಗ್ಯಾಲರಿಯಲ್ಲಿ ಅವರ ಪ್ರದರ್ಶನವಾಗಲಿದೆ. ಅದರ ತಯಾರಿ ನಡೆದಿದೆ. ಆ ಪ್ರದೇಶದಲ್ಲಿ ಅವರು ಮಾಡಿದ ಕಟ್ಟಿಗೆ ಕೆತ್ತನೆ ಕೆಲಸ, ಶಿಲ್ಪ, ಹಾಗೂ ಚಿತ್ರಗಳನ್ನು ಪ್ರದರ್ಶಿಸಲಾಗುವುದು. ಕೇಂದ್ರ ಲಲಿತಕಲಾ ಏಕೆಡೆಮಿಯವರು ೨ ವರ್ಷಗಳ ಹಿಂದೆ, ವರ್ಖೇಡಿಯವರ ಆರೋಗ್ಯ ಸರಿಯಿಲ್ಲದೇ ಇದ್ದಾಗ, ರೂ. ೨೫೦೦ ಸಹಾಯ ಧನ ನೀಡಿದರು. ಕೆಲಸ ಮಾಡಲು ಶಕ್ತಿಯಿಲ್ಲ. ಇವರ ಚಿರಂಜೀವ ಇನ್ನೂ ವಿದ್ಯಾರ್ಥಿಯಾಗಿದ್ದಾನೆ. ಕರ್ನಾಟಕ ಸರಕಾರ ಮುಂಬೈಯವರಾದ ಹ. ವೆ. ಇನಾರತಿಯವರಿಗೆ ಮಾಸಾಶನ ನೀಡಿ, ಅವರ ಸಮಾಜಸೇವೆಯನ್ನು ಮನ್ನಿಸಿದೆ. ಹಾಗೆಯೇ ಕನ್ನಡಿಗರಾದ, ಕಲಾವಿದರಾದ ವರ್ಖೇಡಿಯವರಿಗೂ ಮಾಸಾಶನ ನೀಡಬೇಕು. ಈ ದಿಶೆಯಲ್ಲಿ ಸಾಹಿತ್ಯ ಪರಿಷತ್ತು ಪ್ರಯತ್ನ ನಡೆಸಿದೆ. ಒಮ್ಮೆ ಮಾತಾಡುತ್ತಿರುವಾಗ, "ಮಹಾಕವಿ ಗೋಕಾಕರದೂ ಒಂದು ಪ್ರತಿಮೆ ಮಾಡುವ ಆಸೆ ಇದೆ. ದೇವರು ನನಗೆ ಒಳ್ಳೆ ಆರೋಗ್ಯ ಕೊಡಬೇಕು!" ಎಂದಿದ್ದರು. ಕೆ. ಕೆ. ಹೆಬ್ಬಾರರು ಒಮ್ಮೆ ಹೇಳುತ್ತಿದ್ದರು. "ವ್ಯಕ್ತಿಯನ್ನು ಎದುರಿಗೆ ಕೂಡಿಸಿಕೊಂಡು bust ಮಾಡುವಂತಹ ಕಲಾವಿದರು ಇಂದು ದುರ್ಲಭರಾಗಿದ್ದಾರೆ. ವರ್ಖೇಡಿಯವರು ಅಂತಹ ಅಪರೂಪದ ಕಲಾವಿದರು" ಎಂದು. ಕಮರ್ಶಿಯಲ್ ಆರ್ಟ್‌ನಿಂದ ದೂರ ಸರಿದು ಕಲೆಯನ್ನು ಬೆಳಗಿಸಲು ತಮ್ಮ ಪ್ರತಿಭೆಯನ್ನು ಮೀಸಲಾಗಿಟ್ಟ ಕಲಾವಿದರಲ್ಲಿ ವರ್ಖೇಡಿಯವರೂ ಒಬ್ಬರು. ಅವರಿಗೆ ಜೀವನದಲ್ಲಿ ಸ್ಫೂರ್ತಿಯನ್ನಿತ್ತ ಇಬ್ಬರು ಮಹಾತ್ಮರ ನುಡಿಗಳನ್ನು ಯಾವಾಗಲೂ ಅವರು ಉದ್ಧರಿಸುತ್ತಿರುತ್ತಾರೆ. ಈ ಅವತರಣಿಕೆಗಳು ಅವರ ಜೀವನಕ್ಕೆ ಹೊಸ ತಿರುವು ಕೊಟ್ಟಿವೆಯೆಂತೆ.

"There are two aspects, the outward and inward. The outward has no meaning to me at all except in so far as it helps the inward. All true art is the expression of the soul. The outward forms have value in so far as they are the expression of the inner spirit of man."

M. K. Gandhi

"(ಪ್ರಕೃತಿಯ ಜೀವನಕ್ಕೆ) ಬಹಿರ್ಮುಖ, ಅಂತರ್ಮುಖ ಎರಡೂ ಮುಖಗಳಿವೆ. ಅಂತರ್ಮುಖಕ್ಕೆ ಸಹಾಯಕವಾಗಿರುವ ಮಟ್ಟಿಗೆ ಮಾತ್ರ ಬಹಿರ್ಮುಖ ನನಗೆ ಅರ್ಥಪೂರ್ಣ. ನೈಜ ಕಲೆಯಲ್ಲಿ ಆತ್ಮಾಭಿವ್ಯಕ್ತಿಯೇ ಆಗಿದೆ. ಮನುಷ್ಯನ ಅಂತಶ್ಚೇತನದ ಅಭಿವ್ಯಕ್ತಿಗೆ ನೆರವಾಗುವ ಮಟ್ಟಿಗೆ ಮಾತ್ರ ಬಾಹ್ಯ ಮುಖಗಳಿಗೆ ಬೆಲೆಯಿದೆ."


— ಮೋ. ಕ. ಗಾಂಧಿ

"This world was not built
with random bricks of chance,
A blind God is not
destiny's architect,
A concious power has drawn
the plan of life,
There is a meaning in
each curve and line."

-Aurobindo ("Savitri" VI, II)

"ಈ ಜಗವನ್ನು ಗೊತ್ತುಗುರಿಯಿಲ್ಲದೆ ಆಕಸ್ಮಿಕವಾಗಿ ಸಿಕ್ಕ ಇಟ್ಟಿಗೆಗಳಿಂದ ಕಟ್ಟಲಿಲ್ಲ. ದೈವವನ್ನು ರೂಪಿಸುವವನು ಕುರುಡು ದೇವರಲ್ಲ ಜೀವನ ಯೋಜನೆಯನ್ನು ರೂಪಿಸಿಗೊಂಡ. ಪ್ರಜ್ಞಾಪೂರ್ಣ ಶಕ್ತಿಯು. ಪ್ರತಿ ತಿರುವಿನಲ್ಲೂ ಪ್ರತಿ ರೇಖೆಯಲ್ಲೂ ಅರ್ಥವಿದೆ."

— ಅರವಿಂದ ("ಸಾವಿತ್ರಿ" VI, II)



ಅಡ್‌ಜಸ್ಟ್‌ಮೆಂಟ್

ಈ ಶಬ್ದವೇ ಎಷ್ಟು ತಮಾಷೆ ಅಲ್ಲವೆ? ಅಗತ್ಯವೂ ಅಷ್ಟೆ!

ಒಂದು ಊರಿಂದ ಬೇರೆ ಊರಿಗೆ ವರ್ಗವಾಗಿ ಹೋದರೆ, ತತ್‌ಕ್ಷಣ ಕೇಳತಾರೆ; ಹೇಗಿದೀರಾ? ಎಲ್ಲ ಅಡ್ಜಸ್ಟ್ ಆಯ್ತಾ? ಅಂತ.

ಹೊಸದಾಗಿ ಮಗಳ ಮದುವೆ ಆದರೆ, ಮಗನಿಗೆ ಹೆಂಡತಿ (ಸೊಸೆ) ತಂದರೆ ಇಬ್ಬರೂ ಅಡ್ಜಸ್ಟ್ ಆಗಿದ್ದಾರಾ? ಅಂತ.

ಒಂದು ಸ್ಕೂಲು, ಕಾಲೇಜ್ ಬಿಟ್ಟು ಇನ್ನೊಂದಕ್ಕೆ ಸೇರಿದರೆ ಅಲ್ಲಿಯೂ ಅಡ್ಜಸ್ಟ್ ಆಗಬೇಕಾಗುತ್ತೆ.

ಅಂತೂ ಜೀವನವೆಲ್ಲ ಅಡ್ಜಸ್ಟ್ ಆಗೋದರಲ್ಲಿಯೇ ಕಳೆಯುತ್ತೆ ಅನ್ನಿ.

ಮನೆಯಲ್ಲಿ, ಸ್ತ್ರೀಯರಿಗೆ ಗಂಡನಿಗೆ, ಅತ್ತೆ ಮಾವಂದಿರಿಗೆ ಹಾಗೂ ನೆರೆ ಹೊರೆಯವರಿಗೆ ಎಲ್ಲರಿಗೂ ಅಡ್ಜಸ್ಟ್ ಆಗಬೇಕಾಗುತ್ತೆ.

ಗಂಡಸರಿಗೆ ಆಫೀಸಿನಲ್ಲಿ ಹೊಸ ಹೊಸ ಕೆಲಸ ಹಾಗೂ ಹೊಸ ಹೊಸ ಆಫೀಸರಗಳ ಜೊತೆಗೆ... ಆಗಬೇಕು.

ಬಸ್‌ನಲ್ಲಿ ಹೋಗಿ, ಟ್ರೇನಿನಲ್ಲಿ ಹೋಗಿ, ದುಡ್ಡು ಕೊಟ್ಟದ್ದರೂ ಸ್ಥಳಾವಕಾಶ ಇರುವದಿಲ್ಲ. ಅಂಥದರಲ್ಲಿಯೂ ಸುಧಾರಿಸಿಕೊಳ್ಳುವುದು, ಅಂದರೇನೆ ಅಡ್ಜಸ್ಟ್ ಆಗುವುದು. ಈ ಜೀವನನೇ ಹಾಗೆ! ಜೀವನ ಪ್ರಯಾಣವನ್ನು, ಸುಧಾರಿಸುವುದರಲ್ಲಿಯೇ ಸುಧಾರಿಸಿಕೊಂಡು ನಡೆಯುವುದರಲ್ಲಿಯೇ ಕಳೆಯುತ್ತೆ.

ಬಿ. ಜಿ. ವಿಜಯ

ಚಿತ್ರಭಿತ್ತಿಯಲ್ಲಿ ಅಚ್ಚೊತ್ತಿದ ನನ್ನ ಭಾರತ ಭೇಟಿ

ಪಾಬ್ಲೊ ನೆರುಡಾ

೧೯೫೦ರಲ್ಲಿ ಅನಿರೀಕ್ಷಿತವಾಗಿ ನಾನು ಭಾರತಕ್ಕೆ ಭೇಟಿ ನೀಡಬೇಕಾಯಿತು. ಪ್ಯಾರಿಸ್‌ನಲ್ಲಿದ್ದ ನನ್ನನ್ನು ಕರೆದು, ಜೋಲಿಯೆಟ್–ಕ್ಯೂರಿ ಭಾರತಕ್ಕೆ ಶಾಂತಿ ಪ್ರತಿನಿಧಿಯಾಗಿ ಹೋಗುವಂತೆ ತಿಳಿಸಿದರು. ದೆಹಲಿಗೆ ಕೂಡಲೇ ಹೋಗಿ ವಿಭಿನ್ನ ರಾಜಕೀಯ ದೃಷ್ಟಿಕೋನಗಳುಳ್ಳವರನ್ನು ಸಂದರ್ಶಿಸಿ, ಅನಂತರ ಶಾಂತಿ ಬಗೆಗಿನ ಭಾರತದ ಆಂದೋಲನವನ್ನು ಬಲಗೊಳಿಸುವ ಸಾಧ್ಯತೆಯತ್ತ ನಾನು ಗಮನ ಹರಿಸಬೇಕಿತ್ತು.

ಜಾಗತಿಕ ಶಾಂತಿ ಸಮಿತಿಯ ಅಧ್ಯಕ್ಷರಾಗಿದ್ದ ಜೋಲಿಯೆಟ್–ಕ್ಯೂರಿಯವರೊಂದಿಗೆ ನಾನು ಸುದೀರ್ಘವಾಗಿ ಮಾತುಕತೆ ನಡೆಸಿದೆ. ಭಾರತವು ಶಾಂತಿ ಪ್ರತಿಪಾದಿಸುವ ಪ್ರಮುಖ ರಾಷ್ಟ್ರವೆನಿಸಿದರೂ ವಾಸ್ತವವಾಗಿ ಶಾಂತಿ ಬಗೆ ಭಾರತದಲ್ಲಿ ಹೆಚ್ಚಿಗೆ ಬೆಲೆ ನೀಡಲಾಗುತ್ತಿಲ್ಲವೆಂಬುದನ್ನು ಅರಿತಿದ್ದ ಕ್ಯೂರಿ ಆತಂಕ ವ್ಯಕ್ತಪಡಿಸಿದರು. ಆಗ ಭಾರತದ ಪ್ರಧಾನಿ ನೆಹರೂ ಶಾಂತಿಯ ಪ್ರತಿಪಾದಕರಾಗಿದ್ದರು.

ಜೋಲಿಯೆಟ್–ಕ್ಯೂರಿ ನನಗೆ ಎರಡು ಪತ್ರಗಳನ್ನು ಕೊಟ್ಟರು. ಒಂದನ್ನು ಮುಂಬೈಯ ವಿಜ್ಞಾನಿಯೋರ್ವನಿಗೆ, ಇನ್ನೊಂದನ್ನು ಭಾರತದ ಪ್ರಧಾನಿಗೆ ತಲುಪಿಸಬೇಕಿತ್ತು. ಹೊರನೋಟಕ್ಕೆ ಸುಲಭವಾಗಿ ತೋರುವ ಈ ಕಾರ್ಯಕ್ಕಾಗಿ ನನ್ನನ್ನು ಆಯ್ಕೆ ಮಾಡಿದ ಬಗ್ಗೆ ನನಗೆ ಅಚ್ಚರಿಯುಂಟಾಯಿತು. ತಾರುಣ್ಯದಲ್ಲಿ ಕೆಲಕಾಲ ಭಾರತದಲ್ಲಿದ್ದ ನಾನು ಆ ದೇಶದ ಬಗ್ಗೆ ಹೊಂದಿದ್ದ ಒಲವಿನಿಂದಲೋ ಅಥವಾ ಪಾಬ್ಲೊ ಪಿಕಾಸ್ಸೊ ಹಾಗೂ ನಾಜಿಮ್ ಹಿಕ್‌ಮೆಟ್ ಜತೆ ನನಗೆ ಸಂದ 'ಕ್ಯೂ ಡಸ್ಪ್ಯಾರ್ಟ್ ಎಲ್ ಲೆನಾಡರ್' ಶಾಂತಿ ಪ್ರಶಸ್ತಿ ಲಭಿಸಿದ ಪ್ರಯುಕ್ತವೋ ಭಾರತಕ್ಕೆ ಹೋಗುವ ಭಾಗ್ಯ ನನಗೆ ಮತ್ತೆ ಲಭಿಸಿತು.

ನಾನು ಮುಂಬೈಗೆ ತೆರಳುವ ವಿಮಾನವೇರಿದೆ. ೩೦ ವರ್ಷಗಳ ನಂತರ ನಾನು ಮತ್ತೆ ಭಾರತಕ್ಕೆ ಹಿಂತಿರುಗುತ್ತಲಿದ್ದೆ. ಪ್ರಜಾಸತ್ತಾತ್ಮಕ ಗಣರಾಜ್ಯದ ಕನಸು ಕಂಡ ಗಾಂಧೀಜಿಯವರ ಚಳ

ವಳಿಯ ಮಾಧ್ಯಮವಾದ ಕಾಂಗ್ರೆಸ್ ಅಧಿವೇಶನಕ್ಕೆ ನಾನು ಮೊದಲು ಹೊದದ್ದು (೧೯೨೮) ರಲ್ಲಿ. ಇಂದವರ ಕನಸು ನನಸಾಗಿದೆ. ಅಂದಿದ್ದ ನನ್ನ ಹಳೆಯ ಮಿತ್ರರಾರೂ ಈಗ, ಜೀವಂತದಿಂದಿ-ರಲಾರರು.

ಮುಂಬೈ ವಿಮಾನ ನಿಲ್ದಾಣಕ್ಕೆ ಆಗಮಿಸಿ ದೊಡನೆ ನಾನು ವಿಮಾನದಿಂದಿಳಿದು ನೇರ ವಾಗಿ ಕಸ್ಟಮ್ಸ್ ಅಧಿಕಾರಿಗಳತ್ತ ನಡೆದೆ. ಅಲ್ಲಿಂದ ಹೋಟೆಲೊಂದಕ್ಕೆ ಹೋಗಿ, ಅನಂತರ ಭೌತಶಾಸ್ತ್ರಜ್ಞ ರಾಮನ್‌ರಿಗೆ ಪತ್ರ ತಲುಪಿಸಿ, ದೆಹಲಿಗೆ ನಾನು ಹೊರಡಬೇಕೆಂದಿದ್ದೆ. ನನ್ನನ್ನು ಸ್ವಾಗತಿಸಲು ಯಾರಾದರೂ ಬರಬೇಕೆಂದು ನಾನು ನಿರೀಕ್ಷಿಸಿರಲಿಲ್ಲ. ನನ್ನ ಗಮನ ಸುತ್ತ ಮುತ್ತ ಇದ್ದ ಕೆಲವಾರು ಕಸ್ಟಮ್‌ನವರತ್ತ ಕೇಂದ್ರೀಕೃತವಾ-ಗಿತ್ತು. ಅವರು ನಾನು ತಂದಿದ್ದ ವಸ್ತುಗಳನ್ನು ಪರೀಕ್ಷಿಸುತ್ತಿದ್ದರು. ಇಂಥ ತನಿಖಾ ವಿಧಾನವನ್ನು ನಾನು ಹಿಂದೆಂದೂ, ಎಲ್ಲೂ, ಕಂಡಿರಲಿಲ್ಲ. ನನ್ನ ಬಳಿಯಿದ್ದ ವಸ್ತುಗಳಾವುವೂ ಹೆಚ್ಚು ಬೆಲೆ ಬಾಳು ವಂಥವೇನಾಗಿರಲಿಲ್ಲ. ಮಧ್ಯಮ ಗಾತ್ರದ ಸೂಟ್‌ಕೇಸೊಂದರಲ್ಲಿ ಕೆಲವು ಉಡುಪು ಹಾಗೂ ಸಣ್ಣ ಚರ್ಮದ ಕೈಚೀಲದಲ್ಲಿ ಶೇವಿಂಗ್ ಸೆಟ್ಟುಗಳಂಥ ಕೆಲ ವಸ್ತುಗಳನ್ನು ತಂದಿದ್ದೆ. ಐವರು ಕಸ್ಟಮ್ಸ್ ಅಧಿಕಾರಿಗಳು ನನ್ನ ಪ್ಯಾಂಟುಗಳನ್ನು, ಶರ್ಟುಗಳನ್ನು ಹಾಗೂ ಬೂಟುಗಳನ್ನು ತಿರುತಿರುವಿ ಕೊಡವಿ ನೋಡಿದರು. ನನ್ನ ಜೇಬು, ಮತ್ತಿತರ ಭಾಗಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದರು. ಸೂಟ್‌ಕೇಸ್‌ಲ್ಲಿದ್ದ ನನ್ನ ಉಡುಪುಗಳಿಗೆ ಧೂಳು ಹತ್ತಬಾರದೆಂದು ನಾನು ರೋಮಿನ ಹೋಟೆಲೊಂದ ರಲ್ಲಿದ್ದ ಮಾಸಿದ ವೃತ್ತಪತ್ರಿಕೆ (ಅವರ ಹೆಸರು 'ಒಸ್ಸರ್ವೆತೋರ್ ರೋಮಾನೊ') ಯೊಂದರಲ್ಲಿ ಬೂಟುಗಳನ್ನು ಸುತ್ತಿ ಇರಿಸಿದ್ದೆ. ಅಧಿಕಾರಿಗಳು ಆ ಪತ್ರಿಕೆಯನ್ನು ಮೇಜಿನ ಮೇಲೆ ಹರಡಿ, ಬೆಳಕಿಗೆ ಹಿಡಿದು, ಅದೊಂದು ರಹಸ್ಯ ದಾಖಲೆ ಯೆಂಬಂತೆ ಜಾಗರೂಕತೆಯಿಂದ ಸುತ್ತಿ ನನ್ನ ಇತರ ಕಾಗದ-ಪತ್ರಗಳ ಜತೆ ಇಟ್ಟರು. ಪಳಯು ಳಿಕೆಗಳಂತೆ ನನ್ನ ಬೂಟುಗಳನ್ನು ಪರೀಕ್ಷಿ-ಸಿದರು.

ಅವರ ಸಂಶಯಯುಕ್ತ ಶೋಧ ಎರಡು ಗಂಟೆಗಳ ಕಾಲ ಅವ್ಯಾಹತವಾಗಿ ನಡೆಯಿತು. ಎಲ್ಲವನ್ನೂ ಪರೀಕ್ಷಿಸಿದ ಮೇಲೆ ನನ್ನ ರಹ ದಾರಿ, ವಿಳಾಸ, ಪುಸ್ತಕ, ಪತ್ರಗಳು, ಮಾಸಿದ ಪತ್ರಿಕೆ ಇತ್ಯಾದಿ ವಸ್ತುವನ್ನೊಳಗೊಂಡ 'ದೊಡ್ಡ ಪೊಟ್ಟಣ' ಕಟ್ಟಿ ನನ್ನೆದುರು ಅದನ್ನು ಸೀಲು ಮಾಡಿ ಅದನ್ನವರು ವಶಪಡಿಸಿಕೊಂಡರು. ಅನಂತರ ಹೋಟೆಲ್‌ಗೆ ಹೋಗಲು ನನಗೆ ಅನುಮತಿಯಿತ್ತರು.

ಎಂಥ ಸಂದರ್ಭದಲ್ಲೂ ಸಹನೆಯನ್ನು ಕಳೆದು ಕೊಳ್ಳಬಾರದೆಂಬ ಚಿಲಿ ಗಾದೆಯನ್ನು ನೆನೆದು ನಾನು ತಾಳ್ಮೆಯಿಂದಿದ್ದೆ. ಪರಿಚಯಾತ್ಮಕ ಕಾಗದ ಪತ್ರಗಳಿಲ್ಲದೆ ವಿದೇಶೀಯನನ್ನು ಯಾವ ಹೋಟೆಲ್ ನವರು ಸೇರಿಸಿಕೊಳ್ಳುತ್ತಾರೆಂದು ನಾನು ಯೋಚ ನಾಮಗ್ನನಾದೆ. (ಜೋಲಿಯಟ್-ಕ್ಯೂರಿ ಭಾರತದ ಪ್ರಧಾನಿಗೆ ಬರೆದ) ಪತ್ರವನ್ನು ಕಸ್ಟಮ್ಸ್‌ನವರು ವಶಪಡಿಸಿಕೊಂಡಿದ್ದರಿಂದ ಪ್ರಧಾನಿಯವರಿಗೆ ಪತ್ರ ತಲುಪಿಸುವುದು ನನಗೆ ಶಕ್ಯವಿರಲಿಲ್ಲ.

"ಹೋಟೆಲಿನಲ್ಲಿ ನಿಮ್ಮನ್ನು ಸೇರಿಸಿಕೊಳ್ಳು ವಂತೆ ತಿಳಿಸಲಾಗುವುದು. ನಿಮ್ಮ ಈ ಕಾಗದ-ಪತ್ರಗಳ ಪೊಟ್ಟಣವನ್ನು ಕ್ರಮೇಣ ಹಿಂತಿರುಗಿಸ ಲಾಗುವುದು" ಎಂದು ಕಸ್ಟಮ್ಸ್ ಅಧಿಕಾರಿ ಗಳು ನನಗೆ ಹೇಳಿದರು.

ನಾನು ಆತ್ಮಗತ ಮಾಡಿಕೊಂಡಿದ್ದ ಸ್ವಾತಂತ್ರ್ಯ ಹೋರಾಟ ನಡೆಸಿದ ದೇಶ ಇದೇನೇ ಎಂದು ನನಗೆ ಸಂಶಯ ಬಂತು. ಸೂಟ್ ಕೇಸ್ ಹಾಗೂ ನನ್ನ ಬಾಯನ್ನು ಒಮ್ಮೆಲೇ ಮುಚ್ಚಿ, ಹೋಟೆಲತ್ತ ನಡೆದಿದ್ದೆ. ಕಸ್ಟಮ್ಸ್‌ನವರ 'ಹೇಯ ಕೃತ್ಯ'ದಿಂದ ಮನ ನೊಂದಿತು.

ಹೋಟೆಲಲ್ಲಿ ನಾನು ಪ್ರೊ. ಬಯೆರಾರನ್ನು ಕಂಡು ನಡೆದದ್ದನ್ನು ವಿವರಿಸಿದೆ. ಅವರು ಉತ್ತಮ ಸ್ವಭಾವದ ಹಿಂದೂಗಳಾಗಿದ್ದರು. ನಡೆದ ಸಂಗತಿ ಯನ್ನು ಅವರು ಲಘುವಾಗಿ ಪರಿಗಣಿಸಿದರು. ದೇಶ ಇನ್ನೂ ಪ್ರಗತಿಯ ಬಾಲ್ಯಾವಸ್ಥೆಯ ಲ್ಲಿರುವುದರಿಂದ ಇಂಥದ್ದೆಲ್ಲಾ ಸರ್ವೇ ಸಾಮಾನ್ಯ ಎಂಬ ಸಹನಾ ಮನೋಭಾವವನ್ನು ಅವರು ತಾಳಿದ್ದರು. ಆದರೆ ನಾನು ನವ ಸ್ವತಂತ್ರ ದೇಶವೊಂದರಲ್ಲಿ ಇಂಥದ್ದನ್ನು ನಿರೀಕ್ಷಿಸಿರಲಿಲ್ಲ.

ನಾನು ಪತ್ರ ಕೊಡಬೇಕಿದ್ದ ಮುಂಬೈಯ ವಿಜ್ಞಾನಿ, ಜೋಲಿಯೆಟ್–ಕ್ಯೂರಿ ಅವರ ಮಿತ್ರರಾಗಿದ್ದರು. ಅವರು ಭಾರತದ ಪರಮಾಣು ವಿಜ್ಞಾನ ಅಧ್ಯಯನ ಪೀಠದ ನಿರ್ದೇಶಕರಾಗಿದ್ದರು. ಅವರು ತಮ್ಮ ಅಧ್ಯಯನ ಪೀಠ ವೀಕ್ಷಿಸಲು ಹಾಗೂ ಅಂದು ಮಧ್ಯಾಹ್ನವೇ ಪ್ರಧಾನಿಯವರ ಸಹೋದರಿಯೊಂದಿಗೆ ಭೋಜನ ಗೈಯಲು ನನಗೆ ಆಹ್ವಾನವಿತ್ತರು. ಒದಗಿ ಬಂದ ಅದೃಷ್ಟಕ್ಕೆ ಮರು ಮಾತಾಡದೆ ಒಪ್ಪಿಗೆಯನ್ನಿತ್ತೆ. ಒಂದೆಡೆ ದೊಣ್ಣೆ ಪೆಟ್ಟು ನೀಡುವ ಹಸ್ತ, ಇನ್ನೊಂದೆಡೆ ಹೂವಿನ ಗೊಂಚಲನ್ನು ಅರ್ಪಿಸುವ ಹಸ್ತ; ಎಷ್ಟು ಅಜಗಜಾಂತರ! ಮನಸ್ಸು ಗತಸ್ಥಿತಿಯನ್ನು ಕೆದಕಿತ್ತು.

ಪರಮಾಣು ಸಂಶೋಧನಾ ಕೇಂದ್ರವು ಶುಚಿತ್ವ ಹಾಗೂ ವಿದ್ಯುತ್ತಿನ ಆಗರವಾಗಿತ್ತು. ಅಲ್ಲಿ ಬಿಳಿಯುಡುಪು ಧರಿಸಿದ ಪುರುಷರು, ಮಹಿಳೆಯರು ಚುರುಕಾಗಿ ಕಾರ್ಯ ನಿರ್ವಹಿಸುತ್ತಲಿದ್ದರು. ಅವರಿತ್ತ ವೈಜ್ಞಾನಿಕ ವಿವರಗಳಾವುವೂ ನನಗೆ ಪೂರ್ಣ ಅರ್ಥವಾಗದಿದ್ದರೂ ಅವರ ಹಾರ್ದಿಕ ನಡೆನುಡಿಗಳಿಂದ ನಾನು ಆಕರ್ಷಿತನಾಗಿ ಕಸ್ಟಮ್ಸ್ ಅಧಿಕಾರಿಗಳಿಂದ ಅನುಭವಿಸಿದ ಹೇಯ ಕೃತ್ಯವನ್ನು ಮರೆಯುವಂತಾಯಿತು. ಪ್ರಾಯೋಗಿಕ ನಳಿಕೆಯೊಂದರಲ್ಲಿದ್ದ ಪಾದರಸದ ನೆನಪಾಯಿತು. ಅದರ ಅಪೂರ್ವ ರೂಪ, ಗುಣ, ರಾಸಾಯನಿಕ ಕ್ರಿಯೆಗಳು ನನ್ನ ಚಿತ್ತಭಿತ್ತಿಯಲ್ಲಿ ಅಚ್ಚೊತ್ತಿದ್ದವು.

ಅಂದು ಮಧ್ಯಾಹ್ನ ಪ್ರಧಾನಿ (ನೆಹರೂ) ಯವರ ಸಹೋದರಿಯೊಂದಿಗೆ ಭೋಜನ ಗೈದೆವು. ಆಕೆಯ ಹೆಸರೀಗ ನೆನಪಿನಲ್ಲಿ ಉಳಿದಿಲ್ಲ. ಅವಳ ಆಕೆ ಅತ್ಯಂತ ಸುಂದರಿಯಾಗಿದ್ದು ಸುಪ್ರಸಿದ್ಧ ನಟಿಯಂತೆ ಉಡುಪು ಧರಿಸಿದ್ದಳು. ಬಂಗಾರ ಹಾಗೂ ಮುತ್ತಿನ ಆಭರಣಗಳ ಅಲಂಕಾರವನ್ನು ಆಕೆ ಮಾಡಿಕೊಂಡಿದ್ದಳು. ಆ ಕುಲೀನ ಸ್ತ್ರೀ ತನ್ನ ಅಲಂಕೃತ ಬೆರಳುಗಳಿಂದ ಅನ್ನ–ಸಾರು ತಿನ್ನುತ್ತಿದ್ದುದು ಮೋಜಿನದಾಗಿತ್ತು. ದೆಹಲಿಯಲ್ಲಿ ನಾನು ಆಕೆಯ ಸಹೋದರ (ಭಾರತದ ಪ್ರಧಾನಿ)ನನ್ನು ಹಾಗೂ ಜಾಗತಿಕ ಶಾಂತಿ ಪ್ರತಿಪಾದಕ ಮಿತ್ರರನ್ನು ಕಾಣುವುದಾಗಿ ಆಕೆಗೆ ಹೇಳಿದೆ. ಶಾಂತಿಗಾಗಿ ಎಲ್ಲ ಭಾರತೀಯರೂ ಒಮ್ಮತದಿಂದ ಆಂದೋಲನದಲ್ಲಿ ಭಾಗವಹಿಸಬೇಕೆಂಬುದು ಆಕೆಯ ಅಭಿಪ್ರಾಯವಾಗಿತ್ತು.

ಅಂದು ಮಧ್ಯಾಹ್ನ ನಾಳಿದುಕೊಂಡಿದ್ದ ಹೋಟಲಿನಲ್ಲಿ ನನ್ನ ಕಾಗದ – ಪತ್ರಗಳ ಪೊಟ್ಟಣವನ್ನು ಹಿಂತಿರುಗಿಸಲಾಯಿತು. ಅದನ್ನು ಬಿಚ್ಚಿ ಮರು ಸೀಲು ಮಾಡಿದ್ದುದು ನನಗೆ ಕಂಡು ಬಂತು. ಕಸ್ಟಮ್ಸ್ ಅಧಿಕಾರಿಗಳು ಕಾಗದ ಪತ್ರಗಳ ಹಾಗೂ ಜೊತೆಗಿದ್ದ ಲಾಂಡ್ರಿ–ಬಿಲ್ ಸಮೇತ ಫೋಟೋ ತೆಗೆದುಕೊಂಡಿದ್ದಿರಬಹುದು. ಅವರು ನನ್ನ ವಿಳಾಸ ಪುಸ್ತಕದಲ್ಲಿದ್ದ ವಿಳಾಸಿಗರನ್ನು ಭೇಟಿಯಾಗಿ, ಬಗೆಬಗೆಯಾಗಿ ಪ್ರಶ್ನಿಸಿ ತೊಂದರೆ ನೀಡಿದ್ದುದು ನನ್ನ ಗಮನಕ್ಕೆ ಬಂತು. ಅವರು ಭೇಟಿಯಾದವರಲ್ಲಿ ನನ್ನ ಅತ್ತಿಗೆ (ವಿಧವೆ ರಿಕಾರ್ಡೋ ಗೈರಾಲ್ಡೆಸ್‌ನ ಪತ್ನಿ)ಯೂ ಒಬ್ಬಳು. ಭಾರತದ ಮೂಲೆಯೊಂದರಲ್ಲಿದ್ದ ಗ್ರಾಮವೊಂದರಲ್ಲಿದ್ದ ಈಕೆ, ಥಿಯೊಸೊಫಿಸ್ಟ್ ಏಷ್ಯಾದ ತತ್ತ್ವಶಾಸ್ತ್ರಗಳ ಬಗ್ಗೆ ಆಕೆಗೆ ವಿಶೇಷ ಆಸಕ್ತಿಯಿತ್ತು. ಕಸ್ಟಮ್ಸ್ ಅಧಿಕಾರಿಗಳು ನನ್ನ ವಿಳಾಸ ಪುಸ್ತಕದಲ್ಲಿ ಆಕೆಯ ಹೆಸರಿದ್ದುದರಿಂದ ಆಕೆಗೆ ತುಂಬಾ ತೊಂದರೆ ನೀಡಿದ್ದರಂತೆ.

ನಾನು ದೆಹಲಿಗೆ ತೆರಳಿ ಅಲ್ಲಿನ ಪ್ರಮುಖ ಧುರೀಣರೊಡನೆ ಸಮಾಲೋಚನೆ ನಡೆಸಿದೆ. ನಾನು ಭೇಟಿಯಾದವರಲ್ಲಿ ಬರಹಗಾರರು, ತತ್ತ್ವಜ್ಞಾನಿಗಳು, ಹಿಂದೂ ಅರ್ಚಕರು, ಬೌದ್ಧ ಭಿಕ್ಷುಗಳು, ಸರಳ ಜೀವನ ನಡೆಸುತ್ತಿದ್ದ ವಿಭಿನ್ನ ಭಾರತೀಯರು ಇದ್ದರು. ಪ್ರತಿಯೊಬ್ಬರೂ ಪರಂಪರಾಗತ ಶಾಂತಿ ಪ್ರತಿಪಾದನೆಯ ಅನುಮೋದಕರಾಗಿದ್ದರು. ಕಮ್ಯುನಿಸ್ಟರಾಗಲಿ, ಬೌದ್ಧರಾಗಲಿ, ಮಧ್ಯಮ ತರಗತಿಯವರಾಗಲಿ ಯಾರೂ ಶಾಂತಿ ಪ್ರತಿಪಾದನೆಯ ವಿರುದ್ಧ ಚಕಾರವೆತ್ತಲಿಲ್ಲ. ಎಲ್ಲರೂ ಒಮ್ಮತದಿಂದ ಶಾಂತಿ ರಕ್ಷಿಸುವ ಅಭಿಪ್ರಾಯ

ಕುದುರೆಗಳು

ನನ್ನ ಕಿಟಕಿಯ ಮೂಲಕ ನಾನು ಕುದುರೆಗಳನ್ನು ನೋಡಿದೆ.
ಅದು ಬರ್ಲಿನ್‌ನಲ್ಲಿ; ಚಳಿಗಾಲ ಆಗ. ಬೆಳಕಲ್ಲಿ
ಬೆಳಕಿರಲಿಲ್ಲ, ಆಕಾಶದಲ್ಲಿ ಆಕಾಶವಿರಲಿಲ್ಲ.
ಹವಾ : ಬೆಳ್ಳಗೆ, ಹಚ್ಚ ಹೊಸ ಬ್ರೆಡ್ಡಿನಂತೆ.
ನನ್ನ ಕಿಟಕಿಯಿಂದ ನೋಡಿದೆ: ಹೊರಗೆ ಒಂದು ಬಗೆಯ
ಸರ್ಕಸ್ ವೃತ್ತ ಮೂಡಿತ್ತು.
ಚಳಿಗಾಲದ ಹಲ್ಲು ಹಿಮದಲ್ಲಿ ವೃತ್ತವೊಂದನ್ನು ಕಡಿದಿತ್ತು.
ಇದ್ದಕ್ಕಿದ್ದಂತೆ ಮನುಷ್ಯನೊಬ್ಬನ ಹಿಂದೆ
ಹಿಮದೊಳಕ್ಕೆ ನಡೆದು ಬಂದವು ಹತ್ತು ಕುದುರೆಗಳು,
ಅವು ನಡೆದು ಬಂದಂತೆ ಒಂದಿಷ್ಟು ಅಲುಗಲಿಲ್ಲ, ಚಲನೆ ಕಾಣಲಿಲ್ಲ
ಬೆಂಕಿಯಂತೆ; ಆದರೆ ನನ್ನ ಕಣ್ಣುಗಳಿಗೆ ಕಂಡವವು, ತುಂಬಿದಂತೆ
ಈವರೆಗೆ ಬರಿದಾಗಿದ್ದ ವಿಶ್ವವನ್ನೆಲ್ಲಾ. ಪರಿಪೂರ್ಣ, ಪ್ರಜ್ವಲ,
ಅವು ಹತ್ತು ದೇವತೆಗಳಿದ್ದಂತೆ; ಅವುಗಳ ದೇಹಗಳು ಮಹೋನ್ನತ, ನಿರ್ಮಲ.
ಅವುಗಳ ಕೇಸರಗಳು, ಉಪ್ಪೆರಚುವ ಅಲೆಗಳ ಕನಸಿನ ಹಾಗೆ,
ಅವುಗಳ ಪೃಷ್ಠಗಳು, ದುಂಡಗೆ–ಭೂಮಿಗಳ, ಕಿತ್ತಳೆ ಹಣ್ಣುಗಳ ಹಾಗೆ.
ಅವುಗಳ ಕೊರಳುಗಳು, ಧೀಮಂತಿಕೆಯಿಂದ ನಿಂತ
ಕಲ್ಲಲ್ಲಿ ಕಡೆದ ಗೋಪುರಗಳಂತೆ.
ಸಕ್ತ, ಕೆಂಪು ಕಣ್ಣುಗಳಿಂದ
ಹೊರಕ್ಕೆ ದಿಟ್ಟಿಸುವ ಸೆರೆಯಾಳಿನಂತೆ.
ಆ ಅಲ್ಲಿ, ಮೌನದಲ್ಲಿ, ದಿನದ ಮಧ್ಯದಲ್ಲಿ,
ಒಂದು ದರಿದ್ರ, ಅಸ್ತವ್ಯಸ್ತ ಚಳಿಗಾಲದಲ್ಲಿ,
ಆ ಧೀಮಂತ ಕುದುರೆಗಳು ರಕ್ತವಾದವು
ಲಯವಾದವು, ಬದುಕಿನ ಮಿಡಿವ ಚೈತನ್ಯವಾದವು.
ನಾವು ಅವುಗಳತ್ತ ನೋಡಿದೆ, ಮತ್ತೆ ನೋಡಿದೆ, ಬಿಮ್ಮಗೇ ಎಚ್ಚೆತ್ತುಕೊಂಡೆ!
ತಿಳಿದಿರಲಿಲ್ಲ ನನಗೆ, ಆದರಿದು ಬುಗ್ಗೆ,
ಬಂಗಾರದ ನೃತ್ಯ, ಆಕಾಶ, ಚೆಲುವಲ್ಲಿ ಬದುಕಿದ ಬೆಂಕಿ!
ಮರೆತು ಹೋಗಿದೆ ನನಗೆ ಬರ್ಲಿನ್‌ನ ಆ ವಿಷಾದದ ಚಳಿಗಾಲ.
ಆದರೆ ಆ ಕುದುರೆಗಳಿಂದ ಹೊಮ್ಮಿದ ಬೆಳಕನ್ನು ನಾನೆಂದೂ ಮರೆಯುವುದಿಲ್ಲ.

ಪಾಬ್ಲೊ ನೆರುಡಾ ಕನ್ನಡಕ್ಕೆ : **ಡಿ. ಎಸ್. ನಾಗಭೂಷಣ.**

ವನ್ನು ವ್ಯಕ್ತಪಡಿಸಿಧರು. ನಾನು ಅವರ ಅಭಿಪ್ರಾಯವನ್ನು ಅನುಮೋದಿಸಿದೆ.

ಭೋಜನದ ವೇಳೆಗೆ ಸರಿಯಾಗಿ ನನ್ನ ಮಿತ್ರರಾದ ಬರಹಗಾರ ಹಾಗೂ ವೈದ್ಯರಾಗಿದ್ದ ಚಿಲಿಯ ರಾಯಭಾರಿ ಡಾ. ಜುಆನ್ ಮರಿನ್ ಆಗಮಿಸಿದರು. ಮಾತಿನ ಮಧ್ಯೆ ತಾವು ಪ್ರಮುಖ ಪೋಲೀಸ್ ಅಧಿಕಾರಿಯನ್ನು ಕಂಡುದಾಗಿಯೂ ಭಾರತಕ್ಕೆ ನಾನು (ಪಾಬ್ಲೊ ನೆರೂಡಾ) ಬಂದಿದ್ದು, ನನ್ನ ಇಲ್ಲಿನ ಕಾರ್ಯಾಚರಣೆ ಭಾರತ ಸರಕಾರಕ್ಕೆ ಆತಂಕಕಾರಿಯಾಗಿರುವುದಾಗಿಯೂ ಕೂಡಲೇ, ಇಲ್ಲಿಂದ ನಿರ್ಗಮಿಸಬೇಕೆಂದೂ ಅವರು ಸೂಚಿಸಿದ್ದಾರೆಂದು ಮರಿನ್ ತಿಳಿಸಿದರು. ಹೋಟೆಲಿನ ತೋಟದಲ್ಲಿ ನಾಲ್ಕಾರು ಪ್ರಮುಖರೊಡನೆ ಶಾಂತಿ ಕುರಿತು ಚರ್ಚಿಸುವುದಾಗಿಯೂ, ಅನಂತರ ಪ್ರಧಾನಿಯವನ್ನು ಕಂಡು ಕ್ಯೂರಿ ಅವರ ಪತ್ರ ತಲುಪಿಸಿದ ಮರುಕ್ಷಣವೇ ವಿದೇಶಕ್ಕೆ ಹಿಂದಿರುಗುವುದಾಗಿ ನಾನು ಮರಿನ್‌ರಿಗೆ ತಿಳಿಸಿದೆ.

ಮರಿನ್‌ರು ಚಿಲಿಯಲ್ಲಿ ಸಮಾಜವಾದೀ ಪಕ್ಷದ ಸ್ಥಾಪಕರಲ್ಲಿ ಒಬ್ಬರು. ರಾಜತಾಂತ್ರಿಕ ಹುದ್ದೆಯಿಂದಾಗಿ ಈಗವರು ಅದರತ್ತ ಗಮನ ಹರಿಸಲಿಲ್ಲ. ಭಾರತ ಸರ್ಕಾರದ ಅಧಿಕಾರಿಗಳ ನಿಲುವು ನನಗೆ ಸರಿದೋರಲಿಲ್ಲ. ಈ ಬಗ್ಗೆ ಚಕಾರವೆತ್ತದೆ. ಮರಿನ್‌ರ ಬೆಂಬಲ ಅಪೇಕ್ಷಿಸದೆ ನಾನು ಸುಮ್ಮನಾದೆ. ತನ್ನ ಬಂದ ಕೆಲಸ ಪೂರೈಸಿದೊಡನೆ ಮರಿನ್ ಹೊರಟುಹೋದರು.

ಅಂದು ಬೆಳಿಗ್ಗೆ ತಮ್ಮ ಕಾರ್ಯಾಲಯದಲ್ಲಿ ಭೇಟಿಯಾಗಲು ಪ್ರಧಾನಿ ನೆಹರೂ ನನಗೆ ಅನುಮತಿ ನೀಡಿದರು. ಮುಖದಲ್ಲಿ ಸ್ವಾಗತಿಸುವ ಯಾವ ಹಾರ್ದಿಕ ಮಂದಹಾಸದ ಗುರುತೂ ಇಲ್ಲದ ನೆಹರೂ ಎದ್ದು ಯಾಂತ್ರಿಕವಾಗಿ ನನ್ನ ಕೈ ಕುಲುಕಿದರು. ಅವರ ಆಗಿನ ಮುಖಭಾವ ನನ್ನ ಸ್ಮೃತಿಪಟಲಲ್ಲಿ ಇನ್ನೂ ಹಸಿರಾಗಿದೆ. ೩೦ ವರ್ಷಗಳ ಹಿಂದೆ ಅವರು ಹಾಗೂ ಅವರ ತಂದೆ ನನ್ನನ್ನು ಸ್ವಾತಂತ್ರ್ಯಾಂದೋಲನದ ಬೃಹತ್ ರ‍್ಯಾಲಿಗೆ ಪರಿಚಯಿಸಿದ್ದರು. ಅದನ್ನು ನಾನವರಿಗೆ ಜ್ಞಾಪಿಸಿದರೂ ಪ್ರಯೋಜನವಾಗಲಿಲ್ಲ.

ನಾನವರಿಗೆ ಕ್ಯೂರಿ ಅವರ ಪತ್ರ ಕೊಟ್ಟೆ. ಫ್ರೆಂಚ್ ವಿಜ್ಞಾನಿ ಕ್ಯೂರಿಯ ಬಗ್ಗೆ ತಮಗೆ ಅತಿ ಗೌರವವಿರುವುದಾಗಿ ಹೇಳಿ, ಅವರು ಪತ್ರ ಓದಿದರು. ಪತ್ರದಲ್ಲಿ ಕ್ಯೂರಿ ನನ್ನನ್ನು ನೆಹರೂರಿಗೆ ಪರಿಚಯಿಸಿ, ನನ್ನ ಕಾರ್ಯಾಚರಣೆಯಲ್ಲಿ ಸಹಕಾರ ನೀಡುವಂತೆ ಸೂಚಿಸಿದ್ದರು. ಲಕೋಟೆಯಲ್ಲಿ ಪತ್ರವನ್ನು ಮಡಚಿಟ್ಟು ಮೌನದಿಂದ ನನ್ನತ್ತ ದೃಷ್ಟಿ ಹರಿಸಿದರು ನೆಹರೂ. ಅಂತರಿಕವಾಗಿ ನೆಹರೂ ಏನು ಯೋಚಿಸುತ್ತಲಿದ್ದರೋ! ಆಗಿನ ಅವರ ಮುಖಭಾವ ವೀಕ್ಷಿಸಿದಾಗ ನನಗಂತೂ ಅವರ ಉನ್ನತ ವ್ಯಕ್ತಿತ್ವ ಕುಸಿದಂತೆ ತೋರಿತು. ಅವರ ಬಗೆಗಿನ ನನ್ನ ಗೌರವಾದರ ಮನೋಭಾವನೆ ಜರ್ರನೆ ಇಳಿಯಿತು. ನಾನು ಅವರ ತಂದೆ ಮೋತೀಲಾಲರನ್ನು ನೆನೆದೆ. ಮೋತಿಲಾಲರು ಅತ್ಯಂತ ಶ್ರೀಮಂತರು. ಅವರು ಗಾಂಧಿ ಅನುಯಾಯಿ ಅಲ್ಲದೆ ಅವರು ಕಾಂಗ್ರೆಸ್ ಚಳವಳಿಗೆ ತನುಮನದಿಂದ ಸಾಕಷ್ಟು ಸಹಕಾರವಿತ್ತವರು. ಜಮೀನದಾರನು ತನ್ನ ಬರಿಗಾಲ ರೈತನೊಂದಿಗೆ ವರ್ತಿಸುವಂತೆ ಜವಾಹರಲಾಲರು ನನ್ನೊಂದಿಗೆ ವರ್ತಿಸುತ್ತಿದ್ದಂತೆ ಭಾಸವಾಯಿತು. ಬಹುಶಃ ಅವರಿಗೆ ತಮ್ಮ ಶ್ರೀಮಂತ ಜಮೀನುದಾರಿಕೆ ನೆನಪಿಗೆ ಬಂದಿತ್ತೇನೋ !

"ನಾನು ವಿದೇಶಕ್ಕೆ ಹಿಂತಿರುಗಿದೊಡನೆ ಜೋಲಿಯೆಟ್–ಕ್ಯೂರಿಗೆ ಹೇಳಲು ನೀವೇನಾದರೂ ತಿಳಿಸುವದಿದೆಯೇ?" ಎಂದು ನಾನು ಪ್ರಶ್ನಿಸಿದೆ.

"ನಾನು ಅವರ ಪತ್ರಕ್ಕೆ ಉತ್ತರಿಸುವೆ" ಎಂದವರು ಹೇಳಿದರು.

ಅಲ್ಲಿಗೆ ಮಾತು ನಿಂತಿತು. ನಾನು ಕ್ಷಣಕಾಲ ಸುಮ್ಮನಿದ್ದೆ. ನನ್ನಿರವು ಸಮಯವನ್ನು ವ್ಯರ್ಥೈಸುವಂತೆ ಅನಿಸಿದರೂ ಅವರು ತೋರ್ಪಡಿಸಲಿಚ್ಛಿಸಲಿಲ್ಲ. ನಾನು ಬಂದ ಕಾರ್ಯದ ವಿವರ ನೀಡಬೇಕೆದ್ದುದು ಅವಶ್ಯವಿತ್ತು. ಆದ್ದರಿಂದ ನಾನು, ಇಂದಿನ ನಡೆದಿರುವ ಶೀತಲ ಯುದ್ಧ ಎಂದು ಆಸ್ಫೋಟಗೊಳ್ಳುವುದೋ ತಿಳಿಯದು. ಇದರಿಂದ ಮಾನವ ಕಲ್ಯಾಣ

Statement about ownership and other particulars about newspaper Kasturi to be published in the first issue every year after the last day of February.

FORM – IV

(*See Rule 8*)

1	Place of publication	:	HUBLI
2	Periodicity of its publication	:	Monthly
3	Printer's name	:	Sri P. S. Bhat
	Whether citizen of India ?	:	Yes
	Address	:	The Jayakarnataka News Printers Ltd., Post Box No. 30, Hubli–580 020
4	Publisher's name	:	Sri P. S. Bhat
	Whether citizen of India ?	:	Yes
	Address	:	The Jayakarnataka News Printers Ltd., Post Box No. 30, Hubli–580 020
5	Editor's name	:	Shri P. S. Bhat
	Whether citizen of India ?	:	Yes
	Address	:	The Jayakarnataka News Printers Ltd., 105, 1st Main, Palace Guttahalli, Bangalore–560 020
6	Name and address of individuals who own the newspaper and partners or share–holders holding more than one percent of the total capital	:	1) Sri H R. Basavaraj, 26/A–?, Sankey Road, Bangalore-52. 2) Sri H B. Narayanaswamy, 138, 10th Main, 6th A Cross,

Rajmahal Vilas Extn., Bangalore-6. 3) Sri L. Lakshman, 1/9/20, Station Road, Raichur. 4) H. S. Pakeerappa, 6/1, Ramaswamy Lane, H. Siddaiah Road, Bangalore-27. 5) Sri G. H. Allappa, 1/9/20, Station Road, Raichur. 6) Sri H. T. Ramaiu, 1/9/20, Station Road, Raichur. 7) Sri H Ebrahim, Excise Contractor, Basavanagudi, Shimoga. 8) Sri N. Jayanna, Excise Contractor, Challakere. 9) Sri P. Venkat Rao, Visakaptnam 10) Sri C. H. Raghava Rao, Visakapatanam. 11) Sri C. H. Pattabhirama Rao, Visakapatnam. 12) Smt. Vemplli Swarna, Vishakapatanam 13) Sri D. Dasappa, 421, 3rd Cross, Willson Garden, Bangalore-27. 14) Sri D. Ramachahdrappa, 421, 3rd Cross, Willson Garden, Bangalore-27. 15) Sri R. Rajamalliah, Excise Contractor, Mandya. 16) Sri M. Vinayak, M/s. Vinayak Beer & Wines. Himayatngar, Hyderabad. 17) Miss. Annapuoorna A. C. 29, 15th Cross, 3rd Block, Jayanagar, Bangalore-11. 18) Sri Ramadas Ballal U. N. 16, Race Course Road, Banalore-1. 19) Sri Baktavatchalam, M. 7, 3rd Main Road, New Thargupet, B'galore-2. 20) Sri Chandrasekhar Raju A.C. 29 15th Cross, 3rd, Block Jayanagar, Bangalore-11. 21) Miss Hemalata A. C. 29, 15th Cross, 3rd Block, Jayanagar, Bangalore-11. 22) Sri Krishna Raju A. C. 29, 15th Cross, 3rd Block, Jayanagar Bangalore-11. 23) Smt. Laksmama, 29, 15th Cross, 3rd Block, Jayanagr, Bangalore-1. 24) Sri Ranka Road-Lines P. Ltd., 2, 1st Floor, New Thargupet, Bangalore-2. 25) Smt. Ramamani Rao R. No. 54, "Vinaya" E.A.T. Road, Bangalore-4. 26) Sri Srinivasa Raju A. C. 29, 15th Cross, 3rd Block, Jayanagar, Bangalore-11. 27) Smt. Sharada A. C. 29, 15th Cross, 3rd Block, Jayanagar, Bangalore-11. 28) Miss. Tejovathi, 29, 15th Cross, 3rd Block, Jayanagr, Bangalore-11.

I, P. S. Bhat, hereby declare that the particulars given above are true to the best of my knowledge and belief.

Place : HUBLI — **P. S. BHAT**

Date : 1–3–1980 — Signature of Publisher

ನಿರ್ನಾಮವಾಗುತ್ತದೆ. ಯುದ್ಧ ಕಾವೇರಿದಾಗ ಪರಮಾಣು ಶಸ್ತ್ರಾಸ್ತ್ರಗಳನ್ನು ಬಳಸುವ ಅಪಾಯವುಂಟು. ಆದ್ದರಿಂದ ಮಾನವ ಕಲ್ಯಾಣಾರ್ಥ ಶಾಂತಿ ಅಗತ್ಯವಿದ್ದು ಶಾಂತಿ ಪ್ರತಿಪಾದಕರೆಲ್ಲ ಈಗ ಒಗ್ಗೂಡಿ ಕಾರ್ಯ ನಿರ್ವಹಿಸಬೇಕೆಂದು ಹೇಳಿದೆ.

ನನ್ನ ಮಾತಿನತ್ತ ನೆಹರೂ ಅಲಕ್ಷ್ಯ ಭಾವನೆ ತಾಳಿದ್ದರು. ಕೆಲ ಕ್ಷಣಗಳ ನಂತರ ಅವರು "ಶಾಂತಿ ಬಗ್ಗೆ ಉಭಯತ್ರರಲ್ಲಿ ಭಿನ್ನಾಭಿಪ್ರಾಯ ಇದೆಯಲ್ಲ" ಎಂದರು.

"ಹೌದು, ವೈಯಕ್ತಿಕವಾಗಿ" ನಾನೆಂದೆ. "ಸಮರ ಬಯಸುವ ವ್ಯಕ್ತಿಗಳೆ ವಿನಾ ಮಿಕ್ಕೆಲ್ಲ ಶಾಂತಿಪ್ರತಿಪಾದಕರೂ, ಶಾಂತಿ ರಕ್ಷಕರೂ ಶಾಂತಿ ಆಂದೋಲನಕ್ಕೆ ಖಂಡಿತ ಸಹಕರಿಸುವರು" ಎಂದು ನಾನು ಹೇಳಿದೆ.

ಅವರು ದೀರ್ಘ ಮೌನ ತಾಳಿದಾಗ ಮಾತು ಕತೆ ಮುಗಿಯಿತೆಂದು ನಾನು ಭಾವಿಸಿದೆ. ಮೇಲೆದ್ದು ನಾನು ಕೈ ಚಾಚಿದೆ. ಅವರು ಮೌನದಿಂದ ಕೈ ಕುಲುಕಿದರು.

"ನಿಮ್ಮ ಮಿಕ್ಕ ಅಪೇಕ್ಷೆ ಏನಾದರೂ ಇದ್ದರೆ ಹೇಳಿ, ಕೈಲಾದ ಸಹಾಯ ಮಾಡುವೆ" ನೆಹರೂ ಅಂದಾಗ ನಾನು,

"ಹಿಂದೊಮ್ಮೆ ನಾನು ಭಾರತದಲ್ಲಿದ್ದೆ. ಆಗ ನಾನು ತಾಜ್ ಮಹಲ್ ನೋಡುವುದಾಗಿರಲಿಲ್ಲ. ಈಗ ನೋಡಬೇಕೆಂದರೆ ಪೋಲೀಸ್ ಅಧಿಕಾರಿಗಳ ಸೂಚನೆ ಅಡ್ಡ ಬರುತ್ತದೆ. ಅವರ ಮಾತಿನ ಮೇರೆಗೆ ನಾನೀಗ ಕೂಡಲೇ ಯೂರೋಪಿಗೆ ಹಿಂತಿರುಗಬೇಕಿದ್ದು, ನಾನು ನಾಳೆಯೇ ಪ್ರಯಾಣ ಕೈಗೊಳ್ಳಬೇಕೆಂದಿದ್ದೇನೆ" ಎಂದು ಹೇಳಿದೆ.

ನೆಹರೂರಿಂದ ಬೀಳ್ಕೊಂಡ ನಾನು ಹೋಟೆಲ್‌ಗೆ ಧಾವಿಸಿದಾಗ ಮ್ಯಾನೇಜರ್ ನನಗೊಂದು ಸಂದೇಶ ನೀಡಲು ಕಾದಿದ್ದ. ತಾಜಮಹಲನ್ನು ನಾನು ಯಾವಾಗ ಬೇಕಾದರೂ ನೋಡಲು ಸರ್ಕಾರ ಅನುಮತಿ ನೀಡಿದ್ದು ಸಂದೇಶದ ಸಾರವಾಗಿತ್ತು.

"ನನ್ನ ಬಿಲ್ ಸಿದ್ಧಪಡಿಸಿ. ತಾಜಮಹಲ್ ವೀಕ್ಷಿಸಲು ನನಗೀಗ ಬಿಡುವಿಲ್ಲ. ಕೂಡಲೇ ನಾನು ವಿಮಾನ ನಿಲ್ದಾಣಕ್ಕೆ ಹೋಗಿ ಪ್ಯಾರಿಸ್‌ಗೆ ಮೊದಲು ಹೋಗುವ ವಿಮಾನದಲ್ಲಿ ನಾನು ಪ್ರಯಾಣ ಕೈಗೊಳ್ಳಬೇಕಾಗಿದೆ" ಎಂದು ಮ್ಯಾನೇಜರ್‌ಗೆ ನಾನು ಹೈಳಿಬಿಟ್ಟೆ.

ಐದು ವರ್ಷಗಳ ನಂತರ ಮಾಸ್ಕೋದಲ್ಲಿ ನಾನು ಲೆನಿನ್ ಶಾಂತಿ ಪಾರಿತೋಷಕ ಸಮಿತಿಯ ವಾರ್ಷಿಕ ಅಂತರಾಷ್ಟ್ರೀಯ ಸಭೆಯೊಂದರಲ್ಲಿ ಉಪಸ್ಥಿತನಿದ್ದೆ. ಆ ವರ್ಷದಲ್ಲಿ ಶಾಂತಿ ಪಾರಿತೋಷಕ ಪಡೆವ ಅರ್ಹ ವ್ಯಕ್ತಿಯ ಹೆಸರುಗಳನ್ನು ಸೂಚಿಸಲಾಯಿತು. ಭಾರತೀಯ ಪ್ರತಿನಿಧಿ, ಜವಾಹಲಲಾಲ್ ನೆಹರೂರ ಹೆಸರನ್ನು ಸೂಚಿಸಿದ. ನನ್ನ ಮುಖದಲ್ಲಿ ಮುಗುಳ್ನಗೆ ಮಿಂಚಿ ಮಾಯವಾಯಿತು. ಅಲ್ಲಿದ್ದ ಯಾರಿಗೂ ನನ್ನ ಮುಖಭಾವದ ಅರಿವಿರಲಿಲ್ಲ. ನಾನು ನೆಹರೂ ಪರವಾಗಿ ಮತವಿತ್ತೆ. ಆ ವರ್ಷ ನೆಹರೂರಿಗೆ ಜಾಗತಿಕ ಶಾಂತಿ ಪಾರಿತೋಷಕ ಲಭಿಸಿತು. ✡

(ನೋಬೆಲ್ ಪಾರಿತೋಷಕ ವಿಜೇತ ಬಿ. ನೆರುಡಾರ ಡೈರಿಯಿಂದ)

ಓರ್ವ ಪ್ರಸಿದ್ಧ ಕಲಾವಿದ : ನಿಮ್ಮ ಸುಂದರ ಜೋಡಿ ಎತ್ತುಗಳನ್ನೊಳಗೊಂಡ ನನ್ನ ಚಿತ್ರ ಮೂರುಸಾವಿರಕ್ಕೆ ಮಾರಾಟವಾಯ್ತು.

ಗ್ರಾಮಸ್ಥ : ಯಾವ ಮೂರ್ಖ ಆ ಚಿತ್ರವನ್ನು ಕೊಂಡ ? ಆ ಬೆಲೆಗೆ ನಾನು ಈ ಜೀವಂತ ಎತ್ತುಗಳನ್ನೇ ಕೊಡುತ್ತಿದ್ದೆನಲ್ಲಾ.

ಮೂರು ಮಕ್ಕಳು

ಎಮ್ಮಾರೆಸ್ರಾವ್

ಈ ಕಥೆಯನ್ನು ಸಲಾ ಅಲ್ಲಾಹ ಅಲೈಹಾ ವಸ್ಸಲಂ ಎಂಬ ಇಸ್ಲಾಂ ಸಂತನೊಬ್ಬ ಹೇಳಿದ್ದು.

ಎಲ್ಲರಿಗೂ ಬರುವ ಹಾಗೆ ಒಂದು ಸಲ ಶ್ರೀಮಂತನೊಬ್ಬನಿಗೆ ಕೊನೆಗಾಲ ಬಂತು. ಮೃತ್ಯು ಸಮೀಪಿಸುತ್ತಿದ್ದ ಹಾಗೆ ಮನಸ್ಸಿನ ದುಗುಡ ಹೆಚ್ಚಿ ಈ ಕಾಲದಲ್ಲಿ ಯಾರಾದರೂ ಮಕ್ಕಳು ಸಹಾಯಕ್ಕೆ ಬಂದಾರು ಎಂದುಕೊಂಡು ಹಿರಿಯ ಮಗನನ್ನು ಕರೆದ. "ನೋಡಪ್ಪಾ, ಇನ್ನೇನೂ ನಾನು ಹೆಚ್ಚು ಕಾಲ ಬದುಕುವದಿಲ್ಲ. ಆದರೆ ಇಷ್ಟು ದಿನ ನಿಮ್ಮೊಡನೆ ಸಂತೋಷವಾಗಿದ್ದ ನನಗೆ ನಿಮ್ಮನ್ನೆಲ್ಲ ಬಿಟ್ಟು ಏಕಾಕಿಯಾಗಿ ಮೃತ್ಯುವಿನ ದ್ವಾರವನ್ನು ಪ್ರವೇಶಿಸಲು ತುಂಬಾ ಭಯವಾಗುತ್ತದೆ. ಇಂಥಾ ಸಂಕಟದ ಕಾಲದಲ್ಲಿ ನೀನು ನನಗಾಗಿ ಏನಾದರೂ ಮಾಡಬಾರದೆ?" ಎಂದು ಕೇಳಿದಾಗ ಹಿರಿಯ ಮಗ "ನೋಡಪ್ಪಾ. ನಾವು ಒಳ್ಳೆ ವೈದ್ಯರನ್ನು ಕರೆಸಿದೆವು. ಅವರು ಹೇಳಿದ ಔಷಧಿಗಳನ್ನೆಲ್ಲಾ ತಂದು ಕೊಟ್ಟೆವು. ನಿನ್ನನ್ನುಳಿಸಿಕೊಳ್ಳಲು ಎಲ್ಲ ರೀತಿಯಿಂದಲೂ ಪ್ರಯತ್ನಿಸಿದೆವು. ಆದರೆ ಪರಿಸ್ಥಿತಿ ಕೈಮೀರಿದಾಗ ನಾವಾದರೂ ಏನು ಮಾಡಬೇಕು ಹೇಳು ?" ಅಂದ.

ಇವನಿಂದ ಪ್ರಯೋಜನವಿಲ್ಲವೆಂದುಕೊಂಡು ಶ್ರೀಮಂತ ಎರಡನೆಯವನನ್ನು ಕರೆದು ಮೊದಲು ಕೇಳಿದ ಪ್ರಶ್ನೆಯನ್ನೇ ಕೇಳಿದಾಗ ಅವನು, "ಅಪ್ಪಾ, ಒಂದಲ್ಲ ಒಂದು ದಿನ ಎಲ್ಲರೂ ಏಕಾಕಿಯಾಗಿ ಹೋಗಬೇಕು. ಅದು ಜಗತ್ತಿನ ನಿಯಮ. ನೀನು ನಮ್ಮನ್ನು ಬಹಳ ಚೆನ್ನಾಗಿ ನೋಡಿಕೊಂಡಿದ್ದೀ. ನಿನ್ನ ಉಪಕಾರವನ್ನು ನಾನೆಂದಿಗೂ ಮರೆಯುವದಿಲ್ಲ. ಆದರೆ ಈಗ ನಾನಾದರೂ ಏನು ಮಾಡಲಿ? ನೀನು ಹೋದ ನಂತರ ಮಗನಾಗಿ ನಾನು ನೆರವೇರಿಸಬೇಕಾದ ಎಲ್ಲ ಧಾರ್ಮಿಕ ವಿಧಿಗಳನ್ನು ನೆರವೇರಿಸುತ್ತೇನೆ. ಬಡಬಗ್ಗರಿಗೆ ಊಟ ಹಾಕಿಸುತ್ತೇನೆ. ನಿನ್ನ ಗೋರಿಯ ಮೇಲೆ ತಪ್ಪದೆ ಹೂಗಳನ್ನೇರಿಸುತ್ತೇನೆ. ಇದಕ್ಕಿಂತ ಹೆಚ್ಚು ಯಾವ ಮಗ ಮಾಡಿಯಾನು?" ಅಂದ.

ಇವನೂ ಶುದ್ಧ ನಿಷ್ಪ್ರಯೋಜಕ ಎಂದುಕೊಂಡ ಶ್ರೀಮಂತ ಕೊನೆಯ ಮಗನನ್ನು ಕರೆದು.

"ನೋಡು ಪುಟ್ಟಾ, ನಿನ್ನ ಅಣ್ಣಂದಿರಾರೂ ಕೊನೆ ಗಾಲದಲ್ಲಿ ನನ್ನ ಸಹಾಯಕ್ಕೆ ಬರಲಿಲ್ಲ. ಮೃತ್ಯುವು ನನ್ನನ್ನು ಕೈಬೀಸಿ ಕರೆಯುತ್ತಿದೆ. ಆದರೆ ಅಲ್ಲಿ ಹೋಗಲು ನನಗೆ ತುಂಬಾ ಭಯ. ಈಗ ಏನು ಮಾಡಬೇಕೆಂದೇ ತೋಚುತ್ತಿಲ್ಲ. ದಿಗ್ಭ್ರಾಂತಿ ಯಿಂದ ಹೌಹಾರಿರುವ ನನ್ನನ್ನು ಹೇಗಾದರೂ ಮಾಡಿ ಕಾಪಾಡಲಾರೆಯಾ?" ಅಂದ. ಕೂಡಲೆ ಕಿರಿಯ ಮಗ ಅದಕ್ಕೇಕೆ ಚಿಂತೆ ಅಪ್ಪಾಜಿ. ಮರಣ ಯಾರಿಗೂ ತಪ್ಪಿದ್ದಲ್ಲ; ಅದು ಬಂದರೆ ಬರಲಿ ಧೈರ್ಯ ಕಳೆದುಕೊಳ್ಳದೆ ಅದನ್ನು ಸ್ವಾಗತಿಸಿ. ಹೆದರಿಕೆಯೆಂಬ ಶಬ್ದದ ಸೊಲ್ಲೇ ಬೇಡ. ಹೇಗೂ ನಾನು ಇಲ್ಲಿ ನಿಮ್ಮೊಡನೆ ಇದ್ದೇನೆ. ನೀವು ತೀರಿ ಹೋದ ನಂತರವೂ ನಿಮ್ಮೊಡನೆಯೆ ಇರುತ್ತೇನೆ. ಮೃತ್ಯುವಿನ ದ್ವಾರವನ್ನು ಇಬ್ಬರೂ ಪ್ರವೇಶಿಸೋಣ," ಎಂದು ಹೇಳಿದ್ದನ್ನು ಕೇಳಿ ಶ್ರೀಮಂತ ಶಾಂತಿಯಿಂದ ಕಣ್ಣು ಮುಚಿದ.

ಕಥೆಯನ್ನು ಮುಗಿಸಿದ ವಸ್ಸಲಂ "ಆ ಮೂವರು ಪುತ್ರರು ಯಾರೆಂಬುದು ಗೊತ್ತಾಯಿತೆ?" ಎಂದು ಶಿಷ್ಯರನ್ನು ಕೇಳಿದಾಗ ಅವರು ಇಲ್ಲವೆಂದು ತಲೆ ಯಾಡಿಸಿದರು. ಆಗ ಸಲಾ ಅಲ್ಲಾಹ ವಸ್ಸಲಂ ಹೇಳಿದ. "ಯಾರೂ ಅಲ್ಲ. ಆ ಮೂವರನ್ನು ಕಥೆಯಲ್ಲಿ ಸಾಂಕೇತಿಕವಾಗಿ ಬಳಸಿದ್ದೇನೆ. ಮೊದಲನೆಯದು ನಿಮ್ಮ ಬಳಿಯಿರುವ ಧನ. ಅದರಿಂದಲೇ ಅಲ್ಲವೆ ಕಷ್ಟಕಾಲದಲ್ಲಿ ನಿಮ್ಮನ್ನು ನೀವು ರಕ್ಷಿಸಿಕೊಳ್ಳುವುದು? ಎರಡನೆಯದು ಆಪ್ತಜನ. ಇನ್ನು ಮೂರನೆಯದು ನೀವು ಮಾಡಿದ ಕರ್ಮ. ಅದೇ ಇಹದಲ್ಲಿಯೂ ಪರದಲ್ಲಿಯೂ ಜನ್ಮಜನ್ಮಾಂತರದಲ್ಲಿ ನಿಮ್ಮನ್ನು ಬೆಂಬತ್ತಿ ಬರುವಂಥಾದ್ದು. ಆದ್ದರಿಂದ ಶಿಷ್ಯರೆ, ನೀವು ಎಲ್ಲಿಯೇ ಹೋಗಿ ಏನೇ ಮಾಡಿ ಪುಣ್ಯಪಥದಿಂದ ನಿಮ್ಮ ದೃಷ್ಟಿ ಎಂದಿಗೂ ಬದಲಾಗದಿರಲಿ."

☆

ಪರಿಚಯದ ಪ್ರಭಾವ

ಒಂದು ಕಾಲದಲ್ಲಿ ಯಾಂಗ್ ಚೂ ಹೆಸರಿನ ಒಬ್ಬ ವ್ಯಕ್ತಿಯಿದ್ದ. ಆತನ ತಮ್ಮನ ಹೆಸರು ಯೂ ಎಂಬುದಾಗಿ. ಯೂ ಒಂದು ದಿನ, ಬಿಳಿಯ ರೇಷ್ಮೆ ಕೋಟನ್ನು ಧರಿಸಿ ಹೊರಗೆ ನಿರ್ಗಮಿಸಿದ. ಆತನ ಸುಂದರ ನಾಯಿ ಬಾಗಿಲ ಬಳಿ ಕುಳಿತಿತ್ತು. ಅದು ಯೂಗೆ ಬಾಲವನ್ನು ಅಲುಗಾಡಿಸಿ, ಸ್ನೇಹಪೂರ್ವಕವಾಗಿ ಬೀಳ್ಕೊಟ್ಟಿತು.

ಸ್ವಲ್ಪ ಸಮಯವಾದ ನಂತರ, ಯೂ ಮನೆಗೆ ಹಿಂತಿರುಗಿದ. ಆ ಸಮಯದಲ್ಲಿ ಆತ ಬಿಳಿ ಕೋಟಿಗೆ ಬದಲಾಗಿ, ಕಪ್ಪು ಕೋಟನ್ನು ಧರಿಸಿದ್ದ. ಆತನನ್ನು ವೀಕ್ಷಿಸಿ ನಾಯಿ ಜೋರಾಗಿ ಬೊಗಳತೊಡಗಿತು.

ಯೂಗೆ ಅಧಿಕ ಕೋಪ ಬಂದು, ನಾಯಿಯನ್ನು ಹೊಡೆಯಲು ಪ್ರಯತ್ನಿಸಿದಾಗ, ಅವನ ಅಣ್ಣ ಯಾಂಗ್ ಚೂ ಅದನ್ನು ತಡೆಯುತ್ತಾ ನುಡಿದ, "ಯೂ, ಇದನ್ನು ಥಳಿಸಬೇಡ. ನಿನ್ನ ಬಿಳಿ ನಾಯಿ ಹೊರಗೆ ತೆರಳಿ, ಅದು ಕರಿ ನಾಯಾಗಿ ಹಿಂತಿರುಗಿದರೆ, ನೀನು ಅದನ್ನು ಬೇರೆಯ ನಾಯಿಯೆಂಬುದಾಗಿ ಭಾವಿಸಿ ಓಡಿಸುವಿಯೇನು? ಈ ನಾಯಿಯದು ತಪ್ಪೇನಿಲ್ಲ. ನೀನು ಬೇರೆಯ ಕೋಟನ್ನು ಧರಿಸಿಕೊಂಡು ಬಂದುದರಿಂದ ನಾಯಿ ನಿನ್ನನ್ನು ಅಪರಿಚಿತ ಎಂಬುದಾಗಿ ಭಾವಿಸಿದೆ."

ಎನ್. ಕೆ. ನರಸಿಂಹಮೂರ್ತಿ

ಪದಾರ್ಥ ಚಿಂತಾಮಣಿ

— ೧೪ —

ಮದುವೆಯೆಂಬುದು ಮನುಷ್ಯ ಲೋಕದ ಬಹು ಪುರಾತನ ಸಂಸ್ಥೆ. ಆದರೆ ಬೇರೆ ಬೇರೆ ಭಾಷೆಗಳಲ್ಲಿ ಅದನ್ನು ನಿರ್ದೇಶಿಸುವುದಕ್ಕೆ ಇರುವ ಶಬ್ದಗಳ ತಳ ಶೋಧನೆಗೆ ಇಳಿದರೆ ಆ ಸಂಸ್ಥೆಯ ಬೆಳವಣಿಗೆಯ ಬಗ್ಗೆ ಬಹಳ ಸ್ವಾರಸ್ಯವಾದ ಅಂಶಗಳು ಹೊರಪಡುತ್ತವೆ.

ಕನ್ನಡದ **ಮದುವೆ**ಯ ಮೂಲಾರ್ಥವನ್ನು ಶಬ್ದಶಾಸ್ತ್ರಜ್ಞರು ಜೋಡಿಸುವಿಕೆ, ಕೂಡಿಸುವಿಕೆ ಎಂದು ತರ್ಕಿಸಿದ್ದಾರೆ. ಆ ಅರ್ಥದ **ಮಡು, ಮಣ** ಎಂಬ ದ್ರಾವಿಡ ಧಾತುವಿನಿಂದ ಅದು ಹುಟ್ಟಿರಬೇಕು. ತಮಿಳಿನಲ್ಲಿ **ಮಣಂ**, ತೆಲುಗಿನಲ್ಲಿ **ಮನುವು** ಕನ್ನಡ **ಮದುವೆ**ಗೆ ಸಂವಾದಿಯಾಗಿವೆ ತುಳುವಿನಲ್ಲಿ **ಮದಿನೆ.** ಅದರಿಂದ **ಮದಲಗಿತ್ತಿ** (= ವಧು) **ಮದವ** (= ಮದುವಣಿಗ) ಇತ್ಯಾದಿ ಶಬ್ದಗಳೂ ಕವಲೊಡೆದಿವೆ.

ಸಂಸ್ಕೃತದಲ್ಲಿ ಮದುವೆಗೆ **ವಿವಾಹ, ಉದ್ವಾಹ, ಪರಿಣಯ, ಪಾಣಿಗ್ರಹಣ, ಉಪಯಾಮ** ಇತ್ಯಾದಿ ಶಬ್ದಗಳಿದ್ದರೂ **ವಿವಾಹ** ಅತಿ ಹೆಚ್ಚು ಬಳಕೆಯಲ್ಲಿದೆ. ಈ ಶಬ್ದ **ವಹ್** = ಹೊತ್ತುಕೊಂಡುಹೋಗು ಎಂಬ ಧಾತುವಿನಿಂದ ಹುಟ್ಟಿದ್ದು. **ವಾಹನ** ಅದರದೇ ನಾಮರೂಪ. ವೇದಕಾಲದಿಂದಲೇ **ವಿವಾಹ** ಮದುವೆಯನ್ನು ಸಂಕೇತಿಸುತ್ತದೆ. ಆದರೂ ಧಾತ್ವರ್ಥವನ್ನು ನೋಡಿದರೆ ಹೆಣ್ಣನ್ನು ಅಪಹರಿಸಿ ಒಯ್ದು ಮದುವೆ ಮಾಡಿಕೊಳ್ಳುವ ಬಹುಪುರಾತನ ರೂಢಿಯ ಕಡೆ ಈ ಶಬ್ದ ಬೆರಳು ತೋರಿಸುವಂತೆ ಅನಿಸುತ್ತದೆ. **ಉದ್ವಾಹ** ಎಂಬ ಅದರ ಇನ್ನೊಂದು ಪರ್ಯಾಯ ಪದ ಈ ಶಂಕೆಯನ್ನು ಇನ್ನೂ ಬಲಪಡಿಸುತ್ತದೆ. ಧರ್ಮಶಾಸ್ತ್ರಕಾರರು ಇದಕ್ಕೆ **ರಾಕ್ಷಸೀ** ವಿವಾಹ ಎಂದು ಮುದ್ರೆ ಒತ್ತಿದರೂ **ರಾಕ್ಷಸಧ್ವಂಸಿ**ಯಾದ ಕೃಷ್ಣನ ಕುಲದವರಾದ ಯಾದವರಲ್ಲಿ ಇದು ಬಹು ರೂಢಿಯಾಗಿತ್ತೆಂದೂ ಪ್ರಾಯಕ್ಕೆ ಬಂದ ಯಾದವ ಹುಡುಗಿಯರು ಕೂಡ ಇಂಥ [illegible] ಮೆಚ್ಚುತ್ತಿದ್ದರೆಂದೂ ಅರ್ಥವಾಗುತ್ತದೆ. ಶಾಸ್ತ್ರಜ್ಞರಲ್ಲಿ ಹಿರಿಯನೆನಿಸಿದ ಭೀಷ್ಮನೇ ಸ್ವಯಂವರ ಮಂಟಪದಿಂದ ಹುಡುಗಿಯರನ್ನು ಅಪಹರಿಸಿ ತಂದು ತಮ್ಮಂದಿರಿಗೆ ಮದುವೆ ಮಾಡಿದನಲ್ಲ!

ಇವರೊಡನೆ ಹೋಲಿಸಿದರೆ **ಪಾಣಿಗ್ರಹಣ, ಪರಿಣಯ** ಸೌಮ್ಯ ವಿಧಾನಗಳು. **ಪಾಣಿಗ್ರಹಣ**ವೆಂದರೆ ಕೈ ಹಿಡಿಯುವುದು; **ಪರಿಣಯ**ವೆಂದರೆ ಸುತ್ತ ಕರೆದೊಯ್ಯುವುದು. ಎರಡೂ ವಿವಾಹ ವಿಧಿಯ ಅಂಗಗಳನ್ನು ಸೂಚಿಸುತ್ತವೆ. ಹೋಮದ ಬೆಂಕಿಯ ಸುತ್ತ ವರನು ವಧುವನ್ನು ಕೈ ಹಿಡಿದು ಕರೆದೊಯ್ಯುವುದು ವೈದಿಕ ಕ್ರಮ.

ಇಂಗ್ಲೀಷಿನಲ್ಲಿ Wedding, Marriage ಎಂಬ ಪದಗಳು ಪ್ರಚಲಿತವಾಗಿವೆ. Marriage ಶಬ್ದ ಲ್ಯಾಟಿನ್ನಿನಿಂದ ಫ್ರೆಂಚ್ ಮೂಲಕ ಇಂಗ್ಲೀಷಿಗೆ ಬಂದದ್ದು. Maris, Mas ಅಂದರೆ ಪುರುಷ — ಆದ್ದರಿಂದ Marriageಗೆ ಗಂಡನನ್ನು ಕೂಡಿಸಿಕೊಡುವುದು ಎಂಬ ಬಹು ಸೌಮ್ಯ ಅರ್ಥ ದೊರೆಯುತ್ತದೆ. Wedding ತುಸು ಹೆಚ್ಚು ಸ್ವಾರಸ್ಯವಾದದ್ದು. ಅದರ ಧಾತ್ವರ್ಥ ಪಣ ತೊಡು, ಪಂಥವಿಡು ಇತ್ಯಾದಿ. ಹೆಣ್ಣಿಗಾಗಿ ಗಂಡು ಪಣವಿಟ್ಟು, ಅಂದರೆ ಜಾಮೀನು ಕೊಟ್ಟು (ಬಹುಶಃ ಅರ್ಥರೂಪದ್ದು), ಅಥವಾ ಇತರ ಉಮೇದ್ವಾರರೊಡನೆ ಹೋರಾಡಿ ವಧುವನ್ನು "ಗೆದ್ದು" (ಪಣದಲ್ಲಿ ಗೆದ್ದಂತೆ) ತರುವುದು Wedding. ಕನ್ಯಾಶುಲ್ಕ (ತೆರ)ವನ್ನೋ ಸ್ತ್ರೀಧನವನ್ನೋ (ಹೆಂಡತಿಯಾಗುವವಳಿಗೆ ಹಣ ಕೊಡುವುದು) ಕೊಟ್ಟು ಮದುವೆಯಾಗುವ ಪದ್ಧತಿಯನ್ನು ಇದು ಸೂಚಿಸುತ್ತದೆ. ನಮ್ಮ ಧರ್ಮಶಾಸ್ತ್ರಗಳು ಇದನ್ನು ಬಾರ್ಹಸ್ಪತ್ಯ ವಿವಾಹವೆಂದು ಕರೆಯುತ್ತವೆ.

— ಪಾವೆಂ


464
ಡಿಟರ್ಜೆಂಟ್ ಬಾರ್
ಬೇರೆ ಯಾವುದೇ ಸಾಬೂನುಗಳನ್ನು ಮೀರಿಸುತ್ತದೆ
SUPER POWER
464
DETERGENT WASHING BAR
more wash... at low cost
ಈಗ ಅರಶಿನ ಹಾಗೂ ನೀಲಿ
ಬಣ್ಣಗಳಲ್ಲಿ ದೊರೆಯುತ್ತದೆ.
ಈಗ ಸೂಪರ್ ಪವರ್ 464 ಡಿಟರ್ಜೆಂಟ್
ಒಗೆಯುವ ಬಾರ್ ಇಮ್ಮಡಿ ಒಗೆತದ ಶಕ್ತಿ ನಿಮಗೆ
ನೀಡುವುದಲ್ಲದೆ ಬೇರೆ ಸಾಬೂನುಗಳಿಗಿಂತ ಶೇಕಡ
50 ರಷ್ಟು ಹೆಚ್ಚಿನ ಒಗೆತವನ್ನು ನೀಡುತ್ತದೆ.
ಈಗ 464 ಡಿಟರ್ಜೆಂಟ್ ಬಾರ್‌ನಿಂದ ದುಬಾರಿ
ಉಳಿತಾಯ ಮತ್ತು ಆದರ್ಶ ಒಗೆತವನ್ನು ಪಡೆಯಿರಿ.
ಬೇರೆ ಯಾವುದೇ ಸಾಬೂನುಗಳಿಗಿಂತ
464 ಡಿಟರ್ಜೆಂಟ್ ಬಾರ್ ಹೆಚ್ಚಿನ
ಪ್ರಕಾಶಮಯವಾದ ಒಗೆತವನ್ನು ನೀಡುತ್ತದೆ
UHP
ಯೂನಿಯನ್ ಹೋಮ್ ಪ್ರಾಡಕ್ಟ್ಸ್ ಲಿ.
ಮಂಗಳೂರು-575 001.
mpa/uhp/176

ಮನೋರೋಗಕ್ಕೆ
ಮದ್ದಿಲ್ಲವೆಂಬ ಕಲ್ಪನೆ ತಪ್ಪು

ಮದ್ದು ಹಾಕಿದರು...

ಡಾ. ಕೆ. ಎಂ. ಧ್ರುವಕುಮಾರ

ರಘು ಮೂವತ್ತು ವರ್ಷಗಳ ತರುಣ. ದಿಲ್ಲಿಯ ಬ್ಯಾಂಕೊಂದರಲ್ಲಿ ಅಕೌಂಟೆಂಟ್ ಆಗಿ ಕೆಲಸಕ್ಕಿರುವನು. ರಘುವನ್ನು ಕಂಡರೆ ಅವನ ಸಂಬಂಧಿಕರಿಗೆಲ್ಲ ಬಹು ವಿಶ್ವಾಸ. ತಿಂಗಳಿಗೆ ಸಾವಿರಕ್ಕೂ ಹೆಚ್ಚಿನ ಸಂಬಳ. ಬ್ಯಾಂಕಿನಲ್ಲಿ ಕಾರ್ಯ ದಕ್ಷತೆಗೆ ಹೆಸರು ಪಡೆದಿದ್ದನು. ಬ್ಯಾಂಕಿನವರು ಬಡ್ತಿ ಕೊಡುವುದಾಗಿ ಅವನಿಗಾಗಲೇ ಭರವಸೆಯನ್ನು ನೀಡಿದ್ದರು ಕೂಡ. ಅವನಿಗೆ ಒಳ್ಳೆಯ ಹುದ್ದೆ ಮತ್ತು ಕೈ ತುಂಬ ಸಂಬಳ ಮಾತ್ರವಲ್ಲದೆ ಒಳ್ಳೆಯ ರೂಪವೂ ಇತ್ತು. ಬಿಳಿಯ ಮೈ ಬಣ್ಣ, ಸುಮಾರು ಐದೂವರೆ ಅಡಿ ಎತ್ತರ ಮತ್ತು ನೂರಾ ನಲವತ್ತೈದು ಪೌಂಡ್ ತೂಕದ ದಷ್ಟ ಪುಷ್ಟ ವ್ಯಕ್ತಿ ಆತ. ಸಂಬಂಧಿಕರೆಲ್ಲ ತಮ್ಮ ಮಕ್ಕಳಿಗೆ ರಘುವನ್ನೇ ಆದರ್ಶವನ್ನಾಗಿ ಇರಿಸಿಕೊಳ್ಳಲು ಹೇಳುತ್ತಿದ್ದರು. ಕನ್ಯೆಯರ ಮಾತಾಪಿತೃಗಳು ರಘುವನ್ನು ತಮ್ಮ ಅಳಿಯನನ್ನಾಗಿ ಮಾಡಿಕೊಳ್ಳಲು ಹಾತೊರೆಯುತ್ತಿದ್ದರು.

ಮಾನವನೆಂದ ಮೇಲೆ ಯಾವ ರೀತಿಯಲ್ಲಾದರೂ ಕುಂದಿರಲೇಬೇಕು. ಎಲ್ಲದರಲ್ಲೂ ಮಾದರಿಯೆನಿಸಿದ್ದ ರಘುವಿಗೆ ಆರು ತಿಂಗಳ ಹಿಂದೆ ಒಂದು ಬಗೆಯ ಮಾನಸಿಕ ಅಸಮಾಧಾನ ಮತ್ತು ದುಗುಡ ಪ್ರಾರಂಭವಾಯಿತು. ಮಾನಸಿಕ ಏಕಾಗ್ರತೆ ಕಡಿಮೆಯಾಯಿತು. ಇದರಿಂದ ಅವನ ಕಾರ್ಯದಕ್ಷತೆ ಕುಂಠಿತವಾಯಿತು. ಎಲ್ಲದರಲ್ಲೂ ಆಸಕ್ತಿ ಕಳೆದುಕೊಂಡ. ತಲೆ ಸುತ್ತಲಾರಂಭಿಸಿತು. ಪಿತ್ತ ಹೆಚ್ಚಾಗಿರಬಹುದೆಂದು ಏನೇನೋ ನಾಟಿ ಔಷಧಗಳನ್ನು ತೆಗೆದುಕೊಂಡ. ಆದರಿಂದೇನೂ ಗುಣವಾಗಲಿಲ್ಲ. ಕ್ರಮೇಣವಾಗಿ ಎಲ್ಲ ತೊಂದರೆಗಳು ಹೆಚ್ಚುತ್ತಲೇ ಬಂದವು. ಕೆಲಸ ಮಾಡಲು ಸಹ ಕಷ್ಟವಾಗತೊಡಗಿತು. ಕಡೆಗೆ ಕೆಲವು ಸ್ನೇಹಿತರ ಸಲಹೆಯ ಮೇರೆಗೆ ವೈದ್ಯರೊಬ್ಬರನ್ನು ಕಂಡನು. ಅವರು ಅವನಿಗೆ ಯಾವ ವಿಧವ ಶಾರೀರಿಕ ತೊಂದರೆಯೂ ಇಲ್ಲವೆಂದು ಕೆಲವು ಮಾತ್ರೆಗಳನ್ನು ಬರೆದುಕೊಟ್ಟರು. ಅಲ್ಲಿಗೂ ಅವನ ತೊಂದರೆಗಳ ನಿವಾರಣೆಯಾಗಲಿಲ್ಲ. ಮತ್ತಿಬ್ಬರು ವೈದ್ಯರನ್ನೂ ಕಂಡಿದ್ದಾಯಿತು. ಅವರು ಕೂಡ ಅವನಿಗೇನೂ ಕಾಯಿಲೆ ಇಲ್ಲವೆಂದೇ ಹೇಳಿದರು. ಕಡೆಗೆ ಕಿವಿ, ಮೂಗು ಮತ್ತು ಗಂಟಲು ತಜ್ಞರ

ಬಳಿ ಹೋದನು. ಅವರು ಆ ಅಂಗಾಂಗಗಳೆಲ್ಲವೂ ಸರಿಯಾಗಿವೆಯೆಂದು ತಿಳಿಸಿ ಕೆಲವು ಟಾನಿಕ್, ಮಾತ್ರೆಗಳನ್ನು ಬರೆದುಕೊಟ್ಟರು. ರಘುವಿನ ತೊಂದರೆಗಳು ಮಾತ್ರ ಹೆಚ್ಚುತ್ತಲೇ ಬಂದವು. ಅವನು ಏನಾದರೂ ಓದಿದರೆ ಅಥವಾ ಕೇಳಿದರೆ ಪದೇ ಪದೇ ಅದೇ ಮನಸ್ಸಿನ ಮುಂದೆ ಬಂದು ನಿಲ್ಲುತ್ತಿತ್ತು. ನಿದ್ದೆಯೂ ಸರಿಯಾಗಿ ಬರುತ್ತಿರಲಿಲ್ಲ. ರಾತ್ರಿ ಕೆಟ್ಟ ಕನಸುಗಳಿಂದಾಗಿ ಬೆಚ್ಚಿಬೀಳುವನು. ಅಂತಹ ಸಂದರ್ಭಗಳಲ್ಲಿ ಎಚ್ಚರವಾದರೆ ಮತ್ತೆ ನಿದ್ದೆಯೇ ಬರುವುದಿಲ್ಲ. ಇವೆಲ್ಲದರ ಯಾತನೆ ತಡೆಯಲಾರದೆ ಆಗಿಂದಾಗೆ ಕೆಲಸಕ್ಕೆ ರಜಾ ಹಾಕಲು ಮೊದಲುಮಾಡಿದನು. ಪ್ರಾರಂಭದಲ್ಲಿ ಬ್ಯಾಂಕ್ ಮ್ಯಾನೇಜರರು ಸುಮ್ಮನಿರುತ್ತಿದ್ದರು. ಅವನು ರಜೆ ಹಾಕುವುದು ಹೆಚ್ಚಾದಂತೆ ಅವನನ್ನು ಕರೆಯಿಸಿ ಮುನ್ನೆಚ್ಚರಿಕೆಯನ್ನಿತ್ತರು. ಕಡೆಗೆ ಬೇಸತ್ತು ಇನ್ನೂ ಸರಿಹೋಗದಿದ್ದರೆ ಕೆಲಸದಿಂದ ತೆಗೆದುಹಾಕಬೇಕಾಗುವುದೆಂದೂ ಹೇಳಿದರು. ರಘುವಿನ ಸ್ನೇಹಿತರು ಅವನಿಗೇನೋ ತೊಂದರೆಯಿದೆಯೆಂದೂ ಕೆಲವು ಕಾಲವಾದರೂ ಅವನ ಮೇಲೆ ಕರುಣೆಯಿಡಬೇಕೆಂದೂ ಮ್ಯಾನೇಜರರಲ್ಲಿ ಮನವಿ ಮಾಡಿಕೊಂಡರು. ವೈದ್ಯರು ಅವನಿಗೆಲ್ಲಾ ಸರಿಯಾಗಿರುವುದೆಂದು ಹೇಳುವಾಗ ಅವನಿಗಿನ್ನೆಂತಹ ತೊಂದರೆ ಇರಬಹುದೆಂದು ಮ್ಯಾನೇಜರರಿಗೆ ಅರ್ಥವಾಗಲಿಲ್ಲ. ಆದರೂ ಅವರು ಅವನಿಗೆ ಒಂದು ತಿಂಗಳು ರಜೆ ಕೊಟ್ಟು ಎಲ್ಲವನ್ನೂ ಸರಿಪಡಿಸಿಕೊಂಡು ಬರಲು ತಿಳಿಸಿದರು. ರಘು, ಮನಸ್ಸು ಹತೋಟಿಯಲ್ಲಿಲ್ಲದೆ ಹಗಲುಗನಸು ಕಾಣಲು ಪ್ರಾರಂಭಿಸಿದನು. ರಾತ್ರಿಯೆಲ್ಲಾ ನಿದ್ರೆ ಬಾರದೇ ಕುಳಿತುಕೊಂಡಿರುತ್ತಿದ್ದನು. ಒಂದು ರಾತ್ರಿ ಇದ್ದಕ್ಕಿದ್ದಹಾಗೆ "ಅಯ್ಯಯ್ಯೋ" ಎಂದು ಜೋರಾಗಿ ಒಂದೆರಡು ನಿಮಿಷ ಅರಚಿಕೊಂಡನು. ಅಕ್ಕಪಕ್ಕದ ರೂಮಿನವರಿಗೆ ಭಯವಾಗಿ ಬೆಂಗಳೂರಿನಿಂದ ಅವನ ಅಕ್ಕ ಮತ್ತು ಭಾವನನ್ನು ಕರೆಸಿದರು. ಅಕ್ಕ-ಭಾವರಿಗೆ ರಘುವಿನ ಸ್ಥಿತಿಯನ್ನು ಕಂಡು ಕಸಿವಿಸಿಯಾಯಿತು. ಬೆಂಗಳೂರಿಗೆ ರಘುವನ್ನು ಕರೆತರಲಾಯಿತು. ವಾತಾವರಣ ಬೇರೆಯಾದರೆ ಸರಿಯಾಗಬಹುದೆಂದುಕೊಂಡಿದ್ದೂ ಸುಳ್ಳಾಯಿತು.

ರಘುವನ್ನು ಮತ್ತೆ ಕೆಲ ವೈದ್ಯರ ಬಳಿ ಕರೆದೊಯ್ಯಲಾಯಿತು. ಅದು ಪ್ರಯೋಜನವಾಗದಿದ್ದಾಗ ಆಯುರ್ವೇದ, ಹೋಮಿಯೋಪತಿ, ಯುನಾನಿ ಮುಂತಾದ ಔಷಧಿಗಳನ್ನು ಕೊಡಿಸಿದರೂ ಗುಣವಾಗುವ ಸೂಚನೆ ಕಾಣಲಿಲ್ಲ. ಅವನ ಭಾವ ಮುಂದೇನು ಮಾಡಬೇಕೆಂದು ತೋಚದೆ ಸುಮ್ಮನಾದನು. ರಘು ರಾತ್ರಿಯೆಲ್ಲಾ ನಿದ್ದೆ ಮಾಡದೇ ತನ್ನಷ್ಟಕ್ಕೆ ತಾನೇ ನಗುವುದು ಮತ್ತು ರಾತ್ರಿ ಕೆಲವು ಬಾರಿ ಬಾಗಿಲು ತೆಗೆದುಕೊಂಡು ಹೊರಗೆ ಹೋಗುವುದು ಕೂಡ ಪ್ರಾರಂಭವಾಯಿತು. ಅವನು ರಾತ್ರಿ ಎಲ್ಲಾದರೂ ಹೋಗಿಬಿಡುವನೆಂಬ ಭಯದಿಂದ ಅವನ ಅಕ್ಕ-ಭಾವಂದಿರೂ ರಾತ್ರಿಯೆಲ್ಲಾ ಜಾಗರಣೆ ಮಾಡಬೇಕಾಯಿತು. ಕೆಲವು ಬಾರಿ ಕಿಲಕಿಲನೆ ನಗುವನು ಮತ್ತು ಅರಚುವನು. ಯಾವುದೋ ಧ್ವನಿ ಕೇಳಿಸುವುದೆಂದು ಹೇಳುವನು. ಏನಾದರೂ ಶಬ್ದವಾದರೆ ಬೆಚ್ಚಿ ಬೀಳುವನು. ಯಾರದೋ ಸಲಹೆಯಂತೆ ಅವನ ಭಾವ ಶಾಸ್ತ್ರವನ್ನು ಸಹ ಕೇಳಿದರು. ರಘುವಿಗೆ ಕೆಟ್ಟ ಕಾಲವೆಂದು ಹೋಮ, ನವಗ್ರಹ ಪೂಜೆಗಳನ್ನು ಸಹ ಮಾಡಿಸಿಯಾಯಿತು. ಇನ್ನು ಕೆಲವರು ಕೆಟ್ಟ ಗಾಳಿ ಅಥವಾ ಭೂತ ಹಿಡಿದಿರಬಹುದೆಂದು ಹೇಳಿದುದರಿಂದ ಅವುಗಳನ್ನು ಬಿಡಿಸುವವರನ್ನು ಸಹ ಕರೆತರಲಾಯಿತು. ರಘುವಿನ ತೊಂದರೆ ದಿನೇ ದಿನೇ ಹೆಚ್ಚುತ್ತಾ ಬಂದಿತು. ಯಾರನ್ನಾದರೂ ನೋಡಿದರೆ ಅವರು ತನ್ನನ್ನು ಕೊಲ್ಲಲು ಬಂದಿರುವರೆಂದು ಕೂಗಾಡುವನು. ತನಗೆ ಯಾರೋ ಮದ್ದು ಹಾಕಿ ಹುಚ್ಚನನ್ನಾಗಿ ಮಾಡಲು ಪ್ರಯತ್ನಿಸುತ್ತಿರುವರೆಂದು ಒಂದು ಬಾರಿ ಹೇಳಿದರೆ ಇನ್ನು ಕೆಲವು ಬಾರಿ ಮದ್ದಿನಿಂದ ತನ್ನನ್ನು ಯಾರೋ ಕೊಲ್ಲಲು ಪ್ರಯತ್ನಿಸುತ್ತಿರುವರೆಂದು ಹೇಳಲು ಮೊದಲು ಮಾಡಿದನು. ತಾನು ದಿಲ್ಲಿಯಲ್ಲಿದ್ದಾಗಲೇ ಯಾರೋ ಮದ್ದು ಹಾಕಿರುವರೆಂದು ಹೇಳಿದನು. ಈ ರೀತಿ ಇರಬಹುದೆಂದು ತಮಗೆ ಮೊದಲೇ ಹೊಳೆಯದಿದ್ದುದಕ್ಕೆ ಅವನ ಅಕ್ಕ-ಭಾವ ತಮ್ಮನ್ನೇ ಶಪಿಸಿಕೊಂಡು ಮದ್ದು ತೆಗೆಯುವವರನ್ನು ಕರೆತಂದರು. ಮದ್ದು ತೆಗೆಯುವವನು ಏನೋ ಕೊಟ್ಟು ವಾಂತಿ ಮಾಡಿಸಿದಾಗ ಒಂದು ಕಪ್ಪು

ಉಂಡೆ ಹೊರಬಂದಿತು. ಅದನ್ನು ತೋರಿಸಿ ಮದ್ದು ಹೊರಬಂದಿತೆಂದೂ ಇನ್ನು ಸರಿ ಹೋಗುವುದೆಂದೂ ಆತ ಹೇಳಿದನು.

ಅಲ್ಲಿಗೂ ಸರಿ ಹೋಗದಿದ್ದಾಗ ಮತ್ತೊಬ್ಬ ಮದ್ದು ತೆಗೆಯುವವನನ್ನು ಕರೆಸಿದರು. ಅವನೂ ಅದೇ ರೀತಿ ಮಾಡಿದರೂ ಪ್ರಯೋಜನವಾಗಲಿಲ್ಲ. ಕಡೆಗೆ ಯಾರೋ ಹಿತೈಷಿಗಳು ಮನೋರೋಗ ತಜ್ಞರ ಬಳಿ ಕರೆದೊಯ್ಯಲು ಸಲಹೆಯಿತ್ತರು. ಆಗ ಅವನ ಅಕ್ಕ ಮತ್ತು ಭಾವ, "ನಮ್ಮ ರಘುವಿನಂತಹ ಬುದ್ಧಿಶಾಲಿಗೆ ಹುಚ್ಚೆಂದರೇನರ್ಥ?" ಎಂದು ಆ ಹಿತೈಷಿಗಳ ಮೇಲೇ ಕೋಪಿಸಿಕೊಂಡರು. ಆದರೆ ರಘುವಿನ ಸ್ಥಿತಿ ಕ್ರಮೇಣ ಕ್ಷೀಣಿಸುತ್ತಲೇ ಬಂದಾಗ ಒಂದು ಬಾರಿ ಮನೋರೋಗ ತಜ್ಞರನ್ನೂ ಕಾಣಲು ನಿರ್ಧಾರ ಮಾಡಿದರು.

ರಘುವಿನ ಭಾವ ನನ್ನ ಕ್ಲಿನಿಕ್ಕಿಗೆ ಹೆದರಿಕೊಂಡೇ ರಘುವನ್ನು ಕರೆತಂದಿದ್ದರು. ಅವರು ಮನೋರೋಗತಜ್ಞರ ಬಳಿ ಬರುವವರೆಲ್ಲಾ ಬಹಳ ಹುಚ್ಚರಾಗಿರುತ್ತಾರೆಂದು ಮತ್ತು ಇತರರನ್ನು ಕಂಡ ಕೂಡಲೇ ಈ ಹುಚ್ಚರು ಬಯ್ಯುವುದು, ಹೊಡೆಯುವುದು, ಉಗಿಯುವುದು ಮತ್ತು ಹೇಗೇಗೋ ಆಡುವುದು ಮುಂತಾದವುಗಳೆನ್ನೆಲ್ಲಾ ಮಾಡುವರೆಂದು ನಂಬಿದ್ದರು. ತಮ್ಮ ಸರದಿಗಾಗಿ ಕಾಯುತ್ತಾ ಕುಳಿತಿದ್ದು ಒಳಗೆ ಬಂದು ಹೋದವರನ್ನೆಲ್ಲಾ ವೀಕ್ಷಿಸುತ್ತಿದ್ದರು. ಈ ರೋಗಿಗಳು ಸಹ ಎಲ್ಲರಂತೆಯೇ ಇದ್ದು ಏನೂ ವ್ಯತ್ಯಾಸ ಕಾಣಬಾರದಿದ್ದಾಗ ಆಶ್ಚರ್ಯವಾಯಿತು. ಇದನ್ನೆಲ್ಲಾ ನನ್ನನ್ನು ನೋಡಿದಾಗ ಹೇಳಿ ಮನೋರೋಗಗಳ ಬಗ್ಗೆ ತಮ್ಮ ಅಜ್ಞಾನಕ್ಕೆ ವಿಷಾದ ವ್ಯಕ್ತಪಡಿಸಿದರು. ಅವರು ರಘುವಿನ ವಿಷಯವನ್ನೆಲ್ಲ ಕೂಲಂಕಷವಾಗಿ ವಿವರಿಸಿದರು. ರಘು ಅದು ತನಗೆ ಸಂಬಂಧಿಸಿಯೇ ಇಲ್ಲವೇನೋ ಎಂಬಂತೆ ಯಾವುದೋ ಗುಂಗಿನಲ್ಲಿದ್ದನು. ಮಾನಸಿಕ ಕಾಯಿಲೆಗಳ ಬಗ್ಗೆ ನಮ್ಮ ಸಮಾಜದಲ್ಲಿ ಅಜ್ಞಾನ ಹೇರಳ. ನಮ್ಮದು ಮೂಢ ನಂಬಿಕೆಗಳ ನೆಲೆಬೀಡು. ಮಾಯ, ಮಂತ್ರ, ಯಂತ್ರ, ಹರಕೆ, ಪೂಜೆ, ದಾನ, ಭೂತ ಬಿಡಿಸುವುದು ಮುಂತಾದವುಗಳನ್ನೆಲ್ಲಾ ಪ್ರಯತ್ನಿಸಿಯೇ ನಮ್ಮಲ್ಲಿಗೆ ಬರುತ್ತಾರೆಂದು ನನ್ನ ಅನುಭವದ ಮಾತು. ಇವನ್ನೆಲ್ಲಾ ಪ್ರಯತ್ನ ಮಾಡಿ ಮನೆ ಮಠ ಮಾರಿಕೊಂಡು ನಿರ್ಗತಿಕರಾಗುವವರು ಎಷ್ಟೋ ಮಂದಿ. ಇನ್ನೊಬ್ಬರ ನಿಸ್ಸಹಾಯಕತೆಯನ್ನು ದುರುಪಯೋಗಪಡಿಸಿಕೊಳ್ಳುವಂತಹ ಪರಿಣತರಿಗೆ ನಮ್ಮಲ್ಲಿ ಕೊರತೆಯೇನೂ ಇಲ್ಲ. ನಮ್ಮಲ್ಲಿ ಏನಾದರೂ ಹೆಚ್ಚು ಕಡಿಮೆಯಾದಾಗ ನಾವು ವೈದ್ಯರನ್ನು ಕಾಣುವುದು ಸಹಜ. ಅಂತಹ ಸಂದರ್ಭಗಳಲ್ಲಿ ನಾವು ಕೇವಲ ಶಾರೀರಿಕ ಕಾಯಿಲೆಗಳನ್ನು ಮಾತ್ರ ಯೋಚಿಸುತ್ತೇವೆ. ಮಾನವನಿಗೆ ಮನಸ್ಸು ಮತ್ತು ಶರೀರ ಎರಡೂ ಇವೆಯೆಂಬುದನ್ನು ಆ ಸಮಯದಲ್ಲಿ ಯೋಚಿಸುವುದೂ ಇಲ್ಲ. ಶಾರೀರಿಕವಾಗಿ ಎಲ್ಲಾ ಸರಿಯಾಗಿದೆಯೆಂದು ವೈದ್ಯರು ಹೇಳಿದರೆ ಇದು ಮಾನಸಿಕವಾಗಿರಬಹುದೇ ಎಂದು ಪ್ರಶ್ನಿಸಲು ಹಿಂಜರಿಯುತ್ತೇವೆ. ಮಾನಸಿಕ ವಿಷಯಗಳ ಬಗ್ಗೆ ಇರುವ ಅಜ್ಞಾನವೇ ಇದಕ್ಕೆ ಕಾರಣ. ಮನೋರೋಗ ಕಳಂಕವೆಂದು ಪರಿಗಣಿಸುವದರಿಂದ ಅದನ್ನು ನಾವು ಯೋಚಿಸಲು ಇಚ್ಛಿಸುವುದಿಲ್ಲ. ವೈದ್ಯರು ಮನೋರೋಗ ತಜ್ಞರ ಬಳಿ ಹೋಗಲು ಸಲಹೆಯಿತ್ತಾಗ ಕೆಲವರು ಬೈದು, ಜಗಳವಾಡಿದ ನಿದರ್ಶನಗಳೂ ಇಲ್ಲದಿಲ್ಲ. ಈ ಕಾರಣಗಳಿಂದ ಕೆಲವು ವೈದ್ಯರು ಇಂತಹ ಸಲಹೆಯನ್ನು ನೀಡಲು ಹಿಂಜರಿಯುವರು.

ರಘು ಸುಂದರನಾದ ತರುಣ. ಅವನ ಗಮನ ಅಲ್ಲಿಯ ಆಗುಹೋಗುಗಳ ಮೇಲಿರಲಿಲ್ಲ. ಎಲ್ಲಿಯೋ ತನ್ನ ದೃಷ್ಟಿ ನೆಟ್ಟು ಅಲುಗದೇ ಕುಳಿತುಬಿಡುವನು. ಅವನನ್ನು ಕರೆದರೆ ಬೆಚ್ಚಿ-



ಬಿಟ್ಟು, "ಅಣ್ಣ, ಏನೆಂದಿರಿ?" ಎನ್ನುವನು. ಏನು ಯೋಚನೆ ಮಾಡುತ್ತಿರುವೆಯೆಂದು ಕೇಳಿದರೆ, "ಏನೂ ಇಲ್ಲ." "ಏನು ತೊಂದರೆ?" ಎಂದು ಕೇಳಿದರೆ "ನನಗ್ಯಾರೋ ಮದ್ದು ಹಾಕಿರುವರು. ಆದುದರಿಂದ ನಾನೀ ರೀತಿಯಿದ್ದೇನೆ" ಎನ್ನುವನು. ಯಾವ ರೀತಿ ಮದ್ದು ಹಾಕಿರುವರೆಂದು ಕೇಳಿದರೆ, "ಆಹಾರದ ಮೂಲಕ" ಎನ್ನುವನು. ಯಾರು ಹಾಕಿದ್ದಾರೆಂದು ಕೇಳಿದರೆ ತನಗೆ ಆಗದವರು ಎಂದು ಹೇಳುವನು. ಯಾವಾಗ ಹಾಕಿದರು ಎಂದು ಕೇಳಿದಾಗ, "ಆರು ತಿಂಗಳ ಹಿಂದೆ" ಎಂದು ಹೇಳುವನು. ಮದ್ದು ಹಾಕಿರುವರೆಂದು ಹೇಗೆ ಗೊತ್ತಾಯಿತು? ಎಂದು ಕೇಳಿದರೆ, "ಇಲ್ಲವಾದರೆ ಈ ರೀತಿ ಆಗಲು ಹೇಗೆ ಸಾಧ್ಯ ?" ಎಂದು ಕೇಳುವನು. ಮದ್ದು ಹಾಕಿದರೆಂದು ಹೇಳಿದ ಸಮಯದಲ್ಲಿ ಆಹಾರದ ರುಚಿಯ ವ್ಯತ್ಯಾಸವೇನೂ ಕಂಡುಬರಲಿಲ್ಲವೆಂದು ಹೇಳಿದನು. ಕ್ಲಿನಿಕ್ಕಿನಲ್ಲಿ ಯಾವುದೇ ಶಬ್ದವಾದರೂ ಬೆಚ್ಚಿಬಿದ್ದು ಭಯದಿಂದ ತನ್ನ ದೃಷ್ಟಿಯನ್ನು ಆ ಕಡೆ ಓಡಿಸುವನು. ಬಹು ಶಂಕೆಯ ಪ್ರವೃತ್ತಿಯವನು ಎಂದು ಅವನ ಹಾವಭಾವಗಳಿಂದ ಹೇಳಬಹುದಾಗಿತ್ತು. ಪರೀಕ್ಷಿಸಿದಾಗ ಯಾವ ಶಾರೀರಕ ಕಾಯಿಲೆಗಳಾಗಲಿ ಅಥವಾ ಮದ್ದು ಹಾಕಿರುವ ಚಿಹ್ನೆಗಳಾಗಲಿ ಕಂಡುಬರಲಿಲ್ಲ. ಕೆಲವು ದಿವಸ ನರ್ಸಿಂಗ್ ಹೋಂನಲ್ಲಿರಲು ಸೂಚಿಸಿದೆ. ಮಂತ್ರ, ಪೂಜೆ ಮುಂತಾದವುಗಳಿಗೆಲ್ಲಾ ಸಾಕಷ್ಟು ಖರ್ಚು ಮಾಡಿ ಹಣ್ಣಾಗಿದ್ದ ಅವನ ಭಾವ ಮನೆಯಲ್ಲೇ ಅವನನ್ನು ನೋಡಿಕೊಂಡು ಪ್ರತಿ ದಿನ ಕ್ಲಿನಿಕ್ಕಿಗೆ ಕರೆದುಕೊಂಡು ಬರುವುದಾಗಿ ಹೇಳಿದರು. ಅವನಿಗೆ ಕೆಲವು ಮಾತ್ರೆಗಳನ್ನು ಬರೆದುಕೊಟ್ಟು ಕಳುಹಿಸಿದೆ.

ಮೊದಲಿನ ಒಂದೆರಡು ದಿನ ಅವನ ಕಾಯಿಲೆಯಲ್ಲಿ ಅಂತಹ ವ್ಯತ್ಯಾಸವೇನೂ ಕಂಡುಬರಲಿಲ್ಲ. ಅವನ ಭಾವ ಕಂಗಾಲಾದರು. ಆರು ತಿಂಗಳಿಂದ ಉಲ್ಬಣವಾಗುತ್ತಲೇ ನಡೆದಿರುವ ಕಾಯಿಲೆ ಒಂದೆರಡು ದಿನಗಳಲ್ಲಿಯೇ ವಾಸಿಯಾಗಲು ಸಾಧ್ಯವೇ? ದಿನೇ ದಿನೇ ಅವನಿಗೆ ಕೊಡುವ ಔಷಧಿಯ ಪ್ರಮಾಣವನ್ನು ಸ್ವಲ್ಪ ಸ್ವಲ್ಪವಾಗಿಯೇ ಹೆಚ್ಚಿಸುತ್ತಾ ಬಂದೆ. ನಾಲ್ಕನೆಯ ದಿನ ಅವನ ಮಾನಸಿಕ ದುಗುಡ ಸ್ವಲ್ಪ ಕಡಿಮೆಯಾಗಿ ಆ ದಿನ ಒಂದೆರಡು ತಾಸು ನಿದ್ದೆಯೂ ಬಂದಿತು. ಐದನೆಯ ದಿನ ಅವನ ಮುಖದಲ್ಲಿ ಕೊಂಚ ಗೆಲುವು ಮೂಡಿತು, ಯಾವುದೋ ಧ್ವನಿ ಕೇಳಿಸುವುದು, ದುಗುಡ ಮುಂತಾದವೆಲ್ಲಾ ಇನ್ನೂ ಹೋಗಿರಲಿಲ್ಲ. ಮದ್ದು ಹಾಕಿರುವ ವಿಷಯ ಕೇಳಿದರೆ "ನನಗೆ ಸರಿಯಾಗಿ ಗೊತ್ತಿಲ್ಲ. ಮದ್ದು ಹಾಕಿರಬಹುದು" ಎನ್ನುವನು. ಅವನ ಕಾಯಿಲೆ ಇನ್ನೂ ಪೂರ್ತಿಯಾಗಿ ಹತೋಟಿಗೆ ಬಂದಿರಲಿಲ್ಲವಾದುದರಿಂದ ಔಷಧಿಯನ್ನು ಕ್ರಮೇಣ ಹೆಚ್ಚಿಸುತ್ತಲೇ ಬಂದೆ.

ಪ್ರತಿಯೊಬ್ಬರ ಶರೀರ ಪ್ರಕೃತಿಯೂ ಒಂದೊಂದು ರೀತಿಯಲ್ಲಿರುತ್ತದೆ. ಒಬ್ಬನನ್ನು ನೋಡಿದಾಕ್ಷಣ ಅವನೆಷ್ಟು ಊಟ ಮಾಡುವನೆಂದು ಹೇಗೆ ಹೇಳಲಸಾಧ್ಯವೋ, ಅದೇ ರೀತಿ ಇಂತಹ ಕಾಯಿಲೆಗೆ ಒಬ್ಬ ಮನುಷ್ಯನಿಗೆ ಇಷ್ಟೇ ಔಷಧಿ ಬೇಕೆಂದು ಹೇಳುವುದು ಸಹ ಅಸಾಧ್ಯ. ಒಂದೇ ಕಾಯಿಲೆಗೆ ಒಬ್ಬರಿಗೆ ಕಡಿಮೆ ಔಷಧಿಯೇ ಸಾಕಾದರೆ ಇನ್ನೊಬ್ಬರಿಗೆ ಹೆಚ್ಚಿನ ಔಷಧಿ ಬೇಕಾಗಬಹುದು. ನಾವು ಮೊದಲು ಕಡಿಮೆಯಾಗಿ ಔಷಧಿಯನ್ನು ಪ್ರಾರಂಭಿಸಿ ಕಾಯಿಲೆ ಎಷ್ಟರ ಮಟ್ಟಿಗೆ ಗುಣವಾಗುತ್ತದೆ ಎಂಬುದನ್ನು ತಿಳಿದು ಔಷಧಿಯ ಪ್ರಮಾಣವನ್ನು ಕ್ರಮೇಣ ಹೆಚ್ಚಿಸುತ್ತಾ ಹೋಗುತ್ತೇವೆ. ದಿನಗಳು ಕಳೆದಂತೆ ರಘುವಿನ ಮುಖದಲ್ಲಿ ಗೆಲುವು ಮೂಡಲಾರಂಭಿಸಿತು. ಕ್ರಮೇಣ ನಿದ್ದೆ ಬಾರದಿರುವುದು ಮತ್ತು ಹಸಿವಿಲ್ಲದಿರುವಿಕೆ ಮೇಲಾಯಿತು. ಶಂಕೆ ಮತ್ತು ದುಗುಡಗಳು ಕಡಿಮೆಯಾದವು. ಮದ್ದು ಹಾಕಿರುವ ವಿಷಯ ಕೇಳಿದರೆ, "ಮದ್ದು ಹಾಕಿದ್ದಾರೋ ಅಥವಾ ಇಲ್ಲವೋ ನನಗೆ ಸರಿಯಾಗಿ ತಿಳಿದಿಲ್ಲ. ಬೇರೆ ಏನೋ ತೊಂದರೆ ಇದ್ದರೂ ಇರಬಹುದು," ಎಂದು ಹೇಳಲು ಮೊದಲು ಮಾಡಿದನು. ಎರಡು ವಾರಗಳು ಕಳೆಯುವ ಹೊತ್ತಿಗೆ ರಘು ಮೊದಲಿನಂತಾದನು. ಆಗ ಮತ್ತೆ ಮದ್ದಿನ ವಿಷಯ ಕೇಳಿದರೆ ನಕ್ಕು, "ನಾನು ಆ ರೀತಿ ಹೇಳಿದನೇ!" ಎಂದು ಆಶ್ಚರ್ಯಪಡುವನು. ಇನ್ನೂ ಒಂದು ವಾರ ಕಳೆಯಿತು. ಮದ್ದಿನ ವಿಷಯದಲ್ಲಿ, "ಅದೆಲ್ಲಾ ಸುಳ್ಳು. ನಾನು ಏಕೆ ಆ ರೀತಿ ಹೇಳಿದೆನೋ ನನಗೆ ತಿಳಿಯದು.

ಬುದ್ಧಿನಲ್ಲಿ ನನ್ನ ಮನಸ್ಸು ಸರಿಯಾಗಿರಲಿಲ್ಲ" ಎಂದು ಅವನೇ ಹೇಳುವನು.

ಸ್ವಲ್ಪ ರೀತಿಯಲ್ಲೂ ರಘು ಗುಣಮುಖನಾಗುತ್ತಿದ್ದುದರಿಂದ ರಘುವಿಗೆ ದಿಲ್ಲಿಗೆ ಹಿಂತಿರುಗಲು ಅನುಮತಿ ಕೊಟ್ಟೆ. ರಘುವಿಗೆ ಆಗಾಗ್ಗೆ ಇನ್ನೂ ನನ್ನನ್ನು ನೋಡುವ ಮತ್ತು ಔಷಧಿ ತೆಗೆದುಕೊಳ್ಳುವ ಅವಶ್ಯಕತೆಯಿತ್ತು. ಎರಡು ತಿಂಗಳು ಕಳೆಯಿತು. ಒಂದು ದಿನ ರಘು ನನ್ನನ್ನು ನೋಡಲು ಬಂದಿದ್ದನು. ತಾನು ಎಲ್ಲಾ ವಿಧದಲ್ಲಿಯೂ ಚೆನ್ನಾಗಿರುವನೆಂದು ಮತ್ತು ತನ್ನ ಕೆಲಸ ಕಾರ್ಯಗಳಲ್ಲಿ ಯಾವ ತೊಂದರೆಯೂ ಇಲ್ಲವೆಂದು ಹೇಳಿದ. ಅವನ ಅಕ್ಕ ಮತ್ತು ಭಾವ ಬೆಂಗಳೂರಿನಲ್ಲಿದ್ದುದರಿಂದ ಮತ್ತು ಅವನ ಚಿಕಿತ್ಸೆಗೆ ಕೂಡ ಅನುಕೂಲವಾಗುವುದರಿಂದ ಬೆಂಗಳೂರಿಗೇ ವರ್ಗ ಮಾಡಿಸಿಕೊಂಡು ಬಂದಿದ್ದ. ಇನ್ನೆರಡು ತಿಂಗಳು ಬಿಟ್ಟು ಮತ್ತೆ ನನ್ನನ್ನು ಕಾಣಲು ಸೂಚನೆಯಿತ್ತು ರಘುವನ್ನು ಕಳುಹಿಸಿಕೊಟ್ಟೆ.

*

ಮದ್ದು ಹಾಕಿರಬಹುದು ಎಂಬುದನ್ನು ಎಲ್ಲೆಲ್ಲಿಯೂ ಕೇಳುತ್ತೇವೆ. ಹಳ್ಳಿಯ ಕಡೆ ಇದು ಇನ್ನೂ ಹೆಚ್ಚು. ನಮ್ಮ ದೇಶ ಮೂಢ ನಂಬಿಕೆಗಳ ನೆಲೆವೀಡು. ಮದ್ದು, ಮಂತ್ರ, ಯಂತ್ರ, ತಂತ್ರ, ಮಾಟ, ಶಕುನ, ಭೂತ, ಕೆಟ್ಟ ಗಾಳಿ, ಪೂಜೆ, ಹರಕೆ ಮುಂತಾದವುಗಳಲ್ಲೆಲ್ಲಾ ನಮ್ಮ ಸಮಾಜದಲ್ಲಿ ನಂಬಿಕೆ ಹೆಚ್ಚು. ಇವೆಲ್ಲಾ ನಿಜವೇ ಅಥವಾ ಸುಳ್ಳೇ ಎಂದು ಪ್ರಶ್ನಿಸುವುದೂ ಸಹ ಇಲ್ಲ. ಕಾರಣಗಳಿಲ್ಲದೆ ನಂಬುವುದನ್ನು ನಾವು ಮೂಢ ನಂಬಿಕೆಗಳೆಂದು ಕರೆಯುತ್ತೇವೆ. ಹಾಗೆಂದ ಮಾತ್ರಕ್ಕೆ ಮದ್ದು ಹಾಕುವುದು ಸಂಪೂರ್ಣವಾಗಿ ಸುಳ್ಳೆ ಎಂಬ ಪ್ರಶ್ನೆಯೇಳುವುದು ಸಹಜ. ಮದ್ದು ಹಾಕಿ ಕೊಂದಿರುವ ನಿದರ್ಶನಗಳು ಬೇಕಾದಷ್ಟಿವೆ. ಅಂದ ಮಾತ್ರಕ್ಕೆ ಎಲ್ಲವನ್ನೂ ಮದ್ದು ಹಾಕಿದ್ದಾರೆಂದು ನಂಬುವುದು ಕುರುಡು ನಂಬಿಕೆಯಲ್ಲದೆ ಬೇರೇನೂ ಅಲ್ಲ. ಯಾರಾದರೂ ಮದ್ದು ಹಾಕಿರುವರು ಎಂದು ಹೇಳಿದಾಗ ಎಲ್ಲಿ ಮತ್ತು ಯಾವಾಗ ಹಾಕಿದರು? ಆಹಾರದ ರುಚಿಯಲ್ಲಿ ಬದಲಾವಣೆಯಿತ್ತೆ? ಅದರಿಂದಾದ ಪರಿಣಾಮ ಏನು? ಮುಂತಾದ ಪ್ರಶ್ನೆಗಳನ್ನು ಕೇಳಿದರೆ ಅವರ ಹೇಳಿಕೆ ಸಮಂಜಸವೇ ಅಥವಾ ಇಲ್ಲವೇ ಎಂಬುದನ್ನು ಕೆಲವು ಬಾರಿ ತಿಳಿಯಬಹುದು. ಇದರ ಮೇಲೆ ಆ ವ್ಯಕ್ತಿಯನ್ನು ವೈದ್ಯಕೀಯ ಪರೀಕ್ಷೆಗೊಳಪಡಿಸಿದರೆ ಮದ್ದು ಒಳಗೆ ಹೋಗಿದೆಯೋ ಅಥವಾ ಇಲ್ಲವೇ ಎಂದು ತಿಳಿಯುತ್ತದೆ. ಒಬ್ಬ ವ್ಯಕ್ತಿಗೆ ತಿಳಿಯದಂತೆ ಮದ್ದು ಹಾಕುವುದು ಅಷ್ಟು ಸುಲಭವಲ್ಲ. ಆಹಾರದ ಮೂಲಕ ಕೊಟ್ಟರೆ ರುಚಿ ವ್ಯತ್ಯಾಸವಾಗಿ ಅವನಿಗೆ ತಿಳಿಯುವುದು. ಅವನಿಗೆ ತಿಳಿಯದಂತೆ ಇಂಜೆಕ್ಷನ್ ಮೂಲಕ ಕೊಡುವುದೂ ಸಾಧ್ಯವಿಲ್ಲ. ಮದ್ದು ಒಳಹೊಕ್ಕರೆ ನಮ್ಮ ಶರೀರವು ತನ್ನ ರಕ್ಷಣೆಗೋಸ್ಕರ ಮದ್ದಿನ ಜೊತೆ ಹೋರಾಟ ನಡೆಸುವುದು. ವಾಂತಿ ಮತ್ತು ಭೇದಿಯಾಗಿ ಮದ್ದನ್ನು ಹೊರಹಾಕಲು ಪ್ರಯತ್ನಿಸುವುದು. ಇದಲ್ಲದೇ ಪಿತ್ತಜನಕಾಂಗ ಮತ್ತು ಮೂತ್ರಪಿಂಡಗಳು ಮದ್ದನ್ನು ನಾಶಗೊಳಿಸಲು ಅಥವಾ ವಿಸರ್ಜಿಸಲು ಪ್ರಯತ್ನಿಸುವವು. ಇದೆಲ್ಲಾ ವಿಫಲವಾದಾಗ ಮಾತ್ರ ಮದ್ದಿನಿಂದ ಶರೀರಕ್ಕೆ ಅಥವಾ ಮನಸ್ಸಿಗೆ ತೊಂದರೆಯಾಗಲು ಸಾಧ್ಯ. ಆದರೆ ರಘು ಹೇಳಿದಂತೆ ಆರು ತಿಂಗಳ ಹಿಂದೆ ಹಾಕಿದ್ದ ಮದ್ದು ಇನ್ನೂ ಪರಿಣಾಮ ಬೀರುತ್ತಿದೆಯೆಂಬುದು ಸಾಧ್ಯವಿಲ್ಲದ ಮಾತು. ಮದ್ದು ಹಾಕಿದ್ದಾರೆನ್ನುವುದಕ್ಕೆ ರಘುವಿನಲ್ಲಿ ಸಾಕಷ್ಟು ಸಮರ್ಥನೆಯೂ ಇಲ್ಲ. ಇಷ್ಟರ ಮೇಲೆ ವೈದ್ಯಕೀಯ ಪರೀಕ್ಷೆಯಲ್ಲಿ ಮದ್ದಿನಿಂದಾದ ಯಾವ ತೊಂದರೆಯ ಚಿಹ್ನವೂ ಇರಲಿಲ್ಲ.

ಹಾಗಾದರೆ ರಘುವಿನ ಕಾಯಿಲೇನು? ಇದು ಒಂದು ಬಗೆಯ ಮಾನಸಿಕ ಕಾಯಿಲೆ. ಇದನ್ನು ನಾವು ಸಿಜೋಫ್ರೀನಿಯಾ ಎಂದು ಕರೆಯುತ್ತೇವೆ. ಸಾಮಾನ್ಯ ಭಾಷೆಯಲ್ಲಿ ಇದನ್ನು "ಹುಚ್ಚು" ಅಥವಾ "ಮತಿಭ್ರಮಣೆ" ಎಂದು ಕರೆಯುವರು. ಸಿಜೋಫ್ರೀನಿಯಾವಲ್ಲಿಯೂ ನಾನಾ ವಿಧಗಳುಂಟು. ಅದರಲ್ಲಿ "ಮರುಳು" (Paranoid) ಎಂಬುದು ಒಂದು ವಿಧ. ಈ ಕಾಯಿಲೆಯಲ್ಲಿ ಶಂಕೆ ಅತಿ ಹೆಚ್ಚು. ಶಂಕೆಯಿಲ್ಲದ ಮನುಷ್ಯನಿಲ್ಲವೆಂಬುದು ದಿಟ. ಆದರೆ ಈ ಕಾಯಿಲೆಯಲ್ಲಿ ಶಂಕೆ ವಿಪರೀತವಾಗುತ್ತದೆ. ಶಂಕೆಯು ಎಲ್ಲರಿಗೂ ಒಂದೇ ರೀತಿಯಾಗಿರುವುದಿಲ್ಲ. ಕೆಲವರು ತಮ್ಮ ಮನೆಯ

ಮುಂದೆ ಯಾರೇ ಬಂದರೂ ಸಾಕು, ತಮ್ಮನ್ನು ಕೊಲ್ಲಲು ಬಂದಿರುವರೆಂದು ಶಂಕಿಸಿ ಕೂಗಾಡುವರು. ಇನ್ನು ಕೆಲವರು ರಘುವಿನಂತೆ ಯಾರೋ ಮದ್ದಿಟ್ಟು ತಮ್ಮನ್ನು ಕೊಲ್ಲಲು ಪ್ರಯತ್ನಿಸುತ್ತಿರುವರು ಎಂದು ಹೇಳುವರು. ಇದೇ ರೀತಿ ಶಂಕೆಗಳು ನಾನಾ ರೀತಿಯಲ್ಲಿರಬಹುದು. ರಘುವಿಗೆ ಮದ್ದನ್ನು ನಾಶಪಡಿಸುವಂತಹ ಯಾವ ಔಷಧಿಯನ್ನೂ ನಾನು ಕೊಡಲಿಲ್ಲ. ನಾನು ಕೊಟ್ಟದ್ದು ಮತಿಭ್ರಮಣೆಯನ್ನು ಶಮನಗೊಳಿಸುವಂತಹ ಮಾತ್ರೆಗಳನ್ನು.

ಯಾರಾದರೂ ಮದ್ದು ಹಾಕಿದ್ದಾರೆಂದು ಹೇಳಿದರೆ ಅದನ್ನು ಅಕ್ಷರಶಃ ತೆಗೆದುಕೊಳ್ಳಕೂಡದು. ಮದ್ದು ಹಾಕಿದ್ದಾರೆಂದು ಹೇಳುವದು ಸಿಜೋಫ್ರೀನಿಯಾ ಎಂಬ ಮಾನಸಿಕ ಕಾಯಿಲೆಯ ಚಿಹ್ನೆಯಾಗಿರಬಹುದು. ವೈದ್ಯ ಪರೀಕ್ಷೆಯಲ್ಲಿ ಮದ್ದು ಹಾಕಿರುವ ಚಿಹ್ನೆಗಳಾವೂ ಕಂಡುಬರದಿದ್ದಲ್ಲಿ ಮನೋರೋಗತಜ್ಞರ ಪರೀಕ್ಷೆಗೊಳಪಡಿಸಬೇಕು. ಮನೋರೋಗಕ್ಕೆ ಮದ್ದಿಲ್ಲವೆಂದು ಹೇಳುವುದನ್ನು ಆಗಿಂದ್ದಾಗ್ಗೆ ಕೇಳುತ್ತೇವೆ. ಇದು ತಪ್ಪು ಭಾವನೆ. ಹುಚ್ಚು ಗುಣಪಡಿಸಲಾಗದಂತಹ ರೋಗ ಎಂಬ ತಪ್ಪು ಪ್ರತೀತಿ ನಮ್ಮಲ್ಲಿದೆ. ಆದುದರಿಂದ ಜನರಿಗೆ ಆ ಪದವನ್ನು ಕೇಳಲು ಸಹ ಭಯ. ಈ ಕಾರಣದಿಂದ ಎಷ್ಟೋ ಜನ ಮನೋರೋಗ ತಜ್ಞರ ಬಳಿ ಹೋಗಲು ಹಿಂಜರಿಯುತ್ತಾರೆ.

✡

(ಈ ಲೇಖನದಲ್ಲಿ ಉದ್ಧರಿಸಲಾಗಿರುವ ಘಟನೆ ವಸ್ತುತಃ ನಿಜವೇ. ಆದರೂ ಇಲ್ಲಿ ರೋಗಿಯ ಹೆಸರನ್ನು ಮಾತ್ರ ಬದಲಿಸಿಕೊಳ್ಳಲಾಗಿದೆ. —ಲೇಖಕ)



ನಿರಪರಾಧಿ; ಆದರೂ ಸೆರೆಮನೆವಾಸ

ಮೆಸ್ಸೀನಾ (ಇಟಲಿ) ನಗರದ ಆಂಟೋನಿಯೋ ಸ್ಪಾನೋ ೧೯೪೭ರಲ್ಲಿ ಫ್ರಾನ್ಸಿಸ್ಕೋ ಬಾರ್ಟ್ಟ ಎಂಬ ವಕೀಲನನ್ನು ಕೊಲೆ ಮಾಡಿದನೆಂಬ ಆರೋಪಕ್ಕೊಳಗಾಗಿ ವಿಚಾರಣೆ ನಡೆದು ಆರೋಪ ಸಿದ್ಧಪಟ್ಟು ಸೆರೆಮನೆ ಸೇರಬೇಕಾಯಿತು. ಆದರೂ ತಾನು ನಿರಪರಾಧಿ, ಕೊಲೆ ಮಾಡಿಲ್ಲ ಎಂದೇ ಆತನ ವಾದ. ೨೧ ವರ್ಷ ಸೆರೆಮನೆಯ ಸರಳುಗಳನ್ನೆಣಿಸಿಯಾದ ಮೇಲೆ ಬಿಡುಗಡೆ ಮಾಡಲ್ಪಟ್ಟ. ಆತ "ನಾನು ನಿರಪರಾಧಿ, ಬಾರ್ಟ್ಟನ ಕೊಲೆ ಮಾಡಿಲ್ಲ. ಮರುವಿಚಾರಣೆ ನಡೆಯಲಿ" ಎಂದು ವಕೀಲ ಗಿಯೋವಾನಿ ಲಿಯೋನ್‌ರನ್ನು ಬೇಡಿಕೊಂಡ. ಗಿಯೋವಾನಿ ಮರುವಿಚಾರಣೆ ಪ್ರಾರಂಭವಾಗುವಂತೆ ಮಾಡಿದ.

ಸ್ಪಾನೋ ನಿಜವಾಗಿಯೂ ನಿರಪರಾಧಿ ಎಂಬುದು ಅನೇಕ ಪುರಾವೆಗಳಿಂದ ಸಿದ್ಧವಾಯಿತು. ಆತ ಕೊಲೆಪಾತಕಿಯಲ್ಲವೆಂಬ ಸತ್ಯಾಂಶ ಸ್ಪಷ್ಟವಾಯಿತು. ನ್ಯಾಯಾಧೀಶರು "ಸ್ಪಾನೋ, ನೀನು ೨೧ ವರ್ಷ ಸೆರೆಮನೆಯಲ್ಲಿ ಕಳೆಯಬೇಕಾಗಿ ಬಂದುದು ವಿಷಾದನೀಯ. ಇದಕ್ಕೆ ನ್ಯಾಯಾಂಗ ವಿಷಾದಿಸುತ್ತದೆ. ಆದರೆ ಈ ಅನ್ಯಾಯಕ್ಕೆ ಪರಿಹಾರವೇನೂ ದೊರಕದು" ಎಂದರು.

ನಿಜವಾದ ಘಟನೆಯೆಂದರೆ ಬಾರ್ಟ್ಟ ಕೊಲೆಗೈಯಲ್ಪಟ್ಟಾಗ ಸ್ಪಾನೋ ವಿದೇಶದಲ್ಲಿದ್ದ.

ನಿಮ್ಮ ಶಬ್ದಭಂಡಾರ ಬೆಳೆಯಲಿ

ಶಬ್ದಭಾಂಡಾರವು ಹಣದ ಭಾಂಡಾರಕ್ಕಿಂತಲೂ ಅಮೂಲ್ಯವಾಗಿದೆ

ಇಲ್ಲಿ ಪ್ರತಿ ತಿಂಗಳೂ ಕೆಲವು ಶಬ್ದಗಳನ್ನು ಪರಿಚಯ ಮಾಡಿಕೊಡಲಾಗುವುದು. ಆಯಾ ಶಬ್ದದ ಮುಂದೆ ನಾಲ್ಕು ಅರ್ಥಗಳನ್ನು ಕೊಟ್ಟಿದ್ದು ಅವುಗಳಲ್ಲಿ ಒಂದು ಮಾತ್ರ ಸರಿಯಾಗಿರುತ್ತದೆ. ನಿಮಗೆ ಸರಿಯೆನಿಸಿದ ಅರ್ಥವನ್ನು ಮೊದಲು ಆರಿಸಿಕೊಳ್ಳಿ. ಆಮೇಲೆ ಇದರ ಬೆನ್ನಿನ ಪುಟ ನೋಡಿರಿ. ಅಲ್ಲಿ ಸರಿಯಾದ ಅರ್ಥವನ್ನು ವಿವರಿಸಿದೆ.

೧. **ಘನಸ್ತಿಕೆ**
(ಅ) ಗಟ್ಟಿಗತನ (ಆ) ಒಂಪು (ಇ) ಲೆಕ್ಕಾಚಾರ (ಈ) ನೀರ್ಗಲ್ಲು

೨. **ಚಿತಾವಣೆ**
(ಅ) ಹೆಣ ಸುಡುವುದು (ಆ) ಆಲೋಚನೆ (ಇ) ಬುದ್ಧಿವಂತಿಕೆ (ಈ) ಪ್ರಚೋದನೆ

೩. **ಕಿತಾಪತಿ**
(ಅ) ನಾರುಮಡಿ (ಆ) ಗೋಣಿಚೀಲ (ಇ) ಸಲ್ಲದ ಕೆಲಸ (ಈ) ಎರಡನೇ ಗಂಡ

೪. **ಗಣ್ಯ**
(ಅ) ಮಹತ್ವದ (ಆ) ಗಣಪತಿ (ಇ) ಡೊಂಬ (ಈ) ಸೂಳೆಗೇರಿ

೫. **ಬಲುಮೆ**
(ಅ) ಒತ್ತಾಯ (ಆ) ಪ್ರೀತಿ (ಇ) ಲೋಹ ಕುದಿಸುವ ಕಡಾಯಿ (ಈ) ಯುದ್ಧಚಾತುರ್ಯ

೬. **ಅನಿಮೇಷ**
(ಅ) ಬಿಳಿ ಕುರಿ (ಆ) ರೆಪ್ಪೆ ಮುಚ್ಚದ (ಇ) ನಿಷ್ಕಾರಣ (ಈ) ಸಸ್ಯಾಹಾರಿ

೭. **ಅಮರು**
(ಅ) ದೇವತೆ (ಆ) ಬಲೆ ಕಟ್ಟು (ಇ) ಹುಲುಸು ನೆಲ (ಈ) ತಗಲಿಕೊಳ್ಳು

೮. **ಹುತ್ತರಿ**
(ಅ) ಗೆದ್ದಲು (ಆ) ಉಮೇದುವಾರ (ಇ) ಹೊಸ ಅಕ್ಕಿ (ಈ) ಕಾಲಜ್ಞಾನಿ

೯. **ಹುದಲು**
(ಅ) ಪೊದರು (ಆ) ಅವಿತುಕೊಳ್ಳು (ಇ) ಕೆಸರು (ಈ) ಪಾಲು

೧೦. **ಸಪ್ತಾಹ**
(ಅ) ಉರಿಯುವ ಬಿಸಿಲು (ಆ) ಸಿಟ್ಟು (ಇ) ಮದುವೆ (ಈ) ಏಳು ದಿನ

೧೧. **ಸನ್ನಿ**
(ಅ) ಸಮೀಪ (ಆ) ಬುದ್ಧಿಭ್ರಮಣೆ (ಇ) ಮುಸ್ಲಿಮರ ಒಂದು ಪಂಗಡ (ಈ) ಕುರುಹು

೧೨. **ವ್ಯವಧಾನ**
(ಅ) ಪುರಸೊತ್ತು (ಆ) ಹೇಳಿದ್ದು ಕೇಳದಿರುವಿಕೆ (ಇ) ಕೃಷಿ (ಈ) ಉದ್ಯೋಗ

೧. **ಘನಸ್ತಿಕೆ** (ಅ) ಹಿರಿಮೆ. ಶ್ರೇಷ್ಠತೆ, ಗೌರವ; ಹೆಮ್ಮೆ. ಉದಾ:— ತನ್ನ ಘನಸ್ತಿಕೆ ತೋರಿಸುತ್ತಾನೆ. [ಸಂ. ಘನ= ಘಟ್ಟಿ + ಅಪಭ್ರಂಶ, ಸ್ತ= ಆದುಳ್ಳವ+ ಕನ್ನಡ ಇಕೆ]

೨. **ಚಿತಾವಣೆ** (ಈ) ಪ್ರಚೋದನೆ. ಚುಚ್ಚಿ ಕೊಡುವುದು, ಪ್ರೇರಣೆ, ಪ್ರೋತ್ಸಾಹ. ಉದಾ:— ಹೆಂಡತಿಯ ಚಿತಾವಣೆ. [ಹಿಂದಿ ಚೇತಾವನೀ= ಮುನ್ನೆಚ್ಚರಿಕೆ]

೩. **ಕಿತಾಪತಿ** (ಇ) ಸಲ್ಲದ ಕೆಲಸ, ಉಪದ್ವ್ಯಾಪ, ಕಿತಬಿ, ಕಿಡಿಗೇಡಿತನ, ಉದಾ:– ಬಹಳ ಕಿತಾಪತಿ ಮನುಷ್ಯ. [ಅರಬಿ, ಕಿತಾ= ಧೂರ್ತತನ—ದಿಂದ]

೪. **ಗಣ್ಯ** (ಅ) ಮಹತ್ವದ, ಶ್ರೇಷ್ಠ; ಲೆಕ್ಕಿಸುವಿಕೆ. ಉದಾ:— ಗಣ್ಯ ನಾಗರಿಕ; ಗಣ್ಯಕ್ಕೇ ತೆಗೆದುಕೊಳ್ಳಲಿಲ್ಲ. [ಸಂ. ಗಣ್ಯ= ಎಣಿಸಬೇಕಾದ]

೫. **ಬಲುಮೆ** (ಅ) ಒತ್ತಾಯ, ಬಲಾತ್ಕಾರ, ನಿರ್ಬಂಧ, ಜುಲುಮೆ. ಉದಾ:— ಬಲುಮೆಯಿಂದ ತಿನ್ನಿಸಿದ. [ಕನ್ನಡ ಬಲ್= ಶಕ್ತಿಯುಳ್ಳ + ಮೆ]

೬. **ಅನಿಮೇಷ** (ಅ) ರೆಪ್ಪೆ ಬಡಿಯದ; ಕಣ್ಣು ಮುಚ್ಚಿ ತೆರೆಯದ. ಉದಾ:— ಅನಿಮೇಷವಾಗಿ ನೋಡುತ್ತಿದ್ದ [ಸಂ. ಅ= ಇಲ್ಲ + ನಿಮೇಷ= ರೆಪ್ಪೆ ಬಡಿಯುವಿಕೆ]

೭. **ಅಮರು** (ಈ) ತಗಲಿಕೊಳ್ಳು, ಹಿಡಿದುಕೊಳ್ಳು; ಆಕ್ರಮಿಸು; ಸೇರಿಕೊಳ್ಳು. ಉದಾ:— ಕಂಡವರಿಗೆ ಅಮರಿಕೊಳ್ಳುತ್ತಾನೆ. [ಕನ್ನಡ]

೮. **ಹುತ್ತರಿ** (ಇ) ಹೊಸ ಅಕ್ಕಿ, ಹೊಸ ಅಕ್ಕಿಯನ್ನು ತಿನ್ನುವ ಸುಗ್ಗಿಯ ಹಬ್ಬ. [ಕೊಡಗ, ಪುತ್ತರಿ, ಪುತ್ತ= ಹೊಸ, ಅರಿ= ಅಕ್ಕಿ]

೯. **ಹುದಲು** (ಇ) ಕೆಸರು, ಕೆಸರು ತುಂಬಿದ ಸ್ಥಳ. ಉದಾ:— ಹುದಲಿನಲ್ಲಿ ಕಾಲು ಸಿಕ್ಕಿತು. [ಕನ್ನಡ, ಹುದುಗು= ಮೆದುವಾಗು—ಇಂದ]

೧೦. **ಸಪ್ತಾಹ** (ಈ) ಏಳು ದಿನ, ವಾರ, ಹಪ್ತೆ; ಏಳು ದಿನಗಳ ಕಾರ್ಯಕ್ರಮ. ಉದಾ:— ಪುರಾಣ ಸಪ್ತಾಹ. [ಸಂ. ಸಪ್ತ= ಏಳು + ಅಹನ್= ಹಗಲು]

೧೧. **ಸನ್ನಿ** (ಅ) ಅಧಿಕ ಜ್ವರದಿಂದಾಗುವ ಚಿತ್ತಭ್ರಮಣೆ. ಆ ಸ್ಥಿತಿಯಲ್ಲಿ ಮಾತಾಡುವಿಕೆ. ಉದಾ:— ಬಾಣಂತಿ ಸನ್ನಿ [ಸಂ. ಸನ್ನಿಪಾತ= ಒಂದು ತೀಕ್ಷ್ಣ ಜ್ವರ]

೧೨. **ವ್ಯವಧಾನ** (ಅ) ಪುರಸೊತ್ತು, ವೇಳೆ, ಬಿಡುವು. ಉದಾ:— ಈ ಕೆಲಸಕ್ಕೆ ವ್ಯವಧಾನ ಸಿಗಲಿಲ್ಲ. [ಸಂ. ವಿ= ಇಲ್ಲ + ಅವಧಾನ= ಗಮನ]

ನಿಮ್ಮ ಶಬ್ದಶಕ್ತಿಯ ತರಗತಿ

ನೀವು ಎಷ್ಟು ಶಬ್ದಗಳಿಗೆ ಅರ್ಥ ಅರಿಸಿದ್ದು ಸರಿಯಾಗಿದೆಯೆಂದು ಎಣಿಸಿ, ಕೆಳಗಿನಂತೆ ನಿಮ್ಮ ಶಬ್ದಶಕ್ತಿಯ ತರಗತಿಗಳನ್ನು ತಿಳಿಯಿರಿ.

೬—೮	ಸರಿಯಿದ್ದರೆ	...	ಸಾಧಾರಣ
೯—೧೦	,,	...	ಉತ್ತಮ
೧೧—೧೨	,,	...	ಅತ್ಯುತ್ತಮ

ಜಪಾನಿನ ಮುಳುಗುಗಾತಿಯರು

ಡಾ. ಸುನಂದಾ ಕುಲಕರ್ಣಿ

ನೀವು ಜಪಾನಿನ ಒಂದು ಸಮುದ್ರ ದಂಡೆಯ ಮೇಲೆ ಕುಳಿತು ಪ್ರಕೃತಿ ಸೌಂದರ್ಯವನ್ನು ವೀಕ್ಷಿಸುತ್ತಿರುತ್ತೀರಿ. ಆಗ ಒಂದೇ ಸಮನೆ ಶೀಟಿ ಹಾಕಿದ ಸದ್ದು ಕೇಳಿಸುತ್ತದೆ. ಶೀಟಿಯ ಸದ್ದು ಸಮುದ್ರದಲ್ಲಿ ಜಿಗಿಯುತ್ತಿರುವ ನೂರಾರು ಹೆಂಗಳೆಯರಿಂದ ಬರುತ್ತಿದ್ದುದನ್ನು ಕಂಡು, ನೀವು ಹುಬ್ಬೇರಿಸುತ್ತೀರಿ. ಈ ಹೆಂಗಸರ ಧೈರ್ಯ ಕಂಡು ಬೆರಳು ಕಚ್ಚುತ್ತೀರಿ. ಇವರೇ ಜಪಾನಿನ ಮುಳುಗುಗಾತಿಯರು. ಅಲ್ಲಿ ಇವರನ್ನು "ಅಮಾ" ಎಂದು ಗುರುತಿಸುತ್ತಾರೆ. ಈಗ ಕೋರಿಯಾ ಮತ್ತು ಜಪಾನ್ ಇವೆರಡರಲ್ಲೂ ಸೇರಿ ಒಟ್ಟು ೩೦,೦೦೦ ಅಮಾಗಳಿದ್ದಾರೆ. ಇವರು ಮುತ್ತುಗಳನ್ನು ಹೆಕ್ಕಿತೆಗೆಯುವುದಕ್ಕಾಗಿ ಈ ವೃತ್ತಿಯನ್ನು ಆಯ್ದುಕೊಂಡಿದ್ದಾರೆಂದು ನೀವು ತಿಳಿದುಕೊಂಡಿದ್ದರೆ ಅದು ತಪ್ಪು. ಅವರು ಈಗ ಆಹಾರಕ್ಕಾಗಿ ಅಂದರೆ ಸಿಂಪುಮೀನ (Shell Fish)ಕ್ಕಾಗಿ ಈ ಕೆಲಸ ಮಾಡುತ್ತಿದ್ದಾರೆ.

ಈ ಅಮಾಗಳು ಹನ್ನೊಂದು ಹನ್ನೆರಡು ವರ್ಷಕ್ಕೆಯೇ ಈ ಉದ್ಯೋಗವನ್ನು ಪ್ರಾರಂಭಿಸುತ್ತಾರೆ. ಕೆಲವರು ೬೫ ವರ್ಷದ ವರೆಗೂ ಇದನ್ನು ನಡೆಸಿಕೊಂಡು ಹೋಗುತ್ತಾರೆ. ಬಸಿರು–ಬಾಣಂತಿತನ ಇವರಿಗೆ ಅಡ್ಡಿ ಬರುವುದಿಲ್ಲ. ಇವರು ಬೇಸಿಗೆಯಲ್ಲಿಷ್ಟೇ ಅಲ್ಲ, ಚಳಿಗಾಲದಲ್ಲಿಯೂ ಮುಳುಗು ಹಾಕಬಲ್ಲರು. ಕೆಲವು ಸಲ ೮೦ ಅಡಿ ಕಡಲಿನಾಳದಲ್ಲಿ ಹೋಗಿ ಬರಬಲ್ಲರು. ಅಮಾಗಳಲ್ಲಿ ಹೆಂಗಸರೇ ಜಾಸ್ತಿ.

ಮುಳುಗು ಹಾಕುವ ಪದ್ಧತಿಯಲ್ಲಿ ಎರಡು ವಿಧಗಳಿವೆ. ಮೊದಲನೆಯದಕ್ಕೆ 'ಕಾಶಿದೊ' ಎನ್ನುತ್ತಾರೆ. ಎರಡನೆಯ ವಿಧಕ್ಕೆ 'ಫುನಾದೊ' ಎಂದು ಹೆಸರು. ಕಾಶಿದೊದಲ್ಲಿ ಒಬ್ಬಳೇ ಮುಳುಗುಗಾತಿಯಿರುತ್ತಾಳೆ. ಅವಳು ದೀರ್ಘವಾಗಿ ಕೆಲವು ಸಲ ಉಸಿರಾಡಿ ಮುಳುಗಿ ಕೆಳಕ್ಕೆ ಹೋಗುತ್ತಾಳೆ. ಪ್ರಾಣವಾಯುವಿನ ಕೊರತೆಯಿಂದ ಅವಳಿಗೆ ಬಹಳ ಆಳ ಹೋಗುವುದಾಗುವುದಿಲ್ಲ. ಇವಳು ಸರಾಸರಿ ೧೫–೨೦ ಅಡಿ ಆಳಕ್ಕೆ ಹೋಗಬಲ್ಲಳು. ಕೆಲವು ವೇಳೆ ಮಾತ್ರ ೪೦ ರಿಂದ ೬೦ ಅಡಿ ಹೋಗಬಲ್ಲಳು. ಒಟ್ಟು ಒಂದು ತಾಸಿಗೆ ಸುಮಾರು ೬೦ ಸಲ ಮುಳುಗು ಹಾಕಬಲ್ಲಳು.

ಘನಾದೊದಲ್ಲಿ ಈಸುವ ಪ್ರಯತ್ನ ಕಡಿಮೆ, ಇಲ್ಲಿ ಬೇಗನೆ ಕೆಳಕ್ಕಿಳಿಯಲು ೩೦ ಪೌಂಡು ಭಾರವನ್ನು ಒಯ್ಯಲಾಗುವುದು. ಮೇಲೇರು-ವಾಗ ಬೋಟಿನಲ್ಲಿರುವ ಸಹಾಯಕನು ಅವಳನ್ನು ಮೇಲೆ ಜಗ್ಗುತ್ತಾನೆ. ಇದರಿಂದ ಈ ಪದ್ಧತಿಯಲ್ಲಿ ೬೦ ರಿಂದ ೮೦ ಅಡಿಗಳವರೆಗೂ ಕೆಳಗೆ ಹೋಗಬಲ್ಲರು. ಈ ಸಹಾಯಕನು ಸಾಮಾನ್ಯವಾಗಿ ಆಕೆಯ ಗಂಡನೇ ಇರುತ್ತಾನೆ.

ನೋಡುವವರಿಗೆ ಸುಲಭವಾಗಿ ಕಂಡರೂ ಈ ಕೆಲಸ ಬಹಳ ಕಷ್ಟಕರವಾದದ್ದು. ನೀರಿನಲ್ಲಿ ಕೆಳಗಿಳಿಯುವವರಿಗೆ ಕೆಳಗಿನ ವಸ್ತುಗಳು ಸರಿಯಾಗಿ ಕಾಣುವುದಿಲ್ಲ. ಕಾರಣ ಇವರು ಗಾಗಲ್ಸ್ ಹಾಕುತ್ತಾರೆ. ಆಳಕ್ಕೆ ಹೋದಂತೆ ದೇಹದ ಮೇಲೆ ನೀರಿನ ಒತ್ತಡ ಹೆಚ್ಚುತ್ತದೆ. ಕೆಲವು ಸಲ ಕಣ್ಣಿನಲ್ಲಿ ರಕ್ತಸ್ರಾವವಾಗಬಹುದು. ಈ ಒತ್ತಡದಿಂದುಂಟಾಗುವ ದುಷ್ಪರಿಣಾಮಗಳನ್ನು ತಡೆಗಟ್ಟಲು ಮೊದಮೊದಲು ಹವೆಯನ್ನು ತುಂಬಿದ ಚೀಲಗಳಿಂದ ಅಳ-ವಡಿಸಲ್ಪಟ್ಟ ಗಾಗಲ್ಸ್‌ಗಳನ್ನು ಬಳಸಲಾಗುತ್ತಿತ್ತು. ಇಂಥದರಲ್ಲಿ ಉಸಿರಾಡಿಸಿದ ಹವೆಯೇ ಗಾಗಲ್ಸ್‌ಗಳ ಹಿಂದುಗಡೆ ತುಂಬುತ್ತದೆ.

ಆಳಕ್ಕೆ ಇಳಿದಂತೆ ಪ್ರಾಣವಾಯುವಿನ ಕೊರತೆಯುಂಟಾಗುತ್ತದೆ. ತಿರುಗಿ ಮೇಲಕ್ಕೆ ಬರುವಾಗ ಈ ಕೊರತೆ ತೀವ್ರವಾಗಿ ಕೆಲವು ಸಲ ಪ್ರಾಣಾಪಾಯ ಸಂಭವವೂ ಇಲ್ಲದಿಲ್ಲ. ಬರೀ ಪ್ರಾಣವಾಯುವಿನ ಕೊರತೆ ಅಲ್ಲ, ಕೆಲವು ಸಲ ನೈಟ್ರೋಜನ್ ವಾಯುವಿನ ಒತ್ತಡ ಪುಪ್ಪುಸಗಳಲ್ಲಿ ಹೆಚ್ಚಾಗಿ ಪ್ರಾಣಾಂತಿಕವಾಗಬಹುದು.

ಅಮಾಗಳಿಗೆ ತಾವು ಎಷ್ಟು ಆಳಕ್ಕೆ ಹೋದರೆ ಸುರಕ್ಷಿತ ಎಂಬುದು ತಿಳಿದಿರುತ್ತದೆ. ಕಾರಣ ಆದಷ್ಟು ಅವರು ತಮಗಾಗುವಷ್ಟು ಆಳಕ್ಕೆ ಮಾತ್ರ ಹೋಗುತ್ತಾರೆ. ಅಭ್ಯಾಸಬಲದಿಂದ ಇವರು ಬಹಳ ಹೊತ್ತಿನವರೆಗೆ ಉಸಿರು ಹಿಡಿಯಬಲ್ಲರು. ಜಲಚರಗಳಂತೆ ಇವರ ಹೃದಯದ ಬಡಿತವು ಕೂಡ ನೀರಿನಲ್ಲಿ ಮುಳುಗಿದಾಗ ಕಡಿಮೆಯಾಗುತ್ತದೆಂಬುದನ್ನು ಇಲೆಕ್ಟ್ರೋಡು-ಗಳನ್ನು ಹಚ್ಚಿ ಕಂಡುಹಿಡಿದಿದ್ದಾರೆ. ದೇಹದ ಉಷ್ಣತೆಯು ಕೂಡ ನೀರಿನಲ್ಲಿ ಕಡಿಮೆಯಾಗುತ್ತದೆ.

೧೫೦೦ ವರ್ಷಗಳಿಂದ ನಡೆದುಬಂದ ಈ ಉದ್ಯೋಗವು ಇದೀಗ ಮಾಯವಾಗುತ್ತಲಿದೆ.

✡



ಎಲ್ಲ ವಿಧದ ಸೌಕರ್ಯವಿದ್ದ ೬೪೪ ಅಡಿ ವಿಸ್ತಾರವಾದ 'ಮ್ಯಾಕ್ಸಿಮ್ ಗೋರ್ಕಿ' ಎಂಬ ರಶಿಯನ್ ಹಡಗು ಒಂದು ರೀತಿಯಲ್ಲಿ ನಗರವಿದ್ದಂತೆಯೆ ಇದೆ.

ಈ ಹಡಗಿನಲ್ಲಿ "ಓಬ್ರಿತಾ" ಎಂಬ ಪತ್ರಿಕೆ ಅಚ್ಚಾಗುತ್ತದೆ. ರೇಡಿಯೋ ಟೆಲೆಕ್ಸ್ ಮೂಲಕ ಬರುವ ಸಮಾಚಾರವಲ್ಲದೇ ಆ ಹಡಗದಲ್ಲಿಯ ಸುದ್ದಿಗಳನ್ನೂ ಪ್ರಯಾಣಿಕರ ಲೇಖನಗಳನ್ನೂ ಆ ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ಈ ಹಡಗಿನಲ್ಲಿ ಒಂದು ಗಿರಣಿ, ಮಾರ್ಕೆಟ್, ಮೂರು ಆಸ್ಪತ್ರೆಗಳು, ಎರಡು ಹೋಟೆಲ್ಲುಗಳು, ಮೂರು ಸರಾಯಿ ಅಂಗಡಿಗಳು, ಒಂದು ಟೆನ್ನಿಸ್ ಹಾಗೂ ವಾಲಿ-ಬಾಲ್ ಕೋರ್ಟುಗಳಲ್ಲದೇ ಮನರಂಜನೆಗೋಸುಗ ಒಂದು ಟೆಲಿವಿಜನ್ ಕೇಂದ್ರವೂ ಇದೆ.

ಸಂಗ್ರಹ : ಕೋಟಿ ವರದೇಂದ್ರ

ಪುಸ್ತಕ ವಿಭಾಗ

ಸೊಲೊಮನನ ಧನನಿಧಿ

ಇಂಗ್ಲಿಷ್ ಮೂಲ: ಸರ್ ಹೆಚ್. ರೈಡರ್ ಹಗ್ಗಾ
ಕನ್ನಡಕ್ಕೆ: ಕೇಶವ ಎಸ್. ಪೈ.

ಸೊಲೊಮನ್ನನ ರಹಸ್ಯನಿಧಿ

ಹತ್ತೊಂಬತ್ತನೆಯ ಶತಮಾನದ ಶ್ರೇಷ್ಠ ಆಂಗ್ಲ ಕಾದಂಬರಿಕಾರ ಸರ್ ಹೆನ್ರಿ ರೈಡರ್ ಹೆಗ್ಗಾರ್ಡ್ ತನ್ನ, ಇಪ್ಪತ್ತೆಂಟನೆಯ ವಯಸ್ಸಿನಲ್ಲೇ ತನ್ನ ಮೊದಲ ಕಾದಂಬರಿ 'ಡಾನ್'ನಿಂದ ಹೆಸರುವಾಸಿಯಾದ. ಮುಂದಿನ ಮೂರು ವರ್ಷಗಳಲ್ಲಿ 'ವಿಚೆಸ್ ಹೆಡ್,' 'ಕಿಂಗ್ ಸೊಲೊಮನ್ಸ್ ಮೈನ್ಸ್' ಮತ್ತು 'ಷಿ' ಗಳನ್ನು ಬರೆದು ಮುಗಿಸಿದ. ಆತ ಬರೆದದ್ದೇ ಈ ನಾಲ್ಕು ಕಾದಂಬರಿಗಳನ್ನು. ಅವುಗಳಲ್ಲಿ ಅತಿ ಪ್ರಸಿದ್ಧವಾದದ್ದು 'ಷಿ'. ನಾರ್‌ಫೋಕಿನ ತನ್ನ ಎಸ್ಟೇಟನ್ನು ನೋಡಿಕೊಳ್ಳುತ್ತ ಆಗಾಗ ವಿದೇಶ ಪರ್ಯಟನ ಮಾಡುತ್ತ, ಪರ್ಯಟನಾನುಭವಗಳನ್ನು ಕಥೆಗಳಾಗಿ ಮಾರ್ಪಡಿಸುತ್ತಿದ್ದ ಈತ ಈ ನಾಲ್ಕು ಕಾದಂಬರಿಗಳ ಜತೆಗೇ 'ರೂರಲ್ ಇಂಗ್ಲೆಂಡ್' (೧೯೦೫) ಹಾಗು 'ರೂರಲ್ ಡೆನ್ಮಾರ್ಕ್ ಆಂಡ್ ಇಟ್ಸ್ ಲೆಸನ್ಸ್' (೧೯೧೧) ಕಿರು ಗ್ರಂಥಗಳನ್ನೂ ಬರೆದ. ೧೯೧೨ರಲ್ಲಿ ಹೆಗ್ಗಾರ್ಡನಿಗೆ 'ನೈಟ್' ಪದವಿ ಕೊಡಲ್ಪಟ್ಟಿತು. ೧೯೨೫ರ ಮೆ ೧೪ರಂದು ನಿಧನವಾದ.

ಐತಿಹಾಸಿಕ ಸತ್ಯಗಳಿಗೆ ಕಲ್ಪನೆಯ ಕವಚ ಕೂಡಿಸಿ ಅದ್ಭುತವಾದ, ಅವರ್ಣನೀಯವಾದ ಹಾಗೂ ಚೇತೋಹಾರಿಯಾದ ಕಾದಂಬರಿಗಳನ್ನು ರಚಿಸುವಲ್ಲಿ ಸಿದ್ಧಹಸ್ತ. ಪ್ರಸ್ತುತ ಸಂಗ್ರಹ ಆತನ 'ಕಿಂಗ್ ಸೊಲೊಮನ್ಸ್ ಮೈನ್ಸ್'ನ ಅನುವಾದ.

ನನ್ನ ಐವತ್ತೈದನೆಯ ಹುಟ್ಟುಹಬ್ಬ ಮಂದು ಕೈಯಲ್ಲಿ ಪೆನ್ನು ಹಿಡಿದು ಇತಿಹಾಸವೊಂದನ್ನು ಬರೆಯಲು ನಿಶ್ಚಯಿಸಿದೆ. ಆದರೆ, ಯಾವ ಇತಿಹಾಸ ಬರೆಯಲಿ? ನನ್ನ ಜೀವನದಲ್ಲಿ ಅನೇಕ ಒಳ್ಳೆಯ ಕೆಲಸಗಳನ್ನು ಮಾಡಿದ್ದೇನೆ. ಏಕೆಂದರೆ ಬಹಳ ಚಿಕ್ಕ ವಯಸ್ಸಿನಲ್ಲೇ ನಾನು ನನ್ನ ಜೀವನೋಪಾಯಕ್ಕಾಗಿ ಆಫ್ರಿಕದಲ್ಲಿ ವ್ಯಾಪಾರ ಮಾಡುತ್ತಿದ್ದೆ. ಬೇಕಾದಷ್ಟು ಹಣವನ್ನೂ ಗಳಿಸಿದೆ. ಈಚಿನ ಹದಿನೈದು–ಹದಿನಾರು ತಿಂಗಳಿನಲ್ಲಿ ವ್ಯಾಪಾರಕ್ಕೆಂದು ಹೋಗಿಲ್ಲ.

ಈಗ ಬರೆಯಬೇಕೆಂದಿರುವುದನ್ನು ಪ್ರಾರಂಭಿಸುತ್ತೇನೆ. ನಾನು–ಅಲನ್ ಕ್ವಾರ್ಟರ್‌ಮೇನ್–ಸತ್ಯವನ್ನೇ ಹೇಳುವುದಾಗಿ ಪ್ರಮಾಣ ಮಾಡುತ್ತೇನೆ. ಈಗ್ಗೆ ಹದಿನೆಂಟು ತಿಂಗಳ ಹಿಂದೆ ಮೊಟ್ಟ ಮೊದಲನೆಯದಾಗಿ ಸರ್ ಹೆನ್ರಿ ಕರ್ಟಿಸ್‌ರನ್ನು ಹಾಗೂ ಕ್ಯಾಪ್ಟನ್ ಗುಡ್‌ರನ್ನು ಭೇಟಿಯಾದೆ. ಕೇಪ್‌ಟೌನಿನಲ್ಲಿ ಒಂದು ವಾರ ಕಳೆದ ನಂತರ ನನ್ನ ಜನ್ಮಸ್ಥಳಕ್ಕೆ ಹಡಗಿನಲ್ಲಿ ಹಿಂದಿರುಗಲು ನಿಶ್ಚಯಿಸಿದೆ. ನಾನು ಹೊರಟಿದ್ದ ಹಡಗಿನಲ್ಲಿದ್ದವರಲ್ಲಿ ಇಬ್ಬರು ನನ್ನ ಬಗ್ಗೆ ಕುತೂಹಲ ತೋರಿದರು. ಒಬ್ಬ ಮೂವತ್ತರ ಪ್ರಾಯದ ಬಲಶಾಲೀ ಮನುಷ್ಯ. ಆತನಿಗೆ ಹಳದಿ ಕೂದಲು ಹಾಗೂ ಹಳದಿ ಗಡ್ಡವಿತ್ತು. ದೊಡ್ಡ. ಕಂದು ಬಣ್ಣದ ಕಣ್ಣುಗಳಿದ್ದವು. ಆತನನ್ನು ನಾನೆಲ್ಲೋ ನೋಡಿದ್ದೇನೆನಿಸಿದರೂ ಎಲ್ಲಿ ಎಂಬುದು ತಿಳಿಯಲಿಲ್ಲ. ಆತನ ಹೆಸರು ಹೆನ್ರಿ ಕರ್ಟಿಸ್.

ಆತನೊಡನೆ ಮಾತನಾಡುತ್ತಿದ್ದ ವ್ಯಕ್ತಿಯನ್ನು ಹಡಗಿನ ಯಾವುದೋ ಅಧಿಕಾರಿಯೆಂದು ಭಾವಿಸಿದೆ. ನನ್ನ ಊಹೆ ಸರಿ– ಆತ ಇತ್ತೀಚೆಗೆ ರಾಜನೌಕಾಪಡೆಯ ಸೇವೆಯಿಂದ ನಿವೃತ್ತನಾಗಿದ್ದನಂತೆ. ಆತನ ಹೆಸರು ಗುಡ್– ಕ್ಯಾಪ್ಟನ್ ಜಾನ್ ಗುಡ್. ಆತನ ಎಡಗಣ್ಣಿಗೆ ಮಾತ್ರ ಯಾವಾಗಲೂ ಮೊನಾಕಲ್ (ಒಂದೇ ಕಣ್ಣಿಗೆ ಹಾಕುವ ಚಾಳಿಸು), ಬಾಯಲ್ಲಿ ಕೃತಕ ಹಲ್ಲುಗಳಿದ್ದವು.

ಕ್ಯಾಪ್ಟನ್ ಗುಡ್ ಮತ್ತು ನಾನು ಊಟಕ್ಕಾಗಿ ಕೆಳಗಿಳಿದು ಹೋದೆವು. ಆ ವೇಳೆಗಾಗಲೇ ಸರ್ ಹೆನ್ರಿ ಕರ್ಟಿಸ್‌ರು ಬಂದು ಕುಳಿತಿದ್ದರು. ನಾವಿಬ್ಬರೂ ಬೇಟೆಯ ಬಗ್ಗೆ ಮಾತನಾಡತೊಡಗಿದೆವು. ಆನೆಯ

ಬೇಟೆಯ ಬಗ್ಗೆ ಮಾತು ಪ್ರಾರಂಭವಾಯಿತು.

ನನ್ನ ಹಿಂದಿನಿಂದ ಯಾರೋ ಕೂಗಿದರು, "ಸ್ವಾಮಿ ನೀವು ಚರ್ಚೆಗೆ ಸರಿಯಾದ ವ್ಯಕ್ತಿಯನ್ನೇ ಆಯ್ದಿದ್ದೀರಿ. ಆತ ಖ್ಯಾತ ಬೇಟೆಗಾರ ಕ್ವಾರ್ಟರ್‌ಮನ್. ಇತರರಿಗಿಂತ ಚೆನ್ನಾಗಿ ಬೇಟೆಯ ಬಗ್ಗೆ ಹೇಳುತ್ತಾರೆ."

ಕುಳಿತಿದ್ದ ಸರ್ ಹೆನ್ರಿ ಚಕಿತರಾದರು.

"ಕ್ಷಮಿಸಿ, ನಿಮ್ಮ ಹೆಸರು ಅಲನ್ ಕ್ವಾರ್ಟರ್‌ಮನ್ ಅಲ್ಲವೆ?"

"ಹೌದು."

ಆತ ಇನ್ನೇನೂ ಮಾತಾಡಲಿಲ್ಲ. ಆದರೆ ತನ್ನ ಷ್ಟಕ್ಕೇ 'ಅದೃಷ್ಟ' ಎಂದದ್ದು ಕೇಳಿಸಿತು.

ಊಟ ಮುಗಿಯಿತು. ನಾವೆಲ್ಲ ಎದ್ದಾಗ ಸರ್ ಹೆನ್ರಿ ಪೈಪ್ ಸೇದಲು ತಮ್ಮ ಕೋಣೆಗೆ ಆಹ್ವಾನಿಸಿದರು. ಪೈಪ್ ಸೇದುತ್ತಾ ಸರ್ ಹೆನ್ರಿ ಕೇಳಿದರು.

"ಮಿ. ಕ್ವಾರ್ಟರ್‌ಮನ್, ನೀವು ಕಳೆದ ವರ್ಷ ಉತ್ತರ ಟ್ರಾನ್ಸ್‌ವಾಲಿನ ಬಾಮಾಂಗ್ವೈಟೋ ಎಂಬಲ್ಲಿ ಇದ್ದಿರಲ್ಲವೆ ?"

"ಹೌದು."

"ನೀವಲ್ಲಿ ವ್ಯಾಪಾರ ಮಾಡುತ್ತಿದ್ದಿರಿ ಅಲ್ಲವೆ?" ಗುಡ್ ಕೇಳಿದರು.

"ಹೌದು. ನಾನೊಂದು ವ್ಯಾಗನ್ನಿನಲ್ಲಿ ಸಾಮಾನು ತುಂಬಿಕೊಂಡು ವ್ಯಾಪಾರ ಮಾಡುತ್ತಿದ್ದೆ."

ಸರ್ ಹೆನ್ರಿ ಕರ್ಟಿಸ್‌ರು ನನ್ನೆದುರು ಕುಳಿತಿದ್ದರು. ತಮ್ಮ ದೊಡ್ಡ ಕಂದುಕಣ್ಣುಗಳನ್ನು ನನ್ನ ಮೇಲೆ ಕೀಲಿಸಿದ್ದರು. ಅವರಲ್ಲೇನೋ ಕುತೂಹಲವಿತ್ತು.

"ನೀವಲ್ಲಿ ನೆವಿಲ್ ಎಂಬಾತನನ್ನು ನೋಡಿದ್ದಿರಾ?"

"ನೋಡಿದ್ದೆ. ನನ್ನ ಬಿಡಾರದ ಎದುರೇ ಆತ ಇದ್ದ. ಈಗ್ಗೆ ಕೆಲವು ತಿಂಗಳ ಹಿಂದೆ ಆತನ ಬಗ್ಗೆ ವಿವರ ಕೇಳಿ ನನಗೆ ಯಾರಿಂದಲೋ ಪತ್ರ ಬಂದಿತ್ತು. ನಾನದಕ್ಕೆ ಉತ್ತರಿಸಿದ್ದೆ."

ಸರ್ ಹೆನ್ರಿ ನುಡಿದರು. "ನಿಮ್ಮ ಪತ್ರ ನನಗೆ ಬಂದಿತ್ತು. ಅದರಲ್ಲಿ ನೀವು ನೆವಿಲ್ ಎಂಬಾತ ಮೇ ತಿಂಗಳಿನಲ್ಲಿ ಬಾಮಾಂಗ್ವೈಟೋವನ್ನು ಬಿಟ್ಟು ಒಬ್ಬ ಡ್ರೈವರ್ ಹಾಗೂ ಸ್ಥಳೀಯ ಬೇಟೆಗಾರನೊಡನೆ ಇನ್ಯಾತಿಯೆಡೆಗೆ ಹೋದನೆಂದೂ, ಆರು ತಿಂಗಳ ನಂತರ ಅವನ ವ್ಯಾಗನ್ನನ್ನು ಪೋರ್ಚುಗೀಸನೊಬ್ಬನ ಬಳಿ ನೋಡಿದ್ದಾಗಿಯೂ ಆ ಪೋರ್ಚುಗೀಸ್ ವ್ಯಕ್ತಿ ಅದನ್ನು ಬಿಳಿಯನೊಬ್ಬನಿಂದ ಕೊಂಡುದಾಗಿ ತಿಳಿಸಿದನೆಂದೂ ಬರೆದಿದ್ದಿರಿ."

"ಹೌದು."

"ಮಿ. ಕ್ವಾರ್ಟರ್‌ಮನ್ ನಾನೊಂದು ಕಥೆ ಹೇಳುತ್ತೇನೆ. ನಂತರ ನಿಮ್ಮ ಸಲಹೆ ಹಾಗೂ ಸಹಾಯ ಬೇಡುತ್ತೇನೆ. ನಿಮ್ಮ ಪತ್ರವನ್ನು ನನಗೆ ತಲುಪಿಸಿದ ವ್ಯಕ್ತಿ ನೀವು ನಿಮ್ಮ ಆಸ್ಥಳದಲ್ಲಿ ಖ್ಯಾತರೆಂದು ಹೇಳಿದ."

ನಾನು ತಲೆದೂಗಿದೆ. ಸರ್ ಹೆನ್ರಿ ಮುಂದುವರಿಸಿದರು.

"ನೆವಿಲ್ ನನ್ನ ತಮ್ಮ, ನನ್ನ ಒಬ್ಬನೇ ಒಬ್ಬ ತಮ್ಮ. ಈಗ್ಗೆ ಐದು ವರ್ಷದ ಹಿಂದೆ ನಾವಿಬ್ಬರೂ ಒಬ್ಬರನ್ನೊಬ್ಬರು ಅಗಲಿರುವುದು ಸಾಧ್ಯವೇ ಇಲ್ಲವೆಂದು ನಂಬಿದ್ದೆ. ಆದರೆ ಒಮ್ಮೆ ನಾವಿಬ್ಬರೂ ಜಗಳವಾಡಿದೆವು. ಸಿಟ್ಟಿನ ಭರದಲ್ಲಿ ನಾನು ಆತನೊಡನೆ ಅನ್ಯಾಯವಾಗಿ ನಡೆದುಕೊಂಡೆ.

"ನಾವು ಜಗಳವಾಡುವಾಗ ನಮ್ಮ ತಂದೆ ಸತ್ತಿದ್ದರು. ತಂದೆಯ ಆಸ್ತಿಯೆಲ್ಲಾ ಹಿರಿಯ ಮಗನಾದ ನನಗೇ ಬಂತು. ಜಗಳದ ನಂತರ ನನ್ನ ತಮ್ಮ ಒಂದು ಪೆನ್ನಿಯನ್ನೂ ತೆಗೆದುಕೊಳ್ಳದೆ ಹೊರಟುಹೋದ. ಅವನಾಗಿಯೇ ಕೇಳಲಿ ಎಂದು ನಾನು ಸುಮ್ಮನಿದ್ದೆ. ಆದರವನು ಏನೂ ಕೇಳದೆ ಹೊರಟುಬಿಟ್ಟ.

"ಅವನ ಬಳಿ ಅವನ ಸ್ವಂತದ ಹಣ ಸ್ವಲ್ಪವಿತ್ತು. ಅದನ್ನು ತೆಗೆದುಕೊಂಡು ನನಗೆ ಒಂದು ಮಾತನ್ನೂ ಹೇಳದೆ, ನೆವಿಲ್ ಎಂದು ಹೆಸರು ಬದಲಾಯಿಸಿಕೊಂಡು ದಕ್ಷಿಣ ಆಫ್ರಿಕಕ್ಕೆ ವ್ಯಾಪಾರಕ್ಕೆಂದು ತೆರಳಿದ. ನಂತರ ಅವನ ಬಗ್ಗೆ ಹುಡುಕಾಟ ಪ್ರಾರಂಭಿಸಿದೆ. ನಿಮಗೆ ಬರೆದ ಪತ್ರವೂ ಅವರಲ್ಲೊಂದು. ಕೊನೆಗೆ ನಾನೇ ಅವನನ್ನು ಹುಡುಕಲು ಹೊರಟೆ. ಕ್ಯಾಪ್ಟನ್ ಗುಡ್ ನನ್ನೊಡನೆ ಬಂದರು."

೨

ಸೊಲೊಮನ್ ಗಣಿ

ಕ್ಯಾಪ್ಟನ್ ಗುಡ್ ನುಡಿದರು "ನಿಮಗೆ ನೆವಿಲ್ ಬಗ್ಗೆ ಏನು ಗೊತ್ತೋ ಅದೆಲ್ಲವನ್ನೂ ಹೇಳಿ."

ನಾನು ಪೈಪನ್ನು ತುಂಬಿಕೊಳ್ಳುತ್ತಿದ್ದಾಗ ಸರ್ ಹೆನ್ರಿ. "ನನ್ನ ತಮ್ಮನ ಬಾಯಿಸಾಗ್ಯೆಟೊ ಪ್ರಯಾಣದ ಬಗ್ಗೆ ಏನು ತಿಳಿದಿದ್ದೀರಿ?" ಎಂದರು.

"ಆತ ಸೋಲೋಮನ್ ಗಣಿಯ ಕಡೆ ಹೋದ."

"ಸೊಲೊಮನ್ ಗಣಿ! ಅವೆಲ್ಲಿವೆ?" ಇಬ್ಬರೂ ಆಚ್ಚರಿಯಿಂದ ಕೇಳಿದರು.

"ನನಗೂ ಗೊತ್ತಿಲ್ಲ. ಒಂದು ಬಾರಿ ಆ ಪರ್ವತದ ಶಿಖರ ನೋಡಿದ್ದೆ. ಆದರೆ ನನಗೂ ಅದಕ್ಕೂ ನಡುವೆ ನೂರಾಮುವ್ವತ್ತು ಮೈಲು ಅಗಲದ ಮರುಳುಗಾಡಿತ್ತು. ಸೊಲೊಮನ್ ಗಣಿಯ ಬಗ್ಗೆ ನನಗೆ ತಿಳಿದಿರುವುದನ್ನು ಹೇಳುವ ಮೊದಲು ಅದರ ಗುಟ್ಟನ್ನು ರಕ್ಷಿಸುವ ಬಗ್ಗೆ ಮಾತು ಕೊಡಬೇಕು."

"ಖಂಡಿತ."

"ಅಲ್ಲಲ್ಲಿ ನೀವು ಐತಿಹ್ಯಗಳನ್ನು ಸಂಗ್ರಹಿಸುವವರನ್ನು ನೋಡಿರಬೇಕು. ಅಂಥವನೊಬ್ಬ ನನಗೆ ಸೊಲೊಮನ್ ರಾಜನ ಗಣಿಯ ಬಗ್ಗೆ ತಿಳಿಸಿದ. ಅವನ ಹೆಸರು ಇವಾನ್ಸ್.

"ನೀವು ಸುಲೇಮಾನ್ ಪರ್ವತದ ಬಗ್ಗೆ ಕೇಳಿದ್ದೀರಾ? ಎಂದು ಇವಾನ್ಸ್ ನನ್ನನ್ನು ಪ್ರಶ್ನಿಸಿದ. ಅಲ್ಲೇ ಸೊಲೊಮನ್ ರಾಜನ ವಜ್ರದ ಗಣಿಗಳಿರುವುದು. ಮನಿಕಾದ ಒಬ್ಬ ಮುದಿ ಮಂತ್ರಗಾತಿ ನನಗೆ ಅದರ ಬಗ್ಗೆ ತಿಳಿಸಿದಳು. ಅವಳು ಆ ಪರ್ವತದಾಚೆ ಜುಲುಭಾಷೆಯ ಪ್ರಭೇದವೊಂದು ಪ್ರಚಲಿತವಿರುವ, ಜುಲು ಜನಾಂಗದ ಒಂದು ಶಾಖೆ ಇದೆಯೆಂದು ತಿಳಿಸಿದಳು. ಅಲ್ಲಿನ ಮಂತ್ರವಾದಿಗಳಿಗೆ 'ಹೊಳೆಯುವ ಕಲ್ಲಿನ' ಅದ್ಭುತ ಗಣಿಯ ರಹಸ್ಯ ಗೊತ್ತೆಂದು ಹೇಳಿದಳು. ಇದು ಇವಾನ್ಸ್ ಹೇಳಿದ ಕಥೆ.

"ನಾನಾಗ ಆ ಕಥೆ ಕೇಳಿ ನಕ್ಕು ಬಿಟ್ಟೆ. ಆದರೆ ಇಪ್ಪತ್ತು ವರ್ಷದ ನಂತರ ಸುಲೇಮಾನ್ ಪರ್ವತದ ಬಗ್ಗೆ ಇನ್ನಷ್ಟು ವಿಷಯ ತಿಳಿಯಿತು. ಸಿತಾಂಡಾ ಹಳ್ಳಿಯಲ್ಲಿ ನಾನು ತಂಗಿದ್ದಾಗ ಒಬ್ಬ ಪೋರ್ಚುಗೀಸ್ ವ್ಯಕ್ತಿ ಬಂದ. ಅವನ ಹೆಸರು ಜೋಸ್ ಸಿಲ್ವೆಸ್ಟ್ರಿ. ಮರುದಿನ ನಾನವನನ್ನು ಬೀಳ್ಕೊಡುವಾಗ 'ನೀವು ನನ್ನನ್ನು ಇನ್ನೊಮ್ಮೆ ಭೇಟಿಯಾದರೆ. ನಾನು ಆ ವೇಳೆಗೆ ಪ್ರಪಂಚದ ಅತ್ಯಂತ ಶ್ರೀಮಂತನಾಗಿರುತ್ತೇನೆ' ಎಂದ. ವಿಶಾಲ ಮರುಭೂಮಿಯಲ್ಲಿ ಹೋದ ಅವನನ್ನು ಅರೆಹುಚ್ಚನಿರಬೇಕೆಂದುಕೊಂಡೆ.

"ಒಂದು ವಾರ ಕಳೆಯಿತು. ಒಂದು ಸಂಜೆ ನನ್ನ ಪುಟ್ಟ ಟೆಂಟ್‌ನಲ್ಲಿ ಕುಳಿತು ಸೂರ್ಯಾಸ್ತದ ಸೊಬಗನ್ನು ನೋಡುತ್ತಿದ್ದೆ. ಎದುರಿನ ಇಳಿಜಾರಿನಲ್ಲಿ ಒಂದು ವ್ಯಕ್ತಿಯನ್ನು ಕಂಡೆ. ತೆವಳಿದಂತೆ ಬರುತ್ತಿದ್ದ ಆತ ನಾಲ್ಕಾರು ಹೆಜ್ಜೆ ಓಡಿ ಬಿದ್ದ. ನನ್ನ ಸಹಾಯಕರಲ್ಲಿಬ್ಬರನ್ನು ಅವನ ಸಹಾಯಕ್ಕೆ ಕಳಿಸಿದೆ. ಅವರು ಆ ವ್ಯಕ್ತಿಯನ್ನು ಕರೆತಂದರು. ಆತ ಯಾರೆಂದು ಊಹಿಸುವಿರಾ?"

"ಜೋಸ್ ಸಿಲ್ವೆಸ್ಟ್ರಿ" ಎಂದರು ಗುಡ್.

"ಹೌದು ಜೋಸ್ ಸಿಲ್ವೆಸ್ಟ್ರಿ ಅಥವಾ ಅವನ ಮೂಳೆಯ ಹಂದರವೆನ್ನಿ. ಖಾಯಿಲೆಯಿಂದಾಗಿ ಅವನ ಮುಖ ಹಳದಿಯಾಗಿತ್ತು. ಅವನ ತುಟಿ ಬಿರುಕು ಬಿಟ್ಟಿದ್ದನ್ನೂ, ನಾಲಗೆ ಕಪ್ಪಾಗಿದ್ದನ್ನೂ ನೋಡಿದೆ. ಆತ ನೀರು ಕೇಳಿದ.

"ನಾನವನಿಗೆ ಹಾಲು ಬೆರೆಸಿದ ನೀರು ಕೊಟ್ಟೆ. ಎರಡು ದೊಡ್ಡ ಲೋಟದಷ್ಟನ್ನು ಕುಡಿದ. ಮತಿಭ್ರಮೆಯಾದವನಂತೆ ಆತ ಸುಲೇಮಾನ್ ಪರ್ವತಗಳ ಬಗ್ಗೆ, ಅಲ್ಲಿನ ವಜ್ರಗಳ ಬಗ್ಗೆ ಮಾತಾಡಲಾರಂಭಿಸಿದ. ಹನ್ನೊಂದು ಘಂಟೆಯ ನಂತರ ಆತ ಸ್ವಸ್ಥನಾದ. ನಾನೂ ಮಲಗಿದೆ. ಬೆಳಿಗ್ಗೆ ಎದ್ದಾಗ ಆತ ಸೂರ್ಯಕಿರಣವನ್ನೇ ದಿಟ್ಟಿಸುತ್ತಿರುವುದು ಕಾಣಿಸಿತು.

"ಆತ ಇದ್ದಕ್ಕಿದ್ದಂತೆ ಕೂಗಿದ, 'ಅದು ಅಲ್ಲಿದೆ. ನಾನು ಅಲ್ಲಿಗೆ ಹೋಗಲಿಲ್ಲ. ಯಾರೂ ಹೋಗಲಾರರು' ಆತ ನನ್ನತ್ತ ತಿರುಗಿದ. ವಿಶ್ರಮಿಸಿಕೋ ಎಂದೆ.

"'ಬೇಗವಲ್ಲೇ ವಿಶ್ರಾಂತಿ ಪಡೆಯುತ್ತೇನೆ. ಕೇಳಿಲ್ಲಿ. ನಾನೀಗ ಸಾಯುತ್ತೇನೆ ನೀನು ಒಳ್ಳೆಯವನಂತೆ ಕಾಣುವೆ. ನಿನಗೆ ಆ ಬರಹವನ್ನು ಕೊಡುವೆ. ನನ್ನನ್ನೂ, ನನ್ನ ಸೇವಕರನ್ನೂ ಕೊಂದ ಈ ಮರುಭೂಮಿಯನ್ನು ನೀನು ದಾಟಬಹುದು.'

"ಆತ ತನ್ನ ಅಂಗಿಯೊಳಗಿನಿಂದ ಜಿಂಕೆಯ ಚರ್ಮದ ಚೀಲವೊಂದನ್ನು ತೆಗೆದ. ಅದಕ್ಕೆ ಸುತ್ತಿದ್ದ ಚರ್ಮದ ದಾರವನ್ನು ಬಿಚ್ಚಲು ಯತ್ನಿಸಿದ. ಆದರೆ ಆಗಲಿಲ್ಲ. ನನಗೆ ಬಿಚ್ಚಲು ಹೇಳಿದ. ಬಿಚ್ಚಿದ ನಂತರ ಆತ ಅದರೊಳ

ಗಿರುವ ಕೆಂಪಕ್ಷರಗಳಿದ್ದ ಹಳದೀ ಬಟ್ಟೆಯೊಂದನ್ನು ಹೊರತೆಗೆದ. ಅದರಲ್ಲೊಂದು ಕಾಗದವಿತ್ತು.


"'ಈ ಪತ್ರದಲ್ಲಿ ಈ ಬಟ್ಟೆಯ ಮೇಲಿರುವುದನ್ನೆಲ್ಲಾ ಬರೆದಿದೆ. ಇದನ್ನು ಓದಲು ನನಗೆ ಹಲವಾರು ವರ್ಷಗಳೇ ಬೇಕಾದವು. ಕೇಳು. ನಾನು ಜೋಸ್‌ಡ ಸಿಲ್ವೆಸ್ಟ್ರಿಯ ವಂಶಜ. ಇಲ್ಲಿಗೆ ಬಂದ ಪ್ರಥಮ ಪೋರ್ಚುಗೀಸರವ. ಈ ಬಟ್ಟೆಯ ಮೇಲಿನ ಬರಹವನ್ನು ಆತ ಆ ಪರ್ವತದ ಮೇಲೆ ಬರೆದ. ಅವನಿಗಾಗಿ ಕಾದಿದ್ದ ಸೇವಕ ಈ ಪತ್ರವನ್ನು ತಂದ. ಇದು ನಮ್ಮ ವಂಶದಲ್ಲೇ ಇದ್ದರೂ ಯಾರೂ ಇದನ್ನು ಓದಲು ಯತ್ನಿಸಲಿಲ್ಲ. ನಾನು ಇದಕ್ಕಾಗಿ ನನ್ನ ಜೀವನವನ್ನೇ ತೇಯ್ದೆ. ಇದರಲ್ಲಿ ಯಶಸ್ವಿಯಾದವರು ಪ್ರಪಂಚದಲ್ಲೇ ಅತ್ಯಂತ ಶ್ರೀಮಂತರಾಗುತ್ತಾರೆ. ಯಾರಿಗೂ ಇದನ್ನು ಕೊಡಬೇಡ. ನೀನೇ ಪ್ರಯತ್ನಿಸು.'

"ಆತನ ತಲೆ ತಿರುಗಲಾರಂಭಿಸಿತು. ಒಂದು ಘಂಟೆಯ ನಂತರ ಆತ ಸತ್ತ. ಗುಂಡಿ ತೋಡಿ ಆತನನ್ನು ಹೂತೆ."

"ಸರಿ. ಆ ಕಾಗದ ಎಲ್ಲಿ?" ಸರ್ ಹೆನ್ರಿ ಕುತೂಹಲದಿಂದ ಕೇಳಿದರು.

"ತೋರಿಸುವೆ. ಪೋರ್ಚುಗೀಸ್ ಭಾಷೆಯ ಆ ಕಾಗದ ಮನೆಯಲ್ಲಿದೆ. ಅದರ ಇಂಗ್ಲಿಷ್ ಅನುವಾದ ಇಲ್ಲಿದೆ. ನಕ್ಷೆಯ ಪ್ರತಿಯೂ ಇದೆ. ಅದು ಹೀಗಿದೆ.

"ನಾನು ಜೋಸ್ ಡ. ಸಿಲ್ವೆಸ್ಟ್ರಿ. 'ಶೇಬಾಳ ಎದೆ' ಎಂದು ನಾನೇ ಹೆಸರಿಸಿರುವ ಪರ್ವತದ ಗವಿಯೊಂದರಲ್ಲಿ ಹಸಿವಿನಿಂದ ಸಾಯುತ್ತಿದ್ದೇನೆ. ಇದನ್ನು ೧೫೯೦ನೇ ಇಸ್ವಿಯಲ್ಲಿ ಬರೆಯುತ್ತಿದ್ದೇನೆ. ಮೂಳೆಯೇ ಲೇಖನಿ. ನನ್ನ ಅಂಗಿಯ ತುಂಡೇ ಕಾಗದ. ನನ್ನ ರಕ್ತದಿಂದಲೇ ಬರೆಯುತ್ತಿದ್ದೇನೆ. ನನ್ನ ಸೇವಕ ಇದನ್ನು ಪತ್ತೆ ಮಾಡಿದರೆ ಡೆಲಾಗೋವಾದ ನನ್ನ ಸ್ನೇಹಿತ... (ಹೆಸರು ಸ್ಪಷ್ಟವಾಗಿಲ್ಲ)ನಿಗೆ ಕೊಡುತ್ತಾನೆ. ನನ್ನ ಸ್ನೇಹಿತ ಇದನ್ನು ರಾಜನಿಗೆ ಕೊಡಬೇಕು. ರಾಜ ಸೈನ್ಯದೊಡನೆ ಬಂದು ಕುಕುವಾನಾದವರನ್ನು ಜಯಿಸಬೇಕು. ಆಗ ಆತ ಪ್ರಪಂಚದ ಅತ್ಯಂತ ಶ್ರೀಮಂತ ರಾಜನಾಗುತ್ತಾನೆ.



ಪಾವಿತ್ರ್ಯವಿರುವಾತ ಮಾತ್ರ ಬರಬೇಕು. ಏಕೆಂದರೆ ಕುಕುವಾನಾದವರಿಗೆ ಭೂತ ಪ್ರೇತಗಳ ಕಲೆ ಗೊತ್ತು. 'ಬಿಳೀ ಮೃತ್ಯು'ವಿನ ಹಿಂದಿನ ಸಂಗ್ರಹಾಲಯದಲ್ಲಿ ಸೊಲೊಮನ್ ರಾಜನ ಲಕ್ಷಾಂತರ ವಜ್ರಗಳನ್ನು ನನ್ನ ಕಣ್ಣಿನಿಂದಲೇ ನೋಡಿದ್ದೇನೆ. ಆದರೆ ಗಗೂಲ್ ಎಂಬ ಮಂತ್ರಗಾತಿ ನನ್ನನ್ನು ಸೋಲಿಸಿದಳು. ಜೀವದಿಂದ ಬರಿಗೈಲಿ ಹೊರಬಂದೆ. ನಕ್ಷೆಯನ್ನು ಅನುಸರಿಸಿದಾತ 'ಶೇಬಾಳ ಎದೆ'ಯ ಎಡಭಾಗದ ತುದಿಯತನಕ ಹತ್ತಲಿ. ಉತ್ತರಕ್ಕೆ ಸೊಲೊಮನ್ ರಾಜ ಮಾಡಿಸಿರುವ ದೊಡ್ಡ ರಸ್ತೆಯಿದೆ. ಅಲ್ಲಿಂದ ರಾಜರ ಅರಮನೆಗೆ ಹೋಗಲಿ. ಗಗೂಲ್ ಅನ್ನು ಕೊಲ್ಲಲಿ. ನನ್ನ ಆತ್ಮಶಾಂತಿಗಾಗಿ ಪ್ರಾರ್ಥಿಸಲಿ. ಒಳ್ಳೆಯದಾಗುತ್ತದೆ.

—ಜೋಸೆಫ್ ಡ ಸಿಲ್ವೆಸ್ಟ್ರಿ

ಓದುವುದನ್ನು ಮುಗಿಸಿದೆ, ನಾನು ಮಾಡಿದ್ದ ನಕ್ಷೆಯ ಪ್ರತಿಯನ್ನು ತೋರಿಸಿದೆ. ಕ್ಯಾಪ್ಟನ್ ಗುಡ್ ನುಡಿದರು, "ಒಳ್ಳೆಯದು... ನಾನು ಪ್ರಪಂಚವನ್ನು ಎರಡು ಬಾರಿ ಸುತ್ತಿದ್ದೇನೆ. ಇಂತಹ ಕಥೆಯನ್ನು ಕೇಳಿಯೇ ಇಲ್ಲ."

"ಇದು ಅದ್ಭುತ ಕಥೆ ಮಿ. ಕ್ವಾರ್ಟರ್‌ಮನ್. ಆದರೆ ನಿಜವೆ?" ಸರ್ ಹೆನ್ರಿ ಕೇಳಿದರು.

"ನೀವು ಸುಳ್ಳೆಂದು ತಿಳಿದರೆ ಸುಳ್ಳೆ. ನಾನಿನ್ನು ಬರುತ್ತೇನೆ." ನಾನು ಕಾಗದವನ್ನು ಜೇಬಿಗೆ ಸೇರಿಸಿ ಎದ್ದೆ.

ಸರ್ ಹೆನ್ರಿ ನನ್ನ ಭುಜದ ಮೇಲೆ ಕೈ ಇರಿಸಿ ಹೇಳಿದರು, "ಕ್ಷಮಿಸಿ. ಮಿ. 'ಕ್ವಾರ್ಟರ್‌ಮನ್ ಸುಳ್ಳು ಹೇಳಿ ನಿಮಗೇನೂ ಪ್ರಯೋಜನವಿಲ್ಲ. ನಿಮ್ಮ ಕಥೆಯನ್ನು ನಂಬುತ್ತೇನೆ."

"ಜೋಸ್ ಡ ಸಿಲ್ವೆಸ್ಟ್ರಿಯ ಸ್ವಂತ ಬರಹದ ನಕ್ಷೆ ಹಾಗೂ ಬಟ್ಟೆಯನ್ನು ದರ್ಬಾನ್ ತಲುಪಿದ ನಂತರ ನೀವೇ ನೋಡಬಹುದು.

"ನಾನು ನಿಮ್ಮ ತಮ್ಮನ ಬಗ್ಗೆ ಏನೂ ಹೇಳಲೇ ಇಲ್ಲ. ಅತನೊಡನಿದ್ದ ಜಿಮ್ ಎಂಬಾತ ನನಗೆ ಗೊತ್ತು. ಅತ ವ್ಯಾಗನ್ನಿನ ಬಳಿ ನಿಂತಿದ್ದಾಗ ಇದರಲ್ಲೇನಿದೆ, ಅನೆಯೆ? ಎಂದೆ. ಅತ ಇಲ್ಲ ಸ್ವಾಮಿ ನಾವೀಗ ಆನೆಗಿಂತ ಹೆಚ್ಚಿನದನ್ನು ಪಡೆಯಲು ಹೊರಟಿದ್ದೇವೆ ಎಂದ. ನಾನು ಚಿನ್ನವೆ? ಎಂದೆ. ಅಲ್ಲ ಚಿನ್ನಕ್ಕಿಂತ ಹೆಚ್ಚಿನದು ಎಂದು ನಕ್ಕುಬಿಟ್ಟ.

"ನಾನು ಹೆಚ್ಚೇನೂ ವಿಚಾರಿಸಲಿಲ್ಲ. ಸ್ವಲ್ಪ ಸಮಯದ ನಂತರ ಆತನೆ ನಾವು ವಜ್ರಗಳಿಗಾಗಿ ಹೋಗುತ್ತಿದ್ದೇವೆ ಎಂದ. ಹಾಗಾದರೆ ತಪ್ಪುದಾರಿಯಲ್ಲಿ ಹೊರಟಿದ್ದೀರಿ. ವಜ್ರ ಗಣಿಯಿರುವದು ಕಿಂಬರ್ಲೆಯಲ್ಲಿ ಎಂದೆ.

"ನೀವು ಸೊಲೊಮನ್ ರಾಜನ ಗಣಿಯ ಬಗ್ಗೆ ಕೇಳಿಲ್ಲವೆ? ಎಂದ.

"ಅದರ ಬಗೆಗಿನ ಮೂರ್ಖ ಕಥೆ ಕೇಳಿದ್ದೇನೆ."

"ಇಲ್ಲ; ಅದು ನಿಜ. ಆ ಕಡೆಯಿಂದ ಬಂದ ಹೆಂಗಸೊಬ್ಬಳು ಅದರ ಬಗ್ಗೆ ಹೇಳಿದ್ದಳು. ಅವಳೀಗ ಇಲ್ಲ.

"ವ್ಯಾಗನ್ ಹೊರಟಾಗ ಜಿಮ್ ವಿದಾಯ ಹೇಳಿದ. ನಾನು, ನಿನ್ನ ಯಜಮಾನ ನಿಜವಾಗಿ ಸುಲೇಮಾನ್ ಗಣಿಯ ಕಡೆ ಹೋಗುತ್ತಾನಾ? ಎಂದೆ. ಹೌದು ಎಂದ. ಹಾಗಾದರೆ ನಿನ್ನ ಯಜಮಾನನ ಬಗ್ಗೆ ನಿಗಾ ವಹಿಸು ಎಂದೆ. ನಂತರ ಕಾಗದವೊಂದರ ಮೇಲೆ ಶೇಬಾಳ ಎಡ ಎದೆಯ ಮೇಲೆ ತುದಿ ಸಿಗುವತನಕ ಹತ್ತಲಿ. ನಂತರ ಸೊಲೊಮನ್ ರಾಜನ ರಸ್ತೆ ಸಿಗುತ್ತದೆ ಎಂದು ಬರೆದುಕೊಟ್ಟೆ. ನನಗೆ ನಿಮ್ಮ ತಮ್ಮನ ಬಗೆಗೆ ತಿಳಿದಿರುವುದು ಇಷ್ಟೆ."

ಸರ್ ಹೆನ್ರಿ ನುಡಿದರು, "ನನ್ನ ತಮ್ಮ ಸಿಗುವವರೆಗೆ, ಅಥವಾ ಅವನು ಸತ್ತಿದ್ದಾನೆಂದು ತಿಳಿಯುವವರೆಗೆ ಹುಡುಕುತ್ತೇನೆ. ನೀವು ನನ್ನೊಡನೆ ಬರುವಿರಾ? ಅಕಸ್ಮಾತ್ ವಜ್ರ ದೊರೆತರೆ ಅದನ್ನು ನೀವು ಮತ್ತು ಗುಡ್ ತೆಗೆದುಕೊಳ್ಳಿರಿ. ನಮ್ಮ ಪ್ರಯಾಣಕ್ಕೆ ಬೇಕಾದ ಖರ್ಚನ್ನು ನಾನು ವಹಿಸುವೆ."

"ನಾನು ಬರುವೆ. ಆದರೆ ನಾವು ಕ್ಷೇಮವಾಗಿ ಹಿಂತಿರುಗಲಿಕ್ಕಿಲ್ಲ ಎನಿಸುತ್ತದೆ. ಮುನ್ನೂರು ವರ್ಷದ ಹಿಂದೆ ಜೋಸ್ ಡ ಸಿಲ್ವೆಸ್ಟ್ರಿಯ ಅದೃಷ್ಟ ಏನಾಯ್ತು? ಇಪ್ಪತ್ತು ವರ್ಷದ ಹಿಂದೆ ಅವನ ವಂಶಜನ ಗತಿ ಏನಾಯ್ತು? ನಿಮ್ಮ ತಮ್ಮನ ಅದೃಷ್ಟ ಏನಾಯ್ತು? ಅವರಿಗಾದದ್ದೇ ನಮಗಾಗುತ್ತದೆ." ನಾನೆಂದೆ.

ಸರ್ ಹೆನ್ರಿಯವರ ಮುಖದಲ್ಲಿ ಬದಲಾವಣೆ ಕಾಣಲಿಲ್ಲ. "ನಾವೊಂದು ಕೈ ನೋಡೋಣ. ಅಪಾಯ ಬಂದರೂ ನಾವು ಸ್ವಲ್ಪವಾದರೂ ಮುನ್ನಡೆಯಬಲ್ಲೆವು. ಅಲ್ಲವೆ ಗುಡ್?"

"ಹೌದು. ಹೌದು. ನಾವು ಮೂವರೂ ಒಂದಾಗಿ ಅಂಗೈಯಲ್ಲಿ ಜೀವ ಹಿಡಿದು ಅಪಾಯವನ್ನು ಎದುರಿಸೋಣ. ಈಗ ಹಿನ್ನಡೆಯುವುದು ಒಳ್ಳೆಯದಲ್ಲ."

೩

ಅಂಬೋಪಾ

ಡರ್ಬಾನ್ ತಲುಪಿದ ಮೇಲೆ ಸರ್ ಹೆನ್ರಿ ಹಾಗೂ ಕ್ಯಾಪ್ಟನ್ ಗುಡ್ ನನ್ನ ಮನೆಯಲ್ಲೇ ತಂಗಿದರು.

ನಾನು ಒಂದು ವ್ಯಾಗನ್ನು ಹಾಗೂ ಇಪ್ಪತ್ತು ಜುಲು ದನಗಳನ್ನು ತಂದೆ. ಸರ್ ಹೆನ್ರಿ ತಮ್ಮೊಂದಿಗೆ ಇಂಗ್ಲೆಂಡಿನಿಂದ ಅನೇಕ ಬಂದೂಕು ಹಾಗೂ ಪಿಸ್ತೂಲುಗಳನ್ನು ತಂದಿದ್ದರು. ನನ್ನ ಬಳಿಯೂ ಕೆಲವು ಇದ್ದವು. ನಾವು ಹತ್ತು ಬಂದೂಕು ಹಾಗೂ ಮೂರು ಪಿಸ್ತೂಲುಗಳನ್ನು ತೆಗೆದುಕೊಂಡೆವು.

ನಾವು ಐವರು ಸೇವಕರನ್ನು ಕರೆದುಕೊಳ್ಳಲು ನಿರ್ಧರಿಸಿದೆವು. ಒಬ್ಬ ಡ್ರೈವರ್, ಒಬ್ಬ ಮಾರ್ಗದರ್ಶಿ ಹಾಗೂ ಇತರ ಮೂವರು. ಜುಲು ಜನಾಂಗದ ಗೋಜಾ ಹಾಗೂ ಟಾಂ ಎಂಬ ಡ್ರೈವರ್ ಹಾಗೂ ಮಾರ್ಗದರ್ಶಿ ಅನಾಯಾಸವಾಗಿ ಸಿಕ್ಕರು. ಇನ್ನು ಮೂವರು ಸೇವಕರನ್ನು ಹುಡುಕಬೇಕಾಯಿತು. ಸೇವಕರು ನಮಗೆ ವಿಧೇಯರಾಗಿಯೂ ಸಾಹಸಿಗರಾಗಿಯೂ ಇರಬೇಕಾಗಿತ್ತು. ಏಕೆಂದರೆ ನಮ್ಮ ಸಾಹಸ ಯಾತ್ರೆಯಲ್ಲಿ ನಮ್ಮ ಜೀವ ಅವರನ್ನು ಅವಲಂಬಿಸಿರುತ್ತದೆ. ಕೊನೆಗೆ ವೆಂಟವೋಗಲ್ ಮತ್ತು ಖಿವಾ ಎಂಬ ಇಬ್ಬರು ಜುಲುಗಳು ದೊರೆತರು.

ಆದರೂ ಐದನೆಯವನೊಬ್ಬ ಸಿಗಲೇ ಇಲ್ಲ. ಕೊನೆಗೆ ಐದನೆಯವನಿಗಾಗಿ ಹುಡುಕದೆ ನಾವೇ ಹೊರಡಲು ತೀರ್ಮಾನಿಸಿದೆವು.

ನಾವು ಹೊರಡುವ ಹಿಂದಿನ ಸಂಜೆ ಊಟ ಮುಗಿಸಿ ಕುಳಿತಿದ್ದಾಗ ಖಿವಾ ಬಂದು ಅಂಬೋಪಾ ಎಂಬ ಜುಲು ನನ್ನನ್ನು ನೋಡಲು ಬಂದಿದ್ದಾನೆಂದು ತಿಳಿಸಿದ. ಅವನನ್ನು ಕರೆತರಲು ಹೇಳಿದೆ. ಮುವ್ವತ್ತು ವರ್ಷ ಪ್ರಾಯದ, ಎತ್ತರ ನಿಲುವಿನವನೊಬ್ಬ ಒಳಬಂದ. ನನಗೆ ವಂದಿಸಿ ನಿಶ್ಶಬ್ದವಾಗಿ ನೆಲದ ಮೇಲೆ ಕುಳಿತ.

"ನಿನ್ನ ಹೆಸರೇನು ?" ನಾನು ಕೇಳಿದೆ.

"ಅಂಬೋಪಾ," ಆತ ಮೆಲುವಾಗಿ ಉತ್ತರಿಸಿದ.

"ನಿನಗೇನು ಬೇಕು?"

"ನೀವು ಉತ್ತರ ದಿಕ್ಕಿನಲ್ಲಿ ದೀರ್ಘ ಪ್ರಯಾಣ ಹೊರಟಿರುವುದು ತಿಳಿಯಿತು. ಅದು ನಿಜವೆ?"

"ನಿಜ."

"ನೀವು ಮನಿಕಾ ದೇಶದ ಕಡೆ ಹೋಗುವುದಾಗಿ ತಿಳಿಯಿತು. ನಾನೂ ನಿಮ್ಮೊಡನೆ ಬರುವೆ. ನನಗೆ ದುಡ್ಡು ಬೇಡ."

ಈತ ಇತರ ಜುಲುಗಳಿಗಿಂತ ಭಿನ್ನವಾಗಿ ಕಂಡ. ಹಣವಿಲ್ಲದೆ ಬರುತ್ತಾನೆಂದರೆ ನನಗೆ ನಂಬಲಾಗಲಿಲ್ಲ. ಸರ್ ಹೆನ್ರಿ ಹಾಗೂ ಗುಡ್‌ಗೆ ಅವನು ಹೇಳಿದ್ದನ್ನು ಹೇಳಿದೆ. ಅವರ ಅಭಿಪ್ರಾಯ ಕೇಳಿದೆ.

ಸರ್ ಹೆನ್ರಿ ಅವನಿಗೆ ಎದ್ದು ನಿಲ್ಲಲು ಹೇಳಲು ನನಗೆ ಹೇಳಿದರು. ಅಂಬೋಪಾ ಎದ್ದು ನಿಂತ. ತಾನು ಧರಿಸಿದ್ದ ಬಟ್ಟೆಯನ್ನು ಬಿಚ್ಚಿದ. ಆತನ ಕುತ್ತಿಗೆಯಲ್ಲಿ ಸಿಂಹದ ಹಲ್ಲಿನ ಸರವಿತ್ತು. ಆತ ಆಕರ್ಷಕ ಮೈಕಟ್ಟಿನ ವ್ಯಕ್ತಿ. ಆರು ಅಡಿ ಮೂರು ಅಂಗುಲ ಎತ್ತರವಿದ್ದ. ಸರ್ ಹೆನ್ರಿ ಅವನ ಮುಖವನ್ನು ದಿಟ್ಟಿಸಿದರು.

"ನಿನ್ನನ್ನು ಮೆಚ್ಚಿದ್ದೇನೆ. ನಿನ್ನನ್ನು ನನ್ನ ಸೇವಕನನ್ನಾಗಿ ಆಯ್ದುಕೊಂಡಿದ್ದೇನೆ," ಸರ್ ಹೆನ್ರಿ ಇಂಗ್ಲೀಷಿನಲ್ಲಿ ನುಡಿದರು.

ಅಂಬೋಪಾ ಅದನ್ನು ಅರ್ಥ ಮಾಡಿಕೊಂಡವನಂತೆ ಜುಲು ಭಾಷೆಯಲ್ಲಿ "ಒಳ್ಳೆಯದು" ಎಂದ.

೪

ಕೊಟ್ಟಿಗೆಯ ತನಕ

ನಿತಾಂಡಾವರೆಗಿನ ಪ್ರಯಾಣದ ಎಲ್ಲಾ ವಿವರಗಳನ್ನು ಹೇಳಲು ಇಚ್ಛಿಸುವುದಿಲ್ಲ. ಮೂರು


ಬಾಳ ಸಂಜೆಯಲಿ
ನೆಮ್ಮದಿ
GROWING TO SERVE
SERVING TO GROW

ಸಾವಿರ ಮೈಲು ಪ್ರಯಾಣದ ಕೊನೆಯ ಮನ್ನೂರು ಮೈಲಿಗಳನ್ನು ತ್ಸೆತ್ಸೆ ಕೀಟಗಳ ಕಾಟದಿಂದಾಗಿ ನಡೆದೇ ಹೋಗಬೇಕಾಯಿತು. ಪ್ರಾಣಿಗಳನ್ನು ಉಪಯೋಗಿಸುವಂತಿರಲಿಲ್ಲ. ಏಕೆಂದರೆ ತ್ಸೆತ್ಸೆ ಕೀಟಗಳ ಕಡಿತ ಮನುಷ್ಯ ಹಾಗೂ ಕತ್ತೆಯನ್ನು ಬಿಟ್ಟು ಇತರ ಪ್ರಾಣಿಗಳಿಗೆ ಜೀವನಾಶಕ.

ನಾವು ಜನವರಿಯ ಕೊನೆಯ ವಾರದಲ್ಲಿ ದರ್ಬಾನ್ ಬಿಟ್ಟು ಮೇ ತಿಂಗಳ ಎರಡನೆಯ ವಾರದಲ್ಲಿ ನಿತಾಂಡಾದ (ಹಳ್ಳಿಯ ಹೆಸರು) ಬಳಿ ತಳ ಊರಿದೆವು. ಇನ್ಯಾತಿ (ಒಂದು ಹಳ್ಳಿ) ಸೇರುವ ವೇಳೆಗಾಗಲೇ ನಮ್ಮ ದನಗಳಲ್ಲಿ ಹನ್ನೆರಡು ಮಾತ್ರ ಉಳಿದಿದ್ದವು.

ನಮ್ಮ ವ್ಯಾಗನ್ನು ಹಾಗೂ ಉಳಿದ ದನಗಳನ್ನು ಗೋಜಾ ಹಾಗೂ ಟಾಂರ ಅಧೀನದಲ್ಲಿ ಬಿಟ್ಟು ಅಂಬೋಪಾ, ಖಿವಾ, ವೆಂಟವೋಗಲ್ ಮತ್ತು ನಮ್ಮ ಸರಕು ಹೊರಲು ಅಲ್ಲಿ ಖರೀದಿಸಿದ ಆರು ಜನರೊಡನೆ ಅಲ್ಲಿಂದ ಹೊರಟೆವು.

ನಾವು ನಿಶ್ಶಬ್ದವಾಗಿ ನಡೆಯುತ್ತಿದ್ದೆವು. ನಮ್ಮೆಲ್ಲರಿಗಿಂತ ಮುಂದೆ ನಡೆಯುತ್ತಿದ್ದ ಅಂಬೋಪಾ ಜುಲು ಹಾಡೊಂದನ್ನು ಹಾಡ ತೊಡಗಿದ. ಅದು ಏನನ್ನಾದರೂ ಶೋಧಿಸುವ ಅಥವಾ ಸಾಯುವ ನಿರ್ಧಾರದಲ್ಲಿ ಹೊರಟ, ಆದರೆ ಪ್ರಯಾಣದ ನಂತರ ಸುಂದರ ಹೆಂಗಸರನ್ನೂ ಉತ್ತಮ ದನಗಳನ್ನೂ ಬೇಟೆಯಾಡಲು ದುಷ್ಟ ಪ್ರಾಣಿಗಳನ್ನೂ ಕೊಲ್ಲಲು ಶತ್ರುಗಳನ್ನೂ ಪಡೆದ ವೀರರ ಕಥೆಯಾಗಿತ್ತು.

ನಾವೆಲ್ಲಾ ನಕ್ಕೆವು.

ದಾರಿಯಲ್ಲಿ ನಾವು ಒಂಭತ್ತು ಆನೆಗಳನ್ನು ಸಾಯಿಸಿದೆವು. ಒಂದು ಆನೆಗೆ ಸಿಕ್ಕಿ ಗುಡ್ ಸಾಯಬೇಕಾಗಿತ್ತು. ಖಿವಾ ಅವರನ್ನು ಸಾವಿನಿಂದ ಪಾರು ಮಾಡಿದ. ಗುಡ್ ಆನೆಯ ಎದುರು ಬಿದ್ದು ಬಿಟ್ಟರು. ಆನೆ ತುಳಿದು ಸತ್ತುಹೋದರೆಂದೇ ತೀರ್ಮಾನಿಸಿದೆವು. ಖಿವಾ ತನ್ನ ಭರ್ಚಿಯನ್ನು ಆನೆಯತ್ತ ಎಸೆದ. ಅದು ಆನೆಯ ಸೊಂಡಿಲಿಗೆ ಚುಚ್ಚಿ ಕೊಂಡಿತು. ಆ ದೈತ್ಯ ನೋವಿನಿಂದ ಕೂಗುತ್ತಾ ಖಿವಾನನ್ನು ತುಳಿದು ನಿಂತು ಸೊಂಡಿಲಿನಿಂದ ಎರಡಾಗಿ ಸೀಳಿತು. ಅನಂತರ ನಾವು ಅನೇಕ ಗುಂಡು ಹಾರಿಸಿ ಕೊಂದೆವು.

ಗುಡ್ ಮೇಲೆದ್ದರು. ತಮಗಾಗಿ ಜೀವ ತೆತ್ತ ವೀರನಿಗಾಗಿ ಮರುಗಿದರು. ಅಂಬೋಪಾ ಖಿವಾನ ಅವಶೇಷವತ್ತ ತಿರುಗಿ ನುಡಿದ.

"ಓಹ್... ಅವನು ಮನುಷ್ಯರಿಗೆ ಯೋಗ್ಯ ರೀತಿಯಲ್ಲಿ ಸತ್ತ."

ನಮ್ಮ ಪ್ರಯಾಣ ಮುಂದುವರಿಯಿತು. ಕೊನೆಗೆ ನಿತಾಂಡಾದ ಕೊಟ್ಟಿಗೆಯನ್ನು ತಲುಪಿದೆವು. ಬಲಭಾಗಕ್ಕೆ ಚದುರಿದಂತೆ ಹಳ್ಳಿಯಿತ್ತು. ಕಲ್ಲಿನಲ್ಲಿ ಕಟ್ಟಿದ ಕೊಟ್ಟಿಗೆಗಳಿದ್ದವು. ಹಸಿರು ಹುಲ್ಲಿನ ಮೈದಾನವಿತ್ತು. ಎಡಭಾಗಕ್ಕೆ ವಿಸ್ತಾರ ಮರುಭೂಮಿಯಿತ್ತು.

ನಮ್ಮ ಠಾಣ್ಯದ ಕೆಳಗೆ ಸಣ್ಣ ತೊರೆಯೊಂದಿತ್ತು. ಇನ್ನೊಂದು ಭಾಗಕ್ಕೆ ಕಲ್ಲುಗಳಿಂದ ತುಂಬಿದ ಇಳಿಜಾರು ಪ್ರದೇಶವಿತ್ತು. ಅಲ್ಲೇ ನಾನು ಇಪ್ಪತ್ತು ವರ್ಷದ ಹಿಂದೆ ಬಡಪಾಯಿ ಜೋಸ್ ಸಿಲ್ವೆಸ್ಟ್ರಿಯನ್ನು ನೋಡಿದ್ದು.

ಸಂಜೆ ಸೂರ್ಯ ವಿಸ್ತಾರ ಮರುಭೂಮಿಯಂತೆ ಮುಳುಗುತ್ತಿದ್ದ. ಗುಡ್‌ರನ್ನು ನಮ್ಮ ಠಾಣ್ಯದ ಮೇಲ್ವಿಚಾರಣೆಗಾಗಿ ಬಿಟ್ಟು ಸರ್ ಹೆನ್ರಿಯನ್ನು ನನ್ನೊಡನೆ ಕರೆದೊಯ್ದೆ. ಮರುಭೂಮಿಯನ್ನು ದಿಟ್ಟಿಸುತ್ತಾ,

"ಅಲ್ಲಿ... ಆ ಪರ್ವತಗಳ ನಡುವೆ ಸೊಲೊಮನ್ ರಾಜನ ಗಣಿಗಳಿವೆ. ನಾವೆಂದಿಗೂ ಅಲ್ಲಿಗೆ ತಲಪಲಾರೆವೆಂದು ದೇವರಿಗೆ ಗೊತ್ತು," ನಾನೆಂದೆ.

"ನನ್ನ ತಮ್ಮ ಅಲ್ಲಿರಬೇಕು. ಹೇಗಾದರೂ ಅವನನ್ನು ಸಂಧಿಸುತ್ತೇನೆ" ಎಂದರು ಸರ್ ಹೆನ್ರಿ ಶಾಂತ ಸ್ವರದಲ್ಲಿ.

"ಹಾಗೆಂದು ನಾನೂ ಆಶಿಸುತ್ತೇನೆ," ಎಂದು ನುಡಿದು ಹಿಂದಿರುಗಲು ಹೊರಟರೆ ಅಂಬೋಪಾ ನಮ್ಮ ಹಿಂದಿದ್ದದು ಕಾಣಿಸಿತು.

ಪರ್ವತವನ್ನು ತೋರಿಸುತ್ತಾ, "ಅಲ್ಲಿಗೆ ತಾನೆ ನೀವು ಹೋಗುವುದು?" ಎಂದ.

"ಹೌದು ಅಂಬೋಪಾ, ಅಲ್ಲಿಗೇ ನಾವು ಹೋಗುವುದು," ಸರ್ ಹೆನ್ರಿ ನುಡಿದರು.

"ಈ ಮರುಭೂಮಿ ಕ್ರೂರವಾದದ್ದು. ನೀರಿಲ್ಲ. ಎತ್ತರವಾದ ಹಿಮಾಚ್ಛಾದಿತ ಶಿಖರಗಳ ಹಿಂದೆ ಏನಿದೆ ಎಂದು ಮನುಷ್ಯ ಹೇಳಲಾರ. ದೂರದ ಪ್ರಯಾಣ."

ಮನೆಮಂದಿಯ ಸಂಗಾತಿ

ವಿಶ್ವ ಕಥಾ ಕೋಶ

25 ಸಂಪುಟಗಳು: 5 ಸಾವಿರ ಪುಟಗಳು: ಬಹುವರ್ಣ ರಕ್ಷಾಕವಚ

ರಸಭರಿತ – ವಿಚಾರಪೂರಿತ! ರೋಮಾಂಚಕಾರಿ – ಚೇತೋಹಾರಿ!


ಮತ್ತೆ ಮತ್ತೆ ಓದಬೇಕೆನಿಸುವ ಕಥೆಗಳು ಜಗತ್ತಿನ ಹತ್ತು ಮೂಲೆಗಳಿಂದ ಸಂಗ್ರಹ ಕನ್ನಡದಲ್ಲಿ ನಿಮಗಾಗಿ ಸಿದ್ಧ

ಇಷ್ಟು ಬೃಹತ್‌ವ್ಯಾಪ್ತಿಯ ಯೋಜನೆ ಭಾರತದಲ್ಲೇ ಪ್ರಪ್ರಥಮ!

ನವಕರ್ನಾಟಕ ಪ್ರಕಾಶನದ ಇಪ್ಪತ್ತನೆಯ ಹುಟ್ಟುಹಬ್ಬದ ಅಪೂರ್ವ ಕಾಣಿಕೆ

ವಿಶ್ವಕಥಾಕೋಶ ❋

ಪ್ರಧಾನ ಸಂಪಾದಕರು ನಿರಂಜನ



ಈ ಯುಗಾದಿಯಂದು ನಾಲ್ಕು ಸಂಪುಟಗಳ ಬಿಡುಗಡೆ. ದೀಪಾವಳಿಗೆ ಮತ್ತೆ ನಾಲ್ಕು

1981, 1982ರ ಯುಗಾದಿ–ದೀಪಾವಳಿ ವೇಳೆಗೆ ಹಂತ ಹಂತವಾಗಿ ಉಳಿದ ಕಂತುಗಳು

ಪ್ರತಿ ಸಂಪುಟಕ್ಕೆ ರೂ 10

ಒಟ್ಟುಕೋಶಕ್ಕೆ ರೂ 250

ಮುಂಗಡ ರೂ 200 ನೀಡಿದಾಗ ರವಾನೆ ವೆಚ್ಚ ನಮ್ಮದು ❋

ವಿಶ್ವಕಥಾಕೋಶ ಕೊಳ್ಳಲು ಸಿಂಡಿಕೇಟ್ ಬ್ಯಾಂಕಿನ ಎಲ್ಲ ಶಾಖೆಗಳೂ ರೂ 200 ಸಾಲ ಕೊಡುತ್ತವೆ. ಇಂದೇ ಕೋರಿಕೆ ಸಲ್ಲಿಸಿ!
ಅಥವಾ ನೇರವಾಗಿ ಪ್ರಕಾಶಕರಿಗೆ ರೂ 200 ತಲಪಿಸಿದರೆ ನಿಮಗೆ ರೂ 50 ಉಳಿತಾಯವಾಗುತ್ತದೆ!

ನವಕರ್ನಾಟಕ ಪಬ್ಲಿಕೇಷನ್ಸ್ (ಪ್ರೈ) ಲಿಮಿಟೆಡ್ ಹೆಸರಲ್ಲಿ ಡ್ರಾಫ್ಟ್ ಪಡೆದು ಕೆಳಗಿನ ವಿಳಾಸಕ್ಕೆ ಕಳಿಸಿ

ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೆಟ್ ಲಿಮಿಟೆಡ್ ಸುಬೇದಾರ್ ಛತ್ರಂ ರಸ್ತೆ
ಬೆಂಗಳೂರು 560009

"ಹೌದು. ಬಹಳ ದೂರ. ನಾನು ನನ್ನ ತಮ್ಮನನ್ನು ಹುಡುಕಿಕೊಂಡು ಹೋಗುತ್ತಿದ್ದೇನೆ. ಮನುಷ್ಯ ಮನುಸ್ಸು ಮಾಡಿದರೆ ಅಸಾಧ್ಯವಾದ ಯಾವ ಪ್ರಯಾಣವೂ ಈ ಭೂಮಿಯಲ್ಲಿಲ್ಲ. ಹತ್ತಲಾರದ ಯಾವ ಪರ್ವತವೂ ಇಲ್ಲ. ದಾಟಲಾರದ ಯಾವ ಮರುಭೂಮಿಯೂ ಇಲ್ಲ."

"ದೊಡ್ಡ ಮಾತುಗಳು ತಂದೆ, ಬಹುಶಃ ನಾನೂ ಸೋದರನೊಬ್ಬನನ್ನು ಪರ್ವತಗಳ ಮೇಲೆ ನೋಡುತ್ತೇನೆ," ಅಂಬೋಪಾ ನುಡಿದ.

"ಆ ಪರ್ವತಗಳ ಬಗ್ಗೆ ನಿನಗೇನು ಗೊತ್ತು?" ನಾನು ಕೇಳಿದೆ.

"ಅತ್ತ ಕಡೆ ಮಾಟಗಾತಿಯರ, ಅದ್ಭುತ ವಸ್ತುಗಳ, ಶೂರಜನರ, ಮರಗಳ, ತೊರೆಗಳ ಹಿಮಶಿಖರಗಳ, ಬಿಳಿಯ ಬೃಹತ್ ರಸ್ತೆಯ ಭೂಮಿಯಿದೆ. ನೋಡಲು ಶಕ್ತಿಯುಳ್ಳವರು, ಅದನ್ನು ನೋಡುತ್ತಾರೆ."

೫

ಮರುಭೂಮಿಯಲ್ಲಿ ಪ್ರಯಾಣ

ನಮ್ಮೆಲ್ಲ ಸರಂಜಾಮುಗಳನ್ನು ಕೊಂಡೊಯ್ಯುವುದು ಅಸಾಧ್ಯವಾಗಿತ್ತು. ಸ್ಥಳೀಯನೊಬ್ಬನನ್ನು ನಮ್ಮ ಸಾಮಾನುಗಳನ್ನು ನಾವು ಹಿಂದಿರುಗಿ ಬರುವವರೆಗೂ ನೋಡಿಕೊಳ್ಳಲು ನಿಯಮಿಸಿದೆವು.

ಐದು ಬಂದೂಕು, ಮೂರು ಪಿಸ್ತೂಲು, ಐದು ನೀರಿನ ಮಡಕೆಗಳು, ಇಪ್ಪತ್ತೈದು ತುಂಡು ಒಣ ಮಾಂಸ, ದಿಕ್ಸೂಚಿ, ಬೆಂಕಿಪೊಟ್ಟಣ ಹಾಗೂ ಇನ್ನಿತರ ಕೆಲವು ವಸ್ತುಗಳನ್ನು ತೆಗೆದುಕೊಂಡೆವು.

ಒಳ್ಳೆಯ ಬೇಟೆಯ ಚಾಕುವನ್ನು ಕೊಡುವುದಾಗಿ ಹೇಳಿ ಇಪ್ಪತ್ತು ಮೈಲಿಗಳವರೆಗೆ ನೀರಿನ ಮಡಕೆ ಹೊರಲು ಕೆಲವರನ್ನು ಕರೆದುಕೊಂಡೆವು. ಚಂದ್ರೋದಯಕ್ಕಾಗಿ ಕಾದೆವು. ಒಂಭತ್ತು ಘಂಟೆಗೆ ತನ್ನೆಲ್ಲಾ ಸೌಂದರ್ಯದೊಡನೆ ಚಂದ್ರ ಉದಿಸಿದ.

ಸರ್ ಹೆನ್ರಿ ನುಡಿದರು, "ನಾವೀಗ ಮನುಷ್ಯರಿಂದ ಮಾತ್ರ ಸಾಧ್ಯವೆನಿಸುವ ವಿಚಿತ್ರ ಪ್ರಯಾಣ ಹೊರಟಿದ್ದೇವೆ. ಹೊರಡುವ ಮೊದಲು ಮನುಷ್ಯರ ಅದೃಷ್ಟವನ್ನು ರೂಪಿಸುವ ದೇವರನ್ನು ಅವನಿಚ್ಛೆಯಂತೆ ನಮ್ಮನ್ನು ನಡೆಸುವಂತೆ ಪ್ರಾರ್ಥಿಸೋಣ."

ಅವರು ತಮ್ಮ ಟೋಪಿಯನ್ನು ತೆಗೆದು ಕೈಗಳಿಂದ ಮುಖ ಮುಚ್ಚಿ ಒಂದು ನಿಮಿಷನಿಂತರು. ನಾನು ಮತ್ತು ಗುಡ್ ಹಾಗೆಯೇ ಮಾಡಿದೆವು.

ನಮಗೆ ಜೋಸ್ ಡ ಸಿಲ್ವೆಸ್ಟ್ರಿಯ ನಕ್ಷೆಯ ವಿನಾ ಬೇರೇನೂ ಮಾರ್ಗದರ್ಶನವಿರಲಿಲ್ಲ. ನಾವೇನಾದರೂ ಅವನು ಸೂಚಿಸುವ ಕೆಟ್ಟ ನೀರಿನ ಭಾವಿಯನ್ನು ಹುಡುಕಲು ಸೋತಲ್ಲಿ ಬಾಯಾರಿಕೆಯಿಂದ ಸಾಯಬೇಕಾಗಿತ್ತು. ಆ ವಿಸ್ತಾರವಾದ ಮರಳು ಸಾಗರದಲ್ಲಿ ಹುಡುಕುವ ಆಸೆ ಕೂಡ ತೀರಾ ಕಡಿಮೆಯಾಗಿತ್ತು. ಸಿಲ್ವೆಸ್ಟ್ರಿ ಅದನ್ನು ನಿಖರವಾಗಿ ಗುರುತಿಸಿದ್ದರೂ ಈಗ ಅದು ಸೂರ್ಯನ ತಾಪಕ್ಕೆ ಒಣಗಿ ಮರಳಿನಿಂದ ತುಂಬಿರುವ ಸಾಧ್ಯತೆಯಿತ್ತು.

ನಾವು ನಿಶ್ಶಬ್ದವಾಗಿ ನೆರಳಿನಂತೆ ನಡೆದೆವು. ನಿಶ್ಶಬ್ದವನ್ನು ಮುರಿಯಲು ಗುಡ್ ಹಾಡಲಾರಂಭಿಸಿದರು. ಆ ಶಬ್ದ ಪ್ರತಿಧ್ವನಿಸಿ ಮೂರ್ಖನಂತೆ ಅಣಕಿಸಿದಾಗ ಅದನ್ನು ನಿಲ್ಲಿಸಿದರು.

ಮೂಡಣ ದಿಕ್ಕು ತರುಣಿಯ ಕೆನ್ನೆಯ ಮೇಲಣ ಬಣ್ಣದಂತೆ ಕೆಂಪಾಯಿತು. ಬಂಗಾರ ವರ್ಣದ ಸೂರ್ಯ ಕಿರಣಗಳು ಕಂಡವು.

ಒಂದು ಘಂಟೆಯ ಪ್ರಯಾಣದ ನಂತರ ಬಯಲಿನಿಂದ ಮೇಲೆದ್ದು ನಿಂತಿದ್ದ ಬಂಡೆಗಳು ಕಾಣಿಸಿದವು. ಅವುಗಳ ನಡುವಿನ ದೊಡ್ಡದೊಂದು ಬಂಡೆ ನಮಗೆ ಆಹ್ಲಾದಕರ ನೆರಳನ್ನು ಒದಗಿಸಿತು. ಅದರ ಕೆಳಗೆ ನುಸುಳಿ ಮಲಗಿದೆವು. ನಿದ್ರೆ ನಮ್ಮನ್ನು ಆವರಿಸಿತು.

ಎಚ್ಚರವಾದಾಗ ಮೂರು ಘಂಟೆಯಾಗಿತ್ತು. ನೀರು ಹೊರಲು ಬಂದವರಾಗಲೇ ಹಿಂದಿರುಗಲು ಸಿದ್ಧರಾಗಿದ್ದರು. ನಾವು ತೋರಿಸಿದ ಯಾವುದೇ ಆಮಿಷವೂ ಅವರನ್ನು ಒಂದು ಹೆಜ್ಜೆ ಮುಂದಿಡುವಂತೆ ಮಾಡಲು ಸಮರ್ಥವಾಗಲಿಲ್ಲ. ಆದ್ದರಿಂದ ನಾವೇ ನೀರನ್ನು ಹೊತ್ತುಕೊಂಡು ಹೋಗಲು ನಿರ್ಧರಿಸಿದೆವು.

ನಾಲ್ಕು ಘಂಟೆಗೆ ಮತ್ತೆ ಹೊರಟೆವು. ದಾರಿಯಲ್ಲಿ ತ್ಸೆತ್ಸೆಗಳ ವಿನಾ ಮತ್ತೆ ಯಾವುದೇ ಜೀವಿಯೂ ಕಾಣಲಿಲ್ಲ.

ಸೂರ್ಯಾಸ್ತದ ನಂತರ ವಿಶ್ರಮಿಸಿಕೊಂಡು ಚಂದ್ರೋದಯದ ನಂತರ ಹೊರಟೆವು. ಸೂರ್ಯೋ

ದಯುದವರೆಗೂ ನಡೆದೆವು. ಸ್ವಲ್ಪ ಮಾಂಸ ತಿಂದು ನೀರು ಕುಡಿದು ಮಲಗಿದೆವು. ನೆರಳು ಇರಲಿಲ್ಲ. ಏಳು ಘಂಟೆಗೆ ಎಚ್ಚರವಾಯಿತು. ಮಾಂಸದ ಒಂದೇ ಒಂದು ತುಂಡು ಉಳಿದಿತ್ತು. ಮೂರು ಘಂಟೆಗೆ ಮತ್ತೆ ಹೊರಟೆವು.

ಸೂರ್ಯಾಸ್ತದ ವೇಳೆಗೆ ವಿಶ್ರಾಂತಿಗೆ ನಿಂತೆವು. ಬಾಯಾರಿಕೆಯಿಂದ ತೀರಾ ಬಳಲಿದ್ದೆವು. ರಾತ್ರೆ ಎರಡರ ವೇಳೆಗೆ ಪುಟ್ಟ ಬೆಟ್ಟವೊಂದನ್ನು ತಲುಪಿದೆವು. ನಮ್ಮ ಬಳಿಯಿದ್ದ ಕೊನೆಯ ಹನಿ ನೀರನ್ನು ಕುಡಿದು ಮಲಗಿದೆವು.

ಮಲಗಲು ಹೊರಟಾಗ ಅಂಬೋಪಾ ತನ್ನಷ್ಟಕ್ಕೆ ತಾನೇ "ನಮಗೀಗ ನೀರು ಸಿಗದಿದ್ದರೆ ನಾಳಿನ ಚಂದ್ರೋದಯದ ವೇಳೆಗೆ ಎಲ್ಲರೂ ಸತ್ತಿರುತ್ತೇವೆ," ಎಂದದ್ದು ಕೇಳಿಸಿತು.

೬

ನೀರು! ನೀರು!!

ಎರಡು ಘಂಟೆಗಳ ನಂತರ ಎಚ್ಚರವಾಯಿತು. ಮಲಗಿದ್ದಾಗ ನಾನು ಕೆರೆಯೊಂದರಲ್ಲಿ ಸ್ನಾನ ಮಾಡಿದಂತೆ ಕನಸು ಕಂಡೆ.

ಉಳಿದವರಿಗೂ ಎಚ್ಚರವಾಯಿತು. ಪ್ರಸಕ್ತ ಕೊಂದರೆಯ ಬಗ್ಗೆ ಚರ್ಚಿಸಿದೆವು.

"ನೀರು ಸಿಗದಿದ್ದರೆ ಸಾಯುತ್ತೇನೆ," ಎಂದರು ಸರ್ ಹೆನ್ರಿ.

ವೆಂಟ್‌ವೋಗಲ್ ಎದ್ದು ಮುಂದೆ ಹೋದ. ಗಾಳಿಯನ್ನು ಮೂಸಿ ನೋಡಿ, "ನೀರಿನ ವಾಸನೆ ಬರುತ್ತಿದೆ." ಎಂದ.

"ನನಗೇನೂ [illegible]. [illegible] [illegible]" ನಾನೆಂದೆ.

"ಇಲ್ಲ ಒಡೆಯ, ನೀರಿನ ವಾಸನೆ ಬರುತ್ತಿದೆ."

"ಅದು ಬೆಟ್ಟದ ಮೇಲಿರಬೇಕು," ಸರ್ ಹೆನ್ರಿ ನುಡಿದರು.

ನಂಬಿಕೆಯಿಲ್ಲದೆ ನಾವು ಆ ಪುಟ್ಟ ಬೆಟ್ಟವನ್ನೇರಿದೆವು. ಅಲ್ಲಿ ನಿಜವಾಗಿಯೂ ನೀರಿತ್ತು! ನಾವು ಸಾಕಷ್ಟು ನೀರು ಕುಡಿದೆವು. ಮಡಕೆಗೂ ತುಂಬಿಕೊಂಡೆವು.

ನಾವು ಶೇಬಾಳ ಎದೆ ಎಂಬ ಹೆಸರಿನ ಬೆಟ್ಟವನ್ನು ತಲುಪುವ ವೇಳೆಗೆ ನಮ್ಮ ನೀರಿನ ಸಂಗ್ರಹ ಖಾಲಿಯಾಯಿತು. ಆದರೆ ನಮ್ಮ ಅದೃಷ್ಟಕ್ಕೆ ಬೆಟ್ಟದ ಬಳಿ ಹಣ್ಣಿನ ಮರಗಳು ಕಾಣಿಸಿದವು. ಬೆಟ್ಟವನ್ನು ಏರಿದ ನಂತರ ರಾತ್ರಿ ಚಳಿಯಿಂದ ನಡುಗುವ ಪರಿಸ್ಥಿತಿ ಒದಗಿತು. ಜೊತೆಗೆ ನಮ್ಮ ಆಹಾರವೂ ಮುಗಿಯಿತು.

"ಆ ಹಳೆಯ ಮನುಷ್ಯ ಕುಳಿತು ಬರೆದ ಗವಿ ಇಲ್ಲೆಲ್ಲೋ ಇರಬೇಕು," ಎಂದರು ಗುಡ್.

"ಆ ಗವಿಯನ್ನು ಕತ್ತಲಾಗುವುದರಲ್ಲಿ ಹುಡುಕಲಾಗದಿದ್ದರೆ ನಾವು ಸಾಯಬೇಕಾದೀತು" ಎಂದೆ.

ಮುನ್ನಡೆದೆವು. ಅಂಬೋಪಾ ನನ್ನ ಕೈಹಿಡಿದು "ನೋಡಿ" ಎಂದ.

ಹಿಮದ ನಡುವೆ ಒಂದು ರಂಧ್ರ ಕಾಣಿಸಿತು.

"ಅದೇ ಗವಿ," ಅಂಬೋಪಾ ನುಡಿದ.

ಅಲ್ಲಿಗೆ ಹೋಗಿ ಅದೇ ಗವಿಯ ಬಾಯೆಂದು ಗುರುತಿಸಿದೆವು. ಆಗ ಸೂರ್ಯಾಸ್ತವಾಗಿತ್ತು.

ಗವಿಯೊಳಗೆ ತೆವಳಿಕೊಂಡು ಹೋಗಿ ಬೆಚ್ಚಗಾಗುವಂತೆ ಒತ್ತೊತ್ತಾಗಿ ಮಲಗಿದೆವು. ಚಳಿಯ ದೆಸೆಯಿಂದಾಗಿ ಯಾರಿಗೂ ನಿದ್ರೆ ಬರಲಿಲ್ಲ. ಬೆಳಗಾಗುವ ವೇಳೆಗೆ ವೆಂಟವೋಗಲ್ ಚಳಿಯಿಂತ ಸತ್ತುಹೋದ.

ಸೂರ್ಯೋದಯವಾಯಿತು.

ಯಾರೋ ಭಯದಿಂದ ಕಿರುಚಿದ ಶಬ್ದ. ಅತ್ತ ತಿರುಗಿದೆ.


ಗವಿಯ ಇನ್ನೊಂದು ತುದಿಯಲ್ಲಿ ಮಾನವಾಕೃತಿಯೊಂದನ್ನು ಕಂಡೆ. ಅದರ ತಲೆ ಎದೆಯ ಮೇಲೆ ಬಾಗಿತ್ತು. ನೀಳವಾದ ಕೈಗಳು ಇಳಿಬಿದ್ದಿದ್ದವು. ನಾನು ಸಮೀಪ ಹೋಗಿ ನೋಡಿದೆ.

"ಯಾರಿರಬಹುದು?" ಎಂದೆ.

"ಜೋಸೆಫ್ ಸಿಲ್ವೆಸ್ಟ್ರಿ ಇರಬಹುದು." ಎಂದರು ಗುಡ್.

"ಸಾಧ್ಯವೇ ಇಲ್ಲ; ಆತ ಸತ್ತು ಮುನ್ನೂರು ವರ್ಷಗಳಾದವು," ನಾನೆಂದೆ.

"ಯಾಕಿರಬಾರದು? ಹಿಮ ದೇಹವನ್ನು ಕಾಪಾಡಿಕೊಂಡು ಬಂದಿದೆ. ಇಲ್ಲಿ ಆತ ಬರೆಯಲು ಉಪಯೋಗಿಸಿದ ಮೂಳೆಯ ತುಂಡೂ ಇದೆ ನೋಡಿ."


ಈಗಿನ ದಿನಗಳಲ್ಲಿ ಇನ್ನೂ ಫಿಲ್ಟರ್ ಕಾಫಿಯನ್ನೇ ಕೊಡುತ್ತಿರುವುದು ನನಗೆ ಬಹಳ ಸಂತೋಷ.
ನಿಮಗೆ ಇಷ್ಟವಾದುದಕ್ಕೆ ನಾನು ಸಂತೋಷ ಪಡುತ್ತೇನೆ...ಆದರೆ ಇದು ರಿಕರಿ ಇನ್‌ಸ್ಟೆಂಟ್
ರಿಕರಿ® ಇನ್‌ಸ್ಟೆಂಟ್
RICOFFY
ಬಹಳಷ್ಟು ಫಿಲ್ಟರ್ ಕಾಫಿ ಯಷ್ಟೇ ರುಚಿ ಯಾಗಿರುವುದರಿಂದ ವ್ಯತ್ಯಾಸವನ್ನು ಹೇಳುವುದು ಬಹಳ ಕಷ್ಟ
ತಯಾರಕರು ನೆಸ್‌ಕಾಫೆ—ಜಗತ್ತಿನಾದ್ಯಂತ ಕಾಫಿ ತಯಾರಿಕೆಯಲ್ಲಿ ನುರಿತವರು.
SAA/FSL/R/1162

"ಹೌದು. ಆತ ಇಲ್ಲಿ ರಕ್ತ ತೆಗೆದುಕೊಂಡ ಜಾಗವೂ ಇದೆ," ಸರ್ ಹೆನ್ರಿ ಆತನ ಎಡಸ್ಕೈ ಮೇಲಿನ–ಗಾಯವೊಂದನ್ನು ತೋರಿಸಿದರು.

ಸಿಲ್ವೆಸ್ತ್ರ ಹಾಗೂ ಬಡಪಾಯಿ ವೆಂಟ್ವೋಗೆಲ್ಲರ ದೇಹಗಳನ್ನು ಹಾಗೆಯೇ ಬಿಟ್ಟು ಗವಿಯಿಂದ ನುಸುಳಿ ನಾವು ಹೊರಗಿನ ಸೂರ್ಯ ಕಿರಣ ವಿರುವಲ್ಲಿ ಬಂದೆವು.

2

ಸೊಲೊಮನ್ ರಸ್ತೆ

ನಾವು ಪರ್ವತದ ತುದಿಗೆ ಹೋಗುವ ವೇಳೆಗೆ ಮಂಜಿನ ಮುಸುಕು ಸ್ವಲ್ಪ ಕರಗಿತ್ತು. ಕೆಳಗಡೆ ಒಂದು ತೊರೆಯೂ ಹುಲ್ಲುಗಾವಲೂ ಕಾಣಿಸಿತು. ತೊರೆಯ ಬಳಿ ನಿಂತಿದ್ದ ದೊಡ್ಡ ಜಿಂಕೆಗಳ ಗುಂಪೂ ಕಾಣಿಸಿತು. ನಮಗೆ ಬೇಕಾ ದಷ್ಟು ಆಹಾರ ನಮ್ಮೆದುರೇ ಇತ್ತು. ನಾವೀಗ ಹೊಡೆಯಬೇಕಾಗಿತ್ತಷ್ಟೆ.

ಬಂದೂಕನ್ನೆತ್ತಿ ಗುರಿ ಹಿಡಿದೆವು. ಬಂದೂಕು ಶಬ್ದ ಮಾಡಿತು. ಹೊಗೆ ಕರಗಿತು. ಓಹ್! ಒಂದು ದೊಡ್ಡ ಪ್ರಾಣಿ ಸತ್ತು ಬಿದ್ದಿದೆ. ನಾವು ವಿಜಯದ ನಗೆ ನಕ್ಕೆವು. ನಾವು ಬದುಕಿದೆವು. ಇನ್ನು ಹಸಿವಿನಿಂದ ಸಾಯುವ ಪ್ರಮೇಯವಿಲ್ಲ. ನಾವು ಹಸಿ ಮಾಂಸ ತಿನ್ನತೊಡಗಿದೆವು.

ತಿನ್ನುತ್ತಿದ್ದಂತೆ ನಮ್ಮ ಶಕ್ತಿ ಹಾಗೂ ಜೀವ ಹಿಂದಿರುಗಿ ಬಂದಂತಾಯಿತು. ಸುತ್ತ ಮುತ್ತ ನೋಡಿದೆವು. ನಮ್ಮಿಂದ ಸಾವಿರಾರು ಅಡಿ ಕೆಳಗೆ ಹಲವು ಮೈಲಿಗಳಷ್ಟು ವಿಸ್ತಾರಕ್ಕೆ ಹರಡಿದ್ದ, ನಾವೆಂದೂ ನೋಡದಿದ್ದ ದೇಶವಿತ್ತು. ಒಂದು ದೊಡ್ಡ ಕಾಡು, ದೊಡ್ಡ ನದಿ. ಎಡ ಭಾಗಕ್ಕಿದ್ದ ದೊಡ್ಡ ಹುಲ್ಲುಗಾವಲಿನಲ್ಲಿ ಅಸಂಖ್ಯ ದನಗಳು ಮೇಯುತ್ತಿದ್ದವು. ಬಲಭಾಗಕ್ಕೆ ವ್ಯವಸಾಯ ಮಾಡಿದ ಭೂಮಿ ಕಾಣಿಸಿತು.

"ನಕ್ಷೆಯಲ್ಲಿರುವಂತೆ ಇಲ್ಲಿ ಸೊಲೊಮನ್ ರಸ್ತೆ ಇರಬೇಕಲ್ಲವೆ?" ಎಂದರು ಸರ್ ಹೆನ್ರಿ.

ನಾನು ತಲೆ ಹಾಕಿದೆ.

"ನೋಡಿ ಅಲ್ಲಿದೆ," ಎಂದು ತೋರಿಸಿದರು.

"ಹೊರಡೋಣ," ಎಂದರು ಗುಡ್.

ನಾವು ತಗ್ಗಿಳಿದು ರಸ್ತೆಯನ್ನು ಸೇರಿ ನಡೆಯತೊಡಗಿದೆವು.

ಮಧ್ಯಾಹ್ನದ ವೇಳೆಗೆ ಕಾಡಿನ ನಡುವೆ ಇದ್ದ ತೊರೆಯೊಂದರ ಬಳಿ ಬಂದೆವು. (ಜೊತೆಯಲ್ಲಿ ತಂದಿದ್ದ ಮಾಂಸವನ್ನು ತಿಂದು ಪೈಪ್ ಸೇದುತ್ತಾ ನಿಶ್ಶಬ್ದವಾಗಿ ಕುಳಿತೆವು. ಸ್ವಲ್ಪ ಸಮಯದ ಬಳಿಕ ಗುಡ್ ನಮ್ಮ ಬಳಿ ಇಲ್ಲದಿರುವುದು ಕಾಣಿಸಿತು. ಆತ ತೊರೆಯಲ್ಲಿ ಸ್ನಾನ ಮಾಡು ತ್ತಿದ್ದರು. ಆತ ಬಟ್ಟೆ ಒಗೆದು. ಬೂಟು ಗಳಿಗೆ ಪಾಲಿಷ್ ಮಾಡಿ, ನಂತರ ತಲೆ ಬಾಚಿ ಕೊಳ್ಳತೊಡಗಿದರು.

ಗುಡ್ ಇದ್ದಕ್ಕಿದ್ದಂತೆ ಜಿಗಿದು ನಿಂತರು. ನಾನೂ ನಿಂತೆ. ನಮ್ಮಿಂದ ತುಸು ದೂರದಲ್ಲಿ ಮನುಷ್ಯರ ತಂಡವೊಂದಿತ್ತು. ಅವರ ಚರ್ಮ ಕಡು ಕಂದು ಬಣ್ಣ. ಕೆಲವರು ಕರಿ ತುಪ್ಪಳವನ್ನು ಧರಿಸಿದ್ದರು. ಚೂಪಾದ ಈಟಿ ಯನ್ನು ಹಿಡಿದಿದ್ದರು. ಅವರೆಲ್ಲರಿಗಿಂತ ಮುಂದೆ ಹದಿನೇಳು ವರ್ಷದ ಹುಡುಗನೊಬ್ಬ ನಿಂತಿದ್ದ. ಆತ ನಮ್ಮ ಮೇಲೆ ಈಟಿ ಎಸೆಯಲು ಕೈ ಎತ್ತಿದ್ದ. ಹಿರಿಯ ಮನುಷ್ಯನೊಬ್ಬ ಆತನ ಎತ್ತಿದ ಕೈಯನ್ನು ಹಿಡಿದು ಆತನಿಗೇನೋ ಹೇಳಿದ. ನಂತರ ಅವರೆಲ್ಲ ನಮ್ಮತ್ತ ಬಂದರು.

ಸರ್ ಹೆನ್ರಿ ಮತ್ತು ಗುಡ್ ಬಂದೂಕನ್ನು ಕೈಗೆತ್ತಿಕೊಂಡರು. ಆದರೂ ಅವರು ಬರು ತ್ತಲೇ ಇದ್ದರು. ಅವರಿಗೆ ಬಂದೂಕಿನ ವಿಷಯವೇ ಗೊತ್ತಿಲ್ಲವೆಂದು ಕಾಣುತ್ತಿತ್ತು.

"ಬಂದೂಕನ್ನು ಕೆಳಗಿಳಿಸಿ" ಎಂದು ಅವರಿಗೆ ಹೇಳಿ, ಆ ಅಪರಿಚಿತರತ್ತ ತಿರುಗಿ "ಶುಭಾ ಶಯ" ಎಂದೆ ಜುಲುಭಾಷೆಯಲ್ಲಿ. ಅವರ ಭಾಷೆ ಯಾವುದೆಂದು ತಿಳಿದಿರಲಿಲ್ಲ.

"ಶುಭಾಶಯ" ಎಂದರವರು ಪ್ರತಿಯಾಗಿ– ಅದೂ ಜುಲು ಭಾಷೆಯಲ್ಲಿ. ಆದರದು ಪ್ರಾಚೀನ ಶೈಲಿಯ ಭಾಷೆ.

"ನೀವಾರು? ಎಲ್ಲಿಂದ ಬಂದಿರಿ? ನಿಮ್ಮ ಮೂವರ ಮುಖ ಬೆಳ್ಳಗೇಕಿದೆ? ಉಳಿದವರ ಮುಖ ಏಕೆ ನಮ್ಮಂತಿದೆ?" ಎಂದರು. ನಾನು ಅಂಬೋಪಾಸ ಮುಖ ನೋಡಿದೆ. ಆತನ ಬಣ್ಣ ಹಾಗೂ ಚಹರೆ ಅವರಂತೆಯೇ ಇತ್ತು.

"ನಾವು ಅಪರಿಚಿತರು. ಶಾಂತಿಯಿಂದ ಬಂದಿದ್ದೇವೆ" ನಾನು ಉತ್ತರಿಸಿದೆ.

"ನೀವು ಸುಳ್ಳು ಹೇಳುತ್ತಿದ್ದೀರಿ. ಯಾವ ಅಪರಿಚಿತರಿಗೂ ಪರ್ವತಗಳನ್ನು ದಾಟಲು ಸಾಧ್ಯವಿಲ್ಲ. ಅಲ್ಲದೆ ಈ ಕುಕುವಾನಾ ನಾಡಿನಲ್ಲಿ ಅಪರಿಚಿತರು ಬದುಕುವಂತಿಲ್ಲ. ಇದು ರಾಜಾಜ್ಞೆ. ಸಾಯಲು ಸಿದ್ಧರಾಗಿ." ಅವರಲ್ಲಿ ಕೆಲವರು ಬೇಟೆಯ ಚಾಕು ಹಿರಿದರು.

"ಅವರು ಏನು ಹೇಳುತ್ತಿದ್ದಾರೆ?" ಗುಡ್ ಕೇಳಿದರು.

"ಅವರು ನಮ್ಮನ್ನು ಕೊಲ್ಲುತ್ತಾರಂತೆ." ನಾನು ಉತ್ತರಿಸಿದೆ.

"ಓ ದೇವರೆ!" ಎಂದು ಗುಡ್ ಬಾಯಿ ಬಿಟ್ಟರು. ಅವರ ಹಲ್ಲು ಕಳಚಿಕೊಂಡಿತು. ಅವರು ಅದನ್ನು ಕೈಯಿಂದ ಜೋಡಿಸಿಕೊಂಡರು. ತಕ್ಷಣ ಆ ಕುಕುವಾನಾ ತಂಡ ಭಯದಿಂದ ಕೂಗಿ ಹಿನ್ನೆಡೆದು.

"ಏನು ವಿಷಯ?" ನಾನು ಕೇಳಿದೆ.

"ಅದು- ಅವರ ಹಲ್ಲು. ಅದನ್ನು ಹೊರಕ್ಕೆ ತೆಗೆಯಿರಿ ಗುಡ್. ಹೊರಕ್ಕೆ ತೆಗೆಯಿರಿ."

ಹೆನ್ರಿ ನುಡಿದರು. ಗುಡ್ ಹಲ್ಲು ತೆರೆದು ಕೈಯಲ್ಲಿ ಹಿಡಿದರು.

ಆ ಮನುಷ್ಯ ಕುತೂಹಲ ಹಾಗೂ ಭಯದಿಂದ ನಮ್ಮ ಬಳಿ ಬಂದ. ಆತ ನಮ್ಮನ್ನು ಕೊಲ್ಲುವ ವಿಷಯ ಮರೆತಂತಿತ್ತು.

ಆ ವಯಸ್ಕ ಗುಡ್‌ರತ್ತ ಕೈ ತೋರಿ ನುಡಿದ.

"ಇದು ಹೇಗೆ? ಈ ದಪ್ಪ ಮನುಷ್ಯ ಮೇಲ್ಪಟ್ಟೆ ಮಾತ್ರ ಹಾಕಿಕೊಂಡು ಬೆತ್ತಲೆ ಕಾಲಿನಲ್ಲಿದ್ದಾರೆ. ಒಂದು ಹೊಳೆಯುವ ಕಣ್ಣಿದೆ." ಸ್ನಾನ ಮಾಡಿದ ನಂತರ ಗುಡ್ ಒಂದು ಚಡ್ಡಿ ಮತ್ತು ಶರ್ಟ್ ಹಾಕಿದ್ದರು. ಪ್ಯಾಂಟು ಹಾಕಿರಲಿಲ್ಲ.

ನಾನು ಗುಡ್‌ಗೆ ಬಾಯ್ತೆರೆಯಲು ಹೇಳಿದೆ. ಅವರು ಬಾಯ್ತೆರೆದು ತಮ್ಮ ಬೊಚ್ಚು ಬಾಯನ್ನು ತೋರಿಸಿದರು.

"ಹಲ್ಲುಗಳು ಎಲ್ಲಿ? ಇದೀಗ ನೋಡಿದ್ದೆವಲ್ಲ" ಆತ ಆಶ್ಚರ್ಯದಿಂದ ಕೂಗಿದ.

ಗುಡ್ ತಮ್ಮ ಕೈಯನ್ನು ಬಾಯಿಯ ಬಳಿ ಹಿಡಿದು ನಂತರ ಕೈ ತೆರೆದು ಬಾಯಿ ತೋರಿಸಿದರು. ಈಗ ಎರಡು ಸಾಲು ಹಲ್ಲುಗಳು ಕಾಣಿಸಿದವು.

ಆ ಗುಂಪಿನ ಮುಂದಿದ್ದ ತರುಣ ಭಯದಿಂದ ಚೀತ್ಕರಿಸಿದ. ಮುದುಕನ ಕಾಲುಗಳು ಭಯದಿಂದ ಕಂಪಿಸಿದವು. ಆತ,

"ನೀವು ಮಾನವರಲ್ಲ. ತಾಯಿಯ ಗರ್ಭದಿಂದ ಜನಿಸಿದ ಯಾರಿಗೇ ಆಗಲಿ ಈ ರೀತಿ ಒಂದು ಹೊಳೆಯುವ ಕಣ್ಣು ಹಾಗೂ ಕರಗುವ ಹಲ್ಲು ಇರುವವುದಿಲ್ಲ. ಓ ನನ್ನ ತಂದೆ ಕ್ಷಮಿಸು," ಎಂದ.

"ನಾವು ನಿನ್ನೊಡನೆ ಇರಲು ಹಾಗೂ ನಿಮ್ಮನ್ನು ಹರಸಲು ಬಂದಿದ್ದೇವೆ. ನಮ್ಮ ಮೇಲೆ ಭರ್ಚಿ ಎಸೆಯಲು ಹೊರಟ ಇವನನ್ನು ಕೊಲ್ಲೋಣವೆ?" ಎಂದೆ.

"ಅವನನ್ನು ಕಾಪಾಡಿ. ಆತ ನಮ್ಮ ರಾಜನ ಮಗ."

"ಇರಬಹುದು. ಆದರೆ ನಮ್ಮ ಕೊಲ್ಲುವ ಶಕ್ತಿಯಲ್ಲಿ ನಿನಗೆ ನಂಬಿಕೆ ಇಲ್ಲವೆಂದು ಕಾಣುತ್ತದೆ. ಅಂಬೋಪಾ, ನನ್ನ ಮಾತಾಡುವ ಕೊಳವೆಯನ್ನು ಕೊಡು."

ಅಂಬೋಪಾ ನನ್ನ ಬಂದೂಕನ್ನು ತಂದಿತ್ತ.

"ಆ ಜಿಂಕೆಯನ್ನು ನೋಡು. ಅದನ್ನು ಇಲ್ಲಿಂದಲೇ ಶಬ್ದದಿಂದ ಕೊಲ್ಲಲು ತಾಯಿಯ ಬಸಿರಿನಿಂದ ಜನಿಸಿದವರಿಗೆ ಸಾಧ್ಯವೆ?"

"ಸಾಧ್ಯವಿಲ್ಲ" ಮುದುಕ ಉತ್ತರಿಸಿದ.

ನಾನು ಬಂದೂಕು ಎತ್ತಿದೆ. "ಢು"–ಜಿಂಕೆ ಗಾಳಿಯಲ್ಲಿ ಒಮ್ಮೆ ಎಗರಿ ಸತ್ತು ಬಿತ್ತು.

"ನಮಗೀಗ ನಂಬಿಕೆಯಾಯ್ತು. ನಮ್ಮಲ್ಲಿಯ ಯಾವ ಮಾಟಗಾತಿಯೂ ಇಂತಹ ವಿದ್ಯೆಯನ್ನು ಪ್ರದರ್ಶಿಸುವುದಿಲ್ಲ. ನಕ್ಷತ್ರದಿಂದ ಬಂದವರೆ, ಹೊಳೆಯುವ ಕಣ್ಣಿನವರೆ, ಮಾಯವಾಗುವ ಹಲ್ಲಿನವರೆ ಕೇಳಿರಿ. ನನ್ನ ಹೆಸರು ಇನ್‌ಫ್ಯಾಡೂಸ್. ಕಕುವಾನಾದ ಮೊದಲಿನ ರಾಜ ಕಾಫಾನ ಮಗ. ಈ ಯುವಕ ಮಹಾರಸ್ತೆಯ ಒಡೆಯ, ಶತ್ರು ಸಂಹಾರಕ ಲಕ್ಷ ಸೈನಿಕರ ನಾಯಕ, ಒಂದು ಕಣ್ಣಿನ ಭಯಂಕರ ರಾಜ ಟ್ವಾಲಾನ ಮಗ ಸ್ಕ್ರ್ಯಾಗ್ಗಾ" ಎಂದ ಆ ಮುದುಕ.

"ಓಹೋ. ಹಾಗಾದರೆ ನಮ್ಮನ್ನು ಟ್ವಾಲಾನ ಬಳಿಗೆ ಕರೆದೊಯ್ಯಿರಿ. ನಾವು ಕೆಳದರ್ಜೆಯ ಜನರೊಡನೆ ಮಾತಾಡಲಿಚ್ಛಿಸುವುದಿಲ್ಲ."

ಮುದುಕ ಬಗ್ಗಿ, "ಕೂಮ್ ಕೂಮ್" ಎಂದ. ನಂತರದಲ್ಲಿ ಅದು ರಾಜವಂಶೀಯರಿಗೆ ಸಲ್ಲಿಸುವ ಗೌರವವೆಂದು ತಿಳಿಯಿತು. ಆತ ತನ್ನ ಜನರಿಗೇನೋ ಆಜ್ಞೆ ಮಾಡಿದ. ಅವರು ತಕ್ಷಣ ನಮ್ಮ ಸಾಮಾನೆಲ್ಲವನ್ನೂ ಎತ್ತಿಕೊಂಡರು. ಗುಡ್ ಇನ್ನೂ ಧರಿಸಬೇಕಾಗಿದ್ದ ಬಟ್ಟೆಗಳನ್ನೂ ಎತ್ತಿಕೊಂಡರು. ಗುಡ್ ಅದನ್ನು ತೆಗೆದುಕೊಳ್ಳಲು ಯತ್ನಿಸಿದರು.

"ಓ, ಹೊಳೆಯುವ ಕಣ್ಣಿನ, ಕರಗುವ ಹಲ್ಲಿನ ಒಡೆಯಾ, ಅದನ್ನು ಮುಟ್ಟಲೇಬೇಡ" ಎಂದ ಮುದುಕ.

"ನಾನದನ್ನು ತೊಡಬೇಕು" ಗುಡ್ ಹೇಳಿದ್ದನ್ನು ಅಂಬೋಪಾ ಜುಲುಭಾಷೆಯಲ್ಲಿ ಹೇಳಿದ.

"ಬೇಡ ಒಡೆಯ. ನೀವು ನಿಮ್ಮ ಸುಂದರ ಕಾಲುಗಳನ್ನು ಮುಚ್ಚಿಕೊಳ್ಳಬಹುದೆ?" ಎಂದ ಇನ್‌ಫ್ಯಾಡೂಸ್.

ಸರ್ ಹೆನ್ರಿ ನುಡಿದರು. "ನೋಡಿ ಗುಡ್. ಈ ಪ್ರದೇಶದಲ್ಲಿ ನೀವು ಹೀಗೇ ಕಾಣಿಸಿಕೊಳ್ಳಬೇಕು. ಈಗಿನಿಂದ ನೀವು ಕೇವಲ ಅಂಗಿ, ಬೂಟು ಹಾಗೂ ಗ್ಲೌಸ್ ಮಾತ್ರ ಧರಿಸಿರಬೇಕು."

"ಹೌದು. ನೀವೇನಾದರೂ ನಿಮ್ಮ ಉಡುಪನ್ನು ಬದಲಾಯಿಸಿದರೆ ಈ ನಾಡಿನಲ್ಲಿ ನಮ್ಮ ಜೀವನಕ್ಕೆ ಒಂದು ಪೆನ್ನಿ ಬೆಲೆಯೂ ಇಲ್ಲ" ನಾನೆಂದೆ.

"ಹೀಗೇನು?" ಗುಡ್ ಕೇಳಿದರು.

"ಹೌದು" ನಾನೆಂದೆ.

೮

ಕುಕುವಾನಾ ದೇಶ ಪ್ರವೇಶ

"ಇನ್‌ಫ್ಯಾಡೂಸ್ ಈ ರಸ್ತೆಯನ್ನು ಯಾರು ನಿರ್ಮಿಸಿದರು?" ನಾನು ಕೇಳಿದೆ.

"ನಮ್ಮ ಹಳೆಯ ರಾಜರಿಂದ ಈ ರಸ್ತೆಯ ನಿರ್ಮಾಣವಾಯಿತು. ಎಂದು ನಿರ್ಮಿತವಾಯಿತೆಂದು ಗೊತ್ತಿಲ್ಲ. ನೂರಾರು ವರ್ಷಗಳಿಂದ ಜೀವಿಸಿರುವ ಗಗೂಲಳಿಗೂ ಗೊತ್ತಿಲ್ಲ."

"ನಿಮ್ಮ ರಾಜನ ಬಳಿ ಬಹಳ ಸೈನ್ಯವಿದೆಯೆ?"

"ನಮ್ಮ ರಾಜ ಟ್ವಾಲಾ ಕರೆ ಕೊಟ್ಟರೆ ಆತನ ಸೈನಿಕರು ಈ ಪ್ರದೇಶವನ್ನೆಲ್ಲಾ ತುಂಬಿಬಿಡುತ್ತಾರೆ."

"ಇತ್ತೀಚೆಗೆ ಯಾವುದಾದರೂ ಯುದ್ಧ ನಡೆದಿದೆಯೆ?"

"ನಮ್ಮ ನಮ್ಮಲ್ಲೆ ನಡೆಯಿತು, ನಾಯಿ ನಾಯಿಯನ್ನು ತಿಂದಂತೆ"

"ಹೇಗೆ?"

"ನಮ್ಮಲ್ಲಿ ಒಂದು ಪದ್ಧತಿಯಿದೆ. ರಾಜನಿಗೆ ಇಬ್ಬರು ಮಕ್ಕಳಾದರೆ ಬಲಹೀನನಾದವನು ಸಾಯಬೇಕು. ಹಳೆಯ ರಾಜ ಕಾಫಾನಿಗೆ ತಮ್ಮನಿದ್ದ. ಆದರೆ ಅವನ ತಾಯಿ ಬಲಹೀನ ಮಗುವನ್ನು ಮುಚ್ಚಿಟ್ಟಳು. ಕಾಫಾ ಸತ್ತ ನಂತರ ಇಮೋತು ರಾಜನಾದ. ಆದರೆ ಭಯಂಕರ ಹೆಂಗಸಾದ ಗಗೂಲ್ ರಾಜನೊಡನೆ ಜನಿಸಿದ ಟ್ವಾಲಾನನ್ನು ಮುಂದೂಡಿದಳು. ಟ್ವಾಲಾ ಇಮೋತುವನ್ನು ಕೊಂದ. ಆತನ ಹೆಂಡತಿ ತನ್ನ ಸಣ್ಣ ಮಗು ಇಗ್ನೋಸಿಯೊಡನೆ ತಪ್ಪಿಸಿಕೊಂಡಳು. ಅವರು ಇದುವರೆಗೂ ಸಿಕ್ಕಿಲ್ಲ."

"ಈಗ ಇಗ್ನೋಸಿ ಬದುಕಿದ್ದರೆ ಆತ ಕುಕುವಾನಾದ ನಿಜವಾದ ರಾಜನಾಗುತ್ತಾನೆ ಅಲ್ಲವೆ?"

"ಅದು ನಿಜ. ರಾಜನ ಜ್ಯೇಷ್ಠ ಪುತ್ರನ ಮೈಮೇಲೆ ಹಾಕುವ ತೆವಳುವ ಮೃಗದ ಗುರುತು ಅವನ ಎದೆಯ ಮೇಲಿದೆ. ಆದರೆ ಅವನು ಸತ್ತಿದ್ದಾನೆ."

ಅಂಬೋಪಾ ನಮ್ಮ ಹಿಂದೆ ಬರುತ್ತಿದ್ದ. ಆತನ ಮುಖವನ್ನು ನೋಡಿದಾಗ ಹಳೆಯದೇನನ್ನೋ ನೆನಪಿಗೆ ತಂದುಕೊಳ್ಳುತ್ತಿರುವಂತೆ ಕಾಣಿಸಿದ.

ನಮ್ಮ ಆಗಮನವನ್ನು ಸೂಚಿಸಲು ಕೆಲವರನ್ನು ಮುಂದಾಗಿ ಕಳುಹಿಸಲಾಯಿತು. ಮಧ್ಯಾಹ್ನದ ವೇಳೆಗೆ ನಾವೊಂದು ಹಳ್ಳಿಯನ್ನು ತಲುಪಿದೆವು. ಮುಖ್ಯದ್ವಾರದಿಂದ ಜನರು ತಂಡ ತಂಡವಾಗಿ ಬರುತ್ತಿದ್ದರು. ಅಧಿಕಾರಿಯೊಬ್ಬ ಸೂಚನೆಯಿತ್ತ, ತಕ್ಷಣ ಎಲ್ಲರೂ ಒಟ್ಟಿಗೆ "ಕೂಮ್" ಎಂದರು.

"ಅವರನ್ನು 'ಗ್ರೇ'ಗಳು ಎನ್ನುತ್ತಾರೆ. ಅದಕ್ಕೆ ಕಾರಣ ಅವರ ಬೂದು ವರ್ಣದ ಗುರಾಣಿ.






ಉಸಿರಿನ ದುರ್ವಾಸನೆಯನ್ನು ನಿವಾರಿಸಿರಿ... ದಂತಕ್ಷಯವನ್ನು ಎದುರಿಸಿರಿ

ಪ್ರತಿ ಸಲ ಊಟವಾದ ಮೇಲೆ ಕೋಲ್ಗೇಟ್‌ನಿಂದ ಹಲ್ಲುಜ್ಜಿರಿ. ಅದು ಜಗತ್ತಿನಾದ್ಯಂತ ದಂತವೈದ್ಯರು ಶಿಫಾರಸು ಮಾಡುವ ರೀತಿಯಲ್ಲಿ ನಿಮ್ಮ ಹಲ್ಲುಗಳಿಗೆ ರಕ್ಷಣೆ ನೀಡುತ್ತದೆ.


ಹಲ್ಲುಗಳೆಡೆಯಲ್ಲಿ ಉಳಿಯುವ ಆಹಾರ ಕಣಗಳಲ್ಲಿ ರೋಗಾಣುಗಳು ಬೆಳೆಯುತ್ತವೆ. ಇವು ಉಸಿರಿನ ದುರ್ವಾಸನೆಗೆ ಕಾರಣವಾಗುತ್ತವೆ —ಆಮೇಲೆ ಇವು ನೋಯುವ ದಂತ ಕ್ಷಯವನ್ನು ಉಂಟುಮಾಡುತ್ತವೆ.

ಆದುದರಿಂದ ಯಾವಾಗಲೂ ಆಹಾರವನ್ನು ಸೇವಿಸಿದ ನಂತರ ಕೂಡಲೇ ಕೋಲ್ಗೇಟ್ ರೀತಿಯಲ್ಲಿ ಹಲ್ಲುಜ್ಜಿರಿ. ನಿಮ್ಮ ಶ್ವಾಸವನ್ನು ಶುಚಿಗೊಳಿಸಲು, ಹಲ್ಲುಗಳನ್ನು ಬಿಳುಪಾಗಿಸಲು ಮತ್ತು ದಂತಕ್ಷಯವನ್ನು ಎದುರಿಸಲು ಇದು ಅತ್ಯಂತ ಪರಿಣಾಮಕಾರಿ ಎಂದು ಪ್ರಮಾಣಿತವಾಗಿದೆ.

ಕೋಲ್ಗೇಟ್‌ನ ವಿಶ್ವಸನೀಯ ಸೂತ್ರವು ಕೆಲಸ ಮಾಡುವ ರೀತಿ :



ಉಸಿರಿನ ದುರ್ವಾಸನೆಯನ್ನು ಮತ್ತು ದಂತ ಕ್ಷಯವನ್ನು ಉಂಟುಮಾಡುವ ರೋಗಾಣುಗಳು ನಿಮ್ಮ ಹಲ್ಲುಗಳೆಡೆಯಲ್ಲಿ ಸಿಕ್ಕಿಕೊಂಡ ಆಹಾರ ಕಣಗಳಲ್ಲಿ ಬೆಳೆಯುತ್ತವೆ.




ಕೋಲ್ಗೇಟ್‌ನ ಅಪೂರ್ವವಾದ ಕಾರ್ಯಶೀಲ ನೊರೆ ಹಲ್ಲುಗಳೆಡೆಯನ್ನು ಆಳವಾಗಿ ಪ್ರವೇಶಿಸುತ್ತದೆ ಮತ್ತು ಅಡಗಿಕೊಂಡ ಆಹಾರ ಕಣಗಳನ್ನೂ, ರೋಗಾಣುಗಳನ್ನೂ ಹೋಗಲಾಡಿಸುತ್ತದೆ.



ಫಲಿತಾಂಶ : ಆಕರ್ಷಕವಾದ, ಬಿಳುಪಾದ ಹಲ್ಲುಗಳು, ಆತ್ಮವಿಶ್ವಾಸವನ್ನುಂಟುಮಾಡುವ ನಿರ್ಮಲವಾದ ಉಸಿರು ಮತ್ತು ದಂತಕ್ಷಯದ ವಿರುದ್ಧ ರಕ್ಷಣೆ.

ಅಧಿಕ ರುಚಿಯಾದ, ದುರ್ವಾಸನೆ ರಹಿತವಾದ ಉಸಿರಿಗಾಗಿ ಮತ್ತು ಅಧಿಕ ಬಿಳುಪಾದ ಹಲ್ಲುಗಳಿಗಾಗಿ ಹೆಚ್ಚು ಜನರು ಜಗತ್ತಿನಲ್ಲಿ ಬೇರೆ ಯಾವುದೇ ಟೂಥ್‌ಪೇಸ್ಟ್‌ಗಿಂತ ಅಧಿಕವಾಗಿ ಕೋಲ್ಗೇಟನ್ನು ಕೊಳ್ಳುತ್ತಾರೆ.



ದಂತವೈದ್ಯರು ಮಾತ್ರ ನಿಮಗೆ
ಉತ್ತಮತರ ದಂತರಕ್ಷಣೆಯನ್ನು ನೀಡಬಲ್ಲರು

ಹಲ್ಲುಗಳ ಸಂಪೂರ್ಣ ರಕ್ಷಣೆಗಾಗಿ ಕೋಲ್ಗೇಟ್ ಟೂತ್‌ಬ್ರಶ್‌ಗಳನ್ನು ಉಪಯೋಗಿಸಿ. ಅವು ಹಲ್ಲುಗಳ ಎಡೆಯನ್ನೂ ಮತ್ತು ಒಸಡುಗಳನ್ನೂ ರಕ್ಷಿಸುತ್ತವೆ. ಹಲ್ಲುಗಳ ಮೇಲೆ ... ನಿಮ್ಮ ಕುಟುಂಬದ ಪ್ರತಿಯೊಬ್ಬರಿಗೂ ... ಮಾಡಲಾಗಿದೆ

DC.G.64 KN

ಅವರು ಕುಕುವಾನಾ ನಾಡಿನ ಅತ್ಯುತ್ತಮ ಸೈನಿಕರು. ಇನ್‌ಫ್ಯಾಡೂಸ್ ಅವರ ನಾಯಕ.

ಸೂರ್ಯಾಸ್ತದ ನಂತರ ದಾರಿಯಲ್ಲಿ ಸಿಕ್ಕ ಚಿಕ್ಕ ಪರ್ವತವೊಂದರ ಮೇಲೆ ವಿಶ್ರಾಂತಿಗಾಗಿ ಕುಳಿತೆವು. ಕೆಳಗೆ ಸುಂದರ ನಗರ. ರಾಜಧಾನಿ 'ಲೂ' ಇತ್ತು. ಅದರ ಬಳಿಯೇ ಕುದುರೆಯಲಾಳಾಕಾರದ ಅಥವಾ ಚಂದ್ರಾಕೃತಿಯ ಬೆಟ್ಟವಿತ್ತು. ಅನಂತರ ಹಿಮಾವೃತ ಪರ್ವತಗಳಿದ್ದುವು.

ನಾನು ಪರ್ವತಗಳ ಕಡೆ ನೋಡುವುದನ್ನು ಗಮನಿಸಿದ ಇನ್‌ಫ್ಯಾಡೂಸ್ ನುಡಿದ, "ಈ ರಸ್ತೆ ಆ ಪರ್ವತಗಳ ತನಕ ಹೋಗುತ್ತದೆ. ಅದರ ತುಂಬಾ ಗವಿಗಳೇ ಇವೆ. ಅಲ್ಲಿಂದಲೇ ನಮ್ಮ ಹಿಂದಿನ ಬುದ್ಧಿವಂತರು ದೇಶಕ್ಕೆ ಬೇಕಾದ ವಸ್ತುಗಳನ್ನು ಪಡೆಯುತ್ತಿದ್ದರು. ಅಲ್ಲಿನ 'ಸಾವಿನ ತಾಣ'ದಲ್ಲೇ ನಮ್ಮ ರಾಜರುಗಳ ಮೃತ ಶರೀರವನ್ನಿಡುವುದು."

ನಾನು ನನ್ನ ಜೊತೆಗಾರನತ್ತ ತಿರುಗಿ, "ಅಲ್ಲೇ ಸೊಲೊಮನ್ ರಾಜನ ವಜ್ರದ ಗಣಿಯಿರುವುದು," ಎಂದೆ.

"ಹೌದು. ಆ ವಜ್ರಗಳು ಅಲ್ಲಿ ಖಂಡಿತಾ ಇವೆ. ಆ ಅಲ್ಪ ವಸ್ತುಗಳನ್ನು ನೀವು ಬಯಸಿದರೆ ಅವು ನಿಮಗೆ ಸಿಗುತ್ತವೆ," ಎಂದ ಅಂಬೋಪಾ.

"ನಿನಗೆ ಹೇಗೆ ಗೊತ್ತು ಅಂಬೋಪಾ?" ನಾನು ಕೋಪದಿಂದ ಕೇಳಿದೆ.

"ನನಗೆ ರಾತ್ರಿ ಕನಸಾಯ್ತು," ಎಂದು ನಕ್ಕುಬಿಟ್ಟ.

"ಒಡೆಯರೆ, ಲೂಗೆ ಹೋಗೋಣ. ನೀವು ಬರುವ ಸುದ್ದಿ ಕಳಿಸಲಾಗಿದೆ. ನಿಮಗಾಗಿ ಬಿಡಾರವನ್ನು ಸಿದ್ಧಪಡಿಸಲಾಗಿದೆ," ಇನ್‌ಫ್ಯಾಡೂಸ್ ನುಡಿದ.

ಒಂದು ಗಂಟೆಯ ಅವಧಿಯಲ್ಲಿ ನಗರದ ಗಡಿಯನ್ನು ತಲುಪಿದೆವು. ಮುಗಿಯದ ಗುಡಿಸಲುಗಳ ನಡುವೆ ಅರ್ಧಗಂಟೆ ನಡೆದ ನಂತರ ಇನ್‌ಫ್ಯಾಡೂಸ್ ಗುಡಿಸಲುಗಳ ಗುಂಪಿನ ದ್ವಾರದ ಬಳಿ ನಿಂತ.

ಒಳಗೆ ಪ್ರವೇಶಿಸಿದ ನಮಗೆ ಪ್ರತಿಯೊಬ್ಬರಿಗೂ ಒಂದೊಂದು ಪ್ರತ್ಯೇಕ ಗುಡಿಸಲಿನ ವ್ಯವಸ್ಥೆ ಮಾಡಿದ್ದು ಕಾಣಿಸಿತು. ಜಾಡಿಗಳಲ್ಲಿ ನೀರು ಸಿದ್ಧವಾಗಿತ್ತು. [illegible]ದೆವು. ಯುವತಿಯರು ಮರದ ತಟ್ಟೆಯಲ್ಲಿ ಆಹಾರ ತಂದಿತ್ತರು. ರಕ್ಷಣೆಯ ದೃಷ್ಟಿಯಿಂದ ನಾವೆಲ್ಲ ಒಂದೇ ಗುಡಿಸಲಿಗೆ ನಮ್ಮ ಹಾಸಿಗೆಯನ್ನು ಸಾಗಿಸಿ ಮಲಗಿದೆವು.

೯

ಟ್ವಾಲಾ

ನಾವು ಎದ್ದಾಗ ಆಗಸದಲ್ಲಿ ಸೂರ್ಯ ಬಹಳ ಮೇಲೇರಿದ್ದ. ನಾವು ತಿಂಡಿ ತಿಂದು ಪೈಪು ಸೇದಿದೆವು. ಅಷ್ಟರಲ್ಲಿ ನಾವು ಇಚ್ಛಿಸಿದರೆ ಟ್ವಾಲಾ ರಾಜ ನಮ್ಮನ್ನು ನೋಡಲು ಸಿದ್ಧನಾಗಿರುವುದಾಗಿ ಇನ್‌ಫ್ಯಾಡೂಸ್ ಸುದ್ದಿ ತಂದ.

ನಮ್ಮ ಬಂದೂಕು ತೆಗೆದುಕೊಂಡು ಹೊರಟೆವು. ಸ್ವಲ್ಪ ಕಾಲ ನಡೆದ ನಂತರ ವಿಶಾಲ ಅಂಗಳವಿದ್ದ ದೊಡ್ಡ ಗುಡಿಸಲೊಂದನ್ನು ನೋಡಿದೆವು. ವಿಶಾಲ ಅಂಗಳದಲ್ಲಿ ಏಳೆಂಟು ಸಾವಿರ ಸೈನಿಕರು ತುಂಬಿದ್ದರು. ಅವರೆಲ್ಲ ಕಲ್ಲಿನಲ್ಲಿ ಕಡೆದ ಪ್ರತಿಮೆಯಂತೆ ನಿಂತಿದ್ದರು. ಅವರ ದೃಷ್ಟಿಗೆ ಬಂದು ನಿಖರ ಅರ್ಥ ಕಲ್ಪಿಸುವದೇ ಸಾಧ್ಯವಿರಲಿಲ್ಲ.

ಗುಡಿಸಲಿನ ಮುಂಭಾಗದ ಖಾಲಿ ಜಾಗದಲ್ಲಿ ಹಲವಾರು ಆಸನಗಳಿದ್ದವು. ಇನ್‌ಫ್ಯಾಡೂಸನ ಸೂಚನೆಯಂತೆ ನಾವು ಕುಳಿತೆವು. ಅಂಬೋಪಾ ನಮ್ಮ ಹಿಂದೆ ಕುಳಿತಿದ್ದ. ಎಂಟು ಸಾವಿರ ಸೈನಿಕರ ದೃಷ್ಟಿಗೆ ಸಿಲುಕಿ ಆ ನಿಶ್ಶಬ್ದದಲ್ಲಿ ಹತ್ತು ನಿಮಿಷ ಕುಳಿತಿದ್ದೆವು. ಗುಡಿಸಲಿನ ಬಾಗಿಲು ತೆರೆಯಿತು. ಒಂದು ದೈತ್ಯ ಆಕೃತಿ ಹೊರಬಂತು. ಅದರ ಹಿಂದೆ ಸ್ಕ್ರಾಗ್ಗಾ ಬಂದ. ಅವನ ಹಿಂದೆ ತುಪ್ಪಳದ ಉಡುಪು ಧರಿಸಿದ್ದ. ಬಾಗಿದ ಕೋತಿಯಂತಹ ಆಕೃತಿಯೊಂದು ಬಂತು. ರಾಜ ಆಸನದಲ್ಲಿ ಕುಳಿತ. ಸ್ಕ್ರಾಗ್ಗಾ ಅವನ ಹಿಂದೆ ನಿಂತ. ಬಾಗಿದ ಕೋತಿ ತೆವಳುತ್ತಾ ಹೋಗಿ ಗುಡಿಸಲಿನ ನೆರಳಿನಲ್ಲಿ ಕುಳಿತಿತು.

ನಿಶ್ಶಬ್ದ ಹಾಗೇ ಇತ್ತು.

ರಾಜ ಎದ್ದು ನಿಂತ. ನಾವೆಂದೂ ಕಾಣದಂತಹ ಕ್ರೂರ ಮುಖ. ತುಟಿಗಳು ದಪ್ಪವಾಗಿದ್ದವು. ಮೂಗು ಚಪ್ಪಟೆಯಾಗಿತ್ತು. ಇದ್ದ

ಒಂದೇ ಒಂದು ಕಪ್ಪು ಕಣ್ಣು ಭಯಂಕರವಾಗಿತ್ತು. ಆತನ ತಲೆಯಲ್ಲಿ ತುಪ್ಪಳದ ಕಂತೆಯೇ ಇತ್ತು. ದೇಹದ ಸುತ್ತ ಹೊಳೆಯುವ ಕವಚವಿತ್ತು. ಬಲಗೈಯಲ್ಲಿ ಭರ್ಜಿಯಿತ್ತು. ಕುತ್ತಿಗೆಯ ಸುತ್ತ ಚಿನ್ನದ ದಪ್ಪ ಪಟ್ಟಿಯಿತ್ತು. ಆತನ ಹಣೆಯ ಮೇಲ್ಭಾಗದಲ್ಲಿ ಒಂದು ದೊಡ್ಡ ವಜ್ರ ಹೊಳೆಯುತ್ತಿತ್ತು.

ರಾಜ ತನ್ನ ಭರ್ಜಿಯನ್ನು ಮೇಲೆತ್ತಿದ. ತಕ್ಷಣ ಎಂಟು ಸಾವಿರ ಕೈಗಳು ಅದೇ ರೀತಿ ಮಾಡಿ ಮೂರು ಬಾರಿ 'ಕೂಮ್' ಎಂದು ಕೂಗಿದರು.

ನೆರಳಿನಲ್ಲಿದ್ದ ಕೋತಿ ಕೂಗಿತು, "ಓ ಜನರೆ. ಇವನೆ ರಾಜ. ವಿಧೇಯರಾಗಿರಿ."

"ಇವನೇ ರಾಜ ವಿಧೇಯರಾಗಿರಿ" ಎಂಟು ಸಾವಿರ ಕಂಠಗಳು ಕೂಗಿದವು. ಮತ್ತೆ ನಿಶ್ಶಬ್ದ. ನಮ್ಮ ಎಡಭಾಗದ ಸೈನಿಕನೊಬ್ಬ ಗುರಾಣಿ ಎತ್ತಿ ಹಾಕಿದ.

ಟ್ವಾಲ್ಯಾ ಅತ್ತ ತಿರುಗಿ "ಬಾ ಇಲ್ಲಿ," ಎಂದ ಕ್ರೂರ ಧ್ವನಿಯಲ್ಲಿ. ಯುವಕನೊಬ್ಬ ಬಂದು ನಿಂತ.

"ನಿನ್ನ ಗುರಾಣಿ ಹಾಗೆ ಬಿದ್ದದ್ದು? ಥೂ ನಾಯಿ. ನಕ್ಷತ್ರದಿಂದ ಬಂದವರೆದುರು ನಿನಗೆ ನಾಚಿಕೆಯಾಗುವುದಿಲ್ಲವೆ?"

"ಕೈ ಜಾರಿ ಬಿತ್ತು."

"ಹಾಗಾದರೆ ದಂಡ ತೆರಲು ಸಿದ್ಧನಾಗು. ಸ್ಕ್ರಾಗ್ಗಾ ನೀನು ಹೇಗೆ ಭರ್ಜಿ ಉಪಯೋಗಿಸುವೆ ತೋರಿಸು. ಈ ನಾಯಿಯನ್ನು ಕೊಲ್ಲು."

ಸ್ಕ್ರಾಗ್ಗಾ ಅವನೆದೆಗೆ ಭರ್ಜಿ ಚುಚ್ಚಿದ. ಸರ್ ಹೆನ್ರಿ ಪುಟಿದೆದ್ದು ಮತ್ತೆ ಕುಳಿತರು.

"ಒಳ್ಳೆಯ ಏಟು ! ಇವನನ್ನು ತೆಗೆದು ಹಾಕಿ" ಎಂದ ಟ್ವಾಲಾ. ಕೊಲೆಯಾದವನನ್ನು ನಾಲ್ವರು ಎತ್ತಿಕೊಂಡು ಹೋದರು.

"ರಕ್ತದ ಕಲೆಯನ್ನು ಮುಚ್ಚಿರಿ," ಮೂಲೆಯಲ್ಲಿದ್ದ ಕೋತಿ ನುಡಿಯಿತು. ಒಂದು ಹುಡುಗಿ ಮಣ್ಣು ತಂದು ರಕ್ತದ ಕಲೆಯ ಮೇಲೆ ಹಾಕಿತು. ಸರ್ ಹೆನ್ರಿ ಕೋಪದಿಂದ ಕುದಿಯುತ್ತಿದ್ದರು. ವ್ಯಕ್ತಿಯೊಬ್ಬನನ್ನು ಸಾಯಿಸುವ ತನಕ ಟ್ವಾಲಾ ಸುಮ್ಮನೇ ಕುಳಿತಿದ್ದ. ನಂತರ ನಮ್ಮತ್ತ ತಿರುಗಿದ. "ಬಿಳಿಯರೇ ನೀವೆಲ್ಲಿಂದ ಬಂದಿರಿ? ನಿಮಗೇನು ಬೇಕು?"

"ನಾವು ನಕ್ಷತ್ರಲೋಕದಿಂದ ಬಂದವರು. ನಾವು ಈ ಭೂಮಿಯನ್ನು ನೋಡಲು ಇಚ್ಛಿಸಿದ್ದೇವೆ." ನಾನು ಉತ್ತರಿಸಿದೆ.

"ನಕ್ಷತ್ರಗಳು ಅಷ್ಟು ದೂರವಿವೆ. ಅಲ್ಲಿಂದ ಬರುವದು ಹೇಗೆ ಸಾಧ್ಯ? ನನ್ನನ್ನು ಹಾಸ್ಯಗೊಳಿಸುವವರಿಗೆ ಕೊಡುವ ಶಿಕ್ಷೆ ಕೊಟ್ಟರೆ ಹೇಗೆ?"

ನಾನು ಜೋರಾಗಿ ನಕ್ಕೆ. ನನ್ನೆದೆಯಲ್ಲಿ ಮಾತ್ರ ನಗುವಿರಲಿಲ್ಲ.

"ನಾವು ದೂರದಿಂದಲೇ ಕೊಲ್ಲಬಲ್ಲೆವೆಂಬುದನ್ನು ನಿನಗೆ ಹೇಳಲಿಲ್ಲವೇ?" ನಾನು ಕೇಳಿದೆ.

"ಹೇಳಿದರು. ನಾನು ನಂಬಲಿಲ್ಲ. ಅವರಲ್ಲಿ ಒಬ್ಬನನ್ನು ಕೊಲ್ಲಿರಿ."

"ಇಲ್ಲ, ಶಿಕ್ಷಾರ್ಹರಲ್ಲದವರನ್ನು ಕೊಲ್ಲುವುದಿಲ್ಲ. ದ್ವಾರದ ಬಳಿ ಒಂದು ಆನೆಯನ್ನು ತನ್ನಿರಿ. ಅದನ್ನು ಕೊಲ್ಲುವೆವು."

"ಆಗಲಿ."

"ಸರ್ ಹೆನ್ರಿ ಈಗ ನೀವು ಹೊಡೆಯಿರಿ. ನಮ್ಮ ತಂಡದಲ್ಲಿ ನಾನೊಬ್ಬನೆ ಮಾಂತ್ರಿಕನಲ್ಲವೆಂದು ಇವರಿಗೆ ತಿಳಿಯಲಿ."

ದ್ವಾರದ ಬಳಿ ಆನೆಯೊಂದು ಬರುವುದು ಕಾಣಿಸಿತು.

"ಈಗ," ನಾನು ಪಿಸುಗುಟ್ಟಿದೆ. ಸರ್ ಹೆನ್ರಿಯ ಬಂದೂಕು ಮೊಳಗಿತು. ಢಂ—ಆನೆ ಸತ್ತುಬಿತ್ತು. ಗುಂಪಿನಲ್ಲಿ ಆಶ್ಚರ್ಯದ ಉದ್ಗಾರ ಹೊರಬಿತ್ತು.

"ಈಗ ನೋಡಿ ಆ ಭರ್ಜಿಯನ್ನು ಮುರಿಯುವೆ." ನಾನೊಂದು ಗುಂಡು ಹಾರಿಸಿದೆ. ಭರ್ಜಿ ಮುರಿದು ಬಿತ್ತು.

ಕೋತಿಯಂತಹ ಆಕೃತಿ ನೆರಳಿನಿಂದೀಚೆಗೆ ಬಂತು. ರಾಜನ ಬಳಿ ಬಂದು ಎದ್ದು ನಿಂತು ತನ್ನ ಮುಖವಾಡವನ್ನು ಕಿತ್ತು ಹಾಕಿತು. ಅದೊಂದು ವಯಸ್ಸಾದ ಮುದುಕಿ. ಮೂಗಿಲ್ಲದ, ಸುಕ್ಕು ಚರ್ಮದ, ಬೋಳುತಲೆಯ ಮಾಟಗಾತಿ ಗಗೂಲ್ ಅವಳೆ. ಅವಳು, "ಕೇಳಿರಿ. ಓ ರಾಜ ಕೇಳು. ಓ ಸೈನಿಕರೆ ಕೇಳಿ, ಓ ಪರ್ವತಗಳೆ, ನದಿಗಳೆ, ಬಯಲುಗಳೆ ಕೇಳಿ. ಓ ಗಂಡಸರೆ ಹೆಂಗಸರೇ ಕೇಳಿ. ಓ ತರುಣ ತರುಣಿಯರೆ ಕೇಳಿರಿ. ಓ ಹುಟ್ಟಿದ ಮಕ್ಕಳೆ, ಹುಟ್ಟದಿರುವ ಮಕ್ಕಳೆ ಕೇಳಿ. ಎಲ್ಲರೂ ಒಮ್ಮೆ ಸಾಯಬೇಕು. ಜೀವದ ಶಕ್ತಿ ನನ್ನಲ್ಲಿದೆ. ಮುಂದೆ ನಡೆಯುವುದನ್ನು ನಾನು ಹೇಳುವೆ.


ಕೋರೈಸುವ ಬಿಳುಪು ಯಾರೇ
ನೋಡಲಿ, ಒಂದೇ ಮಾತು...
ಇದು ಖಂಡಿತ
ಡೆಟ್
ಡಿಟರ್ಜೆಂಟ್
ಬಿಲ್ಲೆಯ ಒಗೆತ
Supreme
det

"ರಕ್ತ! ರಕ್ತ! ರಕ್ತ! ರಕ್ತದ ನದಿ. ಎಲ್ಲೆಡೆ ರಕ್ತ.

"ನಾನು ಮುದುಕಿ. ನಿಮ್ಮ ಅಪ್ಪಂದಿರು ನನ್ನನ್ನು ನೋಡಿದ್ದಾರೆ. ನಿಮ್ಮ ಅಪ್ಪನ ಅಪ್ಪಂದಿರು ನನ್ನನ್ನು ನೋಡಿದ್ದಾರೆ. ನಾನು ಬೇಕಾದಷ್ಟು ರಕ್ತ ನೋಡಿದ್ದೇನೆ. ಇನ್ನೂ ನೋಡುತ್ತೇನೆ.

"ನಿಮಗೇನು ಬೇಕು? ನಕ್ಷತ್ರದಿಂದ ಬಂದವರೆ, ಕಳೆದು ಹೋದವರನ್ನು ಬಯಸಿ ಬಂದಿರಾ? ನೀವು ಬಿಳಿಯ ಕಲ್ಲಿಗಾಗಿ ಬಂದಿರಾ? ಮತ್ತೆ ಹಿಂದಿರುಗುವಿರಾ? ನನ್ನೊಡನೆ ಇರುವಿರಾ? ಹ್ಹ! ಹ್ಹ! ಹ್ಹ!

"ಅದಾರು ನಿಮ್ಮೊಡನೆ ಇರುವ ಕರಿ ಮುಖದವ? ಇವನ ಪರಿಚಯವಿದೆ. ಇವನ ಹೃದಯ ರಕ್ತದ ವಾಸನೆ ಬರುತ್ತಿದೆ. ಅವನ ಬಟ್ಟೆಯನ್ನು ತೆಗೆಯಿರಿ......" ಎಂದು ಕೂಗಿಕೊಂಡಳು.

ಅವಳ ಮುಖ ನಿರ್ಜೀವವಾಯಿತು. ನೆಲದ ಮೇಲೆ ಬಿದ್ದಳು. ರಾಜಾಜ್ಞೆಯಂತೆ ಸೈನಿಕರು ಅಲ್ಲಿಂದ ಹೊರಟು ಹೋದರು. ಟ್ಯಾಲಾ ನಮ್ಮತ್ತ ತಿರುಗಿ,

"ಬಿಳಿಯರೆ, ನನಗೆ ನಿಮ್ಮನ್ನು ಕೊಲ್ಲಬೇಕೆನಿಸುತ್ತಿದೆ. ಗಗೂಲ್ ವಿಚಿತ್ರವಾಗಿ ಮಾತಾಡಿದಳು" ಎಂದ.

ನಾನು ನಕ್ಕು ಬಿಟ್ಟೆ. "ಓ ರಾಜ ಎಚ್ಚರದಿಂದಿರು. ನಮ್ಮನ್ನು ಕೊಲ್ಲಲು ಸಾಧ್ಯವಿಲ್ಲ."

"ಈಗ ಹೋಗಿರಿ. ರಾತ್ರಿಗೊಂದು ನೃತ್ಯವಿದೆ. ಅದನ್ನು ನೋಡಿರಿ. ನಾಳೆ ಯೋಚಿಸುವ."

"ಒಳ್ಳೆಯದು" ನಾನು ಉತ್ತರಿಸಿದೆ ನಮ್ಮೊಡನೆ ಇನ್‌ಫ್ಯಾಡೂಸ್ ಕೂಡ ಗುಡಿಸಲಿಗೆ ಬಂದ.

೧೦

ಮಾಟಗಾತಿಯರ ಬೇಟೆ

ಗುಡಿಸಲನ್ನು ತಲುಪಿದನಂತರ ಇನ್‌ಫ್ಯಾಡೂಸ್‌ನನ್ನು ಒಳ ಬರಲು ಹೇಳಿದೆ.

"ಇನ್‌ಫ್ಯಾಡೂಸ್,ನಿನ್ನೊಡನೆಮಾತಾಡಬೇಕು."

"ಮಾತಾಡಿ ಒಡೆಯ."

"ನಿಮ್ಮ ರಾಜ ಟ್ಯಾಲಾ ಬಹಳ ಕ್ರೂರಿ."

"ಹೌದು ಒಡೆಯ. ಈ ಭೂಮಿ ಆತನ ಕ್ರೂರತನದಿಂದ ಕಂಗೆಟ್ಟಿದೆ. ನೀವೇ ಈ ರಾತ್ರಿ ಅದನ್ನು ಅದನ್ನು ನೋಡುವಿರಿ. ರಾಜ ಯಾರ ಹೆಂಡತಿಯನ್ನಾದರೂ ಅಥವಾ ದನವನ್ನಾದರೂ ಬಯಸಿದರೆ ಅಥವಾ ಅವನಿಗೆ ಯಾರದಾದರೂ ಹೆದರಿಕೆಯಿದ್ದರೆ ಅವರನ್ನು ಗಗೂಲ್ ಅಥವಾ ಇತರ ಮಾಟಗಾತಿಯರಿಂದ ಕೊಲ್ಲಿಸುತ್ತಾನೆ. ರಾಜನ ಈ ರಕ್ತದಾಹದಿಂದ ಈ ಪ್ರದೇಶ ದಣಿದಿದೆ."

"ಜನರು ಅವನನ್ನು ಸಿಂಹಾಸನದಿಂದ ಕಿತ್ತೊಗೆಯಬಹುದಲ್ಲ?"

"ಆದರೆ ಟ್ಯಾಲಾ ಸತ್ತರೆ ಅವನ ಮಗ ಸ್ಕ್ರಾಗ್ಗಾ ರಾಜನಾಗುತ್ತಾನೆ. ಅವನ ಹೃದಯ ಅವನ ತಂದೆಯ ಹೃದಯಕ್ಕಿಂತ ಕ್ರೂರ ಪಾಷಾಣ. ಇಮೋತು ಅಥವಾ ಇಗ್ನೋಸಿ ಬದುಕಿದ್ದಿದ್ದರೆ ಅವರ ಕಥೆಯೆ ಬೇರೆಯಾಗುತ್ತಿತ್ತು. ಆದರೆ ಅವರಿಬ್ಬರೂ ಸತ್ತಿದ್ದಾರೆ."

"ಇಗ್ನೋಸಿ ಸತ್ತಿದ್ದಾನೆಂದು ನಿನಗೆ ಹೇಗೆ ಗೊತ್ತು?" ನಮ್ಮ ಹಿಂದಿನಿಂದ ಮಾತು ಕೇಳಿತು.

"ನೀನಗಾರು ಮಧ್ಯ ಮಾತಾಡಲು ಹೇಳಿದರು?" ಇನ್‌ಫ್ಯಾಡೂಸ್ ಕೇಳಿದ.

"ಇನ್‌ಫ್ಯಾಡೂಸ್, ಕೇಳು. ಕೆಲವು ವರ್ಷಗಳ ಹಿಂದೆ ಇಮೋತುರಾಜನ ಕೊಲೆಯಾದಾಗ ಅವನ ಹೆಂಡತಿ ಮಗುವಿನೊಡನೆ ತಪ್ಪಿಸಿಕೊಂಡಳು, ಅಲ್ಲವೆ ?"

"ಹೌದು."

"ಅವಳು ಹಾಗೂ ಮಗು ಪರ್ವತದಲ್ಲೆಲ್ಲೋ ಸತ್ತುಹೋದರೆಂದು ಹೇಳುತ್ತಾರೆ, ಅಲ್ಲವೆ?"

"ಹೌದು."

"ಇಲ್ಲ. ಅದು ನಡೆದದ್ದು ಹೀಗೆ. ಅವರಿಬ್ಬರೂ ಸಾಯಲಿಲ್ಲ. ಅವರು ಮರುಭೂಮಿಯನ್ನು ದಾಟುತ್ತಿದ್ದ ಜನರೊಡನೆ ಸೇರಿಕೊಂಡು ಮರುಭೂಮಿಯನ್ನು ದಾಟಿ ಸಸ್ಯಸಮೃದ್ಧ ಭೂಮಿಯನ್ನು ಸೇರಿದರು."

"ನಿನಗೆ ಹೇಗೆ ಗೊತ್ತು?"

"ಆ ತಾಯಿ ಸತ್ತುಹೋದಳು. ಮಗು ಇಗ್ನೋಸಿ ತಾಯಿ ಹೇಳಿದ ಸತ್ಯವನ್ನು ನೆನಪಿನಲ್ಲಿಟ್ಟುಕೊಂಡು [illegible]ನಾಗಿ. ಸೈನಿಕನಾಗಿ ದುಡಿಯುತ್ತಾ ಈಗ ಈ ಬಿಳಿಯರೊಡನೆ ಬಂದಿದ್ದಾನೆ."

"ನೀನೊಬ್ಬ ಹುಚ್ಚ," ಮುದುಕ ಇನ್‌ಫ್ಯಾಡೂಸ್ ನುಡಿದ.

"ಚಿಕ್ಕಪ್ಪ, ನಾನು ಸತ್ಯವನ್ನು ತೋರಿಸುವೆ,"

ಹೀಗೆಂದು ಅಂಬೋಪಾ ತನ್ನ ಬಟ್ಟೆ ಬಿಚ್ಚಿ ನಿಂತ.

"ಇದನ್ನು ನೋಡು" ಎಂದು ಅಂಬೋಪಾ ತನ್ನೆದೆಯ ಮೇಲಿನ ಮೃಗದ ಚಿತ್ರವೊಂದನ್ನು ತೋರಿಸಿದ.

ಇನ್‌ಫ್ಯಾಡೂಸ್ ತೆರೆದ ಕಣ್ಣಿನಿಂದ ಅದನ್ನು ನೋಡಿ ನಂತರ ಅಂಬೋಪಾನ ಕಾಲಿಗೆ ನಮಸ್ಕರಿಸಿದ.

"ಕೂವ್ ಕೂವ್. ಇವನೇ ನನ್ನ ಸೋದರನ ಮಗ. ಇವನೇ ನಿಜವಾದ ರಾಜ," ಎಂದು ಕೂಗಿ ಹೇಳಿದ.

"ಏಳು ನಾನಿನ್ನೂ ರಾಜನಾಗಿಲ್ಲ. ನಿನ್ನ ಹಾಗೂ ಈ ಶೂರ ಬಿಳಿಯರಿಂದ ರಾಜನಾಗುತ್ತೇನೆ. ಗಗೂಲಳ ಮಾತು ಸತ್ಯ. ಈ ನಾಡಿನಲ್ಲಿ ರಕ್ತದ ಹೊಳೆ ಹರಿಯಲೇಬೇಕು. ಅದರೊಡನೆ ಅವಳ ರಕ್ತವೂ ಹರಿಯಬೇಕು. ಏಕೆಂದರೆ ಅವಳು ನನ್ನ ತಂದೆಯನ್ನು ಕೊಂದಿದ್ದಾಳೆ. ನನ್ನ ತಾಯಿಯನ್ನು ಓಡಿಸಿದ್ದಾಳೆ. ಇನ್‌ಫ್ಯಾಡೂಸ್ ನೀನು ನನಗೆ ಸಹಾಯ ಮಾಡುವಿಯಾ?"

ಮುದುಕ ಅಂಬೋಪಾನ (ಇಗ್ನೋಸಿ) ಬಳಿ ಹೋಗಿ ನಮಸ್ಕರಿಸಿ ಅವನ ಕೈ ಹಿಡಿದು ಹೇಳಿದ.

"ಕುಕುವಾನ ನಾಡಿನ ನಿಜವಾದ ರಾಜನ ಮಗ ಇಗ್ನೋಸಿ. ನಾನು ನಿನಗೆ ಸಹಾಯ ಮಾಡುವೆ. ನೀನು ಮಗುವಾಗಿದ್ದಾಗ ನನ್ನ ತೊಡೆಯ ಮೇಲೆ ಆಡಿದೆ. ಈಗ ನಾನು ನನ್ನ ಮುದಿ ಕೈಗಳಿಂದ ನಿನ್ನ ಸ್ವಾತಂತ್ರ್ಯಕ್ಕಾಗಿ ಹೋರಾಡುವೆ."

"ಬಿಳಿಯರೆ. ನೀವು ಸಹಾಯ ಮಾಡುವಿರಾ?"

ಅವನು ಕೇಳಿದ್ದನ್ನು ಸರ್ ಹೆನ್ರಿಗೆ ಹೇಳಿದೆ.

"ಅಂಬೋಪಾ, ನನ್ನ ಮೆಚ್ಚಿನವ. ಅವನಿಗೆ ನನ್ನ ಬೆಂಬಲವಿದೆ," ಸರ್ ಹೆನ್ರಿ ನುಡಿದರು.

"ನಾ[illegible] ಅವನವನೇ. ಆದರೆ ಅವನು ನಾನು ತೋ[illegible]ಬೇಕು," ಎಂದರು ಗುಡ್.

"ನಾವು ನಿನಗೆ ಸಹಾಯ ಮಾಡುತ್ತೇವೆ. ಆದರೆ ನಾವು ಬಂದದ್ದು ಸರ್ ಹೆನ್ರಿಯವರ ತಮ್ಮನನ್ನು ಹುಡುಕಲು. ನೀನು ಅದಕ್ಕೆ ಸಹಾಯ ಮಾಡಬೇಕು," ನಾನೆಂದೆ.

"ನಾನದನ್ನು ಮಾಡುತ್ತೇನೆ" ಎಂದ ಇಗ್ನೋಸಿ ಇನ್‌ಫ್ಯಾಡೂಸ್‌ನ ಕಡೆ ತಿರುಗಿ, "ನಿನಗೆ ತಿಳಿದಂತೆ ಇಲ್ಲಿಗೆ ಯಾರಾದರೂ ಬಿಳಿಯರು ಬಂದಿದ್ದರೆ?" ಎಂದ.

"ಯಾರೂ ಇಲ್ಲ."

"ಯಾರೂ ಬಂದದ್ದನ್ನು ಕೇಳಿಯೂ ಇಲ್ಲವೆ?"

"ಇಲ್ಲ."

ಇಗ್ನೋಸಿ ಸರ್ ಹೆನ್ರಿಗೆ ಹೇಳಿದ, "ಆತ ಇಲ್ಲವೆಂದು ಕಾಣುತ್ತದೆ."

ಸರ್ ಹೆನ್ರಿ ದುಃಖದಿಂದ ನುಡಿದರು, "ನಿಜ. ಆತ ಇಷ್ಟು ದೂರ ಬರಲಾರ. ದೈವೇಚ್ಛೆ!"

ದುಃಖದ ವರ್ತುಲದಿಂದ ಬಿಡಿಸಿಕೊಳ್ಳಲು ನಾನು ಮಾತಾಡಿದೆ, "ಇಗ್ನೋಸಿ ನೀನು ಹಕ್ಕಿನಿಂದ ರಾಜ. ಆದರೆ ಈಗ ರಾಜನಾಗಲು ಉಪಾಯ ಹುಡುಕಿರುವೆಯಾ?"

"ಇದರ ಬಗ್ಗೆ ನಾನೇನೂ ಯೋಚಿಸಿಲ್ಲ. ಇನ್‌ಫ್ಯಾಡೂಸ್, ನೀನೇನಾದರೂ ಉಪಾಯ ಹೇಳುವಿಯಾ?" ಇಗ್ನೋಸಿ ಕೇಳಿದ.

"ಇಂದು ರಾತ್ರಿ ದೊಡ್ಡ ಮಾಟಗಾತಿಯ ಬೇಟೆ ಇದೆ. ಆಗ ಅನೇಕರು ರಾಜನ ವಿರುದ್ಧ ಕೋಪಗೊಳ್ಳುತ್ತಾರೆ. ನಾನು ಕೆಲವು ಮುಖ್ಯಸ್ಥರೊಡನೆ ಮಾತಾಡಿ ನಿನ್ನ ಬಳಿಗೆ ಕರೆತರುತ್ತೇನೆ. ನಾಳೆಯ ವೇಳೆಗೆ ಇಪ್ಪತ್ತು ಸಾವಿರ ಸೈನಿಕರು ನಿನ್ನ ಅಧೀನರಾಗುತ್ತಾರೆ."

ಆ ವೇಳೆಗೆ ಟ್ವಾಲಾನ ಕಡೆಯ ಜನ ಬಂದರು. ಅವರು ಮೂರು ಯುದ್ಧಕವಚ ಹಾಗೂ ಮೂರು ಯುದ್ಧದ ಕೊಡಲಿ ತಂದಿದ್ದರು.

"ಇವು ರಾಜನ ಉಡುಗೊರೆ," ಆ ಜನರ ಮುಖ್ಯಸ್ಥ ಹೇಳಿದ.

"ರಾಜನಿಗೆ ವಂದನೆಗಳು," ನಾನು ಹೇಳಿದೆ.

ಚಂದ್ರ ಆಗಸದ ಮೇಲೇರಿದ್ದ. ಆ ಸಮಯಕ್ಕೆ ನಮ್ಮನ್ನು ಕರೆದೊಯ್ಯಲು ಯುದ್ಧಕವಚ ಧರಿಸಿದ್ದ ಇನ್‌ಫ್ಯಾಡೂಸ್ ಬಂದ. ರಾಜ ನಮಗೆ ಕಳಿಸಿರುವ ಕವಚಗಳನ್ನು ಧರಿಸಬೇಕೆಂದೂ ಹಾಗೆ ಧರಿಸಿದರೆ ರಾಜನಿಗೆ ಸಂತೋಷವಾಗುವುದೆಂದೂ ಅವನು ಹೇಳಿದ. ನನಗೆ ಹಾಗೂ ಗುಡ್‌ರ ದೇಹಕ್ಕೆ ಅವು ದೊಡ್ಡವಾದವು. ಸರ್ ಹೆನ್ರಿಯ ದೇಹಕ್ಕೆ ಒಪ್ಪವಾಗಿ ಕಾಣಿತು. ನಾವು ನಮ್ಮ ಪಿಸ್ತೂಲು ಹಾಗೂ ಯುದ್ಧದ ಕೊಡಲಿಯನ್ನು ತೆಗೆದು–ಕೊಂಡೆವು.

ರಾಜನ ಗುಡಿಸಿಲಿನ ವಿಶಾಲ ಅಂಗಳಕ್ಕೆ ಹೋಗುವ ವೇಳೆಗಾಗಲೇ ಅಲ್ಲಿ ಇಪ್ಪತ್ತು ಸಾವಿರ ಸೈನಿಕರು ಕಲೆತಿದ್ದರು.

"ಇನ್‌ಫ್ಯಾಡೂಸ್, ನಾವು ಅಪಾಯದಲ್ಲಿ ಸಿಕ್ಕಿದ್ದೇವೆಯೆ?" ನಾನು ಕೇಳಿದೆ.

"ಹೇಳಲಿಕ್ಕಾಗುವುದಿಲ್ಲ ಒಡೆಯ. ಖಚಿತ ಇಲ್ಲ. ಇದೊಂದು ರಾತ್ರಿ ನೀವು ಜೀವದಿಂದಿದ್ದರೆ ತೊಂದರೆಯೇನೂ ಇಲ್ಲ. ಸೈನಿಕರೆಲ್ಲ ರಾಜನ ವಿರುದ್ಧ ಗೊಣಗಾಡುತ್ತಿದ್ದಾರೆ."

ರಾಜನ ಗುಡಿಸಲಿನಿಂದ ಒಂದು ಸಣ್ಣ ಗುಂಪು ಬಂದಿತು.

"ರಾಜ. ರಾಜನ ಮಗ, ಗಗೂಲ್ ಮತ್ತು ಅವರೇ ನೋಡಿ ಕೊಲ್ಲುವವರು." ಇನ್‌ಫ್ಯಾಡೂಸ್ ಸುಮಾರು ಹನ್ನೆರಡು ಜನರಿದ್ದ ಗುಂಪನ್ನು ತೋರಿಸಿದ.

ರಾಜ ಕುಳಿತ. ಗಗೂಲ್ ಅವನ ಕಾಲಿನ ಬಳಿ ಕುಳಿತಳು. ಉಳಿದವರು ಅವನ ಹಿಂದೆ ನಿಂತರು.

"ಬಿಳಿಯರೇ ನೋಡಿರಿ" ಟ್ವಾಲಾ ತನ್ನ ಕ್ರೂರ ಕಣ್ಣನ್ನು ಸುತ್ತಲೂ ತಿರುಗಿಸುತ್ತಾ ಹೇಳಿದ. "ಅವರು ಹೇಗೆ ಭಯದಿಂದ ನಡುಗುತ್ತಿದ್ದಾರೆ. ಅವರ ಹೃದಯದಲ್ಲಿ ತಪ್ಪಿದೆ. ಕಲ್ಮಶವಿದೆ. ಅವರು ಸ್ವರ್ಗದ ತೀರ್ಮಾನಕ್ಕಾಗಿ ಹೆದರಿದ್ದಾರೆ."

"ಪ್ರಾರಂಭಿಸಿ. ಪ್ರಾರಂಭಿಸಿ. ನಾಯಿಗಳು ಹಸಿದಿವೆ. ಆಹಾರಕ್ಕೆ ಕಾದಿವೆ. ಪ್ರಾರಂಭಿಸಿ ಪ್ರಾರಂಭಿಸಿ," ಗಗೂಲ್ ಕೇಳಿದಳು.

ರಾಜ ತನ್ನ ಭರ್ಜಿಯನ್ನು ಎತ್ತಿದ. ಇಪ್ಪತ್ತು ಸಾವಿರ ಜನ ತಮ್ಮ ಈಟಿಯನ್ನು ಎತ್ತಿದರು. ನಂತರ ಇಳಿಸಿದರು. ಅನು ಮೂರು ಬಾರಿ ಪುನರಾವರ್ತನೆಯಾಯಿತು.

ಒಂದು ದುಃಖದ ಧ್ವನಿ ಹಾಡಲಾರಂಭಿಸಿತು. ಅದರಲ್ಲಿ "ಹೆಂಗಸಿನಿಂದ ಹುಟ್ಟಿದವನ ಕೊನೆ ಹೇಗೆ?" ಎಂಬರ್ಥದ ಪದಗಳು ಬರುತ್ತಿದ್ದವು. ಅದಕ್ಕುತ್ತರವಾಗಿ ಸೈನಿಕರು "ಸಾವು" ಎಂದು ಕೂಗಿದರು.

ರಾಜ ತನ್ನ ಕೈ ಎತ್ತಿದ. ತಕ್ಷಣ ಕೆಲವು ವಯಸ್ಸಾದ ಹೆಂಗಸರು ಓಡಿ ಬಂದರು. ಅವರ ಮುಖದ ಮೇಲೆ ಹಳದಿ, ಬಿಳಿ ಪಟ್ಟಿಗಳನ್ನು ಬರೆಯಲಾಗಿತ್ತು. ಆ ಹತ್ತು ಜನ ಗಗೂಲ್ ಮುಂದೆ ನಿಂತು, "ಓ ತಾಯಿ ನಾವು ಬಂದಿದ್ದೇವೆ" ಎಂದರು.

"ಒಳ್ಳೆಯದು. ನಾಲಿಗೆಯಿಂದ ಉಚ್ಚರಿಸದ ಶಬ್ದಗಳನ್ನು ಕೇಳಲು ನಿಮ್ಮ ಕಿವಿ ಚುರುಕಾಗಿದೆಯೇ?" ಗಗೂಲ್ ಕೇಳಿದಳು.

"ಚುರುಕಾಗಿವೆ."

"ಒಳ್ಳೆಯದು. ನೀವು ರಕ್ತದ ವಾಸನೆಯನ್ನು ಹಿಡಿಯಬಲ್ಲಿರಾ? ರಾಜನ ವಿರುದ್ಧ ಸಂಚು ಮಾಡುವವರನ್ನು ನಿರ್ಮೂಲ ಮಾಡಲು ಶಕ್ತರಾಗಿರುವಿರಾ? ನನ್ನ ಬುದ್ಧಿಯ ಆಹಾರವನ್ನು ತಿನ್ನುವ, ನನ್ನ ಮಂತ್ರದ ನೀರನ್ನು ಕುಡಿಯುವ ನೀವು ಸ್ವರ್ಗದ ತೀರ್ಮಾನವನ್ನು ನಡೆಸಲು ಸಿದ್ಧರಿರುವಿರಾ?"

"ಸಿದ್ಧರಿದ್ದೇವೆ."

"ಹಾಗಾದರೆ ಹೋಗಿ, ಕೊಲೆಗಾರರು ತಮ್ಮ ಭರ್ಜಿಯನ್ನು ಹರಿತಗೊಳಿಸಿ ಇಟ್ಟುಕೊಂಡಿದ್ದಾರೆ."

ಗಗೂಲ್‌ನ ಆದೇಶದಂತೆ ಹಂತಕರೆಲ್ಲ ಬೇರೆ ಬೇರೆ ಕಡೆ ಹೋಗಿ ನಿಂತರು. ಅವರೆಲ್ಲರನ್ನೂ ಗಮನಿಸುವುದು ಅಸಾಧ್ಯವಾದ್ದರಿಂದ, ನಮ್ಮ ಹತ್ತಿರದಲ್ಲಿದ್ದ ಮಾಟಗಾತಿಯೊಬ್ಬಳನ್ನು ಗಮನಿಸುತ್ತಿದ್ದೆವು. ಆಕೆ ಭಯಂಕರವಾಗಿ ಕುಣಿಯುತ್ತಾ, "ಅವನ ವಾಸನೆ ಬರುತ್ತಿದೆ. ಅವನಿಲ್ಲೇ ಇದ್ದಾನೆ. ಅವನು ರಾಜನ ವಿರುದ್ಧ ಮಾಡುತ್ತಿರುವ ಆಲೋಚನೆಗಳು ಕೇಳುತ್ತಿವೆ," ಎಂದು ಕೂಗುತ್ತಾ ಸೈನಿಕನೊಬ್ಬನನ್ನು ತನ್ನ ಬಾಗು ಕೋಲಿನಿಂದ ಮುಟ್ಟಿದಳು. ತಕ್ಷಣ ಅವನ ಪಕ್ಕದಲ್ಲಿದ್ದ ಇಬ್ಬರು ಸೈನಿಕರು ಅವನನ್ನು ಎಳೆದುಕೊಂಡು ರಾಜನ ಬಳಿ ಹೋದರು.

"ಕೊಲ್ಲಿ," ಎಂದ ರಾಜ.

"ಕೊಲ್ಲಿ," ಎಂದಳು ಗಗೂಲ್.

ಆ ಕೆಲಸ ನಡೆದುಹೋಯಿತು. ನಂತರ ಇನ್ನೊಬ್ಬನನ್ನು ಕೊಲ್ಲುವ ಆಟ ಸಾಗಿತು. ಒಮ್ಮೆ ನಾವದನ್ನು ನಿಲ್ಲಿಸಲು ಯತ್ನಿಸಿದೆವು. ಟ್ವಾಲಾ ನಮ್ಮತ್ತ ಗಮನವನ್ನೇ ಕೊಡಲಿಲ್ಲ. "ಕಾನೂನಿನಂತೆ ನಡೆಯಬೇಕು. ಅವರು ಸಾಯಲೇಬೇಕು," ಎಂದ ಆತ.

ಮಾಟಗಾತಿಯರೆಲ್ಲ ಒಟ್ಟುಗೂಡಿದರು. ಅವರೆಲ್ಲ ದಣಿದಿದ್ದರು. ಇದ್ದಕ್ಕಿದ್ದಂತೆ ಗಗೂಲ್ ಮೇಲೆದ್ದು ಕುಣಿಯತೊಡಗಿದಳು. ಎಲ್ಲರೂ

ಕುತೂಹಲದಿಂದ ನೋಡುತ್ತಿದ್ದಂತೆ ಅವಳು ಬಂದು ಅಂಬೋಪಾನ ಭುಜ ಮುಟ್ಟಿದಳು.

"ಇವನ ವಾಸನೆ ಹಿಡಿದೆ. ಇವನನ್ನು ಕೊಲ್ಲಿರಿ. ಇವನು ತುಂಬಾ ದುರಾಲೋಚನೆಯವ. ಓ ರಾಜ, ಇವನನ್ನು ಕೊಲ್ಲು."

ನಿಶ್ಶಬ್ದ.

ನಾನು ಮೇಲೇಳುತ್ತಾ ನುಡಿದೆ, "ಓ ರಾಜ ಈತ ನಿನ್ನ ಅತಿಥಿಗಳ ಸೇವಕ. ಅವನಿಗೆ ಮಾಡಿದ ಹಾನಿ ನಮಗೆ ಮಾಡಿದಂತೆಯೆ. ಅತಿಥಿಗಳ ರಕ್ಷಣೆಯು ಕಾನೂನಿನ ಮೇರೆಗೆ ಅವನನ್ನು ದಯವಿಟ್ಟು ಬಿಟ್ಟುಬಿಡು."

"ಮಾಟಗಾತಿಯರ ತಾಯಿ ಗಗೂಲ್ ಹೇಳಿದಂತೆ ಅವನು ಸಾಯಲೇಬೇಕು," ಕೋಪದ ಉತ್ತರ ಬಂತು.

"ಅವನು ಸಾಯುವುದಿಲ್ಲ. ಅವನನ್ನು ಮುಟ್ಟಿದವರು ಸಾಯುತ್ತಾರೆ," ನಾನೆಂದೆ.

"ಅವನನ್ನು ಬಂಧಿಸಿ," ಟ್ವಾಲಾ ಕೊಲೆಗಾರರಿಗೆ ಆಜ್ಞಾಪಿಸಿದ.

"ನಾಯಿಗಳೇ, ನಿಲ್ಲಿ. ಅವನನ್ನು ಮುಟ್ಟಿದರೆ ನಿಮ್ಮ ರಾಜ ಸಾಯುವ," ನಾನು ನನ್ನ ಪಿಸ್ತೂಲನ್ನು ಟ್ವಾಲಾನೆಡೆಗೆ ಗುರಿ ಹಿಡಿದೆ. ಸರ್ ಹೆನ್ರಿ ತಮ್ಮ ಪಿಸ್ತೂಲನ್ನು ಹಂತಕರೆಡೆ ಹಿಡಿದರು. ಗುಡ್ ಗಗೂಲಳತ್ತ ಗಮನವಿರಿಸಿದರು.

ತನ್ನೆದೆಯ ನೇರದಲ್ಲಿದ್ದ ಕೋವಿಯ ನಳಿಕೆಯನ್ನು ಕಂಡು ಟ್ವಾಲಾ ಹಿಮ್ಮೆಟ್ಟಿ ಹೇಳಿದ.

"ಆತ ನನ್ನ ಅತಿಥಿಯೆಂದು ಹೇಳಿದಿರಿ. ಅವಕ್ಕಾಗಿ ಬಿಡುತ್ತಿದ್ದೇನೆ, ನಿಮ್ಮ ಹೆದರಿಕೆಯಿಂದಲ್ಲ."

"ಒಳ್ಳೆಯದು. ನಾವು ದಣಿದಿದ್ದೇವೆ. ಮಲಗಬೇಕು. ನೃತ್ಯ ಮುಗಿಯಿತೇ?" ಎಂದೆ.

"ಮುಗಿಯಿತು. ಆ ಹೆಣಗಳನ್ನು ನಾಯಿಗೆ ಎಸೆಯಿರಿ," ಟ್ವಾಲಾ ತನ್ನ ಭರ್ಜಿಯನ್ನು ಮೇಲೆತ್ತಿದ. ಸೈನಿಕರೆಲ್ಲ ನಿಶ್ಶಬ್ದವಾಗಿ ಹೋದರು. ಹೆಣಗಳನ್ನು ಎತ್ತಿ ಹಾಕಲು ಒಂದು ಚಿಕ್ಕ ತಂಡ ಉಳಿಯಿತು.

(ಮುಂದುವರಿಯುವುದು)

ಅಟ್ಲಾಂಟಾದ ಹೆಸರಾಂತ ಮನೋಚಿಕಿತ್ಸಕ ಡಾಕ್ಟರ್ ಎಡ್ವರ್ಡ್ ಅಸ್ಕರೆನ್ ರೋಗಿಗಳಿಗೆ ನೀಡುವ ಚಿಕಿತ್ಸಾವಿಧಾನ ಅಚ್ಚರಿ ತರುವಂಥದು. ನಕ್ಷತ್ರಗಳ ಫಲಾಫಲಗಳ ಆಧಾರದ ಮೇಲೆ ಅವರ ಚಿಕಿತ್ಸೆ ಅವಲಂಬಿಸಿದೆ. ಅವರ ಪ್ರಕಾರ ಪರಂಪರಾಗತ ಚಿಕಿತ್ಸೆಯೇ ಅತ್ಯುತ್ತಮ. ಈ ಆಧುನಿಕ ವೈದ್ಯಕೀಯ ಕ್ರಮ ಹಾನಿ ತರುವಂಥದ್ದು ಎನ್ನುವ ಡಾಕ್ಟರ್ ಅಸ್ಕರೆನ್, ಮಾತ್ರೆಗಳು, ಕ್ಯಾಪ್ಸೂಲುಗಳನ್ನು ನುಂಗುವ ಹಾಗೂ ಶಾಕ್ ನೀಡುವ ಕ್ರಮಗಳಿಂದ ರೋಗಿಯ ಹೃದಯದ ಕೋಮಲತೆ ನಷ್ಟವಾಗುತ್ತ ಹೋಗುತ್ತದೆ ಎಂದು ಅಭಿಪ್ರಾಯ ಪಡುತ್ತಾರೆ. ಅಚ್ಚರಿಯೆಂದರೆ ಅವರು ಸ್ವತಃ ಆಧುನಿಕ ವೈದ್ಯಕದಲ್ಲಿ ದೊಡ್ಡ ಪರೀಕ್ಷೆ ಪಾಸು ಮಾಡಿ ಪದವಿ ಪ್ರಶಸ್ತಿ ಪಡೆದವರು.

Printed & published by P. S. Bhat for the Jayakarnatak News Printers Ltd., at the Samyukta Karnataka Press, Koppikar Road, Hubli-580 020. Rept Bombay: V. Satyamurty Phone: 522412; Calcutta: H. Muzamdar 46-4233: Madras: K. A. Subramanian Phone: 842201; New Delhi. P. R. Chopra Phone: 714130.

Registered with the Registrar of Newspapers for India undev No. 3533/57